ಬಸವ ಕಿರಣ



Digitalized by e-Sahithya Documentation Forum
Sponsored by Sarayu Foundation Trust



ಪರಮಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ
ಮಹಾಸ್ವಾಮಿಗಳ
ಅಭಿನಂದನ ಸಮಾರಂಭಕ್ಕೆ
ಹೃತ್ಪೂರ್ವಕ ಯಶಸ್ಸು ಕೋರಿ

ಪದ್ಮಶ್ರೀ ಆರ್. ಎಂ. ಬಿ. ಆರಾಧ್ಯ

ಎಂಜಿನಿಯರಿಂಗ್ ಕಂಟ್ರ್ಯಾಕ್ಟರ್ಸ್
ಆರಾಧ್ಯ ಮಂದಿರ, 26, ವಿಶ್ವನಾಥರಾವ್ ರಸ್ತೆ
ಮಾಧವ ನಗರ - ಬೆಂಗಳೂರು - 560 001
ದೂರವಾಣಿ : 268685, 262455

★ ★

ಬಸವ ವಚನಾಮೃತ ...

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ;
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯಾ;
ಕೂಡಲ ಸಂಗಮದೇವಾ, ನಿಮ್ಮ ಮನೆಯ
ಮಗನೆಂದೆನಿಸಯ್ಯಾ.

ಬಸವ - ಕಿರಣ

ಕಲ್ಯಾಣ ಕಿರಣ ಮಾಸ ಪತ್ರಿಕೆಯ

ವಿಶೇಷ ಸಂಚಿಕೆ

ಜನವರಿ — ಫೆಬ್ರುವರಿ 1992

ಬಸವ ಸಂದೇಶ

★ ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೇ.
★ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ.
★ ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುವರು.
★ ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು.
★ ಕುಲತನ ಇರುವುದು ಜಾತಿಯಲ್ಲಲ್ಲ ; ಗುಣ ನಡತೆಗಳಲ್ಲಿ.
★ ಜಾತಿಗಳು ಮಾನವ ಕಲ್ಪಿತವೇ ವಿನಾ ದೇವ ನಿರ್ಮಿತವಲ್ಲ,
★ ಗುರುತ್ವ ದೊರೆಯುವುದು ಆಚಾರ– ಅರಿವು– ಅನುಭಾವಗಳಿಂದ.

Digitalized by e-Sahithya Documentation Forum
Sponsored by Sarayu Foundation Trust

ಬಸವ ★ ಕಿರಣ

ಕಲ್ಯಾಣ ಕಿರಣ ಮಾಸ ಪತ್ರಿಕೆಯ ವಿಶೇಷ ಸಂಚಿಕೆ

ಬೆಲೆ ೧೫ ರೂ. **ಜನವರಿ-ಫೆಬ್ರವರಿ ೧೯೯೨**

ಸಂಪುಟ : 20 ಸಂಚಿಕೆ : 8.9 ಬಸವ ಶಕೆ : 886

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

ಕಿರಣಗನ್ನಡಿ

ಲೇಖನಗಳು	ಲೇಖಕರು	ಪು.ಸಂಖ್ಯೆ
1. ಪೀಠಾರೋಹಣಕ್ಕೆ ಅಭಿವಂದನೆ	ಶರಣೆ. ಅನ್ನಪೂರ್ಣ ಎಂ. ಮನ್ನಾಪುರ.	4
2. ಗುರು ವಂದನ	ಮಾತಾಜಿ	5
3. ಪೂಜ್ಯ ಶ್ರೀ ಶ್ರೀ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರು ನೀಡಿದ ದಿವ್ಯ ಸಂದೇಶ.		6
4. ಐತಿಹಾಸಿಕ ಘಟನೆ, ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪನೆ.	ಮಾತಾಜಿ	9
5. ಬಸವ ಧರ್ಮದ ಮಹಾಜಗದ್ಗುರು ಪೀಠಾರೋಹಣಕ್ಕೆ ಮೊದಲು ಮಾಡಿದ ಪ್ರಾಸ್ತಾವಿಕ ಭಾಷಣ	ಮಾತಾಜಿ	22
6. ವಚನ ವಾಙ್ಮಯ ಗುಡಿಯ ಜಂಗಮ ಮೂರ್ತಿ	ಶ್ರೀ ರಾಮಲಿಂಗಸ್ವಾಮಿ	33
7. ಪೂಜ್ಯ ಅಪ್ಪಾಜಿ ಅಂದು-ಇಂದು	ಪ್ರೊ॥ ಡಾ॥ ಎಸ್. ಆರ್. ಗುಂಜಾಳ	42
8. ಕ್ರಾಂತಿಯೋಗಿ ಪರಮ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿ	ಡಾ॥ ಹೆಚ್. ಚಂದ್ರಶೇಖರ	46
9. ಧರ್ಮ ಕ್ರಾಂತಿಯ ಧೀರಯೋಗಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ	ಪೂಜ್ಯ ಶ್ರೀ ದಯಾನಂದ ಸ್ವಾಮಿ	56
10. ಜಗದ್ಗುರುಗಳೊಡನೆ ಶಿಷ್ಯರ ಸಂದರ್ಶನ	,,	68
11. ಪ್ರವಚನದ ಬಗ್ಗೆ ನನ್ನ ಅನಿಸಿಕೆಗಳು	ಶರಣೆ. ಶಾಂತಾ ಶಿವಗೌಡ ಪಾಟೀಲ	77
12. ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳಿಗೆ ಅಭಿನಂದನ ಪತ್ರ		85
13. ನಾ ಕಂಡಂತೆ 'ಪ್ರವಚನ ಪಿತಾಮಹ'	ಶ್ರೀ ಎಂ. ವೀರಭದ್ರಸ್ವಾಮಿ	91
14. ಜಂಗಮತ್ವಕ್ಕೆ ಜೀವಕೊಟ್ಟ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು	ಡಿ. ಎಸ್. ವಿಜಯಕುಮಾರ್	98
15. ಪ್ರವಚನ ಪಿತಾಮಹ-ನಾನು ಕಂಡಂತೆ	ಡಾ॥ ಜಿ. ಆರ್. ತಮಗೊಂಡ	109
16. ಮಹಾಗುರುವಿಗೆ ನುಡಿಕಾಣಿಕೆ	ಸೋದರಿ ಅಕ್ಕಮಹಾದೇವಿ	114
17. ತ್ಯಾಗದಿಂದಲೇ ಧರ್ಮದ ಉಳಿವು	ಕಲ್ಮಣಪ್ಪ ಪರಮಾದಿ	121
18. ಮಾರ್ಟಿನ್ ಲೂಥರ್ ಮತ್ತು ಪೂಜ್ಯ ಲಿಂಗಾನಂದರು	ಬಾಣೂರು ಚನ್ನಪ್ಪ	137
19. ಕೂಡಲ ಸಂಗಮದ ಶರಣರ ಮೂರ್ತಿಗಳು ಸಾರುವ ಸಂದೇಶ		139
20. ಗುರು ಸ್ತುತಿ	ಎ. ಡಿ. ಚನ್ನಬಸಪ್ಪ	141
21. ಅಕ್ಟೋಬರ್ ತಿಂಗಳಿನಿಂದ ಈವರೆಗೆ ವಿವಿಧ ಯೋಜನೆಗಳಿಗೆ ಧನ ಸಹಾಯ ಮಾಡಿದ ದಾಸೋಹಿಗಳು		162

ಮುಖ ಪುಟ : ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಅಲಂಕರಿಸಿರುವ ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮೀಜಿ.

ಹೊದ್ದಿಕೆಯ 4ನೇ ಪುಟ : ಧ್ಯಾನಮಗ್ನ ಪೂಜ್ಯ ಸ್ವಾಮೀಜಿ.

ಕಲ್ಯಾಣ ಕಿರಣ ಮಾಸ ಪತ್ರಿಕೆ, ವಿಶ್ವಕಲ್ಯಾಣಮಿಷನ್, ಬಸವ ಮಂಟಪ,
ಎರಡನೆ ಬ್ಲಾಕು, ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು -560010

ದೂರವಾಣಿ : 325335

Digitalized by e-Sahithya Documentation Forum
Sponsored by Sarayu Foundation Trust

ಪೀಠಾರೋಹಣಕ್ಕೆ ಅಭಿನಂದನೆ

ಜೈ ಗುರುವೆ ಜೈ ಗುರುವೆ
ಲಿಂಗಾನಂದ ಗುರುವೆ ಜೈ ಜೈ ॥ಪಲ್ಲವಿ॥

ಹಾಡುವೆವು ಇಂದು ಸಂತೋಷದಿಂದ
ಶರಣರ ಬಳಗಕ್ಕೆ ಪರಮಾನಂದ
ಬಸವ ಧರ್ಮದ ಪೀಠ ಏರುತ್ತಲಿಂದು
ತಂದಿರೆಲ್ಲರಿಗೂ ಚಂದದಾನಂದ ॥ಜೈ ಗುರುವೆ ೧॥

ಶರಣೆ ಕಲ್ಲಮ್ಮ ಮಲ್ಲಪ್ಪರ ಒಡಲಲ್ಲಿ
ಜನಿಸಿದಿರಿ ನೀವು ಮಣಿಗವಳ್ಳಿಯಲಿ
ಸಂಗಮೇಶನೆಂಬ ನಾಮವ ತಳೆದು
ಬೆಳೆದಿರಿ ಬಸವನ ಚಿತ್ಕಿರಣವಾಗಿ ॥ಜೈ ಗುರುವೆ ೨॥


ಬಲ್ಲಿದ ಬಸವನ ಹೆಸರನು ಉಳಿಸಲು
ವಚನ ವಾಙ್ಮಯದ ಸೌರಭವ ಹರಡಲು
ಸಂಚರಿಸಿ ನೀವು ದಿವ್ಯ ಜಂಗಮವಾಗಿ
ಶರಣ ಧರ್ಮದ ಮಹಿಮೆ ಬೀರಿದ ಯೋಗಿ ॥ಜೈ ಗುರುವೆ ೩॥

ಅನುಭವ ಮಂಟಪಕೆ ಅಕ್ಕಮಹಾದೇವಿ
ಬಸವ ಮಂಟಪಕೆಂದು ಮಾತೆ ಮಹಾದೇವಿ
ಮೂಡಿನಿಂತಿತು ಆ ಬಸವ ಕಲ್ಯಾಣ
ಕೂಡಲ ಸಂಗಮವಾಯ್ತು ನವಕಲ್ಯಾಣ ॥ಜೈ ಗುರುವೆ ೪॥

ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ಠಾವು
ನಾವೆಲ್ಲ ಕೂಡಿ ಜಯಘೋಷ ಮಾಡಿ
ನಲಿವೆವು ತಮ್ಮನ್ನು ಹಾಡಿ, ಕೊಂಡಾಡಿ ॥ಜೈ ಗುರುವೆ ೫॥

ರಚನೆ :
ಶರಣೆ. ಅನ್ನಪೂರ್ಣ, ಎಂ. ಮನ್ನಾಪುರ, ಧಾರವಾಡ.

[ದಿ. 13-1-1992 ರಂದು ಸಮೂಹ ಗೀತೆಯನ್ನಾಗಿ ಹಾಡಿದವರು : ಶರಣರುಗಳಾದ : ಅನ್ನಪೂರ್ಣ ಮನ್ನಾಪುರ, ಗಿರಿಜಮ್ಮ ಸುಬ್ಬಣ್ಣ, ಅಕ್ಕಮಹಾದೇವಿ, ಸುಮಿತ್ರ ಮರಿಬಸಪ್ಪ, ಬಸವರಾಜ ಭೂಷಣ್ಣನವರು.]



ಬಸವ ಧರ್ಮದ ಮಹಾಜಗದ್ಗುರು ಪೀಠದ
ಪ್ರಥಮ ಅಧಿಕಾರಿಯಾಗಿ - 1992

Digitalized by e-Sahithya Documentation Forum
Sponsored by Sarayu Foundation Trust

With best compliments from :

M|s. BLEND PACK

(Blenders and Packers, Transport Contractors and Coconut Merchants)

19/3,9th Mile, Hosur Road
Singasandra Post, Basavapura Village
BANGALORE - 560 068

PROPRIETOR : **G. R. SHANMUGAPPA**
Phone : Fac. **531448**, Res. **649327**

○ *Thus Spake Basava* ○

This mortal world is creators workshop
Those who are successful here
are successful there
Those who are not succesful here
are also not succesful there
oh, Lord Kudala Sangama

ಗುರು ವಂದನ

ಶ್ರೀಗುರುವಿನ ಶಿವ ಚರಣಕೆ ನಮೋ ನಮೋ ಎಂಬೆನು
ಗುರುದೇವನ ಮಹಾತ್ಯಾಗಕೆ ನತಮಸ್ತಕಳಾದೆನು ॥ಪ॥

ಬಸವಣ್ಣನ ಶ್ರೀರಕ್ಷೆಯ ಹೊತ್ತು ನೀವು ಬಂದಿರಿ
ಹೊಸಬಾಳನು ಬಾಳ್ವ ಬಗೆಯ ಈ ಲೋಕಕೆ ತೋರ್ದಿರಿ ।
ದೇವನೊಬ್ಬ ಮನುಜಕುಲಕೆ ಎಂಬ ತತ್ತ್ವ ಸಾರ್ದಿರಿ
ಮನುಜರೆಲ್ಲರೊಂದೆ ಎಂಬ ಭ್ರಾತೃತ್ವವ ಬೀರ್ದಿರಿ ॥೧॥

ಜಾತಿವಾದ ಶುಷ್ಕಮಾರ್ಗ ಮೂಢರೂಢಿ ಜರಿದಿರಿ
ಕ್ರಾಂತಿಕಹಳೆಯೂದಿ ನೀವು ಜಾಗೃತಿಯಂ ಗೈದಿರಿ ।
ಪ್ರವಚನದ ನಿಜಸುಧೆಯ ಜನಮನಕೆ ಎರೆದಿರಿ
ಭವಗೆಲ್ಲುವ ಶಿವಮಂತ್ರವ ಹೃದಯ ತುಂಬಿ ಉಸಿರ್ದಿರಿ ॥೨॥

ಬಸವಣ್ಣನ ನಿಜ ತತ್ತ್ವವ ಮತ್ತೆ ಬಿತ್ತಿ ಬೆಳೆದಿರಿ
ಎನಿತೆನಿತೋ ಜೀವಗಳಲಿ ಸ್ಫೂರ್ತಿಕಿಡಿಯ ಹಚ್ಚಿದಿರಿ ।
ಮಿಥ್ಯಹಳಿದು ಸತ್ಯಹಿಡಿದು ಸ್ತುತ್ಯ ಪಥದಿ ನಡೆದಿರಿ
ಇಟ್ಟ ಹೆಜ್ಜೆ ಹಿಂದೆಗೆಯದ ಕ್ರಾಂತಿಪುರುಷರಾದಿರಿ ॥೩॥

ಬಂದ ಎಡರುತೊಡರ ಜಯಿಸಿ ಭವ್ಯಮೂರ್ತಿಯಾದಿರಿ
ಸಂದ ಕೀರ್ತಿವಾರ್ತೆಯನ್ನು ಸಮಚಿತ್ತದಿ ಪಡೆದಿರಿ ।
ಎನಿತು ಪುಣ್ಯ ನಮ್ಮದಿತ್ತೋ ಇಂಥ ಗುರುವ ಪಡೆಯಲು
ಶಿವರಕ್ಷೆಯ ಅಭಯ ಹೊತ್ತು ದಿವ್ಯ ಪಥದಿ ನಡೆಯಲು ॥೪॥

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬರುವಿರಿ
ಬಸವ ಭಾನು ಕ್ರಾಂತಿ ಉಷೆಯ ಆಗಿ ಮುಂದೆ ನಡೆವಿರಿ ।
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸತ್ತುಚಿತ್ತು ಆನಂದನ ಶುಭರಕ್ಷೆಯು ತಮಗಿದೆ ॥೫॥

—ಜಗದ್ಗುರು ಮಾತೆ ಮಹಾದೇವಿ

Digitalized by e-Sahithya Documentation Forum
Sponsored by Sarayu Foundation Trust

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಆರೋಹಣ ಮಾಡಿದ ಸಂದರ್ಭದಲ್ಲಿ

ಪೂಜ್ಯ ಶ್ರೀ ಶ್ರೀ ನಿರಂಜನ ಮಹಾಜಗದ್ಗುರು

ಲಿಂಗಾನಂದ ಮಹಾಸ್ವಾಮಿಗಳವರು

ನೀಡಿದ ದಿವ್ಯ ಸಂದೇಶ

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೇ ಭಕ್ತಿಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ ॥

ವಿಶ್ವಗುರು ಬಸವಣ್ಣನವರನ್ನು ಹೃತ್ಕಮಲದಲ್ಲಿ ವಂದಿಸಿ, ಇಂದಿನ ಈ ಶುಭ ಸನ್ನಿವೇಶದಲ್ಲಿ ಸಮಾವೇಶಗೊಂಡಿರುವ ಎಲ್ಲ ಶರಣ ಬಂಧುಗಳಿಗೂ ಶುಭಹಾರೈಕೆಗಳು.

ಇಂದು ಧರ್ಮಗುರು ಬಸವಣ್ಣನವರ ಹೆಸರಿನಲ್ಲಿ ವಿದ್ಯುಕ್ತವಾಗಿ ಧರ್ಮಪೀಠವೊಂದು ಸ್ಥಾಪನೆಯಾಗಿದೆ. ಇದರ ಉದ್ದೇಶವೇನು ಎಂಬ ಬಗ್ಗೆ ಈಗಾಗಲೇ ಪೂಜ್ಯ ಮಾತಾಜಿಯವರು ಬಹಳ ಪರಿಣಾಮಕಾರಿಯಾಗಿ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದ್ದಾರೆ.

ಏಕೆ ಬೇಕಿತ್ತು ಈ ಮಹಾಜಗದ್ಗುರು ಪೀಠ? ಎಂದು ಅನೇಕರು ಆಲೋಚಿಸಿರಬಹುದು. ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗಗಳಿವೆ, ಕನ್ನಡ ಪ್ರಾಧ್ಯಾಪಕರಿದ್ದಾರೆ, ಕನ್ನಡ ಭಾಷೆಯ ಅಧ್ಯಯನ ಸಾಗುತ್ತಲಿದೆ. ಆದರೂ ಹಂಪೆಯಲ್ಲೊಂದು ಕನ್ನಡ ವಿಶ್ವವಿದ್ಯಾಲಯ ಮಾಡಿ, ಅದಕ್ಕೆ ಶ್ರೀ ಡಾ॥ ಚಂದ್ರಶೇಖರ್ ಕಂಬಾರರವರನ್ನು ಉಪಕುಲಪತಿಗಳನ್ನಾಗಿ ಮಾಡಿಲ್ಲವೆ ? ಈ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯ ಉದ್ದೇಶ, ಸರ್ವಾಂಗೀಣವಾಗಿ ಕನ್ನಡ ಭಾಷೆಯನ್ನು ಬೆಳೆಸುವುದೇ ಅಲ್ಲದೆ, ಅದರ ಅಧ್ಯಯನ ಮಾಡುವುದು. ಬೇರೆ ವಿಶ್ವವಿದ್ಯಾಲಯಗಳಲ್ಲಿ ಎಲ್ಲ ವಿಷಯಗಳ ಮಧ್ಯೆ ಕನ್ನಡವೂ ಒಂದು, ಇಲ್ಲಿ ಕನ್ನಡಕ್ಕೆ ಅಗ್ರಪೀಠ. ಹಾಗೆಯೇ ಅನೇಕ ಮಠ–ಪೀಠಗಳಲ್ಲಿ ಹತ್ತರೊಳಗೆ ಹನ್ನೊಂದು ಎಂಬಂತೆ, ವಚನ ಸಾಹಿತ್ಯದ ಸ್ಥಾನ, ಧರ್ಮಗುರು ಬಸವಣ್ಣನವರ ಸ್ಥಾನ. ಇಲ್ಲಿ ಬಸವ ಗುರುವಿಗೆ ಮತ್ತು ವಚನ ಸಾಹಿತ್ಯಕ್ಕೆ ಅಗ್ರಪೀಠ, ಪೂರ್ಣ ಮಾನ್ಯತೆ. ಹೀಗೆ ಈ ಪೀಠದ್ದು ಏಕೋಭಾವದ ಅಖಂಡ ನಿಷ್ಠೆ.

ವಿಶ್ವವಿದ್ಯಾಲಯ ಮಾಡಿದ ಮೇಲೆ ಅದರ ಹೊಣೆಗಾರಿಕೆ, ವ್ಯವಸ್ಥೆ ನೋಡಲು ಉಪಕುಲಕುಪತಿ ಹೇಗೆ ಬೇಕೋ ಹಾಗೇ ಪೀಠಾಧ್ಯಕ್ಷ ಬೇಕು ಎಂದು ನನ್ನನ್ನು ನೀವಿಂದು ಗದ್ದುಗೆಗೆ ಏರಿಸಿದ್ದೀರಿ. ಇದು ಸೇವೆಯ ಉದ್ದೇಶಹೊತ್ತ ಕರ್ತವ್ಯ ಸ್ಥಾನ ಎಂದೇ ನಾನು ತಿಳಿದಿದ್ದೇನೆ. ಧರ್ಮವು ಕೇವಲ ತತ್ತ್ವಗಳ ಕಂತೆಯಲ್ಲ ; ಅನುಷ್ಠಾನವಾಗಬೇಕಾದ್ದು. ಇದನ್ನು ಅನುಷ್ಠಾನ ಮಾಡಲು, ಮಾಡಿಸಲು ಗುರು ಪೀಠಗಳು, ಪೀಠಾಧೀಶರು ಇರುವುದು. ಇದು ಮಹಾಮನೆ ಮಹಾಮಠ ಎಂದು ಕರೆದಿದ್ದೇವೆ. ತಮಗಾಗಿ, ತಮ್ಮ ಹೆಂಡಿರುಮಕ್ಕಳಿಗಾಗಿ ಇರುವುದು ಮನೆ ; ಇದು ಎಲ್ಲರಿಗೂ ಎಂಥವರಿಗೂ ತೆರೆದಿದ್ದು ವಿಶ್ವಕುಟುಂಬತ್ವ ಬೋಧಿಸುವ ಕಾರಣ ಮಹಾಮನೆ. ಹಲವಾರು ಮಠಗಳಿರಬಹುದು, ಅವು ಸ್ಥಳೀಯವಾಗಿ ಕಾರ್ಯಮಾಡುತ್ತವೆ. ಮತ್ತು ತಮ್ಮ ತಮ್ಮ ಉಪಪಂಗಡಗಳನ್ನು ಜಾತಿಗಳನ್ನು ಸಂಘಟಿಸುತ್ತವೆ ; ಇದು ಮಹಾಮಠವಾಗಿ ಅಖಂಡ ಲಿಂಗವಂತ ಸಮಾಜವನ್ನು ಬಸವ ತತ್ತ್ವಾನುಯಾಯಿಗಳನ್ನು ಒಂದುಗೂಡಿಸುತ್ತದೆ. ಇದು ಜಾತಿಯ ತಳಹದಿಯ ಮೇಲೆ ಕಟ್ಟಲ್ಪಟ್ಟ ಜಾತಿ ಪೀಠವಲ್ಲ, ಆಚಾರ-ಅರಿವು-ಅನುಭಾವ-ಅರ್ಹತೆಗಳ ಮೇಲೆ ಕಟ್ಟಲ್ಪಟ್ಟ ಜ್ಯೋತಿಪೀಠ.

ಗುರು ಬಸವಣ್ಣನವರು ಸರ್ವಾಂಗಪರಿಪೂರ್ಣ ವ್ಯಕ್ತಿತ್ವ ಹೊಂದಿದ ಕಾರಣಿಕರು. ಅವರು ಒಂದು ಹೊಸಧರ್ಮದ ಆದ್ಯರಾಗಿ ನವಪಥವನ್ನು ಹಾಕಿಕೊಟ್ಟರು. ಅವರು ಕೊಟ್ಟುದು ಒಂದು ಸ್ವತಂತ್ರ ಧರ್ಮ, ಸದ್ಧರ್ಮ, ಮಾನವ ಧರ್ಮ, ಪ್ರಗತಿಪರ ವೈಚಾರಿಕ ಧರ್ಮ, ರಾಷ್ಟ್ರಧರ್ಮ, ವಿಶ್ವಧರ್ಮ.

ಅನುಭವ ಮಂಟಪ ಎಂಬ ಅಧ್ಯಾತ್ಮಿಕ ವಿಶ್ವವಿದ್ಯಾಲಯವನ್ನು ಕಟ್ಟಿ, ತನ್ಮೂಲಕ ಜನರನ್ನು ಆಕರ್ಷಿಸಿ, ಸಂಸ್ಕಾರ ನೀಡಿದರು. ಜಾತಿವರ್ಣವರ್ಗರಹಿತ ಧರ್ಮಸಹಿತವಾದ ಕಲ್ಯಾಣರಾಜ್ಯವನ್ನು ಮರ್ತ್ಯದಲ್ಲಿ ಕಟ್ಟಿದರು. ವ್ಯಕ್ತಿಯು ಇಷ್ಟಲಿಂಗ ಧಾರಿಯಾಗಿ ಶರಣನಾದ ಮೇಲೆ ಅವನ ಪೂರ್ವದ ಜಾತಿಯಳಿಯುವುದು ಎಂಬ ತತ್ತ್ವದ ತಳಹದಿಯ ಮೇಲೆ, ಬ್ರಾಹ್ಮಣನಾಗಿದ್ದು ಶರಣನಾದ ಮಧುವರಸನ ಮಗಳನ್ನು ಸಮಗಾರನಾಗಿದ್ದು ಶರಣನಾದ ಹರಳಯ್ಯನ ಮಗ ಶೀಲವಂತನಿಗೆ ಕೊಟ್ಟು ಮದುವೆ ಮಾಡಿಸುತ್ತಲೇ ಸಂಪ್ರದಾಯಬದ್ಧ ಮತಾಂಧರು ಸಿಡಿದೆದ್ದರು. ವರ್ಣಾಂತರ ವಿವಾಹದಿಂದ ಮತಾಂಧರು ಕ್ರೋಧತಪ್ತರಾಗಿ ರಾಜ ಬಿಜ್ಜಳನಿಗೆ ಚಾಡಿ ಚುಚ್ಚಿದರು. ಗುರು ಬಸವಣ್ಣನವರು ಗಡಿಪಾರು ಶಿಕ್ಷೆ ಹೊಂದಿ, ಕೂಡಲ ಸಂಗಮದತ್ತ ನಡೆದರು ; ಹರಳಯ್ಯ-ಮಧುವರಸ-ಶೀಲವಂತರ ಎಳೆಹೂಟೆ ಶಿಕ್ಷೆಯಾಯಿತು. ಸಮತಾವಾದವನ್ನು ಬೋಧಿಸುವ ವಚನ ವಾಙ್ಮಯವನ್ನು ನಾಶಮಾಡಲು ಮತಾಂಧರು ಪಣತೊಟ್ಟಾಗ ವೀರ ಶರಣ ಮಾಚೀದೇವರು, ವೀರಮಾತೆ ಅಕ್ಕನಾಗಲಾಂಬಿಕೆ, ಚಿನ್ಮಯ ಜ್ಞಾನಿ ಚನ್ನಬಸವಣ್ಣ ಮುಂತಾದವರು ಸಹ್ಯಾದ್ರಿಯ ಘಟ್ಟಗಳತ್ತ ಸಾಗಿ ಸಾಹಿತ್ಯವನ್ನು ಸಂರಕ್ಷಿಸಿದರು. ಕಲ್ಯಾಣದಿಂದ ಶರಣರು ಚದುರಬೇಕಾಯಿತು. ಬಸವಾದಿ ಪ್ರಮಥರು ಹೀಗೆ

Digitalized by e-Sahithya Documentation Forum
Sponsored by Sarayu Foundation Trust


ಚದುರಿ, ವಚನ ಸಾಹಿತ್ಯ ಗುಪ್ತಗಾಮಿನಿಯಾಗುತ್ತಲೇ ಒಂದು ಬಗೆಯ ಶೂನ್ಯತೆ, ನಿರ್ವಾತ (vacume) ಉಂಟಾಯಿತು. ಹಪ್ಪಳ-ಸಂಡಿಗೆ ಮುಂತಾದುವನ್ನು ಬಿಸಿಲಿನಲ್ಲಿ ಒಣಗಲು ಹಾಕಿ, ಕಾವಲಿಗೆ ಇರುವವರು ಮರೆಯಾಗುತ್ತಲೇ ಹೊಂಚುಹಾಕಿ ಎರಗುವ ಕಾಗೆಗಳಂತೆ ಜಾತೀಯತೆ, ಮೂಢನಂಬಿಕೆ ಮುಂತಾದುವು ಪುನಃ ಈ ಸಮಾಜ-ಧರ್ಮಗಳ ಮೇಲೆ ಎರಗಿದವು. ಶರಣ ಧರ್ಮ ಅತ್ಯಂತ ಪ್ರಭಾವಶಾಲಿಯಾಗಿ ಬೆಳೆದಾಗ ತಮ್ಮ ಹೊಟ್ಟೆಪಾಡನ್ನು ಕಂಡುಕೊಳ್ಳಲು ಲಿಂಗಧಾರಿಗಳಾಗಿ ಬಂದಿದ್ದ ವಿವಿಧ ಶೈವ-ವೈದಿಕ ಗುಂಪುಗಳವರು ಪುನಃ ಮಾತೃಧರ್ಮಕ್ಕೆ ವಿರುದ್ಧವಾದ ಆಚರಣೆಗಳನ್ನು ಸೇರಿಸಿ, ಪೋಷಿಸತೊಡಗಿದರು. ಬಸವಾದಿ ಪ್ರಮಥರು ಗುಡಿಸಿ ಮುಂಬಾಗಿಲಿನಿಂದ ಹೊರಹಾಕಿದ್ದ ನಂಬಿಕೆ-ಆಚರಣೆಗಳನ್ನು ಪುನಃ ಹಿತ್ತಿಲಬಾಗಿಲಿನಿಂದ ಈ ಜನರು ಒಳಗೆ ಸೇರಿಸಿಕೊಂಡು ಲಿಂಗವಂತ ಧರ್ಮದ ಆಚಾರ-ವಿಚಾರಗಳನ್ನು ಕಲಬೆರಕೆ ಮಾಡಿದರು.

ತಮ್ಮ ಜೀವಿತ ಕಾಲದಲ್ಲಿ, ಸಮಕಾಲೀನರ ವಚನಗಳಲ್ಲಿ–ಸಮಾಜದಲ್ಲಿ ಅಗ್ರ ಸ್ಥಾನ ಪಡೆದಿದ್ದ ಗುರು ಬಸವಣ್ಣನವರನ್ನು ಮತ್ತು ಲಿಂಗವಂತರ ಧರ್ಮ ಸಂಹಿತೆಯಾದ ವಚನ ವಾಙ್ಮಯವನ್ನು ಅವುಗಳ ನಿಯಂತ್ರಕ ಸ್ಥಾನದಿಂದ ದೂರ ಮಾಡುವ ಸನ್ನಾಹವನ್ನು ಈ ಭಿನ್ನಮತೀಯರು ಮಾಡಿದರು. ಹೀಗಾಗಿ ಲಿಂಗವಂತ ಸಮಾಜವು ಎಷ್ಟು ವಿಶಾಲವಾಗಿ, ಪ್ರಗತಿಪರವಾಗಿ ಬೆಳೆಯಬೇಕಿತ್ತೋ ಹಾಗೆ ಬೆಳೆಯಲು ಆಗಲಿಲ್ಲ.

ಈ ಧರ್ಮವು ಮತ್ತೊಮ್ಮೆ ಪುನಃಶ್ಚೇತನ ಪಡೆಯಿತು, ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಶ್ರೀ ಷಣ್ಮುಖ ಶಿವಯೋಗಿಗಳು, ಸರ್ವಜ್ಞ, ಬಾಲ ಲೀಲಾ ಮಹಾಂತ ಶಿವಯೋಗಿಗಳು ಮುಂತಾದವರಿಂದ ಆದರೂ ತನ್ನ ಮೂಲ ಶುದ್ಧಿಯನ್ನು ಉಳಿಸಿಕೊಳ್ಳದೆ ಶೈವ ಮತ್ತು ವೈದಿಕ ಆಚರಣೆಗಳ ಹುದುಲಿನಲ್ಲಿ ಸಿಕ್ಕಿಕೊಂಡಿತು.

ಧರ್ಮಗುರು ಬಸವಣ್ಣ-ಧರ್ಮಸಂಹಿತೆ ವಚನ ಸಾಹಿತ್ಯ ಎಂಬ ಹಳಿಗಳ ಮೇಲೆ ಹಲವಾರು ಶತಮಾನಗಳ ಕಾಲ ಸಾಗಿ ಬಂದ ಈ ಸಮಾಜ-ಧರ್ಮಗಳ ಟ್ರೇನನ್ನು ಕೆಲವರು ಹಳಿ ತಪ್ಪಿಸಿದ್ದಾರೆ. ಈಗ ಹಳಿಗಳ ಮೇಲೆ ಕೂರಿಸುವ ಪ್ರಯತ್ನವನ್ನು ಇಂದು ಮಾಡಬೇಕಾಗಿದೆ. ಇತ್ತೀಚೆಗೆ ಒಂದು ವಿಚಾರ ಸಂಕೀರ್ಣ ನಡೆಯಿತು. ಆಗ ಬಸವ ತತ್ತ್ವಾನುಯಾಯಿಗಳಾದ ಒಬ್ಬ ಸ್ವಾಮಿಗಳು, "ಒಂದು ಧರ್ಮಗ್ರಂಥವಾಗಬೇಕೆಂಬ ನಿಮ್ಮ ಕಳಕಳಿ ಸ್ತುತ್ಯಾರ್ಹ. ಆದರೆ ಧರ್ಮಗುರುವನ್ನೇ ನಿಶ್ಚಯಿಸದೆ ಮುಂದಿನ ಚರ್ಚೆ ಹಾಸ್ಯಾಸ್ಪದ" ಎಂದು ಹೇಳಿದಾಗ, ವ್ಯವಸ್ಥಾಪಕರು 'ಆ ಬಗ್ಗೆ ಈಗ ಚರ್ಚೆ ಬೇಡ' ಎಂದರಂತೆ. ಧರ್ಮಗುರುವಿನ ಅಗತ್ಯವಿಲ್ಲ, ಧರ್ಮಗ್ರಂಥ ಸಾಕು ಎಂದರೆ "ನನಗೆ ಅಪ್ಪ ಯಾರೆಂಬುದು ಬೇಕಿಲ್ಲ, ಅಮ್ಮ ಮಾತ್ರ ಸಾಕು" ಎಂದಂತಾಗಿ ಬಹಳ ಪ್ರಮಾದಕ್ಕೆ ಎಡೆಮಾಡಿದಂತಾಗುತ್ತದೆ. ನಾವು ದ್ರೌಪದಿಯ ಮಕ್ಕಳಾಗಬಾರದು, ನಮಗಿರುವುದು ಒಬ್ಬತಂದೆ, ಬಸವಣ್ಣ ; ತಾಯಿ ವಚನಸಾಹಿತ್ಯ. ವಿಶ್ವಧರ್ಮಗಳಾ

(150 ನೇ ಪುಟಕ್ಕೆ ಮುಂದುವರಿಯುವುದು)



ಧ್ಯಾನ ಮಗ್ನ ಪೂಜ್ಯ ಸ್ವಾಮೀಜಿ - 1959.
(ತಿಪ್ಪೀಮಠ ಸ್ಟುಡಿಯೋ, ಚಿಕ್ಕೋಡಿ)

Digitalized by e-Sahithya Documentation Forum
Sponsored by Sarayu Foundation Trust

ಶ್ರೀ ಗುರುಸಿದ್ಧೇಶ್ವರ ಕೋ-ಆಪ್ ಬ್ಯಾಂಕ್ ಲಿ. ಹುಬ್ಬಳ್ಳಿ

ಪ್ರಧಾನ ಕಚೇರಿ : ಗುರುಸಾವಿರಮಠ ರೋಡ, ಹುಬ್ಬಳ್ಳಿ, ಪಿ. ಬಿ. ನಂ. 724, ದೂರವಾಣಿ : **65412, 61503**

ಶಾಖಾ ಕಚೇರಿ : ದೇಶಪಾಂಡೆ ನಗರ, ಹುಬ್ಬಳ್ಳಿ, ದೂರವಾಣಿ : **50133**

30-6-1991ಕ್ಕೆ ಇದ್ದ ಆರ್ಥಿಕ ಸ್ಥಿತಿಯ ಪಕ್ಷಿನೋಟ (ರೂ. ಲಕ್ಷಗಳಲ್ಲಿ)

ಶೇರು ಬಂಡವಾಳ	74.51	ಠೇವುಗಳು	946.12
ಕಾಯ್ದಿಟ್ಟ ವ ಇತರ ನಿಧಿಗಳು	55.22	ಸಾಲ ವ ಮುಂಗಡಗಳು	684.46

ನಿವ್ವಳ ಲಾಭ 33.84 (ರೂ. ಲಕ್ಷಗಳಲ್ಲಿ)

ದುಡಿಯುವ ಬಂಡವಾಳ ರೂಪಾಯಿ 12 ಕೋಟಿಗೂ ಮಿಕ್ಕಿದೆ.

ನಿರ್ದೇಶಕ ಮಂಡಳಿಯ ಸದಸ್ಯರು

ಶ್ರೀ ವಿ. ಎಸ್. ಆರಾಧ್ಯಮಠ, ವೈಸ್ ಚೇರ್‌ಮನರು — **ಶ್ರೀ ಡಾ. ಎಲ್. ಎಸ್. ಮಾನ್ವಿ**, ಚೇರಮನರು

ನಿರ್ದೇಶಕರು

ಶ್ರೀ ಎಸ್. ಜಿ. ಕವಳಿ — ಶ್ರೀ ಜಿ. ಸಿ. ಬತ್ತಿ
ಶ್ರೀ ಎ. ಸಿ. ಚವಡಿ — ಶ್ರೀ ಸಿ. ಸಿ. ಎಮ್ಮೆಟ್ಟಿಹಿರೇಮಠ
ಶ್ರೀ ಎಲ್. ಕೆ. ಬೀಳಗಿ — ಶ್ರೀ ಬಿ. ವಿ. ಗಿಣಿಮಾವ
ಶ್ರೀಮತಿ ಶಾಂತಕ್ಕಾ ಮಠದ — ಶ್ರೀ ಸಿ. ಎಫ್. ಭೂಸದ

- ಪ್ರಧಾನ ಕಚೇರಿ ಹಾಗೂ ದೇಶಪಾಂಡೆ ನಗರ ಶಾಖೆಯಲ್ಲಿ ಸೇಫ್ ಡಿಪಾಜಿಟ್ ಲಾಕರಗಳ ಸೌಲಭ್ಯ ಪಡೆಯಿರಿ.
- ನಮ್ಮ ಬ್ಯಾಂಕು "ವಿಮಾ ಮಾಡಲ್ಪಟ್ಟ ಬ್ಯಾಂಕು" ಅಂತಾ ಠೇವು ವಿಮಾ ಕಾರ್ಪೊರೇಶನ (ಭಾರತ ಸರಕಾರ) ದಿಂದ ನೊಂದಾಯಿಸಲ್ಪಟ್ಟಿದೆ.
- ಠೇವುಗಳ ಮೇಲೆ ವಾಣಿಜ್ಯ ಬ್ಯಾಂಕುಗಳಿಗಿಂತ ಶೇಕಡಾ 1 ರೂ. ಹೆಚ್ಚಿಗೆ ಕೊಡಲಾಗುವುದು.
- ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ ಇವರ ಸಾಲ ಯೋಜನೆ ಪ್ರಕಾರ ಸಾಲ ಕೊಡಲು ಪ್ರಾರಂಭಿಸಿದೆ.
- ಆಶೀರ್ವಾದ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ಹಣ ತೊಡಗಿಸಿದಲ್ಲಿ 63 ತಿಂಗಳುಗಳಲ್ಲಿ ದ್ವಿಗುಣಗೊಳ್ಳುವದು.
- ಭಾರತದಾದ್ಯಂತ ಡಿಮಾಂಡ್ ಡ್ರಾಫ್ಟಗಳನ್ನು ಕೊಡಲಾಗುವುದು.
- ಎಲ್ಲ ನಮೂನೆಯ ಬ್ಯಾಂಕಿನ ವ್ಯವಹಾರಗಳಿಗಾಗಿ ನಮ್ಮ ಪ್ರಧಾನ ಕಚೇರಿ ಹಾಗೂ ಶಾಖೆಗೆ ಸಂಪರ್ಕಿಸಿರಿ.

ಶ್ರೀ ಪಿ. ಎಸ್. ದಂಡಿನ, ಶಾಖಾ ಇನ್‌ಚಾರ್ಜ್ ಮ್ಯಾನೇಜರ — **ಶ್ರೀ ವಿ. ಎಮ್. ಅಪ್ಪನಗೌಡರ**, ಹೆಡ್ ಆಫೀಸ ಇನಚಾರ್ಜ್ ಮ್ಯಾನೇಜರ

ಐತಿಹಾಸಿಕ ಘಟನೆ
ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪನೆ

—ಮಾತಾಜಿ

ಬಸವ ಪೀಠವು ಎದ್ದು, ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು ! ಧರೆಯವಗೆ
ವಶವಾಗದಿಹುದೇ ಸರ್ವಜ್ಞ ?

ರೆ॥ ಉತ್ತಂಗಿ ಚೆನ್ನಪ್ಪನವರು ಪ್ರಕಟಿಸಿರುವ ಸರ್ವಜ್ಞನ ತ್ರಿಪದಿಗಳಲ್ಲಿ ಇದೂ ಒಂದು. ಗುರು ಬಸವಣ್ಣನವರ ಸಮಕಾಲೀನರಾದಿಯಾಗಿ ಎಲ್ಲರೂ ಬಸವಣ್ಣನವರೊಡನೆ ಅನನ್ಯವಾದ ಭಕ್ತಿ–ಗೌರವಗಳೊಡನೆ ಆತ್ಮೀಯ ಭಾವ ಸಹ ಹೊಂದಿದ್ದರು.

ಹಸಿವಿಗಂಬಲಿ ಮುದ್ದು, ಬಿಸಿಲಿಗೆ ಕೊಡೆ ಮುದ್ದು
ಬಸಿರಿನಲಿ ಬಂದ ಶಿಶು ಮುದ್ದು ! ಲೋಕಕ್ಕೆ
ಬಸವಣ್ಣನೇ ಮುದ್ದು ಸರ್ವಜ್ಞ ॥

ಎಂಬಲ್ಲಿ ಈ ಆತ್ಮೀಯತೆ ವ್ಯಕ್ತವಾಗಿದೆ. ಶರಣರ ಪ್ರಾಣವಾಗಿ ಒಂದು ಧರ್ಮದ ಆದ್ಯರು, ನವ ಪಥದ ನಿರ್ಮಾಪಕರೂ ಆದ ಬಸವ ಗುರುವಿನ ಹೆಸರಿನಲ್ಲಿ ಧರ್ಮ ಪೀಠವೊಂದು ಇಲ್ಲದ ಕೊರತೆ ಎಲ್ಲ ಬಸವ ತತ್ತ್ವಾನುಯಾಯಿಗಳನ್ನು ಕಾಡುತ್ತಿದ್ದಂತೆ ಸರ್ವಜ್ಞನನ್ನೂ ಕಾಡಿರಬೇಕು. ಬಸವ ಪೀಠವು ಆಗಬೇಕೆಂಬ ಸಂಕಲ್ಪವೋ, ಆಗುವುದೆಂಬ ಭವಿಷ್ಯವಾಣಿಯೋ ಅಂತೂ ಅದೀಗ ಸಿದ್ಧಿಸಿದೆ ಬಸವ ಶಕೆ 886 ನೇ ವರ್ಷ, ಸೋಮವಾರ 13-1-1992 ರಂದು.

ಶರಣರಿಂದ ಕಾಲಜ್ಞಾನ ವಚನಗಳು ವಿಪುಲವಾಗಿ ಬರೆಯಲ್ಪಟ್ಟಿವೆ. ಅವುಗಳನ್ನು ವಿಶ್ಲೇಷಿಸುತ್ತ ಹೋದರೆ ಕೆಲವು ಇತಿಹಾಸದ ನಿರೂಪಣೆಯಾಗಿ ಕಂಡರೆ ಮತ್ತೆ ಕೆಲವು ಭವಿಷ್ಯವಾಣಿಯಾಗಿ ತೋರುತ್ತವೆ. ಅಂದಿನ ಕಾಲದಲ್ಲಿ ವಾರ್ತಾ ಪತ್ರಿಕೆಗಳಂತಹ ಸಾಮೂಹಿಕ ಪ್ರಸಾರ ಮಾಧ್ಯಮಗಳಿಲ್ಲದಾಗ ಬಾಯಿಂದ ಬಾಯಿಗೆ ಸುದ್ದಿಯು ಸಾಗಬೇಕಿತ್ತು. ಕಲ್ಯಾಣದಲ್ಲಿ ನಡೆದ ಅನೇಕ ಪ್ರಸಂಗ, ಬಸವಣ್ಣನವರ ಚರಿತ್ರೆ ಮುಂತಾದುವನ್ನು ಈ ಕಾಲಜ್ಞಾನ ವಚನಗಳು ಹೇಳುತ್ತ ಇತಿಹಾಸದ ದಾಖಲೆಗಳಾದರೆ; ಕೆಲವು ಆದಿ ಶರಣರು ತಮ್ಮ ಅನಿಸಿಕೆಗಳನ್ನು, ಸಂಕಲ್ಪವನ್ನು, ಮುಂದೆ ಆಗಬಹುದಾದ ಭವಿಷ್ಯದ ಘಟನೆಗಳನ್ನೂ ವಚನಗಳ ರೂಪದಲ್ಲಿ ಹೇಳುತ್ತಾ ಹೋಗಿದ್ದಾರೆ.

ಶಿವಯೋಗ ಸಾಧನೆಯಲ್ಲಿ ತೊಡಗಿ, ಆಳವಾದ ದಿವ್ಯಾನುಭವದಲ್ಲಿ ತಲ್ಲೀನರಾದಾಗ ಅವರ ಮನವು ಘನಮನವಾಗಿ, ಉನ್ಮನವಾಗಿ ದೇಶ-ಕಾಲಾತೀತ (beyond time and space) ವಾಗಿ ಅನುಭವಗಳನ್ನು ಗ್ರಹಿಸುವುದು. ಇಂಥ ಅನುಭವಗಳನ್ನು ಅವರು ವಚನ ರೂಪದಲ್ಲಿ ಬರೆದಿಟ್ಟಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

ಕ್ರೈಸ್ತ ಧರ್ಮದಲ್ಲಿ ಸುವಾರ್ತಾ ಪ್ರಸಾರಕರು ಏಸುಕ್ರಿಸ್ತನ ಜೀವನ–ಬೋಧನೆಗಳನ್ನು ಹೇಳುತ್ತಾ ಹೋದಂತೆ, ಕಾಲಜ್ಞಾನವನ್ನು ಸಾರುವ ಅಯ್ಯನವರುಗಳು ಅನೇಕ ಸಂಗತಿಗಳನ್ನು ಸಾರುತ್ತಾ ಬಂದಿದ್ದಾರೆ. ನಮ್ಮಲ್ಲಿ ಈ ಕಾಲಜ್ಞಾನ ವಚನಗಳನ್ನು ಸಂಗ್ರಹಿಸುವ. ಅವನ್ನು ಅಧ್ಯಯನಿಸುವ, ಅರ್ಥೈಸುವ ಪರಿಪಾಠ ಬೆಳೆದು ಬರಲಿಲ್ಲ. ಎಲ್ಲದರ ಬಗ್ಗೆಯೂ ಉದಾಸೀನ ತೋರುವ ಈ ಜನ ಆ ಬಗ್ಗೆಯೂ ತೋರಿದರು. ಮೇಲಾಗಿ ಸಾರುವ ಅಯ್ಯನವರುಗಳು ಅವಿದ್ಯಾವಂತರು, ಸಾಹಿತ್ಯ ಜ್ಞಾನ ಇಲ್ಲದವರೂ ಆಗಿ ತಪ್ಪುತಪ್ಪಾಗಿ ಹೇಳುವುದಲ್ಲದೆ, ಆದಿ ಶರಣರ ಕಾಲಜ್ಞಾನದೊಡನೆ ತಮ್ಮ ಮನಸ್ಸಿಗೆ ಬಂದಂತೆ ಸೇರಿಸುತ್ತ ಇನ್ನಷ್ಟು ಇವುಗಳ ಮಹತ್ವ ಕಳೆದುಬಿಟ್ಟರು.

ನನಗೊಂದು ಸರ್ವಪುರಾತನರ ಕಾಲಜ್ಞಾನ ಎಂಬ ಪುಸ್ತಕ ದೊರೆಯಿತು. ಶ್ರೀ ಶಿವರುದ್ರಸ್ವಾಮಿಗಳು ಸಾಲಿಮಠ ಎಂಬುವವರು ಅದರ ಸಂಗ್ರಹಕಾರರಾಗಿದ್ದಾರೆ. ಹುಬ್ಬಳ್ಳಿಯ ಕೊಪ್ಪೀಕರ್ ರಸ್ತೆಯಲ್ಲಿರುವ ಭಾರತ ಬುಕ್ ಡಿಪೋದವರು ಪ್ರಕಾಶಕರಾಗಿದ್ದಾರೆ. ಯಾವ ಇಸವಿಯಲ್ಲಿ ಮುದ್ರಣವಾಯಿತೆಂಬುದನ್ನೇ ತಿಳಿಸಲು ಲೇಖಕರು ಪ್ರಕಾಶಕರು ಮರೆತಿದ್ದಾರೆ. ಇದರಲ್ಲಿ 30 ಜನ ಶರಣರ ಕಾಲಜ್ಞಾನ ವಚನ ಮತ್ತಿತರ ಕೃತಿಗಳಿವೆ. ಇದನ್ನು ಓದಿದಾಗ ನನಗನ್ನಿಸಿತು. ಬಸವಾದಿ ಪ್ರಮಥರ ಕನಸು ದೇವರು-ಧರ್ಮಗಳ ತಳಹದಿಯ ಮೇಲೆಯೇ ಸಮತಾವಾದಿ, ಗುಣ-ಶೀಲ ಪ್ರಧಾನವಾದ ಶರಣಸಮಾಜವನ್ನು ಕಟ್ಟುವುದೇ ಆಗಿತ್ತು. ವಿಚಾರಧಾರೆಯಲ್ಲಿ ಅವರು 8-10 ಶತಮಾನಗಳಷ್ಟು ಮುಂದೆ ಇದ್ದರು. ಅವರ ಪ್ರಖರ ವಿಚಾರಗಳನ್ನು ಅರಗಿಸಿಕೊಳ್ಳುವ ಸಾಮರ್ಥ್ಯ ಅಂದಿನ ಶತಮಾನಕ್ಕೆ ಇರಲಿಲ್ಲ. ಆದರೂ ಲಕ್ಷಾಂತರ ಶರಣರು ಬಸವ ತತ್ತ್ವವನ್ನು ಅರಿತು, ಅಳವಡಿಸಿಕೊಂಡರು. ಮತಾಂಧ ಶಕ್ತಿಗಳಿಂದ ಹಲ್ಲೆಗೊಳಗಾಗಿ ಶರಣರ ಆದರ್ಶ ಸಮಾಜ ಆಘಾತಕೊಳ್ಳಗಾದಾಗ, ವಿಪತ್ತು ಎರಗಿದಾಗ ಅವರು ಚದುರಿದರು.

ಅವರ ಸತ್ಸಂಕಲ್ಪ ದುರ್ಬಲಗೊಳ್ಳಲಿಲ್ಲ. ಅವರು ದೇವನಲ್ಲಿ ಶ್ರದ್ಧೆ ಇಟ್ಟುಕೊಂಡವರಾಗಿ, ಭವಿಷ್ಯದಲ್ಲಿ ಆಸೆಯನ್ನಿಟ್ಟುಕೊಂಡರು. ನಂತರದ ಜಗತ್ತು ಅವರ ಉದಾತ್ತ ಚಿಂತನೆಯನ್ನು ಅರ್ಥಮಾಡಿಕೊಂಡೇ ತೀರುವುದೆಂದು ಭರವಸೆ ತಾಳಿದರು.

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನಬೇಡ
ಮುಂದಣ ಫಲದೊಳಗರಸಿಕೋ !
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನಬೇಡ
ಮುಂದಣ ಬಣ್ಣದೊಳಗರಸಿಕೋ !
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನಬೇಡ
ಮುಂದಣ ಅಗ್ನಿಯೊಳಗರಸಿಕೋ ! —ಚನ್ನಬಸವಣ್ಣ ೧೦೦೦

ಎಂದು ಪರಸ್ಪರ ಸಮಾಧಾನ ಮಾಡಿಕೊಂಡರು. ಶರಣರ ಆ ಆಸೆ ಹಲವಾರು ಭವಿಷ್ಯವಾಣಿಗಳ ರೂಪದಲ್ಲಿ ಅಭಿವ್ಯಕ್ತಗೊಂಡಿದೆ. ಇದು ಕೇವಲ ಆಸೆಯೂ ಅಲ್ಲ, ಕಾಲದೇಶಾತೀತ ದೃಷ್ಟಿಹೊಂದಿ ಮುಂದಾಗಲಿರುವುದನ್ನು ಸಮ್ಯಕ್ ದೃಷ್ಟಿಯಿಂದ ಕಂಡೇ ಕಾಲಜ್ಞಾನ ವಚನಗಳನ್ನು ಬರೆದಿರುವ **ದಿವ್ಯ ದರ್ಶನ**. ಅಂಥ ಕೆಲವು ವಚನ ವಾಕ್ಯಗಳನ್ನು ನೋಡುವಾ.

ನೀಲಲೋಚನೆಯ ಕಾಲಜ್ಞಾನ :-

1. ಕಪ್ಪಡಿ ಸಂಗಮ ತಪ್ಪದೇ ಹೇಳಿದಾ
ಅಪ್ಪ ಬಸವಣ್ಣ ಬರುವುದನು ಸುವ್ವಿ ।
ಯೇಳನೂರು ಎಪ್ಪತ್ತು ವರುಷಕ್ಕೆ ಬರುತಾನೆ ಸುವ್ವಿ !
ಪದ್ಯ 19, ಪುಟ 10

2. ನಾರಿ ಒಬ್ಬಳು ಬಂದು ಬಾರಿ ಅಬ್ಬರ ಹೊತ್ತು
ಆರೂಢ ಭಿಕ್ಷವ ಬೇಡ್ಯಾಳು ಸುವ್ವಿ
ಮತ್ತಿನ್ನು ವೀರ ಬಸವಣ್ಣ ಬರುವಾಗ ಸುವ್ವಿ ॥
ಪದ್ಯ 25, ಪುಟ 11

3. ಮೂರು ಹೊನ್ನಿಗೆ ಸೇರು ವಿಭೂತಿ ಮಾರೀತು
ಆರು ಹೊನ್ನಿಗೆ ಒಂದು ಲಿಂಗವು ಸುವ್ವಿ
ಅಯಿತು ನಮ್ಮ ವೀರಬಸವಣ್ಣ ಬರುವಾಗ ಸುವ್ವಿ ॥
ಪದ್ಯ 46, ಪುಟ 12

4. ಹದಿನೆಂಟು ಜಾತಿಯು ಶಿವಭಕ್ತರಾದಾರು
ಸದಮಲ ಭಕ್ತಿಜ್ಞಾನವಿಡಿದು ಸುವ್ವಿ
ನಂದಿಯ ಧ್ವಜಗಳು ತಮ್ಮ ಮನೆಮನೆಗೆ ಸುವ್ವಿ ॥
ಪದ್ಯ 47, ಪುಟ 12

5. ಬಸವಣ್ಣ ಬರುವಾಗ ಶಶಿಧರನ ಭಕ್ತರು
ಕುಶಲದ ನುಡಿಗಳ ನುಡಿದಾರು ಸುವ್ವಿ
ಮನೆ ಮನೆ ಬಸವನ ಉತ್ಸವ ಮೆರೆದಾವು ಸುವ್ವಿ ॥
ಪದ್ಯ 48, ಪುಟ 12

ಮುಗ್ಧ ಸಂಗಯ್ಯನವರ ಕಾಲಜ್ಞಾನ :-

6. ಸತ್ಯ ಶರಣರು ವುಳುವಿಗೆ ಸಾಗಿ ಬಸವಯ್ಯ
ಮಿಥ್ಯಾದಿ ಕಲ್ಯಾಣ ಹಾಳೊ ಬಸವಯ್ಯ
ಮತ್ತೆ ನೀವು ಬರುವದಕ್ಕೆ ಬಸವಯ್ಯ
ಸತ್ಯ ಯೇಳ್ನೂರು ಎಪ್ಪತ್ತುವಿಳು ವರುಷ ಬಸವಯ್ಯ ॥
ಪದ್ಯ 2, ಪುಟ 38

Digitalized by e-Sahithya Documentation Forum
Sponsored by Sarayu Foundation Trust

ಹರಳಯ್ಯನ ಧರ್ಮಪತ್ನಿ ಕಲ್ಯಾಣಮ್ಮನ ಕಾಲಜ್ಞಾನ :–

7. ಆ ಕೈಲಾಸ ಹಾಳಾಗಿ । ಭೂ ಕೈಲಾಸವೆ ತುಂಬಿ
ಶಿಲೆಯ ಪೂಜೆಗಳು ಅಳಿದು ।
ಶಿವನು ಪ್ರತ್ಯಕ್ಷವಾಗಿ, ಕರೆದರೆ ಅಲ್ಲಲ್ಲಿ ಓಯೆಂದು
ನಿಜ ಭಕ್ತರಲ್ಲಿ ಪೂಜೆಗೊಳ್ಳುತ್ತ
ಬಸವನ ಉತ್ಸವ ಪಸರಿಸಿ ಮನೆ ಮನೆಗೆ ಲೀಲೆ
ತೀರ್ಥ ಪ್ರಸಾದಗಳು
ಬಸವನೊಬ್ಬನೆ ಗುರುವು । ಶಿವ ತಾನೊರ್ವನೇ ದೇವ
ಪ್ರಭು ಒಬ್ಬನೆ ಜಂಗಮ । ಇಂತು ಗುರು–ಲಿಂಗ–ಜಂಗಮದ
ಹೊರತು ಮಿಕ್ಕ ಉಳಿದವರೆಲ್ಲ ಭಕ್ತರಾಗಿರ್ಪರು ॥

ಪದ್ಯ 119, ಪುಟ 124

8. ಹರನ ಭಕ್ತರು ಪರಮನ ನೋಡಲು
ಪರಮ ಪದವಿಯಹುದು !
ಶರಣರೆಲ್ಲರು ನೋಡಿ ಸುಖಿಸುವರು
ಸುಖದ ಸಾಮ್ರಾಜ್ಯ ಪದವಿಯಾಗುವುದು
ಬರಿದೆ ಭ್ರಮೆಯಲ್ಲ, ಜರಿದವರಿಗೆ ನರಕ ತಪ್ಪದು !
ಶರಣರು ಬೇಗನೇ ಬಂದಾರು ಬರಕೊಳ್ಳಿ
ಹೀಗೆಂದು ಹರಳಯ್ಯನ ಪಟ್ಟದ ರಾಣಿಯಾದ
ಕಲ್ಯಾಣಮ್ಮನು **ಕಾಲಜ್ಞಾನದಲ್ಲಿ** ನೋಡಿ ಹೇಳಿದಳು
ಇದು ಸತ್ಯವು !

ಪದ್ಯ 120, ಪುಟ 124

ಮಡಿವಾಳ ಮಾಚಯ್ಯನವರ ಕಾಲಜ್ಞಾನ :–

9. ದಕ್ಷಿಣದ ಕೃಷ್ಣೆಗೆ ಕಲೆವರ್ರೈಯ್ಯ ಜನ ನೆರೆವರಯ್ಯ.

ಪದ್ಯ 7, ಪುಟ 173

10. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ । ಅರಿದು ನೋಡುವುದು.
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು ॥

ಪದ್ಯ 8, ಪುಟ 173

11. ಹರನಾಜ್ಞೆಯಿಂದ ಯರಕದಾಜ್ಞೆಗಳೆಂದು । ಕರುಳ ಕ್ಯಾತಯ್ಯ ಕೂಗಿ
ಬೊಬ್ಬೆಯನಿಟ್ಟು ಶರಣರೆಲ್ಲರಿಗೆ ಅರಿಕೆ ಮಾಡುತಲಿ
ಉಲಿದು ಕೂಗಿದನು,
ಕಲ್ಯಾಣ ನಲಿವಂತೆ ಬಲ ಬಂತೆಮಗೆ ಉಘೇ ಚಾಂಗು ಭಲ

ಎಂದು ಘನ ಹಿರಿಯರೆಲ್ಲ ಉದಯದೋರುವುದಿನ್ನು
ಮರವಿಯಲ್ಲಿ ಇದ್ದವರು, ರುದ್ರಮುನಿಧರನ ಉದಯವು ॥

ಪದ್ಯ 9, ಪುಟ 174

12. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು । ಆನಂದ ಕಡೆಯಾಟ
ಜರಿಯಲು ಬೇಡ । ಶಿವನ ಡಂಗುರವೆಂದು ಕರವೆತ್ತಿ ಕೂಗಿ
ಅಬ್ಬರದಿಂದ ಸಾರಿದ ಹರನಾಗ ಮೈಯ್ಯ
ಧರೆಯ ಭಕ್ತರಿಗಿನ್ನು ಅರಿಕೆ ಮಾಡುತಲಿ
ಬರೆದಿಟ್ಟ ಪತ್ರಗಳು ಜರಿಯಲು ಬೇಡ, ನರಕ ತಪ್ಪದು.

ಪದ್ಯ 10, ಪುಟ 174

ಪರಿಧಾವಿ ಸಂವತ್ಸರ— ಕ್ರಿ. ಶ. 2032
ಆನಂದ ಸಂವತ್ಸರ — ಕ್ರಿ. ಶ. 2034

13. ಹರನಾಜ್ಞೆ ನಿಮಗೆಂದು ಕರದ ಡಂಗುರುವ
ಧರೆಯರಿಯೆ ಹೊಡೆದ ಶರಣ ಸೊಡ್ಡಳದೇವ
ಭರವಸವಿನ್ನು ಶರಣರುದಯವು
ನೀವು ಹರಿಸಿ ಭಸಿತಗಳನವಧರಿಸಿ. ಪದ್ಯ 11, ಪುಟ 174

14. ಪ್ರಮಥರುದಯದ ಮುಂದೆ ಆಕರಿಸಿ ಬಂತು
ಅಷ್ಟದಿಕ್ಕುಗಳೊಳಗೆ ವಿವೇಕಗಳ ಮಾಡಿ
ರತ್ನಪೂಜಿತವೆಂದು ಈ ಶರಣ ಕಲಿದೇವ
ವಿವೇಕದಲ್ಲಿ ಇಟ್ಟ ವಚನ ಭಾಂಡಾರಗಳ
ಜೋಕೆಯಲ್ಲಿ ಓದಿ ಶಿವನ ಡಂಗುರವೆಂದು.

ಪದ್ಯ 22, ಪುಟ 176

15. ನಿಮ್ಮ ವಚನ ಭಂಡಾರಗಳು ಪ್ರೀತಿಯಲ್ಲಿ ನೀವು ಓದಿ
ಅಮೃತವೆಂದು ಸಾರವುಳ್ಳ ಶಿವಶರಣರಾಲಿಪುದು
ನೀ ಕರಿಸಬೇಡ. ಪದ್ಯ 23, ಪುಟ 176

16. ಆ ಶರಣ ಮಡಿವಾಳ ಮಾಚಯ್ಯ ಬಿಚ್ಚಿಟ್ಟ ನೀತಿಸಾಗರ ಲಿಪಿಯು
ಗೂಢ ಲಿಪಿಗಳು ಎಂದು ಮಾತಾಡಿ
ಮನುಜರ ನುಡಿಯಲ್ಲ ಅಸಂಖ್ಯಾತರ ಕಟ್ಟಳೆಯ
ಪರುಷ ಭಾಂಡಾರಗಳು
ಆ ಶರಣರುದಯ ಆನಂದವೇ ಕಡೆಯಾಗಿ ಲೋಕವರಿವಂತೆ
ಕಲಿಯುಗವು ಮುಂದಿನ್ನು ಆದರಿಸಿತೆಂಬೋ
ಹುಸಿಹೋದ ಅಬುದಕರ ನೀತಿಗಳ ಗೆಲಿದು. ಪದ್ಯ 34, ಪುಟ 178

Digitalized by e-Sahithya Documentation Forum
Sponsored by Sarayu Foundation Trust

17. ಈ ಅನುಭಾವದ ಆಟದ ವಚನಂಗಳು
ಸೋಜಿಗದ ಗುಣಿತವ ಮಾಡೇನೆಂಬ
ಕರಣದ ಶಬ್ದಕರು ಮುಳುಗುವರು
ಅರವತ್ತು ಕೋಟಿ ತಾರೆಗಳ ಬಲ್ಲ, ಸಪ್ತಗ್ರಹಗಳ ಬಲ್ಲ
ಸೂರ್ಯಮಂಡಲ ಚಂದ್ರಮಂಡಲವೆಂದು
ಜೋತಿಷ್ಯವ ಮಾಡುವ ಪಂಡಿತರು ಮುಳಿಗ್ಯಾರು
ಈ ವಚನದನುಭಾವಗಳ ಜೋಕಿಲಿ ತಿಳಿದು ಓದುವದು.

ಪದ್ಯ 43, ಪುಟ 180

ಬಡಿಹೋರಿ ಬ್ರಹ್ಮಯ್ಯನವರ ಕಾಲಜ್ಞಾನ :–

18. ದಂಡನಾಯಕ ಹೋದ ರಾಕ್ಷಸನಾಮ ಸಂವತ್ಸರದ
ಹದಿಮೂರು ಬಾರಿ । ತಿರುಗಿ ಬಂದಂದಿಗೆ.

ಪದ್ಯ 2, ಪುಟ 181

ಚನ್ನಣ್ಣ ಉಳುವಿಗೆ ಹೋದ ಎಳುನೂರು ಎಂಭತ್ತು ವರ್ಷ
ತುಂಬಲಂದಿಗೆ ಬಂದು ಚರಿಸುತ್ತಿಹರು.

ಪದ್ಯ 4, ಪುಟ 181

19. ಘನದನುಭಾವಿಗಳು ಶಿವನ ನೆನಹುಳ್ಳವರು ಶಿವನಂಶಿಕರು
ಶಿವನ ಭಕ್ತರು ಶಿವ ಧ್ಯಾನರು ಸುಶೀಲರು ವ್ರತಸ್ಥರು
ಧರ್ಮಿಗಳು ದಯಾಳುಗಳು ದಯಾಭರಿತರು
ಇಂತೀ ಪುಣ್ಯಾತ್ಮರುಗಳ ರಾಶಿಯ ಮಾಡಿ
ಧರ್ಮದ ಬೀಜವನುಳುಹಿ ಕಣಜವ ಕಟ್ಟಿ
ಧರ್ಮಗುರು ಬಸವಗೊಪ್ಪಿಸಿ ॥

ಪದ್ಯ 62, ಪುಟ 190

ಗಂಗಮ್ಮನವರು ಹೇಳಿದ ಕಾಲಜ್ಞಾನ :–

20. ನಮ್ಮಯ್ಯ ಬರುವಾಗ ಉಮ್ಮಯ ಶರಣರು
ಕರ್ಮದ ಲೋಕ ಉಳಿಯಾವು ಸುವ್ವಿ
ಕರ್ಮದ ಲೋಕ ಉಳಿಯಾವು ಸುವ್ವಿ
ಧರ್ಮದ ಗುರು ಬಸವನು ಬರುವಾಗ ಸುವ್ವಿ ॥

ಪದ್ಯ 2, ಪುಟ 216

ಶ್ರೀ ಚನ್ನ ಬಸವೇಶ್ವರ ದೇವರ ಕಟ್ಟಳೆಯ ಕಾಲಜ್ಞಾನ :–

21. ಕೇಳಯ್ಯ ರುದ್ರಮುನಿ ದೇವರೇ ನಾವು ಮರ್ತ್ಯಕ್ಕೆ ಬರಬೇಕಾದರೆ
ಏಳುನೂರಾ ಎಂಬತ್ತು ವರುಷ ಬಂದೀತು.

ಪಲ್ಲವಿ, ಪುಟ 219

ಕೊಡೈಕಲ್ಲವರು ಹೇಳಿದ ಕಾಲಜ್ಞಾನ :–

22. ಜಾತಿಜಾತಿಗಳೆಲ್ಲ ಯೇಕಾವಾದಾವಿನ್ನು
ಜ್ಯೋತಿ ಬಸವೇಶನಾಗಮನಕೆ
ಮಾತಿನ ಮಾಲೆಂದು ಯೋಚಿಸಿ ಕೆಡಬೇಡ
ಕುಚು ಕುಚು ಮಾಡುವನು ದುರಿತಂಗಳ ॥

ಪದ್ಯ 82, ಪುಟ 237

23. ಕಪ್ಪಡಿಯ ಸೇರುವಲ್ಲಿ ಅಪ್ಪಣೆಯ ಪಡಿಸಿದನು
ಅಪ್ಪಣ್ಣನ ನುಡಿಕೇಳು । ತಪ್ಪದೆ ಇಪ್ಪತ್ತೊಂದೂ ಆನಂದಕ್ಕೆ ಬರುವೆ
ಈ ನುಡಿಯು ತಪ್ಪದು ಕೇಳೆಂದು ॥

ಪದ್ಯ 91, ಪುಟ 239

24. ನಂದನ ಸಂವತ್ಸರ ಹದಿಮೂರು ಹೋದ ಮೇಲೆ
ಸಂದು ಹೋದ ಮೇಲೆ ಏಳ್ನೂರು ಎಂಭತ್ತು ಮಂದರ ಗಿರಿವಾಸ
ಮರ್ತ್ಯಕ್ಕೆ ಬರುತ್ತಾನೆ। ಹುಸಿಯಲ್ಲವಿದು ಗುರು ಪ್ರಭುದೇವ ಸಾರಿದನು.

ಪದ್ಯ 110, ಪುಟ 240

25. ಅಲ್ಲಿ ಘನಹೊನ್ನ ಅರಳಿ ಮರಕ್ಕೆ ಉಯ್ಯಾಲಿಯಂ ಕಟ್ಟಿ
ಕೈಲಾಸಕ್ಕ ಬಿಜಯಂಗೈದಾರು !
ಮರ್ತ್ಯಕ್ಕೆ ಮತ್ತೆ ಬರುವ ಪ್ರಸ್ತಾಪ ವಚನವೇನೆಂದೊಡೆ
ಕುಲಗಿರಿ ನಡುಗ್ಯಾವು । ಕೂವ ಬಯಲಾದಾವು
ವ್ಯಾಪಾರವೆಲ್ಲ ಬಯಲಾಗಿ ನಾಡೆಲ್ಲ ಇರುಕಿನೊಳು ಸತ್ತೀತು
ಅಂದಿಗೆ ಯೇಳ್ನೂರೆಂಭತ್ತು ವರುಷ ಸಂದೀತು
ಆನಂದಕ್ಕೆ ಬಂದೇವು । ಬಾರೆವೆಂಬ ಮಂದಮತಿಗಳು
ಮಾತಲಿ ನಂಬಿಗೆ ಬೇಡ ॥ ಪದ್ಯ 5, ಪುಟ 264

ಶ್ರೀ ಸಿದ್ಧರಾಮೇಶ್ವರ ದೇವರ ಜೋಗುಳ ಕಾಲಜ್ಞಾನ :–

26. ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು ಬಾಯಿಲೆಕ್ಕವನಿಟ್ಟಿ
ಮುಂದೆ ಬರುವುದು ಏಳ್ನೂರಾ ಎಂಭತ್ತು ವರುಷಕ್ಕೆ ಘಟ್ಟಿ.

ಪದ್ಯ 2, ಪುಟ 307

★ ತಾಯಿ ನೀಲಾಂಬಿಕೆಯ ಹೆಸರಿನಲ್ಲಿ ಬಂದ ಕಾಲಜ್ಞಾನ ವಚನ 19 ರಲ್ಲಿ ಏಳು ನೂರಾ ಎಪ್ಪತ್ತು ವರುಷಕ್ಕೆ ಪುನಃ ಬಸವಣ್ಣನವರು ಬರುತ್ತಾರೆ ಎಂಬ ಅಭಿಪ್ರಾಯವಿದೆ.

★ ಪದ್ಯ 25 ರಲ್ಲಿ ಒಂದು ಮಾತಿದೆ, ಒಬ್ಬ ಮಹಿಳೆಯು ಬಂದು ಆರೂಢ ಭಿಕ್ಷವನ್ನು ಕೇಳುತ್ತಾಳೆ. ಆರೂಢ ಭಿಕ್ಷ ಎಂದರೆ, "ನಿಮ್ಮ ಧನ ಕನಕಗಳು ಬೇಕಿಲ್ಲ. ನಿಮ್ಮ ಭಕ್ತಿ, ಅಭಿಮಾನ ಬೇಕು" ಎಂದೂ ಅರ್ಥ ಮಾಡಬಹುದು.

Digitalized by e-Sahithya Documentation Forum
Sponsored by Sarayu Foundation Trust

★ ಬಸವಣ್ಣನವರು ಬರುವಾಗ ವಿಭೂತಿ-ಇಷ್ಟಲಿಂಗಗಳ ಮಹತ್ವ ಹೆಚ್ಚಿ, ಹೆಚ್ಚಿನ ಜನರು ಧರಿಸುವರು. (ಪದ್ಯ. 46)

★ ಎಲ್ಲ ಜಾತಿ ಮತ ಪಂಥಗಳವರೂ ಶಿವಭಕ್ತರಾಗುವರು. ಮನೆ ಮನೆಗಳ ಮೇಲೂ ನಂದಿಯ ಧ್ವಜಗಳು (ಷಟ್ಕೋನ ಸಹಿತ ಬಸವ ಧ್ವಜ) ಹಾರುವವು.

★ ಶಿವಭಕ್ತರು ಪರಸ್ಪರ ಕುಶಲದ ಮಾತುಗಳನ್ನಾಡುತ್ತಾರೆ. ಮನೆ ಮನೆಗೂ ಬಸವನ ಉತ್ಸವಗಳು ಮೆರೆಯುತ್ತವೆ.

★ ಮುಗ್ಧ ಸಂಗಯ್ಯ ಶರಣರ ಕಾಲಜ್ಞಾನದಲ್ಲಿ, ಸತ್ಯ ಶರಣರು ಉಳುವಿಗೆ ಸಾಗಿದ ಏಳುನೂರಾ ಎಪ್ಪತ್ತು ವರ್ಷಕ್ಕೆ ನೀವು (ಬಸವಣ್ಣನವರು) ಬರುತ್ತೀರಿ ಎಂದಿದೆ.

★ ಹರಳಯ್ಯನವರ ಧರ್ಮಪತ್ನಿ ಕಲ್ಯಾಣಮ್ಮನ ಕಾಲಜ್ಞಾನದಲ್ಲಿ ಹೀಗಿದೆ : ಕೈಲಾಸ ಎಂಬ ಸತ್ತಾನಂತರ ಸಿಗುವ ಲೋಕದ ಭ್ರಾಂತಿಯಳಿದು, ಭೂಮಿಯನ್ನೇ ಕೈಲಾಸವನ್ನಾಗಿ ಮಾಡುವರು. ಬಸವನ ಉತ್ಸವಗಳು ಮನೆ ಮನೆಗೂ ಪಸರಿಸುವುವು. ಪೂಜೆ, ತೀರ್ಥ ಪ್ರಸಾದ ಸ್ವೀಕಾರ ಮುಂತಾದ ಧಾರ್ಮಿಕ ನಿಯಮಗಳು ಹೆಚ್ಚಾಗುವುವು; ಬಸವಣ್ಣನವರೊಬ್ಬರೇ ಧರ್ಮಗುರು, ಇಷ್ಟಲಿಂಗವೇ ಧರ್ಮಲಾಂಛನ, ಪ್ರಭುದೇವರೇ ಜಂಗಮ ಪುಂಗವರು ಎಂಬ ನಂಬಿಕೆ ಆಳವಡುವುದು. ಕಲ್ಯಾಣಮ್ಮನ ಇನ್ನೊಂದು ವಚನದಲ್ಲಿ, 'ಶರಣರು ಖಂಡಿತ ಬರುತ್ತಾರೆ. ಇದು ಭ್ರಮೆಯಲ್ಲ, ಯಾರು ಈ ಮಾತನ್ನು ಜರಿಯುತ್ತಾರೋ ಅವರಿಗೆ ನರಕ ತಪ್ಪದು' ಎಂದು ಹೇಳುತ್ತಾಳೆ. ಮತ್ತು ಇದನ್ನು ದಿವ್ಯ ದರ್ಶನದ ಮೂಲಕ ನೋಡಿ ಹೇಳುತ್ತಿರುವುದಾಗಿ ಖಚಿತಪಡಿಸುತ್ತಾಳೆ.

ಮಡಿವಾಳ ಮಾಚಿದೇವರು ನುಡಿದ ಒಂದು ವಾಕ್ಯ ಬಹಳ ಗಮನಾರ್ಹವಾಗಿದೆ. "ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರೈಯ್ಯ" ಕೂಡಲ ಸಂಗಮ, ಅಲ್ಲಿ ನಡೆಸುವ ಶರಣಮೇಳಕ್ಕಾಗಿ ಹಾಕುವ ಸಭಾಮಂಟಪ, ಇವು ಕೃಷ್ಣಾನದಿಯ ದಕ್ಷಿಣ ದಂಡೆಯಲ್ಲಿವೆ. ಇಲ್ಲಿಗೆ ಜನರನ್ನು ಕರೆಯುತ್ತಾರೆ, ಜನ ಇಲ್ಲಿ ನೆರೆಯುತ್ತಾರೆ ಎಂಬುದು ಶರಣ ಮೇಳದ ಮುನ್ಸೂಚನೆಯಲ್ಲವೆ ?

ಅದರ ಮುಂದಿನ ವಚನದಲ್ಲಿ ಮಾಚೀದೇವರು ಹೇಳುವರು, "ದಕ್ಷಿಣ, ಪೂರ್ವ, ಉತ್ತರ, ಪಶ್ಚಿಮ ಎಲ್ಲ ಕಡೆಗಳಿಂದಲೂ ಶರಣ ಸಮೂಹ ಬರುವುದು. ಈ ಮಾತನ್ನು ಜರಿಯಬೇಡಿರಿ, ಅರಿದು ನೋಡಿರಿ. (ವಚನ ಸಾಹಿತ್ಯವನ್ನು) ಅಮೃತ ರಸಾಯನವೆಂದು ಶರಣ ಸಂತತಿ ತಿಳಿವರು."

"ಇಷ್ಟು ದಿವಸಗಳ ಕಾಲ ಮರೆಯಲ್ಲಿ ಇದ್ದ ಶರಣರು ಈಗ ಉದಯವಾಗುವರು. ಕಲ್ಯಾಣ ನಲಿವಂತೆ ಬಲವು ಬರುವುದು. ಉಘೇ ಚಾಂಗು ಭಲಾ ಎಂದು ಜಯಘೋಷ ಮಾಡೋಣ."

ಮಡಿವಾಳ ಮಾಚಿದೇವರ ವಾಣಿ ಹೀಗೆ ಹೇಳುತ್ತದೆ, "ಪರಿಧಾವಿ (ಕ್ರಿ. ಶ. 2032)ಎಂಬ ಸಂವತ್ಸರದ ಹೊತ್ತಿಗೆ ಉಳಿದವರು ಬಂದು ಸೇರುವರು. ಆನಂದನಾಮ ಸಂವತ್ಸರ(ಕ್ರಿ.ಶ. 2034)ದ ಹೊತ್ತಿಗೆ ಒಬ್ಬರುಳಿಯದ ಹಾಗೆ ಬರುವರು." ಇಷ್ಟೇ ಅಲ್ಲ 'ಇದು ಶಿವನ ಡಂಗುರ' ಎಂದು ಆತ್ಮ ವಿಶ್ವಾಸಪೂರ್ವಕವಾಗಿ ಹೇಳುವರು.

ಪದ್ಯ 10 ರಲ್ಲಿ ಈ ಮಾತುಗಳು ಬರೆದಿಟ್ಟ ಪತ್ರಗಳು ಎಂದು ತಿಳಿಸುತ್ತಾರೆ. ಶರಣರುದಯದ ಬಗ್ಗೆ ಭರವಸೆ ಕೊಡುತ್ತಾರೆ. ಮಾಚಿದೇವರೇ ಮುಂತಾದ ವೀರ ಶರಣರು ವಿವೇಕದಿಂದ ರಕ್ಷಿಸಿಟ್ಟ ವಚನ ಭಾಂಡಾರಗಳು ಬಹು ಅಮೂಲ್ಯ ಆಸ್ತಿಗಳಾಗುವುವು. ಇವನ್ನು ಜೋಕೆಯಲ್ಲಿ ಓದಿರಿ ಎಂದು ಆದೇಶ ನೀಡುವರು.

ಪದ್ಯ 23 ಮತ್ತು 34- ಇವುಗಳಲ್ಲಿ ಬರುವ ಭಾವ ಹೀಗಿದೆ. ವಚನ ಭಂಡಾರಗಳು ಅಮೃತಸಾರವೆಂದು, ಪ್ರೀತಿಯಿಂದ ಅವನ್ನು ಓದಬೇಕೆಂದು ಹೇಳಿ, ಇವು ನೀತಿ ಸಾಗರ ಲಿಪಿಗಳು ಎನ್ನುವರು. ಈ ವಚನಗಳು ಕೇವಲ ಮನುಷ್ಯರ ನುಡಿಗಳು ಅಲ್ಲವಂತೆ, ಇವು ಕಟ್ಟಳೆಯ (commandments) **ಪೌರುಷ ಭಾಂಡಾರಗಳಂತೆ.** ಆದಿ ಶರಣರು ರಚಿಸಿದ ವಚನಗಳು ಎಷ್ಟು ಅಮೂಲ್ಯ ಎಂಬ ಬಗ್ಗೆ ಅವರಿಗೆ ಸಂಪೂರ್ಣ ಅರಿವು–ಅಭಿಮಾನ ಇದ್ದಿತು. ಮುಂದಿನ ಯುಗ ಆದರಿಸುವುದಲ್ಲದೆ, ಉಳಿದ ಹುಸಿಯಾದ ಮಾತು–ಶಾಸ್ತ್ರಗಳನ್ನು ಗೆಲಿದು, ವಚನ ವಾಙ್ಮಯ ಹಬ್ಬುವುದು ಎಂದು ಆತ್ಮವಿಶ್ವಾಸದಿಂದ ನುಡಿಯುವರು.

ವಚನಗಳನ್ನು ಅನುಭಾವದ ಆಟದ ಪ್ರತಿಫಲವೆಂದು ಮಾಚಿದೇವರು ಹೆಸರಿಸಿ, ಇವುಗಳನ್ನು ಅರ್ಥ ಮಾಡಲು ಗಣಿತ ವ್ಯಾಕರಣ ಜೋತಿಷ್ಯ ಶಾಸ್ತ್ರಪಂಡಿತರಿಗೆ ಸಾಧ್ಯವಾಗದು ಎಂದಿದ್ದಾರೆ. ಪದ್ಯ 43.

ಬಡಿಹೋರಿ ಬ್ರಹ್ಮಯ್ಯನವರು ಶರಣರ ಬರವು ಕುರಿತು ಹೀಗೆ ಹೇಳುವರು. ದಂಡನಾಯಕ ಹೋದ ರಾಕ್ಷಸ ನಾಮ ಸಂವತ್ಸರ (1168) 13 ಬಾರಿ ತಿರುಗಿ ಬಂದಂದಿಗೆ ಬರುವುದಾಗಿ ಹೇಳುವರು. ಒಂದು ಸಂವತ್ಸರ ಚಕ್ರದಲ್ಲಿ 60 ವರ್ಷಗಳು. ಇವು 13 ಬಾರಿಗೆ ಎಂದರೆ 780 ವರ್ಷ. ಚನ್ನಣ್ಣ ಉಳುವಿಗೆ ಹೋದ ಏಳನೂರಾ ಎಂಬತ್ತು ವರ್ಷ ತುಂಬಲಂದಿಗೆ ಬಂದು ಚರಿಸುತ್ತಿಹರು ಎಂದು ಹೇಳುವರು.

ಈ ಶರಣನ ಇನ್ನೊಂದು ವಚನ ಪದ್ಯ 62 ಬಹು ಸುಂದರವಾಗಿ ಹೀಗಿದೆ. ಘನದ ಅನುಭಾವಿಗಳು, ಶಿವನ ನೆನಹುಳ್ಳವರು, ಶಿವನ ಅಂಶಿಕರು, ಶಿವನ ಭಕ್ತರು, ಶಿವಧ್ಯಾನರು, ಸುಶೀಲರು, ವ್ರತಸ್ಥರು, ಧರ್ಮಿಗಳು, ದಯಾಳುಗಳು, ದಯಾಭರಿತರು ಮುಂತಾದವರೆಲ್ಲರು ಒಟ್ಟಾಗುವರಂತೆ. ಇಂತಹ ಪುಣ್ಯಾತ್ಮರುಗಳ ರಾಶಿಯಾಗುವುದಂತೆ. ಶರಣ ಮೇಳವು ಇಂಥ ಪುಣ್ಯಾತ್ಮರುಗಳ ರಾಶಿಯಲ್ಲವೆ? "ಧರ್ಮದ ಬೀಜವ ನುಳುಹಿ ಕಣಜವ ಕಟ್ಟಿ, **ಧರ್ಮಗುರು ಬಸವಗೊಪ್ಪಿಸಿ.**"

ಬಡಿಹೋರಿ ಬ್ರಹ್ಮಯ್ಯನವರ ಮಾತು ಎಷ್ಟು ಸತ್ಯ ನೀವೇ ವಿಶ್ಲೇಷಿಸಿರಿ. ಬಸವ ಧರ್ಮ ಪೀಠ, ಶರಣ ಮೇಳಗಳು ಮಾಡುವ ಕಾರ್ಯ ಇದೇ ಅಲ್ಲವೆ? ಧರ್ಮದ

Digitalized by e-Sahithya Documentation Forum
Sponsored by Sarayu Foundation Trust

ಬೀಜವನ್ನು ಉಳುಹಿ, ಅವನ್ನು ಕಣಜವಾಗಿ ಕಟ್ಟಿ, ಶರಣ ಬಂಧುಗಳನ್ನು ಧರ್ಮ ಗುರು ಬಸವಗೆ ಒಪ್ಪಿಸುವುದನ್ನೇ ನಾವೀಗ ಮಾಡುತ್ತಿರುವುದು. ಇದರಿಂದ ಆದಿ ಶರಣರ ಸಂಕಲ್ಪವನ್ನು (ಆಸೆಯನ್ನು) ನಾವು ಪೂರೈಸುತ್ತಲಿದ್ದೇವೆ.

"ನಮ್ಮಯ್ಯ ಬರುವಾಗ ನಿರ್ಮಲಾತ್ಮರಾದ ಶರಣರು ಬರುವರು. ಆಗ ಕರ್ಮದ ಲೋಕ ಉಳಿಯವು" ಎಂದು ನುಡಿದ ಗಂಗಮ್ಮನು ಧರ್ಮದ ಗುರು ಬಸವನು ಬರುವಾಗ ಕರ್ಮಗಳು ಹರಿಯುವುವು ಎನ್ನುವಳು.

ಪುಟ 219ರಲ್ಲಿ ಚನ್ನಬಸವಣ್ಣನವರು. ನಾವು ಮರ್ತ್ಯಕ್ಕೆ ಬರಬೇಕಾದರೆ 780 ವರುಷ ಬಂದೀತು ಎನ್ನುವರು.

ಕೊಡೈಕಲ್ ಶರಣರು ಹೇಳುವ ಕಾಲಜ್ಞಾನದಲ್ಲಿ 'ಜ್ಯೋತಿ ಬಸವೇಶನಾಗಮನದ ಸಮಯಕ್ಕೆ ಜಾತಿಜಾತಿಗಳೆಲ್ಲ ಏಕಾದಾವು' ಎನ್ನುವರು. ನಂದನ ಸಂವತ್ಸರ 13 ಹೋದ ಮೇಲೆ, 780 ವರ್ಷಕ್ಕೆ ಶರಣರು ಬರುವರು ಎಂಬುದಾಗಿಯೂ ಹೇಳುವರು.

ಸಿದ್ಧರಾಮೇಶ್ವರ ದೇವರ ಜೋಗುಳ ಕಾಲಜ್ಞಾನದಲ್ಲಿ ಸಹ 780 ವರುಷಕ್ಕೆ ಬರುತ್ತೇವೆ ಎಂದಿದೆ ಮತ್ತು ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು ಎಂಬ ವರ್ಷದ ಉಲ್ಲೇಖ **ಮಹತ್ವಪೂರ್ಣವಾಗಿದೆ.** ಪದ್ಯ 2, ಪುಟ 307.

ಮಾರಿ ಬಂದಳು ಮರ್ತ್ಯಲೋಕದ ಹಿಂದೆ
ಸಾರಿ ಬಂದವು ನಮ್ಮ ದಿನಗಳು ಮುಂದೆ
ನಾವು ಬಂದಂದಿಗೆ ನೀವು ಬಂದಿರಿ
ನಾವೂ ನೀವೂ ಕೂಡಿ ಬಂದೊದಗಿದ
ಹದಿಮೂರು ಆನಂದವೆನ್ನಿ ಜೋ ಜೋ ॥ ಪದ್ಯ 6, ಪುಟ 307
ಪಟ್ಟಕ್ಕೆ ಚನ್ನಬಸವಣ್ಣ ಬಂದಾ
ಇಂದುಧರನಾ ಪೂಜೆ ಮಾಡುವದಾನಂದ
ಬಂದ ಗಣಂಗಳ ದರುಶನದಿಂದಾ
ಮುಂದೆ ಬರುವ ಆನಂದ ಪರಿಪೂರ್ಣವೆಂದಾ ॥ ಪದ್ಯ 7, ಪುಟ 307

ಗುರು ಬಸವಣ್ಣನವರು ಕಲ್ಯಾಣವನ್ನು ಬಿಟ್ಟುದು ರಾಕ್ಷಸನಾಮ ಸಂವತ್ಸರ ಕ್ರಿ. ಶ. 1168, ಫಾಲ್ಗುಣ ಮಾಸ, ದ್ವಾದಶಿ ದಿವಸ. ಚನ್ನಬಸವಣ್ಣನವರು ಉಳವಿಗೆ ಹೊರಟದ್ದು ಆಗಲೆ. ತಲುಪಿದ್ದು ನಳನಾಮ ಸಂವತ್ಸರದಲ್ಲಿ. ಈ ಸಮಯದಿಂದ ಮುಂದೆ 770ವರ್ಷಗಳ ನಂತರ ನಾವು ಬರುತ್ತೇವೆ ಎಂದು ಅಸಂಖ್ಯಾತ ಶರಣರು ಹೇಳಿದ್ದಾರೆ. 780 ವರ್ಷಗಳು ಸಂದ ಬಳಿಕ ಬರುತ್ತೇವೆ ಎಂದು ಹಲವಾರು ಶರಣರು ಹೇಳಿರುವುದು ಆಶ್ಚರ್ಯಕರವಾಗಿದೆ.

ಸಿದ್ಧರಾಮೇಶ್ವರರು ಹೇಳುವ ಮಾತು, "ನಮ್ಮ ದಿನಗಳು ಮುಂದೆ ಇವೆ." ಎಂಬ ಮಾತು- ನಮ್ಮೆಲ್ಲರ ಕಣ್ತೆರೆಸುತ್ತವೆ. ಕೃಷ್ಣಾ ನದಿಯ ದಂಡೆಗೆ ಜನರನ್ನು

ಕರೆಯುವರು; ಅಸಂಖ್ಯಾತರು ಬರುವರು ಎಂದು ಹೇಳಿದ ಮಾಚಿದೇವರು, ಪರಿಧಾವಿ ಸಂವತ್ಸರದ ಹೊತ್ತಿಗೆ (ಕ್ರಿ. ಶ. 2032–33) ಮೂಲೆ ಮೂಲೆಯಿಂದ ಬರುವರು ಎಂದು ಭವಿಷ್ಯ ನುಡಿದಿದ್ದಾರೆ.

13 ಆನಂದಕ್ಕೆ ಬರುತ್ತೇವೆ, ನಾವು ನೀವೆಲ್ಲ ಎಂದು ಸಿದ್ಧರಾಮೇಶ್ವರರು ಹೇಳುವರು. ಬಸವಣ್ಣನವರ ಕಾಲದಲ್ಲಿ ಬಂದ ಎರಡನೆಯ ಆನಂದನಾಮ ಸಂವತ್ಸರ ಕ್ರಿ. ಶ. 1166. ಅವರು ಹುಟ್ಟಿದ್ದು 1106 ಅದೂ ಆನಂದನಾಮ ಸಂವತ್ಸರವೇ. ಅಲ್ಲಿಂದ 13 ಅನಂದಗಳು ಎಂದರೆ $13 \times 60 = 780$. $1166 + 780 = 1946$ನೆಯ ಇಸವಿ. ಗುರು ಬಸವಣ್ಣನವರ ನಂತರ 770 ವರ್ಷಗಳು ಅಂದರೆ $1168 + 770 = 1938$. ಸರಿ ಸುಮಾರು ಇಲ್ಲಿಂದ ಶರಣರ ಉದಯ, ಶರಣರ ಯುಗಾರಂಭ. ಹಿಂದೆ ಹತ್ತು (1+9) ಮುಂದೆ ಹನ್ನೊಂದು (3+8) ಎಂಬ ಮಾತಿಗೂ, ದಂಡ ನಾಯಕರು ಕಲ್ಯಾಣ ಬಿಟ್ಟ 770 ವರ್ಷಕ್ಕೆ ಶರಣರ ಉದಯ ಎಂಬ ಮಾತಿಗೂ ಎಷ್ಟು ಹೋಲಿಕೆ ಇದೆ ನೋಡಿರಿ. ಹಿಂದೆ ಹತ್ತು ಮುಂದೆ ಹನ್ನೊಂದು ಆಗುವ ಇಸವಿಗಳು ಹೀಗಿವೆ. 1938, 1947, 1956, 1974, 1983, 1992 ಈ ಇಸವಿಗಳಲ್ಲಿ ವಿಶೇಷ ಪ್ರಸಂಗಗಳು ಘಟಿಸಿರಲೂ ಬಹುದು. ಈ ಬಗ್ಗೆ ಆಸಕ್ತರು ಅಧ್ಯಯನ ಮಾಡಬಹುದು. 1947 ಸ್ವಾತಂತ್ರ್ಯೋತ್ಸವ(ಅದೂ ಧಾರ್ಮಿಕ ದೃಷ್ಟಿಯಿಂದ ಮಹತ್ವಪೂರ್ಣವೆ!) ಪೂಜ್ಯರಾದ ಗುರೂಜಿಯವರು ಸ್ವಯಂ ಪ್ರೇರಣೆಯಿಂದ ಜ್ಞಾನಸನ್ಯಾಸವನ್ನು ತೆಗೆದು ಕೊಂಡುದು ನವಂಬರ್ 19, 1956 ರಂದು. ಅಕ್ಕ ಮಹಾದೇವಿಯ ಆದೇಶದಂತೆ ಆಧ್ಯಾತ್ಮ ಪಥಕ್ಕೆ ಬರಲು ನಿರ್ಧರಿಸಿ ನಾನು ದೀಕ್ಷೆಯನ್ನು ಪಡೆದುದು 1965 ರಲ್ಲಿ. 1974 ರಲ್ಲಿ ಅಸಂಖ್ಯಾತ ಪುಸ್ತಕಗಳು ರಚನೆಯಾದವು. 1992 ರಲ್ಲಿ ಮಹತ್ವಪೂರ್ಣ ಘಟನೆ ಎಂಬಂತೆ ಬಸವ ಧರ್ಮದ ಮಹಾ ಜಗದ್ಗುರು ಪೀಠ ಸ್ಥಾಪನೆಯಾಯಿತು.

ಬಸವಾದಿ ಪ್ರಮಥ ಪುಂಗವರು ಬರುತ್ತಾರೆ ಎಂದರೆ ಅವರೇ ಶರೀರಧಾರಿಗಳಾಗಿ ಹುಟ್ಟಿಬರುವರು ಎಂದಲ್ಲ. ಅವರ ವಾಙ್ಮಯವು ಪ್ರಚಾರಕ್ಕೆ ಬರುತ್ತದೆ; ಅವರ ಕರುಣೆಯನ್ನು ಪಡೆದುಕೊಂಡ ಅನೇಕರು ಧರ್ಮ ಪ್ರಚಾರಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ದುಡಿಯುತ್ತಾರೆ. ಶರಣರ ಸಂಕಲ್ಪ, ಅಪೇಕ್ಷೆಗಳನ್ನು ಪೂರೈಸಲು ಅವರ ಅಂಗಾಂಗಗಳಂತೆ ದುಡಿಯುತ್ತಾರೆ. ಶರಣೋದಯ ಯುಗವು 20ನೆಯ ಶತಮಾನವಾದರೆ, 21ನೆಯ ಶತಮಾನ ಶರಣ ಯುಗವೇ ಆಗಬಹುದು. ವಚನ ಶಾಸ್ತ್ರ ಪಿತಾಮಹ ಶರಣ. ಫ. ಗು. ಹಳಕಟ್ಟಿಯವರು ಪ್ರಕಟಿಸಿದ ವಚನ ಶಾಸ್ತ್ರಸಾರ (ಮೊದಲ ಆವೃತ್ತಿ 1923)ದ ಪ್ರಕಟಣೆಯಿಂದಲೇ ಶರಣೋದಯ ಯುಗ ಆರಂಭವಾಗಿ, ಜೊತೆಗೆ ನವ ಕಲ್ಯಾಣ ಮಠದ ಶ್ರೀ ಗುರುಸಿದ್ಧಪ್ರಭುದೇವರಂತಹವರಿಂದ ಒಂದು ಆಂದೋಲನವಾಗಿ ರೂಪುದಳೆಯುತ್ತ, ಕರ್ನಾಟಕ ವಿಶ್ವವಿದ್ಯಾಲಯವು ಹಮ್ಮಿಕೊಂಡ ವಚನ ವಾಙ್ಮಯ ಪ್ರಕಟಣೆಯಿಂದ ಒಡಲು ತುಂಬಿಕೊಂಡು ಇದು ಬಸವ

Digitalized by e-Sahithya Documentation Forum
Sponsored by Sarayu Foundation Trust

ಯುಗವಾಗಿ ಶಕ್ತಿ ಸಂಚಯು ಮಾಡಿಕೊಂಡಿದೆ. ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪನೆ ವಚನ ವಾಙ್ಮಯ ಯುಗದ ಕೀರ್ತಿ ಕಳಸವಾಗಲಿದೆ. ಈ ಪೀಠ ಸ್ಥಾಪನೆಯ ಹಿಂದೆ ಹಮ್ಮಿಲ್ಲ, ಶರಣಾಗತಿ ಇದೆ ; ಬಸವಾದಿ ಪ್ರಮಥರ ಆಶೋತ್ತರ, ಸತ್ಸಂಕಲ್ಪಗಳನ್ನು ಪೂರೈಸುವುದಕ್ಕೆ ಬದ್ಧ ಕಂಕಣರಾಗುವ ಸದಿಚ್ಛೆಯಿದೆ. ಲಿಂಗವಂತ ಧರ್ಮದ ಮಹಾಮನೆಯಲ್ಲಿ ಅವಿಚ್ಛಿನ್ನವಾಗಿ ಗೌರವಿಸಲ್ಪಡುತ್ತಿದ್ದ ಅಪ್ಪ ಬಸವಣ್ಣ, ಅವ್ವ ವಚನಾಂಬಿಕೆಯನ್ನು, ಏನು ಸ್ವಾರ್ಥಿಗಳು ಕೆಳಗಿಳಿಸಿ ದೂರಮಾಡಿದ್ದರೋ ಆ ಸಂಚಿನ ಹಿಂದಿರುವ ಧೂರ್ತತೆ ಗುರುತಿಸಿ, ಪುನಃ ಅವರನ್ನು ಧರ್ಮ ಪೀಠಕ್ಕೆ ಕುಳ್ಳಿರಿಸುವುದೇ ಆಗಿದೆ. ಮತ್ತು ಸ್ವಾರ್ಥಿಗಳ ಆ ಸಂಚನ್ನು ಬಯಲು ಮಾಡಿ, ಅಪ್ಪ-ಅವ್ವರ ಸ್ಥಾನವನ್ನು ಗುರುತಿಸಿಕೊಟ್ಟ ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳೇ ಈ ಪೀಠದ ಪ್ರಥಮ ಅಧಿಕಾರಿಗಳಾದುದು ಅತ್ಯಂತ ಸೂಕ್ತವೂ, ಬಸವ ಸಂಕಲ್ಪದ ಈಡೇರಿಕೆಯೂ ಆಗಿದೆ.

1955 ರ ಏಪ್ರಿಲ್ 25ರ ಬಸವ ಜಯಂತಿಯಂದು, ಅಪ್ಪ ಬಸವಣ್ಣನವರು ಸಂಗಮೇಶನನ್ನು ತಮ್ಮ ಕಾರ್ಯಕ್ಕಾಗಿ ಆರಿಸಿಕೊಂಡರು, ಅನುಗ್ರಹಿಸಿದರು. 36 ವರ್ಷಗಳ ಬಸವ ಸೇವೆಯನ್ನು ಗುರುತಿಸಿ ಇಂದು ಶರಣರ ಬಳಗ (ಬಸವ ಧರ್ಮ ಸಂಸತ್) ಪೂಜ್ಯರನ್ನು ಪ್ರಥಮ ಪೀಠಾಧಿಕಾರಿಯನ್ನಾಗಿ ಆರಿಸಿತು, ಆರೋಹಣ ಮಾಡಿತು.

ಈ ಮೂಲಕ ಧರ್ಮಗುರು, ದೀಕ್ಷಾಗುರು ಉಭಯತರ ಋಣವನ್ನು ಒಂದು ಎಳ್ಳುಕಾಳಿನಷ್ಟು ತೀರಿಸಲು ನಮಗೆ ಸಾಧ್ಯವಾಯಿತು. ಧರ್ಮಗುರುವಿನ ಹೆಸರಿನಲ್ಲಿ ಧರ್ಮಪೀಠ ಒಂದಿರದ ಕೊರತೆಯನ್ನು ನೀಗಿಸಿ ಧರ್ಮಗುರುವಿನ ಋಣವನ್ನು ತೀರಿಸಿದರೆ, ವಚನ ಸಾಹಿತ್ಯ ಸಂವಿಧಾನದ ನೆರವಿನಿಂದ ಮಹಿಳಾ ಜಗದ್ಗುರು ಪೀಠವನ್ನು (1970 ರಲ್ಲಿ) ಸ್ಥಾಪಿಸಿ ಮಹಿಳೆಯರ ಗುರುತ್ವವನ್ನು ಗೌರವಿಸಿದ ದೀಕ್ಷಾಗುರುಗಳ ಋಣವನ್ನು ಕಿಂಚಿತ್ ತೀರಿಸಿದಂತಾಯಿತು.

800 ವರ್ಷಗಳ ಇತಿಹಾಸ ದೃಷ್ಟಿಯಿಂದಲೂ, ಬಸವ ತತ್ವಾನುಯಾಯಿಗಳ ಸಂಘಟನೆ, ಸಂಸ್ಕರಣೆಯ ದೃಷ್ಟಿಯಿಂದಲೂ ಈ ಘಟನೆ ಮಹತ್ವಪೂರ್ಣ. ತನ್ನ ಕಾರ್ಯಪೂರೈಕೆಗೆ ಅಪ್ಪ ಬಸವಣ್ಣನವರು ನಮ್ಮಗಳನ್ನು ಆರಿಸಿಕೊಂಡಿದ್ದಕ್ಕೆ ಹೆಮ್ಮೆ ಇದೆ, ಹಮ್ಮಿಲ್ಲ. ಮಕ್ಕಳಲ್ಲಿ ಮೂರು ಪ್ರಕಾರವಿರುತ್ತಾರೆ. 1. ಅಪ್ಪ-ಅಮ್ಮರ ಋಣವಿಂದೂ ಸಂಪೂರ್ಣ ಅವರನ್ನು ಮರೆತವರು. 2. ಆಸ್ತಿ-ಪಾಸ್ತಿ ಕೊಟ್ಟುದಕ್ಕಾಗಿ ಕೊಡುತ್ತಾರೆಂದು (ತೋರಿಕೆಯ) ಪ್ರೀತಿ ಮಾಡುವವರು; 3. ಜನ್ಮ ಕೊಟ್ಟುದಕ್ಕೆ, ವಿದ್ಯೆ ಕೊಟ್ಟುದಕ್ಕಾಗಿ ಹೃದಯ ತುಂಬಿ ಪ್ರೀತಿಸುವವರು. ಲಿಂಗವಂತ ಸಮಾಜದಲ್ಲಿ ಒಂದು ವರ್ಗದ ಮಠಾಧಿಕಾರಿಗಳಿದ್ದಾರೆ, ಅವರು ವಚನ ವಾಙ್ಮಯವನ್ನು, ಗುರು ಬಸವಣ್ಣನವರನ್ನು ಊಟಕ್ಕೆ ಉಪ್ಪಿನಕಾಯಿಯಂತೆ ಬಳಸಿಕೊಂಡು, ಗೌರವಿಸುವಲ್ಲಿ ಮಾತ್ರ ಮೂಗುಮುರಿದು ದ್ವೇಷಿಸುವವರು.

ಇನ್ನೊಂದು ವರ್ಗದವರಿದ್ದಾರೆ, ಅವರು ಬಸವ ಪರಂಪರೆಯವರೆಂದು ಹೇಳಿ, ವಚನ ವಾಙ್ಮಯ ಸಂಪತ್ತಿಗೆ ವಾರಸುದಾರರಾಗಿದ್ದರೂ ಏಕ ನಿಷ್ಠೆ, ಅಂತಃಕರಣ ಪೂರ್ವಕ ಭಕ್ತಿ ಇಲ್ಲದವರು.

ಇಂದು ನಮಗೆ ಅಪ್ಪನಿಂದ ಯಾವ ಆಸ್ತಿ (ಸಂಪ್ರದಾಯ ಮಠ) ಬಂದಿರದಿದ್ದರೂ ಆತ ಕೊಟ್ಟ ಧರ್ಮಕ್ಕಾಗಿ, ಸಿದ್ಧಾಂತಕ್ಕಾಗಿ, ಮಾನವಕುಲದ ಏಳ್ಗೆಯ ಬಗ್ಗೆ ಆ ಗುರುವು ಹೊಂದಿದ್ದ ಕಳಕಳಿಗಾಗಿ ಅಪ್ಪ ಬಸವಣ್ಣ-ಅವ್ವ ವಚನಾಂಬಿಕೆಯನ್ನು ಆರಾಧಿಸುತ್ತಿದ್ದೇವೆ, ಪ್ರೀತಿಸುತ್ತಿದ್ದೇವೆ, ಪ್ರಾಣಾರ್ಪಣೆಗೂ ಸಿದ್ಧರಿದ್ದೇವೆ. ಇಂಥ ಸಮರ್ಪಣ ಮನೋಭಾವ ಕೊಟ್ಟುದಕ್ಕಾಗಿಯೇ ಆ ತಂದೆಯನ್ನು ವಂದಿಸಿ, ಕೃತಜ್ಞತೆಯನ್ನು ಸಲ್ಲಿಸಿ ಈ ಬರಹಕ್ಕೆ ಪೂರ್ಣ ವಿರಾಮ ನೀಡುವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕೂಡಲ ಸಂಗಮ

ಬಸವ [ಲಿಂಗಾಯತ] ಧರ್ಮದ
ಆರು ಸೂತ್ರಗಳು

1. ಧರ್ಮ ಗುರು–
   ವಿಶ್ವಗುರು ಬಸವಣ್ಣನವರು
2. ಧರ್ಮ ಸಂಹಿತೆ–
   ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮಲಾಂಛನ–
   ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
4. ಧರ್ಮಕ್ಷೇತ್ರ–
   ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮ
5. ಧರ್ಮಧ್ವಜ–
   ಬಸವ ಮಂತ್ರ ಸಹಿತ ಷಟ್ಕೋನ ಧ್ವಜ
6. ಧರ್ಮದ ಧ್ಯೇಯ–
   ಜಾತಿವರ್ಣವರ್ಗರಹಿತ ಕಲ್ಯಾಣ ರಾಜ್ಯ ನಿರ್ಮಾಣ

Digitalized by e-Sahithya Documentation Forum
Sponsored by Sarayu Foundation Trust

ಬಸವ ಧರ್ಮದ ಮಹಾಜಗದ್ಗುರು ಪೀಠಾರೋಹಣಕ್ಕೆ ಮೊದಲು ಮಾಡಿದ ಪ್ರಾಸ್ತಾವಿಕ ಭಾಷಣ

ವಿಶ್ವಗುರು ಬಸವಣ್ಣನವರನ್ನು ಹೃನ್ಮಂದಿರದಲ್ಲಿ ಸ್ಮರಿಸಿ, ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಅಧಿಕಾರಿಗಳಾಗಲಿರುವ ಪೂಜ್ಯ ಗುರುಗಳ ಚರಣ ಕಮಲಗಳಿಗೆ ವಂದಿಸಿ, ಇಲ್ಲಿ ನೆರೆದ ಪೂಜನೀಯರಾದ ಸ್ವಾಮಿಗಳೇ, ಗಣ್ಯರೇ, ಶರಣ ಬಂಧುಗಳೇ ತಮಗೆಲ್ಲ ಶರಣು ಶರಣಾರ್ಥಿ.

ಇಂದು ಬಹಳ ಮಹತ್ವದ ದಿನ ; 800 ವರ್ಷಗಳ ಕಾಲ ಇದ್ದ ಒಂದು ಶೂನ್ಯ (ನಿರ್ವಾತ)ದ ವಾತಾವರಣವನ್ನು ತುಂಬುವ ದಿನ. ಬಸವ ಧರ್ಮ ಪೀಠವು ಈವರೆಗೆ ಕೇವಲ ಟ್ರಸ್ಟ್ ಆಗಿ ಇದ್ದುದು ಇಂದು ವಿದ್ಯುಕ್ತವಾಗಿ ಧರ್ಮ ಪೀಠವನ್ನು ಸ್ಥಾಪಿಸುತ್ತಿದೆ. ಈಗಾಗಲೇ ನಾಡಿನ ತುಂಬ ಸಾಕಷ್ಟು ಮಠಗಳು, ಸಿಂಹಾಸನಗಳು, ಇರುವಾಗ ಇದೊಂದು ಪೀಠ ಏಕೆ? ಎಂಬ ಸಂದೇಹ ಅನೇಕರಿಗೆ ಉಂಟಾಗಿರಬಹುದು. ಅದಕ್ಕಾಗಿ ವಿವರಣೆ ಕೊಡುವೆನು.

ಬಸವಣ್ಣನವರ ಹೆಸರಿನಲ್ಲೊಂದು ಪೀಠ

ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮದ ಆತ್ಮ, ವಚನ ಸಾಹಿತ್ಯವು ಹೃದಯ. ಇವೆರಡೂ ಇಲ್ಲದೆ ಈ ಧರ್ಮಕ್ಕೆ ಅಸ್ತಿತ್ವವಿಲ್ಲ. ವಿಶ್ವಗುರುವು ಮಂತ್ರ ಪುರುಷರು, ಶರಣಾಗತ ರಕ್ಷಕರು. ಅವರ ಹೆಸರಿನಲ್ಲಿಯೇ ಧರ್ಮಪೀಠವೊಂದು ಈ ವರೆಗೂ ರಚನೆಯಾಗದೆ ಇರುವುದು ಒಂದು ದೊಡ್ಡ ಕೊರತೆ. ಈ ಕೊರತೆಯನ್ನು ತುಂಬಲೋಸುಗ ಶ್ರೀಗುರುವಿನ ಹೆಸರಿನಲ್ಲಿ ಮಹಾಜಗದ್ಗುರು ಪೀಠವೊಂದನ್ನು ರಚಿಸಲಾಗುತ್ತಿದೆ.

ಅನೇಕ ಮಠ, ಪೀಠ, ಸಿಂಹಾಸನಗಳು ಬಸವಣ್ಣನವರನ್ನು, ಅವರ ತತ್ತ್ವಗಳನ್ನು ಕುದುರೆಯನ್ನಾಗಿ ಮಾಡಿಕೊಂಡು ತಮ್ಮ ಕೀರ್ತಿ, ಖ್ಯಾತಿ, ಜನಪ್ರಿಯತೆಯನ್ನು ಬೆಳೆಸಿಕೊಳ್ಳುತ್ತಿರಬಹುದು. ಆದರೆ ಈ ಪೀಠವು ಅತ್ಯಂತ ಪ್ರಾಮಾಣಿಕವಾಗಿ ತಾನು ಕುದುರೆಯಾಗಿ ಬಸವತತ್ತ್ವವನ್ನು ಹೊತ್ತು ಮೆರೆಸುತ್ತದೆ.

ಒಂದು ಭಿತ್ತಿ (canvas)ಅಥವಾ ಗೋಡೆ ಇರುತ್ತದೆ. ಅದರ ಮೇಲೆ ಕಲಾವಿದನೊಬ್ಬ ಸುಂದರವಾದ ಚಿತ್ರವನ್ನು ತೆಗೆಯುತ್ತಾನೆ, ಭಿತ್ತಿ ಗೌಣವಾಗಿರುತ್ತದೆ, ಜನ ಚಿತ್ರವನ್ನು ಕೊಂಡಾಡುತ್ತಾರೆ. ಅನೇಕರು ಬಸವಣ್ಣನವರನ್ನು, ಅವರ ತತ್ತ್ವಗಳನ್ನು ಚಲಾವಣೆಯಲ್ಲಿರುವ ನಾಣ್ಯಗಳೆಂದು ಭಾವಿಸಿ, ಭಿತ್ತಿಯನ್ನಾಗಿ ಮಾಡಿಕೊಂಡು ತಮ್ಮ ಖ್ಯಾತಿಯ ಚಿತ್ರವನ್ನು ಬಿಡಿಸಿಕೊಳ್ಳುತ್ತಾರೆ. ಆದರೆ ಈ ಪೀಠವು ತಾನು ಭಿತ್ತಿಯಾಗಿ ನಿಂತು ಬಸವ ತತ್ತ್ವವನ್ನು ಪ್ರದರ್ಶಿಸುತ್ತದೆ. ಕೆಲವರಿಗೆ ವಿಶ್ವಗುರುವು ಮತ್ತು ವಚನ ಸಾಹಿತ್ಯ ಊಟಕ್ಕೆ ರುಚಿಕೊಡುವ ಉಪ್ಪಿನ ಕಾಯಿಯಂತೆ, ಕರಿಬೇವಿನ ಎಲೆಯಂತೆ. ಆದರೆ ನಮಗೆ ಅದೇ ಮುಖ್ಯ ಆಹಾರ. ಹೀಗಾಗಿ ಅಖಂಡ ಬಸವ ನಿಷ್ಠೆ ಈ ಪೀಠದ್ದು.

ಬಸವ ಧರ್ಮದ ಪೀಠ

ಬಸವ ಧರ್ಮ ಎಂಬ ಪದಕ್ಕೆ ನಾವು ಒತ್ತುಕೊಡುತ್ತೇವೆ.

1. ಕಪಿಲಸಿದ್ಧ ಮಲ್ಲಿಕಾರ್ಜುನ,
   ನನಗೂ ನಿನಗೂ ಬಸವಣ್ಣನ ಧರ್ಮವಯ್ಯ.
2. ಬಸವನ ಯೋಗದಿಂ ಹಸನಾಯಿತ್ತೈ ಲೋಕ.

—ಸಿದ್ಧರಾಮೇಶ್ವರರು

ಬಸವ ಧರ್ಮ ಎಂಬ ಪದ ಪ್ರಯೋಗವು ಆದಿ ಶರಣರಿಂದಲೇ ಆಗಿದೆ. ಆದರೆ ಬಸವಣ್ಣನವರು ತಾತ್ತ್ವಿಕ ಪದ ಲಿಂಗವಂತ, ಲಿಂಗಾಯತ ಎಂಬ ಪದವನ್ನು ತಾವು ಕೊಟ್ಟ ಧರ್ಮಕ್ಕೆ ಬಳಸಿದರು. ಮಹಮ್ಮದೀಯ ಧರ್ಮ ಎಂದರೆ ಪ್ರವಾದಿ ಮಹಮ್ಮದರು ಕೊಟ್ಟುದು ಎಂದಾಗುತ್ತದೆ. ಇಸ್ಲಾಂ ಎಂಬುದು ತತ್ತ್ವವಾಚಕವಾಗುತ್ತದೆ. ಹಾಗೆಯೇ ಬಸವ ಧರ್ಮ ಮತ್ತು ಲಿಂಗಾಯತ ಧರ್ಮ ಎಂಬ ಪದಗಳೂ ಸಹ; ಕ್ರಮವಾಗಿ ವ್ಯಕ್ತಿ ವಾಚಕ, ತತ್ತ್ವವಾಚಕವಾಗುತ್ತವೆ.

ವೀರಶೈವ ಪದವು ಈ ಧರ್ಮಕ್ಕೆ ಎಷ್ಟೂ ಅನ್ವಯವಾಗದು. ಅದು ಈ ಧರ್ಮವನ್ನು ಗಿಡವೊಂದರ ಟಿಸಿಲಿನಂತೆ (twig) ಮಾಡುತ್ತದೆ. ಹಿಂದುತ್ವವೊಂದು ವೃಕ್ಷ, ಅದರಲ್ಲಿ ವೈದಿಕ-ಶೈವ ಎರಡು ಕೊಂಬೆಗಳು, ಶೈವದಲ್ಲಿ ಸಪ್ತ ರೆಂಬೆಗಳು, ಈ ಏಳು ರೆಂಬೆಗಳಲ್ಲಿ ವೀರಶೈವವು ಒಂದು. ಈ ಪದವು ಲಿಂಗವಂತ ಧರ್ಮದ ವೈಶಿಷ್ಟ್ಯವನ್ನೇ ಕಳೆದು, ಇದನ್ನು ಅನಾಮಿಕವಾಗಿ ಮಾಡುತ್ತದೆ. ಲಿಂಗವಂತ (ಲಿಂಗಾಯತ) ವು ವೈಶಿಷ್ಟ್ಯವನ್ನು ತೋರಿಸುತ್ತದೆ. ಆಗ, ಹಿಂದೂತ್ವವು ಒಂದು ಸುಂದರ ತೋಟವಾಗಿ ಲಿಂಗಾಯತವು ಸ್ವತಂತ್ರ ವೃಕ್ಷವಾಗುತ್ತದೆ. ವೀರಶೈವ ಪದವು ವಚನ ಸಾಹಿತ್ಯ ಸಂವಿಧಾನಕ್ಕೆ ಹೊರತಾದ, ವಿರುದ್ಧವಾದ ಆಚರಣೆಗಳಿಗೆ ಪರವಾನಗಿ ಕೊಟ್ಟರೆ, ಲಿಂಗವಂತ ಪದವು ನಿಷ್ಠೆಯ ಕಟ್ಟನ್ನು ಹಾಕುತ್ತದೆ. ಬಸವ ಧರ್ಮ ಪದವು ಇನ್ನೂ ಹೆಚ್ಚಿನ ಶಿಸ್ತಿನ ಕಟ್ಟಳೆಯನ್ನು ಹಾಕುತ್ತದೆ. **'ಬಸವ ಧರ್ಮ'** ಎಂಬ ಪದಪುಂಜ ಧರ್ಮಗುರುವಿನ ಹೆಸರು ಹೊತ್ತೇ ಇರುವುದರಿಂದ, ಇದು ಈಗಿತ್ತು ಆಗಿತ್ತು ಎಂದು ಹುಚ್ಚುಚ್ಚಾರ ವಾದಿಸಲು ಬರದು. ಹೇಗೆ ಹೆಸರಿನ ಮುಂದೆ ತಂದೆಯ ಹೆಸರು ಇದ್ದಾಗ ಹುಟ್ಟಿಸಿದವರಾರು ಎಂಬ ಬಗ್ಗೆ ಸಂದೇಹಬರದೋ ಹಾಗೇ ಧರ್ಮದ ಆದ್ಯರ ಬಗ್ಗೆಯೂ ಸಂದೇಹ ಹುಟ್ಟಿಸಿ ದಾರಿ ತಪ್ಪಿಸಲು ಯಾರಿಗೂ ಸಾಧ್ಯವಾಗದು.

ಪೀಠ, ಸಿಂಹಾಸನವಲ್ಲ


ಇಂದು ಸ್ಥಾಪಿತವಾಗುತ್ತಿರುವುದು ಪೀಠವೇ ವಿನಾ, ಸಿಂಹಾಸನವಲ್ಲ ; ರಾಜ ಏರಬೇಕಾದುದು ಸಿಂಹಾಸನವನ್ನಾದರೆ, ಗುರು ಏರಬೇಕಾದುದು ಧರ್ಮ ಪೀಠವನ್ನು.

Digitalized by e-Sahithya Documentation Forum
Sponsored by Sarayu Foundation Trust

ಸಿಂಹ ರಾಜಸ ಪ್ರಾಣಿ. ಮುಗ್ಧ ಪ್ರಾಣಿಗಳ ಮೇಲೆರಗಿ ದೌರ್ಜನ್ಯ ಪ್ರದರ್ಶಿಸಿ ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುವುದು. ಗುರುವು ಯಾವ ಮುಗ್ಧ ಭಕ್ತರ ಬಲಿಯನ್ನೂ ತೆಗೆದುಕೊಳ್ಳಬೇಕಾಗಿಲ್ಲ. ಗುರುವು ಧರ್ಮ ಪೀಠದ ಮೇಲೆ ಕುಳಿತು ಭಕ್ತರ ಮನದ ಅಂಧಕಾರವನ್ನು ತೊಡೆಯುವನು. ಕೆಲವರು ಮಠಾಧಿಪತಿಗಳು ವಿವೇಚನೆ ಇಲ್ಲದೆ ಸಿಂಹಾಸನ ಎಂಬ ಪದ ಬಳಸುತ್ತಾರೆ; ಉಗ್ರರೂಪದಲ್ಲಿ ಹಲ್ಲುಕಿರಿದು ನಿಂತ ಸಿಂಹದ ಚಿತ್ರಗಳನ್ನು ಆ ಸಿಂಹಾಸನಗಳಿಗೆ ಹಾಕಿಸುತ್ತಾರೆ. ಇದೇನು ಅವರು ಆಲೋಚನೆ ಇಲ್ಲದೆ ಮಾಡಿದುದೋ ಅಥವಾ ಅವರ ಧ್ಯೇಯವನ್ನೇ ಪ್ರತಿಬಿಂಬಿಸುವುದೋ ಎಂದು ಸೋಜಿಗವಾಗುತ್ತದೆ. ರಾಜನದು ಕ್ಷಾತ್ರನೀತಿ, ರಾಜಸ, ಭುಜಬಲದ ಪ್ರತೀಕ. ಗುರುವಿನದು ಸಾತ್ವಿಕ ನೀತಿ, ಜ್ಞಾನ ಬಲದ ಪ್ರತೀಕ. ಆದ್ದರಿಂದ ಇದು ಪೀಠವೆಂದಿದ್ದೇವೆ, ಸಿಂಹಾಸನವೆಂದಿಲ್ಲ.

ಪೀಠವನ್ನು ಮಾಡಿಕೊಡಲು ಕೆತ್ತನೆ ಮಾಡುವವರಿಗೆ ಹೇಳುತ್ತಲೇ, ಸಿಂಹಗಳನ್ನು ಕೂರಿಸಲು ಸ್ಥಳವಾವುದು ಎಂದು ಅವರು ಮೊದಲು ಪ್ರಶ್ನೆ ಕೇಳಿದರು. ಆಗ ನಾನು ಹೇಳಿದೆ"ನಾವು ಮಾಡಿಸುವುದು ರಾಜಸಿಂಹಾಸನವಲ್ಲ. ಗುರುಪೀಠ, ಧರ್ಮಪೀಠ, ಇದರಲ್ಲಿ ಆಕ್ರಮಣಕಾರಿ ಉಗ್ರಪ್ರಾಣಿಗಳಿಗಾಗಲೀ, ದುರ್ಬಲ ಪ್ರಾಣಿಯಾದ ಮೊಲಕ್ಕಾಗಲೀ, ಚಂಚಲ ಚಿತ್ತದ ಜಿಂಕೆಗಾಗಲೀ ಅವಕಾಶವಿಲ್ಲ" ಎಂದು ಹೇಳಿ ಕಾಯಕದ ಸಂಕೇತವಾದ, ಶ್ರಮಜೀವಿಯೂದ ಆನೆಯನ್ನು, ಕಾಯಕವೊಂದೇ ಬದುಕಿನ ಸರ್ವಸ್ವವಲ್ಲ ಆಧ್ಯಾತ್ಮಿಕ ಸಾಧನೆಯೂ ಅತ್ಯಗತ್ಯ ಅದರ ಸಂಕೇತವಾದ ಪರಮಹಂಸೆಯನ್ನೂ ಹಾಕಬಹುದು ಎಂದು ಹೇಳಿದೆ. [ನಂದಿಯೂ ಪ್ರಿಯವಾದ ಚಿತ್ರವಾದರೂ ಕಾಯಕದ ಸಂಕೇತವಾದರೂ ನಾಳೆ ಮೂಢ ಭಕ್ತರು ಬಸವಣ್ಣನವರನ್ನು ಎತ್ತನ್ನಾಗಿ ಭಾವಿಸಬಾರದು ಎಂದು ಅದನ್ನು ಹಾಕಿಸಿಲ್ಲ.]

ಧರ್ಮಪೀಠ ಬಹಳ ಸಾಂಕೇತಿಕವಾಗಿದೆ, ಗಮನಿಸಿರಿ. ಕಾಯಕ ಜೀವಿಗಳಾದ ಆನೆಗಳು ಕೆಳಗೆ ಸೊಂಡಿಲೆತ್ತಿವೆ. ಲಿಂಗಾಯತ ಧರ್ಮ ಸೇಶ್ವರವಾದೀ ಧರ್ಮ. ಕರ್ತನಿಗೆ ಇಲ್ಲಿ ಪರಮೋನ್ನತ ಸ್ಥಾನ. ಕರ್ತನು ಪ್ರಣವಸ್ವರೂಪಿ, ಅದಕ್ಕಾಗಿ ಅತ್ಯಂತ ಎತ್ತರದಲ್ಲಿ ಓಂಕಾರವಿದೆ. ಈ ಓಂಕಾರದ ಕೆಳಗಿದೆ ಅಭಯ ಹಸ್ತದ ಬಸವ ಮೂರ್ತಿ. ಪ್ರಣವದ ಸಾಕಾರ, ಪರಮಾತ್ಮನ ಕರುಣೆಯ ಕಂದ, ಪ್ರತಿನಿಧಿ, ದೇವರ ಆಜ್ಞೆಯನ್ನು ಪಾಲಿಸಲು ಬಂದ ಪರಮಕಾರಣಿಕ ಬಸವಣ್ಣನವರು ಓಂಕಾರದ ಕೆಳಗಿದ್ದಾರೆ. ಇವರ ಕೆಳಗೆ ಬಲಭಾಗಕ್ಕೆ ಶರಣ ಗಣ, ಶೂನ್ಯಪೀಠಾಧೀಶ ಅಲ್ಲಮಪ್ರಭು, ಚಿನ್ಮಯ ಜ್ಞಾನಿ ಚನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಶರಣ ಮಾಚೀದೇವರು. ಎಡಭಾಗಕ್ಕೆ ಸೂತ್ರಗಳು ವಚನ ಸಾಹಿತ್ಯ, ಇಷ್ಟಲಿಂಗ, ಐಕ್ಯಮಂಟಪ, ಷಟ್ಕೋನ, ಪ್ರಣತಿ (ಕಲ್ಯಾಣ ರಾಜ್ಯದ ಸಂಕೇತ). ಅತ್ತ ಇತ್ತ ಕೈಯಿರಿಸಿಕೊಳ್ಳುವ ಹಿಡಿಯ ಕೆಳಗೆ ಹಂಸ ಪಕ್ಷಿಗಳು. ಹೀಗೆ ಪೀಠವು ಬಹಳ ಸಾಂಕೇತಿಕವಾಗಿದೆ.



ಬಸವ ಧರ್ಮದ ಮಹಾಜಗದ್ಗುರು ಪೀಠ,
ಕೂಡಲ ಸಂಗಮ

Digitalized by e-Sahithya Documentation Forum
Sponsored by Sarayu Foundation Trust

With best compliments from :

KARNATAKA VEERASAIVA VIDYABHIVRIDDHI NIDHI SAMSTHE

No. 18, Sri Jayadeva Hostel Building
Seshadri Road, Bangalore-560009
(Regn. No. II of 1909-10 Under Act III of 1904)
Phone : Office 268984, 266416, PPCH 267228

– *OFFICE BEARERS* –

PRESIDENT :
Smt. LEELADEVI. R. PRASAD

SECRETARY :
Sri B.S. SOMASUNDAR
Bsc. B. L.

VICE-PRESIDENT :
Sri M. SHIVAPPA.
Bsc. B. L.

JOINT-SECRETARY :
Sri B.S. PARAMASHIVAIAH
M. A.

TREASURER :
Sri B. M. SREEKANTASWAMY, L.E.E.

– *COMMITTEE MEMBERS* –

1 Sri H. V. Veeresh, B.A.
2 Sri G. Shivakumar, D.M.E.
3 Dr. J. R. Viswanath M.SC.PHD.
4 Dr. R. Shivakumar M.B.B.S.
5 Sri M. C. Jayashekhar Swamy, B.A.
6 Smt. N. Gangambike
7 Sri B. Basavaraj, B.SC.B.L.
8 Sri R. Neelakantaiah
9 Sri H. S. Shivarudrappa
10 Sri G. N. Rajshekhar
11 Sri G. Puttagangaiah
12 Smt. S. Girija, B.SC.
13 Sri B.N. Rajendra, B.SC.
14 Sri L. Rajappa
15 Sri K. L. Muddiah
16 B. T. Umesh, B.A.L.L.B.

Smt. Leeladevi. R. Prasada
President

Sri. B.S Somasundar
Hon. Secretary

ಏಕಗುರು ನಿಷ್ಠೆ

ಇಂದು ನಾವು ಅನ್ಯ ಧರ್ಮಗಳ ಅನುಯಾಯಿಗಳಿಂದ ಕಲಿಯುವುದು ಬಹಳವಿದೆ. ಏಸುಕ್ರಿಸ್ತನಿಗಿಂತಲೂ ಮೇಧಾವಿಗಳು ಬುದ್ಧಿವಂತರೂ ಆದ ಸೇಂಟ್ ಪಾಲ್, ಸೇಂಟ್ ಅಗಸ್ಟೀನ್‌ನಂತಹವರು ಎಷ್ಟೋ ಜನ ಆಗಿಹೋದರೂ ತಮ್ಮ ಧರ್ಮಗುರುವಿನ ಸ್ಥಾನವನ್ನು ಯಾರೂ ಕಡೆಗಣಿಸಲಿಲ್ಲ. ಪ್ರವಾದಿ ಮೊಹಮ್ಮದನ ನಂತರ ಬೇಕಾದಷ್ಟು ಜನ ಸಂತರು, ಮೌಲ್ವಿಗಳು, ಇಮಾಮರು ಆಗಿಹೋದರೂ ಯಾರು ಪ್ರವಾದಿಯ ಸ್ಥಾನವನ್ನು ಕೆಳಗಿಳಿಸಲಿಲ್ಲ. ಎದೆ ಸೀಳಿದರೆ ಒಂದು ಅಕ್ಷರ ಬರದಿರುವ ಸಾಮಾನ್ಯ ಕೆಲವು ಮಠಾಧಿಕಾರಿಗಳೂ ಸಹ ಧರ್ಮಗುರುವಿನ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಕಾಣುತ್ತೇವೆ. ಅಪ್ಪನವರ ಪಾದಧೂಳಿಯಾಗುವ ಯೋಗ್ಯತೆ ಇಲ್ಲದವರು, ‘ ಬಸವಣ್ಣ ಭಕ್ತ ’ ಎಂದು ಮಾತನಾಡುವುದನ್ನು ಕಾಣುತ್ತೇವೆ. ಅವರ ಅಜ್ಞಾನದ ಮಟ್ಟಕ್ಕೆ ನಾವು ಅನುಕಂಪ ಪಡುವುದೇನೋ ಸರಿ, ಆದರೆ ಇಂಥ ಅಪಚಾರ ಸಲ್ಲದು. ಬೌದ್ಧ, ಕ್ರೈಸ್ತ, ಇಸ್ಲಾಂ ಧರ್ಮಗಳು ಹುಟ್ಟಿ ಎಷ್ಟೋ ಶತಮಾನ ಸಂದರೂ ಸ್ಥಾನಿಕ ಪಂಥ (Lococults) ಗಳನ್ನು ಬೆಳೆಸಿ, ಮೂಲಗುರುವನ್ನು ಮರೆಮಾಡುವ ಕುತಂತ್ರ ಅಲ್ಲಿ ಸಾಗಿಬರಲಿಲ್ಲ. ಆದರೆ ಇಲ್ಲಿಯೊ ? ಬದುಕಿದ್ದಾಗ ಯಾವ ವ್ಯಕ್ತಿತ್ವ, ಸಾಧನೆ, ಸಂದೇಶ ಇಲ್ಲದವರೂ ಸತ್ತ ನಂತರ ಬಹಳ ದೊಡ್ಡವ್ಯಕ್ತಿಗಳಾಗಿ ಉಬ್ಬಿಸಲ್ಪಡುತ್ತಾರೆ. ಹಣ ಕೊಟ್ಟರೆ ಹೊಟ್ಟೆಪಾಡಿಗಾಗಿ ಪುರಾಣ ಬರೆಯುವ ಪಂಡಿತರಿಂದಾಗಿ, ಸ್ಥಾನಿಕ ಪಂಥಗಳ ಕರ್ತೃ ಗದ್ದುಗೆಗಳು ವಿಪುಲವಾಗಿ ಬೆಳೆಯುತ್ತವೆ. ಚರ್ಚ್-ಮಸೀದಿಗಳು ಮೂಲಧರ್ಮದ ಬೊಡ್ಡೆಯನ್ನು ಬಲಪಡಿಸಿದರೆ ಇಲ್ಲಿ ಸ್ಥಾನಿಕ ಪಂಥಗಳು ಮೂಲಧರ್ಮವನ್ನು ಕಳೆಗುಂದಿಸುತ್ತಿವೆ. ಬೆಳದಿಂಗಳ ಚಂದ್ರನನ್ನು ನೋಡದೆ ಕೋಣೆಯೊಳಗೆ ಕುಳಿತ ವ್ಯಕ್ತಿಗೆ ಕೊಳವೆ ದೀಪದ ಬೆಳಕೇ ಭಾರಿ ಕಾಂತಿಯುಳ್ಳದ್ದಾಗಿ ತೋರುವಂತೆ, ಸಂಪ್ರದಾಯದ ಕೋಣೆಯಲ್ಲಿ ಕೂತವನಿಗೆ ಧರ್ಮಗುರು ಬಸವಣ್ಣನೆಂಬ ಹುಣ್ಣಿಮೆಯ ಚಂದ್ರನಿಗಿಂತಲೂ ತನ್ನ ದೀಕ್ಷಾಗುರು, ತಮ್ಮೂರ ಗದ್ದುಗೆಯ ಕರ್ತೃವೇ ಪ್ರಕಾಶಮಾನವಾಗಿ ತೋರುವನು. ಬಸವಣ್ಣನವರು ಅಂದು ಏಕದೇವ ನಿಷ್ಠೆ ಕುರಿತು ಬೋಧಿಸಿದಂತೆ ಇಂದು ನಾವು ಈ ಸಮಾಜಕ್ಕೆ ಏಕಗುರು ನಿಷ್ಠೆಯನ್ನು ಕಲಿಸಬೇಕಾಗಿದೆ. ಬೊಡ್ಡೆಗೆ ನೀರೆರೆಯದೆ ಗಿಡದ ಟೊಂಗೆ ಟಿಸಿಲುಗಳಿಗೆ ನೀರು ಚಿಮುಕಿಸುವ ಜನರ ತಪ್ಪನ್ನು ಮನಗಾಣಿಸಬೇಕಾಗಿದೆ.

ಮಹಾಜಗದ್ಗುರು

‘ಜಗದ್ಗುರು’ ಎಂಬುದು ಸವಕಲು ನಾಣ್ಯ, ಹಳಸಲು ಪದವಾಗಿದೆ. ಇದನ್ನೇಕೆ ಬಳಸಿದಿರಿ ? “ ಪೂಜ್ಯ ಗುರುಗಳ ಕೀರ್ತಿ ವ್ಯಾಪಕವಾಗಿ ಹಬ್ಬಿದೆ. ಈ ಪದ ಅವರ ವ್ಯಕ್ತಿತ್ವವನ್ನು ಕಿರಿದಾಗಿಸುತ್ತದೆ. ” ಎಂದು ಅನೇಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಯಾವುದೇ ಪದವೂ ತನ್ನಿಂದ ತಾನೇ ಕೆಟ್ಟುದಲ್ಲ. ಯಾರೋ ಕೆಲವು ವೈದ್ಯರು ದುರಾಶಾ

Digitalized by e-Sahithya Documentation Forum
Sponsored by Sarayu Foundation Trust

ಪೀಡಿತರು, ಅವಮಾನವೀಯರು ಎಂದ ಮಾತ್ರಕ್ಕೆ ವೈದ್ಯ ಪದದ ಮಹತ್ವವನ್ನೇ ಅಲ್ಲಗಳೆಯಬಹುದೆ? ಆದರ್ಶವಾದಿಯು ಪ್ರಾಮಾಣಿಕ ವೈದ್ಯನಾಗಿ ವೈದ್ಯಪದಕ್ಕೆ, ವೈದ್ಯ ವೃತ್ತಿಗೆ ಅರ್ಥ, ಕೀರ್ತಿ ತರಬೇಕಲ್ಲವೆ? ರಾಷ್ಟ್ರಾಧ್ಯಕ್ಷ, ಪ್ರಧಾನಿ ಎಂಬುವು ಕೆಲವು ಪದವಿಗಳು. ಆ ಸ್ಥಾನದಲ್ಲಿದ್ದ ಕೆಲವರು ತಪ್ಪುಮಾಡಿದರೆ, ಆ ಪದಗಳನ್ನೇ, ಆ ಪದವಿಯನ್ನೇ ತಗೆದುಃಹಾಕಬಹುದೆ? ಆದರ್ಶವಾಗಿ, ಸೂಕ್ತವಾಗಿ ಕರ್ತವ್ಯ ನಿರ್ವಹಣೆ ಮಾಡಿ, ಆ ಪದಕ್ಕೆ ಕೀರ್ತಿ ತರುವುದು ಉಚಿತವಲ್ಲವೆ? ಜಗದ್ಗುರುವಿನ ಕರ್ತವ್ಯವೇನು ಎಂಬುದನ್ನು ಮನಗಾಣಿಸಿ ಆ ಸ್ಥಾನಕ್ಕೆ ಗೌರವ ತಂದು ಕೊಡಬೇಕೆಂಬುದೇ ಸೂಕ್ತ.

ಈ ಪೀಠ ಸ್ಥಾಪನೆಯ ಹಿಂದೆ ಒಂದು ತತ್ತ್ವ, ಸಿದ್ಧಾಂತದ ಸ್ಥಾಪನೆಯ ಹೋರಾಟವಿದೆ. ಪೂಜ್ಯ ಅಪ್ಪಾಜಿಯವರು ಹುಟ್ಟಿದ್ದು ಲಿಂಗಾಯತ ಸಮಾಜದಲ್ಲಿ, ಶ್ರೇಷ್ಟಕುಲದವರೆಂದು ಬೀಗುವ ಪಂಚಮಸಾಲಿ ಮನೆತನದಲ್ಲಿ. ಇವರಿಗೆ ಕೆಲವು ಕಡೆ ಪಂಚಾಚಾತದವರೂ ಎನ್ನುತ್ತಾರೆ. ಒಂದು ಕಾಲದಲ್ಲಿ (ಈಗಲೂ ಕೆಲವು ಕಡೆ ಉಂಟು) ಅಯ್ಯನವರು, ಬಣಜಿಗರು, ಪಂಚಮಸಾಲಿಯವರು ತಾವು ಶ್ರೇಷ್ಟ ಕುಲಜರೆಂದು ಬೀಗಿ, ಉಳಿದ ಲಿಂಗಾಯತರನ್ನು- ಸಜ್ಜನ ಗಾಣಿಗರು, ನೇಕಾರರು, ರೆಡ್ಡಿ, ಸಾದರು, ಸೊಳಂಬರು ಮುಂತಾದವರನ್ನು ಕಡೆಗಣಿಸಿದ್ದುಂಟು. ಹೀಗೆ ಬೀಗುವ ಪಂಚಮಸಾಲಿಯವರಲ್ಲಿ ಹುಟ್ಟಿದ್ದರೂ ಭಕ್ತವರ್ಗದವರಲ್ಲಿ ಹುಟ್ಟಿದವರೆಂದು ಉತ್ತರ ಕರ್ನಾಟಕದ ಸಂಪ್ರದಾಯ ಮಠಾಧಿಕಾರಿಗಳಾರೂ ಪೂಜ್ಯ ಅಪ್ಪಾಜಿಯವರಿಗೆ ಕಾವಿ (ಜಂಗಮ) ದೀಕ್ಷೆ ಕೊಡಲು ಸಿದ್ಧರಾಗದೆ, ನಿರಾಕರಿಸಿದರು. ಯಾರ್ಯಾರು ಎಂಬುದನ್ನು ಹೆಸರಿಸುವುದು ಅಗತ್ಯವಿಲ್ಲ, ಸೂಕ್ತವೂ ಅಲ್ಲ. ನವಿಲುಗುಂದದ ಗವಿಮಠದ ಲಿಂಗೈಕ್ಯ ಸ್ವಾಮಿಗಳು ಪಂಚಮಸಾಲಿಯವರೇ ಇದ್ದರೂ, ಅಲ್ಲಿಗಾಗಲೇ ಬೇರು ಬಿಟ್ಟಿದ್ದ ವಂಶ ಜಾತಿವಾದದ ಮಠಾಧಿಕಾರಿಗಳ ವಿರೋಧ ಎದುರಿಸಲಾರದೆ ದೀಕ್ಷೆ ನೀಡಲಾಗದ ತಮ್ಮ ಅಸಹಾಯಕತೆ ವ್ಯಕ್ತ ಪಡಿಸಿದರಂತೆ.

ಅಂತರಂಗದಲ್ಲಿ ತುಂಬಿದ ವೈರಾಗ್ಯ, ' ಹೊಳೆಯ ನೀರಿಗೆ ದೊಣ್ಣೆನಾಯಕನ ಒಪ್ಪಿಗೆ ಏಕೆ ?, ಎಂದು ಪ್ರೇರಣೆ ನೀಡಿತು. ಪೂಜ್ಯ ಅಪ್ಪಾಜಿ ಬಸವಣ್ಣನನ್ನೇ ತನ್ನ ದೀಕ್ಷಾಗುರುವನ್ನಾಗಿ ಭಾವಿಸಿ, 19-11-1956 ರಂದು ಜ್ಞಾನ ಸನ್ಯಾಸ ಸ್ವೀಕರಿಸಿ ಕಾಷಾಯ ವಸ್ತ್ರಗಳನ್ನು ಧರಿಸಿಯೇ ಬಿಟ್ಟರು. ಚರ ಜಂಗಮರಾಗಿ ವಚನ ವಾಙ್ಮಯವನ್ನು ಪ್ರಚಾರ ಮಾಡುತ್ತ ಈ ಜ್ಞಾನ ದಿಗ್ಗಜ ಹೊರಡುತ್ತಲೇ ಸಂಪ್ರದಾಯವಾದಿಗಳು ಮತ್ತು ಅವರ **'ಹೌದು ಬುದ್ಧಿ'** ಅನುಯಾಯಿಗಳಿಂದ ವಿಪರೀತ ಕಿರುಕುಳ, ಅಪಪ್ರಚಾರಗಳನ್ನು ಎದುರಿಸಬೇಕಾಯಿತು. ಪೂಜ್ಯ ಅಪ್ಪಾಜಿ ಬೆದರಲಿಲ್ಲ, ಯಾರಾದರೂ ಎದೆಗೊಟ್ಟು ನಿಲ್ಲದ ಹೊರತು ಈ ಜಾತಿವಾದ, ವಂಶವಾದದ ಪಿಡುಗು ತಪ್ಪದು ಎಂದು ಹೋರಾಟದ ಉತ್ಸಾಹ ಮೈಗೂಡಿಸಿಕೊಂಡರು. ಪೂಜ್ಯರು ಅಂದು ಒಂಟಿಯಾಗಿ ಹೊರಟರು. ನಂತರ ನಾನು ಬಂದೆ, ಈಗ ಅನೇಕರು, ಅಸಂಖ್ಯಾತರು

ನೀವೆಲ್ಲ ಸೇರಿದ್ದೀರಿ. ಈಗ ಇದು ಪ್ರವಾಹವಾಗಿ ಹೊರಟಿದೆ. ಬಸವ ತತ್ತ್ವದ ಈ ಪ್ರವಾಹವನ್ನು ಯಾವ ಜಾತಿವಾದದ ಅಡ್ಡಗಟ್ಟೆಯೂ ತಡೆಯಲಾರದು, ತಡಹಲಾರದು. "ನೀನು ಭಕ್ತ ವರ್ಗದವನು, ನೀನು ಸ್ತ್ರೀ, ನೀನು ಕೀಳುಜಾತಿಯವನು, ನೀನು ದೀಕ್ಷೆ ಹೊಂದಲಾರೆ, ಗುರುವಾಗಲಾರೆ, ಜಂಗಮವಾಗಲಾರೆ."ಎಂಬ ಸೊಲ್ಲನ್ನು ಎತ್ತುವ ಧೈರ್ಯಮಾಡಲಿ. ಇಷ್ಟು ದಿನ ಗುರುಗಳು, ಮಠಾಧಿಕಾರಿಗಳು ಹೇಳಿದ್ದನ್ನು ನಂಬಿ, ತಪ್ಪಿದ್ದರೂ ಅನುಸರಿಸುತ್ತಿದ್ದ ಕಾಲ ಈಗ ಮುಗಿಯಿತು. ವಚನ ವಾಙ್ಮಯ ಸಂವಿಧಾನ ಎಲ್ಲರ ಹಕ್ಕುಗಳನ್ನೂ ಹುಟ್ಟು, ಜಾತಿ, ಉದ್ಯೋಗ, ಲಿಂಗಭೇದವಿಲ್ಲದೆ ರಕ್ಷಿಸುವಾಗ, ಹಕ್ಕುಗಳನ್ನು ನಿರಾಕರಿಸಲು ಇವರು ಯಾರು ?

ವರ್ಣಾಶ್ರಮ ವ್ಯವಸ್ಥೆಯಲ್ಲಿ ಅತ್ಯಂತ ಕೆಳಶ್ರೇಣಿಯಲ್ಲಿ ಹುಟ್ಟಿದ ನಟುವರ ಜಾತಿಯ ಅಲ್ಲಮ ಪ್ರಭು ಪ್ರಥಮ ಶೂನ್ಯ ಪೀಠಾಧೀಶರಾದ ದಾಖಲೆಯಿಲ್ಲವೆ? ಮಡಿವಾಳ ಮಾಚಯ್ಯ, ಸಮಗಾರ ಹರಳಯ್ಯ, ಕುರುಬ ಗೊಲ್ಲಾಳ, ಅಂಬಿಗರ ಚೌಡಯ್ಯ ಮುಂತಾದವರಿಂದು ನಮಗೆ ಪೂಜ್ಯರು, ಪ್ರಾತಃಸ್ಮರಣೀಯರಾಗಿಲ್ಲವೆ ? ನಮ್ಮ ಧಾರ್ಮಿಕ ಸಂವಿಧಾನವಾದ ವಚನ ಸಾಹಿತ್ಯದ ಆಧಾರದ ಮೇಲೆಯೇ ಇದು ಸಾಧ್ಯವಿದೆ. ಇನ್ನು ಸಂಪ್ರದಾಯದಲ್ಲಿಯೂ ಸಾಕಷ್ಟು ಕಾಲ, ತೀರಾ ಇತ್ತೀಚಿನವರೆಗೆ ಎಲ್ಲ ಪಂಗಡಗಳವರಿಗೂ ಮಠಾಧಿಕಾರಿಗಳಾಗುವುದು ಸಾಗಿ ಬಂದಿದೆ, ಚಿತ್ರದುರ್ಗದ ಲಿಂ॥ ಶ್ರೀ ಜಯದೇವ ಸ್ವಾಮಿಗಳ ಮತ್ತು ಧಾರವಾಡದ ಲಿಂ॥ ಮೃತ್ಯುಂಜಯಪ್ಪಗಳ ಗುರುಗಳಾದ ಅಥಣಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಭಕ್ತರು– ಪಂಚಮಸಾಲಿಯವರು. ಶಿವಯೋಗ ಮಂದಿರದ ಸ್ಥಾಪಕರಾದ ಲಿಂ॥ ಹಾನಗಲ್ ಕುಮಾರಸ್ವಾಮಿಗಳ ಗುರುಗಳು ಭಕ್ತವರ್ಗದವರು, ಲಿಂ॥ ಶ್ರೀ ಬಂಥನಾಳ ಸ್ವಾಮಿಗಳ ಗುರುಗಳು ಭಕ್ತರು, ಬಾಗಲಕೋಟ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಸ್ಥಾಪಕರಾದ ಲಿಂ॥ ಬೀಳೂರು ಗುರು ಬಸವ ಮಹಾಸ್ವಾಮಿಗಳು ಭಕ್ತರು, ಶ್ರೇಷ್ಟ ಶಿವಾನುಭಾವಿ ಸರ್ಪಭೂಷಣ ಶಿವಯೋಗಿಗಳು ಬಣಜಿಗರ ಮನೆತನದಲ್ಲಿ ಹುಟ್ಟಿದವರು. ಮೈಸೂರಿನ ಶ್ರೇಷ್ಟ ವಿದ್ವಾಂಸರಾಗಿದ್ದ ಗವಿಮಠದ ಗೌರಿಶಂಕರ ಶ್ರೀಗಳು ಭಕ್ತರು, ನಿಡಸೋಸಿ ಜಗದ್ಗುರು ಮಠದ ಮೂಲಪುರುಷರು ಹೂಗಾರ ಮನೆತನದವರು, ಸೊಲ್ಲಾಪುರ ಕಿರೀಟ ಮಠದ ಲಿಂ॥ ನಿಜಲಿಂಗಸ್ವಾಮಿಗಳು ಬಣಜಿಗರು, ಬೆಳಗಾಂವ ಜಿಲ್ಲೆ ನಾಗನೂರಿನ ಶ್ರೀ ಶಿವಬಸವ ಸ್ವಾಮಿಗಳ ಗುರುಗಳು ಸಂಪಗಾಂವ ಸಿದ್ಧನಾಳ ಮನೆತನದವರು, ಪಂಚಮಸಾಲಿಯವರು. ಗದುಗಿನ ತೋಂಟದಾರ್ಯ ಮಠದ ಲಿಂ॥ ಮೃತ್ಯುಂಜಯ ಸ್ವಾಮಿಗಳು ಪಂಚಮಸಾಲಿಯವರು.

ಹೀಗೆ ನೂರಾರು ದಾಖಲೆಗಳು ಇರುತ್ತಿದ್ದರೂ, ಸಮಾಜದ ದೊಡ್ಡ ವರ್ಗವೊಂದನ್ನು ಭಕ್ತರೆಂದು ವರ್ಗೀಕರಿಸಿ, ಅವರನ್ನು ಗುರು-ಜಂಗಮ ಸಂಸ್ಕಾರದಿಂದ, ಮಠಪೀಠಗಳ ಅಧಿಕಾರದಿಂದ ವಂಚಿಸುವುದನ್ನು, ಬಸವ ತತ್ತ್ವಕ್ಕೆ ವಿರುದ್ಧವಾದ

Digitalized by e-Sahithya Documentation Forum
Sponsored by Sarayu Foundation Trust

ಜಾತಿವಾದವನ್ನು, ಯಾವುದನ್ನು ಬಸವಾದಿ ಪ್ರಮಥರು ಮುಂಬಾಗಿಲಿನಿಂದ ಗುಡಿಸಿ, ಹೊರಹಾಕಿದ್ದರೋ ಅದನ್ನು ಹಿಂಬಾಗಿಲಿನಿಂದ ತಂದು ಇಟ್ಟುಕೊಂಡು, ಪೋಷಿಸುವುದನ್ನು ಕಂಡು ಅಪ್ಪಾಜಿಯವರು ಸಿಡಿದೆದ್ದರು. ಇಲ್ಲಿ ನಾವು ಖಂಡಿತಾ ಪೂಜ್ಯರನ್ನು ಕೊಂಡಾಡಬೇಕು. ಸಂಪ್ರದಾಯವಾದಿ ಮಠಾಧಿಕಾರಿಗಳು ಸೃಷ್ಟಿಸಿದ್ದ ಈ ಉಸಿರು ಕಟ್ಟಿಸುವ ವಾತಾವರಣವನ್ನು ಎದುರಿಸಲಾರದೆ ಅನೇಕ ಪ್ರತಿಭಾವಂತರು, ಮುಮುಕ್ಷುಗಳು ಅನ್ಯ ಮತಪಂಥಗಳಿಗೆ ಹೊರರಾಜ್ಯಗಳಿಗೆ ಹೊರಟು ಹೋದರು. ಜಡ ಸಂಪ್ರದಾಯವಾದಿಗಳ ಕೈಲಿ ಸಿಕ್ಕ ಬಸವ ತತ್ತ್ವದ ಬಗ್ಗೆ ಜಿಗುಪ್ಸೆ ತಾಳಿದರು. ಆದರೆ ಅಪ್ಪಾಜಿಯವರು ಬಸವ ತತ್ತ್ವಕ್ಕೆ ಎರಗಿದ ವಿಪತ್ತನ್ನು ಗುರುತಿಸಿದರು ; ಅನ್ಯಮತ ಪಂಥಗಳಿಗೆ ಹೋಗದೆ ಸಂಪ್ರದಾಯಸ್ಥರ ಕಪಿಮುಷ್ಟಿಯಲ್ಲಿ ವಿಲಿವಿಲಿ ಒದ್ದಾಡುತ್ತಲಿದ್ದ ಬಸವತತ್ತ್ವವನ್ನು ಬಿಡುಗಡೆ ಮಾಡಲು ಸಿದ್ಧರಾದರು. ಈ ಹೋರಾಟದಲ್ಲಿ ಅವರಿಗೆ ನೆರವಾದ ಶಸ್ತ್ರ- ವಚನ ಸಾಹಿತ್ಯ. ವಚನ ವಾಙ್ಮಯ ಖಡ್ಗ ಧಾರಿಯಾಗಿ, ಕ್ರಾಂತಿಕಾರಿ ಧರ್ಮ ಪ್ರಚಾರಕರಾಗಿ ಸಂಚರಿಸಿದರು.

[ಅವರೂ ಸಂಪ್ರದಾಯವಾದಿಗಳ ಆಟಾಟೋಪಕ್ಕೆ ಹೆದರಿ ಬೇರಾವ ಪಂಥಕ್ಕೋ ದಾಸರಾಗಿದ್ದರೆ ?! ಅದನ್ನು ಊಹಿಸಲೇ ಭಯವಾಗುತ್ತದೆ.] 1956 ರಿಂದ ಇಲ್ಲಿಯವರೆಗೆ ಅವಿಶ್ರಾಂತವಾಗಿ ಶ್ರಮಿಸಿದ ಫಲವಾಗಿ ನೋಡಿರಿಲ್ಲಿದೆ ಶರಣ ಸಮೂಹ. "ಭಕ್ತವರ್ಗದಲ್ಲಿ ಹುಟ್ಟಿದ ನಿನಗೆ ಜಂಗಮ ದೀಕ್ಷೆ ಕೊಡಲು ಬರದು" ಎಂದು ಜಾತಿವಾದಿಗಳು ಅಂದುದನ್ನು ಹುಸಿ ಮಾಡಲಿಕ್ಕಾಗಿ ಇಂದು ಮಹಾಜಗದ್ಗುರು ಪೀಠ ಸ್ಥಾಪನೆಯಾಗುತ್ತಿದೆ. ಎಲ್ಲ ಜಾತಿ, ಮತ, ಪಂಥಗಳವರ ಧಾರ್ಮಿಕ ಹಕ್ಕನ್ನು ಸ್ಥಿರೀಕರಿಸಲೋಸುಗವೇ ಈ ಪೀಠ ಸ್ಥಾಪನೆಯಾಗುತ್ತಿದೆ. ನಾವು ಜಾತಿವಾದಿಗಳಲ್ಲ; ಅಥವಾ ಯಾರನ್ನಾದರೂ ಜಾತಿ ತಳಹದಿಯ ಮೇಲೆ ದ್ವೇಷಿಸುವವರೂ ಅಲ್ಲ. ಅಯ್ಯನವರ ಮನೆತನ, ವಂಶದಲ್ಲಿ ಹುಟ್ಟಿದವರು ಮಾತ್ರವೇ ಗುರು-ಜಂಗಮ, ಮಠ-ಪೀಠಾಧೀಶರಾಗಬೇಕು ಎಂಬ ಸಂಕುಚಿತ ಮತ್ತು ಬಸವ ಧರ್ಮಕ್ಕೆ ವಿರುದ್ಧವಾದ ವಿಚಾರಧಾರೆಯನ್ನು ವಿರೋಧಿಸುತ್ತೇವೆ. ಆದರೆ ಅರ್ಹತೆ, ಅರಿವು ಅನುಭಾವಗಳಿಂದ ಅವರೂ, ಎಲ್ಲರೂ ಆಗಬಹುದು ಎಂಬುದನ್ನು ಎತ್ತಿಹಿಡಿಯುತ್ತೇವೆ. ಹೀಗಾಗಿ ನಾವು ಸಂಪ್ರದಾಯ ವಿರೋಧಿಗಳು ಎನ್ನುವುದಕ್ಕಿಂತ ಸತ್ಯದ ಆರಾಧಕರು ಎಂಬುದನ್ನು ತಾವು ಮನಗಾಣಬೇಕು.

ಕೆಲವು ಜನ, ಮುಖ್ಯವಾಗಿ ಪರಧರ್ಮೀಯರು ವ್ಯಂಗ್ಯವಾಡುವುದುಂಟು. 'ಈ ಲಿಂಗವಂತ ಸಮಾಜದಲ್ಲಿ ಎಷ್ಟೊಂದು ಜಗದ್ಗುರುಗಳು, ಇರುವುದೊಂದೇ ಜಗತ್ತು' ಎನ್ನುವರು. ಈ ಪದದ ಅರ್ಥವನ್ನು ನೋಡಿದ್ದೇ ಆದರೆ ಪರಮಾತ್ಮನೊಬ್ಬನಿಗೇ ಇದು ಸೂಕ್ತ. ಇರುವುದೊಂದೇ ಜಗತ್ತು, ಅದರ ಏಕೈಕ ಗುರು ಸೃಷ್ಟಿಕರ್ತ.

ಹಲವಾರು ಧರ್ಮಗಳಿವೆ. ಆಯಾ ಧರ್ಮದ ಮೂಲಸ್ಥಾಪಕರನ್ನು ಜಗದ್ಗುರು ಎಂದರೆ ಆ ಅರ್ಥವೂ ಪರವಾಗಿಲ್ಲ. ಕ್ರೈಸ್ತ ಜಗತ್ತಿನ ಜಗದ್ಗುರು ಏಸುಕ್ರಿಸ್ತ, ಇಸ್ಲಾಂ

ಜಗತ್ತಿನ ಜಗದ್ಗುರು ಮೊಹಮದ್ ಪೈಗಂಬರ್, ಲಿಂಗಾಯತ ಜಗತ್ತಿನ ಜಗದ್ಗುರು ಬಸವಣ್ಣ, ಬೌದ್ಧ ಧರ್ಮದ ಜಗದ್ಗುರು ಬುದ್ಧ– ಹೀಗೆ ಅರ್ಥೈಸಬಹುದು. ಇನ್ನೂ ವ್ಯಾಖ್ಯಾನವನ್ನು ಸಡಿಲಗೊಳಿಸಿದರೆ, ಯಾರು ಅಲ್ಲಿ ಇಲ್ಲಿ ಎಲ್ಲಾಕಡೆ, ಅವರು-ಇವರು ಎಲ್ಲರೂ, ಆಗ-ಈಗ ಎಲ್ಲಾಕಾಲದಲ್ಲಿಯೂ ಒಪ್ಪುವ ನಿತ್ಯ ಸತ್ಯ ತತ್ತ್ವಗಳನ್ನು ಬೋಧಿಸುವರೋ ಅವರು ಜಗದ್ಗುರು ಎನ್ನಬಹುದು. ಇಂಥ ಬೋಧೆಗೈವವರು ಜಗದ್ಗುರು ಎನ್ನುವಾಗ ಅದನ್ನು ಯಾವುದೇ ಜಾತಿ, ಮತ, ಪಂಥ, ವಂಶಕ್ಕೆ ಸೀಮಿತಗೊಳಿಸುವುದು ಉಚಿತವಲ್ಲ ಎಂಬುದನ್ನು ಸಾರಲೋಸುಗವೇ ಈ ಗುರುಪೀಠ ಸ್ಥಾಪನೆಯಾಗುತ್ತಿದೆ. ಯಾವ ಗುರು ಪದವಿಯನ್ನು ಸಂಪ್ರದಾಯವಾದಿಗಳು ಜಾತಿವಾದದ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿರುವರೋ ಅದನ್ನು ಪಡೆಯುವುದು, ಅರ್ಹರಾದವರಿಗೆ ಕೊಡಿಸುವುದೇ ಈ ಪೀಠದ ಮುಖ್ಯ ಧ್ಯೇಯವಾಗಿದೆ.

ಧರ್ಮಾಧಿಕಾರಿಗಳನ್ನು ನಿರ್ದಿಷ್ಟವಾಗಿ ಕರೆಯುವ ಪದ್ಧತಿ ಬೆಳೆಸಬೇಕಾಗಿದೆ. ಉತ್ತಮ ಸದಾಚಾರ ಸಂಪನ್ನನಾಗಿ ದೀಕ್ಷಾದಿ ಕ್ರಮಗಳನ್ನು, ವಿಧಿ-ವಿಧಾನಗಳನ್ನು ನಡೆಸುವವನನ್ನು **ಕ್ರಿಯಾಮೂರ್ತಿ** ಎಂದು, ತಾನು ತಿಳಿದುಕೊಂಡ ತತ್ತ್ವಗಳನ್ನು ಪ್ರಚಾರ ಮಾಡಲು ಸಿದ್ಧರಾದವರನ್ನು **ಗುರುಮೂರ್ತಿ**ಯೆಂದು, ತ್ಯಾಗಜೀವನವನ್ನು ಸ್ವೀಕರಿಸಿ ಅಧಿಕೃತವಾಗಿ ಜಂಗಮ ದೀಕ್ಷೆಯನ್ನು ಪಡೆದವರನ್ನು **ಸದ್ಗುರುವೆಂದು,** ಧರ್ಮಪೀಠಕ್ಕೆ ಏರಿದವ್ಯಕ್ತಿಯನ್ನು **ಜಗದ್ಗುರು**ವೆಂದು, ಒಂದು ಕ್ರಮದಲ್ಲಿಯೇ ಕರೆಯುವ ಪರಿಪಾಠ ಬೆಳೆಯಬೇಕು. ವಿಶ್ವಗುರು ಎಂಬ ಪದ ಧರ್ಮಗುರು ಬಸವಣ್ಣನವರಿಗೆ ಮಾತ್ರ ಮೀಸಲಾಗಬೇಕು. ಪರಮೋನ್ನತ ಗುರು ಪದವಿಯನ್ನು 'ವಿಶ್ವಗುರು' ಪ್ರತಿನಿಧಿಸಬೇಕು. ಇದು ಸಡಿಲಗೊಂಡು ಬಳಸದಂತೆ ಜಾಗ್ರತೆ ವಹಿಸಬೇಕು. ಉತ್ತರ ಕರ್ನಾಟಕದಲ್ಲಿ ಆದೇ ಆಗ ಎಂ. ಎ. ಪರೀಕ್ಷೆ ಮುಗಿಸಿ ಬಂದವರನ್ನೂ ಪ್ರೊಫೆಸರ್ ಎಂದು ಗಾಬರಿ ಹುಟ್ಟಿಸುವರು. "ಅದು ಬಹುದೊಡ್ಡ ಹುದ್ದೆ; ಇಷ್ಟು ಚಿಕ್ಕವರು ಪ್ರೊಫೆಸರರೇ?" ಎಂದು ನಾನು ಮೊದಮೊದಲು ನಾನು ಬೆಕ್ಕಸಬೆರಗಾಗಿ ನೋಡುತ್ತಿದ್ದೆ ನಂತರ ತಿಳಿಯಿತು, ಆ ಹುದ್ದೆಯ ಮಹತ್ವ ಅರಿತು ಈ ಜನ ಬಳಸುತ್ತಿಲ್ಲ ಎಂದು. ಹಾಗೆ 'ವಿಶ್ವಗುರು' ಪದವು ಹಗುರಗೊಳ್ಳದೆ ಧರ್ಮಗುರು ಬಸವಣ್ಣನವರಿಗೆ ಮಾತ್ರ ಅನ್ವಯಿಸುವುದನ್ನು ಬಳಕೆಗೆ ತರಬೇಕಾಗಿದೆ.

ಗುರು ಸಂಕಲ್ಪ ಪೂರೈಕೆ

ಇದು ನಮ್ಮ ಪ್ರಯತ್ನ, ಯಾವುದೋ ಪದವಿ-ಕೀರ್ತಿಯ ಆಸೆಗೆ ಎಂದು ಭಾವಿಸಬೇಡಿ. ಕೇವಲ ಆದಿ ಶರಣರ ಸಂಕಲ್ಪವನ್ನು ನಾವು ಪೂರೈಸುತ್ತಿದ್ದೇವೆ ಅಷ್ಟೇ. ಎಡ್ಗಾರ್ ಕೇಸಿ ಎಂಬ ಮನೋವಿಜ್ಞಾನಿ ಹೇಳುತ್ತಾನೆ, "ಸತ್ ಸಂಕಲ್ಪಗಳು ಶರೀರದೊಡನೆ ಸಾಯುವುದಿಲ್ಲ. ಅವು ಶತಮಾನಗಳ ಕಾಲ ಇರಬಲ್ಲುವು. ಅವನ್ನು ಕಾಲಾನಂತರದಲ್ಲಿ ಯಾರೋ ಗುರುತಿಸಿ, ಕ್ರಿಯಾರೂಪಕ್ಕಿಳಿಸುತ್ತಾರೆ." ಎಂದು. ಇದು ನನಗೆ ಪರಮ ಸತ್ಯ ಎನಿಸುತ್ತದೆ.

Digitalized by e-Sahithya Documentation Forum
Sponsored by Sarayu Foundation Trust

ನಾಸ್ತಿಕವಾದಿಯಾಗಿದ್ದ ಕ್ರಿಯಾಶೀಲ ತರುಣನನ್ನು ತನ್ನ ಕಾರ್ಯಕ್ಕಾಗಿ ಆಯ್ಕೆ ಮಾಡಿಕೊಂಡು, ಆದೇಶ ನೀಡಿ, ಧರ್ಮ ಪ್ರಚಾರದ ಮಣಿಹವನ್ನು ಹೊರಿಸಿದುದು ಬಸವ ಸಂಕಲ್ಪವೆನ್ನಿಸದೆ? ಅದೂ '**ಹಿಂದೆ ಹತ್ತು ಮುಂದೆ ಹನ್ನೊಂದು**' ಎಂಬ 1956 ನೆಯ ಇಸವಿಯಲ್ಲಿ. 1968ರಲ್ಲಿ ಅಪ್ಪ ಶತಮಾನೋತ್ಸವ ಜರುಗಿದಾಗ ನಾವು ಆಕಸ್ಮಿಕವಾಗಿ ಬಸವ ಕಲ್ಯಾಣಕ್ಕೆ ಹೋದುದು. ಭಾಷಣಕಾರರ ಲಿಸ್ಟಿನಲ್ಲಿ ನಮ್ಮ ಹೆಸರು ಇರಲಿಲ್ಲ. ವೇದಿಕೆಯ ಮೇಲೆ ಇದ್ದ ನನ್ನನ್ನು ನೋಡಿ ಜನರು ಭಾಷಣಕ್ಕೆ ನನಗೆ ಅವಕಾಶಕೊಡಲು ಕಾರ್ಯಕರ್ತರನ್ನು ಒತ್ತಾಯಪಡಿಸಿದರು. ಆಕಸ್ಮಿಕವಾಗಿ ಅವಕಾಶ ಸಿಕ್ಕಿತು. ಪೂರ್ವಭಾವಿ ಸಿದ್ಧತೆ ಇಲ್ಲದೆ, ಮತ್ತು ಪೂರ್ವನಿರ್ಧಾರಿತ ಯೋಜನೆಯಿಲ್ಲದೆ ಮಹಿಳಾ ಜಗದ್ಗುರು ಪೀಠ ಸ್ಥಾಪನೆಯ ಘೋಷಣೆ ಮಾಡಿದಾಗ, ಎಲ್ಲರಿಗೂ ಅಚ್ಚರಿಯಾದಂತೆ ಪೂಜ್ಯ ಅಪ್ಪಾಜಿಯವರಿಗೂ ಸಹ ಸೋಜಿಗವಾಯಿತು. ಇದು ಬಸವ ಸಂಕಲ್ಪವೇ!

ಶೂನ್ಯ ಪೀಠಕ್ಕೆ ಶರಣೆಯರನ್ನು ಅಧಿಕಾರಿಯನ್ನಾಗಿ ಮಾಡುವ ಅಪೇಕ್ಷೆ ಬಸವಾದಿ ಪ್ರಮಥರಿಗೆ ಇದ್ದಿರಲೂ ಸಾಕು. ಪ್ರಭುದೇವರು ಶೂನ್ಯಪೀಠಾಧೀಶರಾಗಿರುವಾಗಲೇ ಬಂದ ಅಕ್ಕ ಬಲು ಬೇಗನೇ ಕದಳಿಯತ್ತ ಹೋದಳು. ನಂತರ ಕಲ್ಯಾಣ ಕ್ರಾಂತಿಯಾಯಿತು. ಅವರ ಸಂಕಲ್ಪ ಹಾಗೆಯೇ ಉಳಿಯಿತು. ಉಚಿತವಲ್ಲದಿದ್ದರೂ ಅಗತ್ಯವಿರುವ ಕಾರಣ ಈ ಉದಾಹರಣೆ ಕೊಡುತ್ತೇನೆ. ಕೊಲೆ, ಕಳ್ಳತನ ಮುಂತಾದ್ದು ಆದಾಗ ಪೋಲೀಸ್ ನಾಯಿಗಳನ್ನು ಕರೆಸುತ್ತಾರೆ. ಮನುಷ್ಯನ ಮೂಗು ಗ್ರಹಿಸಲಾರದ ವಾಸನೆಯನ್ನು ನಾಯಿಗಳು ಗ್ರಹಿಸಿ, ಕೊಲೆಗಾರನ ಜಾಡು ಹಿಡಿಯುತ್ತವೆ. ಈ ವಾಸನೆ ನಿಸರ್ಗದಲ್ಲಿರುವುದೆಂಬುದು ಇದರಿಂದ ಸಾಬೀತಾಗುತ್ತದೆಯಷ್ಟೆ. ಪಂಚೇಂದ್ರಿಯಗಳಿಗೆ ಸಿಕ್ಕುವ ಈ ವಾಸನೆ ಭೌತಿಕ. ಸಂಕಲ್ಪಗಳು ಭೌತಿಕವಲ್ಲ, ಆತ್ಮಿಕ, ಅಧ್ಯಾತ್ಮಿಕ, (psychic and spiritual) ಇವು ಶತಮಾನಗಳ ಕಾಲ ಉಳಿಯಬಲ್ಲವು. ಯಾರದ್ದಾದರೂ ಹೃದಯ–ಮನಗಳು ಟಿ. ವಿ. ಯ ಕಿರುತೆರೆಯಂತೆ ಕೆಲಸ ಮಾಡಿ, ಆ ಸಂಕಲ್ಪ ತರಂಗಗಳನ್ನು(psychic waves)ಗ್ರಹಿಸಿ, ಅಭಿವ್ಯಕ್ತಗೊಳಿಸುತ್ತವೆ. ಮಹಿಳಾ ಗುರುಪೀಠದ ಘೋಷಣೆಯ ಹಿಂದಿರುವ ಪ್ರೇರಣೆಯನ್ನೂ ನಾನು ಈ ದಿಕ್ಕಿನಲ್ಲೇ ಆಲೋಚಿಸುತ್ತಿರುವೆ. ಬಸವಾದಿ ಪ್ರಮಥರ ಸಂಕಲ್ಪ ತರಂಗಗಳು ಆಧ್ಯಾತ್ಮಿಕ ಜಗತ್ತಿನಲ್ಲಿ ಸುಳಿಯುತ್ತಿದ್ದು, ಕಲ್ಯಾಣದಲ್ಲಿ ಇದ್ದ ನನ್ನ ಹೃದಯವು ತಟ್ಟನೆ ಗ್ರಹಿಸಿ ಮಾತನಾಡಿರ ಬಹುದು. ಆ ಘೋಷಣೆ ಬುದ್ಧಿಯಿಂದ ಆಲೋಚಿಸಿ ಮಾಡಿದುದಲ್ಲ ಇದ್ದಕ್ಕಿದ್ದಂತೆಯೇ ಹೊರಹೊಮ್ಮಿದುದು.

ನಮ್ಮ ಹೃದಯ–ಮನ–ಬುದ್ಧಿಗಳನ್ನು ಗುರು[ಬಸವಣ್ಣ]–ಲಿಂಗ[ಜಗತ್ಕರ್ತ]–ಜಂಗಮ[ಶರಣರು] ಕ್ಕೆ ಅರ್ಪಿಸಿರುವುದರಿಂದ ಅವುಗಳ ಮೇಲೆ ಅವರು ಏನನ್ನೋ ಬರೆಯುತ್ತಾರೆ. ಅಂತರಂಗದಲ್ಲಿ ಏನೋ ತಟ್ಟನೆ ಹೊಳೆಯುತ್ತದೆ; ಮಾತು ಮತ್ತು

ಕೃತಿಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. **ಬೀಜಗಳು ಮೂಲ ಗಿಡದಿಂದ ಸಿಡಿದು ಎಲ್ಲೆಲ್ಲೋ ಬಿದ್ದಿರುತ್ತವೆ. ನಮ್ಮ ಹೊರಗಣ್ಣಿಗೆ ಕಾಣುವುದಿಲ್ಲ ಸಹ. ಆದರೆ ಮಳೆಯು ಬೀಳುತ್ತಲೇ ಮೊಳಕೆ ಒಡೆಯುತ್ತವೆ-** ಇಲ್ಲಿಯವರೆಗೆ ಇವು ಎಲ್ಲಿದ್ದವು ಎಂದು ಆಶ್ಚರ್ಯವಾಗುತ್ತದೆ. ಹಾಗೆಯೇ ಬಸವಾದಿ ಶರಣರ ಸತ್ಸಂಕಲ್ಪ ಕೂಡ. ಅಂದಿನ ಸಮಾಜ ಇನ್ನೂ ಗ್ರಹಿಸುವ ಮಟ್ಟಕ್ಕೆ ಏರಿರದ್ದರಿಂದ, ಆ ಸತ್ಸಂಕಲ್ಪಗಳು ಸುಪ್ತವಾಗಿದ್ದು ಈಗ ಒಂದೊಂದೇ ಮೊಳಕೆ ಒಡೆಯುತ್ತಿವೆ. ನಮ್ಮ ಕೆಲಸ ಕೇವಲ ವಾತಾವರಣವನ್ನು ಪಕ್ವಗೊಳಿಸುವುದು ಮಾತ್ರ.

ಶರಣ ಬಂಧುಗಳೇ, ನಾವೇನೋ ಒಂದು ಹೊಸ ಪಥವನ್ನು ನಿರ್ಮಾಣ ಮಾಡುತ್ತಿದ್ದೇವೆಂದು ತಾವು ತಪ್ಪುಭಾವಿಸಬೇಡಿ, ಅಥವಾ ಹೆಚ್ಚಾಗಿ ತಿಳಿದು ಕೊಂಡಾಡಲೂ ಬೇಡಿ. ಅಪ್ಪ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಹಾಕಿ ಕೊಟ್ಟುದು ರಾಜಪಥ. ಅದಕ್ಕಿಂತಲೂ ಉತ್ತಮವಾದುದನ್ನು ರಚನೆ ಮಾಡಲು ನಮಗೆ ಸಾಧ್ಯವಿಲ್ಲ. ಆದರಿಷ್ಟೆ, ಉತ್ತಮ ಪಥದಲ್ಲಿ ಜಾತಿವಾದಿಗಳು ಜಾತೀಯವಾದದ ಕಲ್ಲುಗುಂಡುಗಳನ್ನು ಹರಡಿದ್ದಾರೆ: ಮೂಢನಂಬಿಕೆಯ ಜಾಲಿಗಿಡ ನಟ್ಟಿದ್ದಾರೆ; ಕಂದಾಚಾರಗಳ ಗುಂಡಿ ತೋಡಿದ್ದಾರೆ. ವಚನಗಳೆಂಬ ಮೈಲಿಗಲ್ಲುಗಳನ್ನು ದಾರಿತಪ್ಪಿಸಲೆಂದೇ ಸಮಾಜದಿಂದ ಕಿತ್ತುಹಾಕಿದ್ದಾರೆ. ಇವನ್ನೆಲ್ಲ ತೆಗೆದು, ಆದಿ ಶರಣರ ವಚನಗಳೆಂಬ ಮೈಲಿಗಲ್ಲುಗಳನ್ನು ಸರಿಯಾಗಿ ನೆಟ್ಟು ಮುನ್ನಡೆಯಲು ಜನರಿಗೆ ನೆರವು ನೀಡುತ್ತಿದ್ದೇವೆ ಮಾತ್ರ. ನಾವು ಕೇವಲ ನಲ್ಲಿಗಳಂತೆ, ಬರುವ ನೀರು ಆದಿ ಶರಣರದು. ವೀಣೆ ಚೆನ್ನಾಗಿ ನುಡಿದರೆ ಅಭಿನಂದಿಸುವುದು ವೈಣಿಕನನ್ನು ವೀಣೆಯನ್ನಲ್ಲ. ಹಾಗೆಯೇ ಈ ಗುರುಪೀಠದಿಂದ, ನಮ್ಮಿಂದ ಉತ್ತಮ ಕಾರ್ಯಗಳಾದರೆ ಅದಕ್ಕೆ ಮೂಲಕಾರಣ ಹಿಂದಿರುವ ಸೂತ್ರಧಾರಕ ಶಕ್ತಿ ಗುರು ಬಸವಣ್ಣನವರು.

ಪ್ರಸಾರ ಗೋಪುರ

ತಮಗೆಲ್ಲ ತಿಳಿದಿದೆ. ಆಕಾಶವಾಣಿ–ದೂರದರ್ಶನಗಳವರು ತಾವು ಪ್ರಸಾರ ಮಾಡಬೇಕಾದ ವಿಷಯಗಳನ್ನು ಧ್ವನಿಮುದ್ರಿಸಿಕೊಳ್ಳುವರು, ಚಿತ್ರೀಕರಿಸಿಕೊಳ್ಳುವರು. ನಂತರ ಪ್ರಸಾರ ಗೋಪುರದ ಮೂಲಕ ಬಿತ್ತರಿಸುವರು. ಬಿತ್ತರಿಸುವ ಎತ್ತರದ ಸ್ಥಳದಲ್ಲಿ ಯಾವುದೂ ರೆಕಾರ್ಡ್ ಆಗದು. ಆದರೆ ರೆಕಾರ್ಡ್ ಆದುದನ್ನು ಪ್ರಸಾರ ಮಾಡಲು ಎತ್ತರದ ಒಂದು ಕೇಂದ್ರ ಬೇಕಾಗುವುದು. ಹಾಗೆ ಪ್ರಸರಣಾ ಕಾರ್ಯಮಾಡಲು ಬಸವ ಧರ್ಮದ ಮಹಾಜಗದ್ಗುರು ಪೀಠವು ಇಂದು ಸ್ಥಾಪನೆಯಾಗುತ್ತಿದೆ. ರೆಕಾರ್ಡ್ ಆಗಿರುವುದೆಲ್ಲ ಅನುಭವ ಮಂಟಪವೆಂಬ ಮಹಾಮಂದಿರದಲ್ಲಿ; ಬಸವಾದಿ ಪ್ರಮಥರಿಂದಲೇ. ನಮ್ಮದು ಕೇವಲ ಬಿತ್ತರಣಾ ಕೆಲಸ.

ಷಟ್ ಲಾಂಛನಗಳು

ಯಾವುದೋ ಒಂದು ಸ್ವಾರ್ಥದಿಂದಲೋ ಅಥವಾ ಅಧಿಕಾರದ ಬಯಕೆಯಿಂದಲೋ, ಪಲ್ಲಕ್ಕಿ-ವೈಭವಗಳ ಆಮಿಷದಿಂದಲೋ ಈ ಸ್ಥಾನದ ನಿರ್ಮಾಣವಾಗುತ್ತಿದೆ

Digitalized by e-Sahithya Documentation Forum
Sponsored by Sarayu Foundation Trust

ಎಂದು ಯಾರೂ ಭಾವಿಸಬೇಕಿಲ್ಲ. ಸತ್ತ ಮೇಲೆ ನಾಲ್ಕಾರು ಜನರ ಹೆಗಲ ಮೇಲೆ ಸಾಗಬಹುದೇ ವಿನಾ ಜೀವಂತವಿದ್ದಾಗಲ್ಲ. ಆದ್ದರಿಂದ ಜೀವಂತವಿದ್ದಾಗಲೇ ಇನ್ನೊಬ್ಬರ ಮೇಲೆ ಹತ್ತಿ ಹೊರಿಸಿಕೊಂಡು ಹೋಗುವ ಅಡ್ಡಪಲ್ಲಕ್ಕಿ ಮುಂತಾದುವುಗಳ ಬಳಕೆಯನ್ನು ಇಲ್ಲಿ ನಿಷೇಧಿಸಲಾಗಿದೆ. ಕೇವಲ ವಚನ ವಾಙ್ಮಯವನ್ನು ಗೌರವ ಪೂರ್ವಕವಾಗಿ ಹೊತ್ತುತರಲು ಪಲ್ಲಕ್ಕಿಯನ್ನು ಬಳಸಬಹುದಾಗಿದೆ. ಇದೀಗ ನಾನು ಬರೆಯುತ್ತಿರುವ ಪ್ರಸ್ತಾವನೆಯಾಗಲೀ, ಪೂಜ್ಯ ಅಪ್ಪಾಜಿಯವರು ನೀಡಲಿರುವ ಸಂದೇಶವಾಗಲೀ, ಮುಂದಿನ ಪೀಠಾಧಿಕಾರಿಗಳಿಗೆ ಮಾರ್ಗದರ್ಶಕ ಕೈಪಿಡಿ. ಮುಂದಿನವರು ಉಲ್ಲಂಘನೆ ಮಾಡಿ ನಡೆದಲ್ಲಿ ಪ್ರಶ್ನಿಸುವ ಅಧಿಕಾರ ಬಸವ ಭಕ್ತರಿಗಿದೆ.

ಸಂಪ್ರದಾಯವಾದಿಗಳು, ಯಥಾಸ್ಥಿತಿವಾದವನ್ನು ಕಾಯ್ದುಕೊಂಡು ಬರುವೆನೆಂಬ ಮಠಾಧಿಪತಿಗಳು ಅಡ್ಡಪಲ್ಲಕ್ಕಿ ಏರಿದರೆ ಎಲ್ಲರ ಗುರುತ್ವದ ಹಕ್ಕಿಗಾಗಿ ಚಳುವಳಿ ಮಾಡುತ್ತಿರುವ ನಮ್ಮಂಥವರು,ಅಡ್ಡಪಲ್ಲಕ್ಕಿ ಆಡಂಬರ ಅನುಸರಿಸಬೇಕಾಗಿಲ್ಲ. ಯಾರಾದರೂ ಜಾಲಿಕಂಟಿ ನೆಟ್ಟರೆ, ನಾವೂ ನೆಡಬೇಕಾಗಿಲ್ಲ. ಪ್ರತಿಸ್ಪರ್ಧಿಗಳಾಗಿ ಯಥಾಸ್ಥಿತಿವಾದಿಗಳು-ಪ್ರಗತಿಪರ ಚಿಂತಕರು ಉಭಯತರೂ ಜಾಲಿಕಂಟಿ ನೆಡುತ್ತಾ ಹೋದರೆ ಎಲ್ಲವೂ ಮುಳ್ಳಿನಮರವೇ ಆಗುವುದಷ್ಟೆ ? "ಹಿಂದಿನಿಂದಲೂ ನಮ್ಮ ಮಠದ ಸಂಪ್ರದಾಯದಲ್ಲಿ ಇದು ಸಾಗಿಬಂದಿದೆ" ಎಂದು ವಾದಿಸುವ ಕೆಲವರಿರಬಹುದು. ಇದು ಹುರುಳಿಲ್ಲದ ವಾದ, ವೈಚಾರಿಕ, ಪರಿಸರ, ಜನರ ದೃಷ್ಟಿಕೋನ ಬದಲಾದಂತೆ ರೂಢಿಗೊಂಡು ಬಂದಿದ್ದರೂ, ಇಂದು ಮಹತ್ವ ಕಳೆದುಕೊಂಡಿರುವ ಆಚರಣೆಗಳನ್ನು ಬಿಟ್ಟುಬಿಡುವುದು ಅಗತ್ಯ. ಹಿಂದಿನ ಮಠಾಧಿಪತಿಗಳೆಲ್ಲರೂ ಕುದುರೆ ಮೇಲೆ ಎತ್ತಿನಗಾಡಿಗಳಲ್ಲಿ ಓಡಾಡುತ್ತಿರುವಾಗ ಈಗಿನವರು ಆ ರೂಢಿ ಬಿಟ್ಟು ಕಾರುಗಳಲ್ಲಿ ಸಂಚರಿಸುವುದಿಲ್ಲವೆ ?

ಪಾದಯಾತ್ರೆಯ ಸಮಯದಲ್ಲಿ ಪೀಠಾರೋಹಣ ಸಮಯದಲ್ಲಿ ಮದ್ದು (ಪಟಾಕಿ) ಸುಡುವ ಬಗ್ಗೆ ಕೆಲವು ಶರಣರು ಸೂಚಿಸಿದರು. ಆಗ ನಾನು ಒಪ್ಪಿಗೆ ನೀಡಲಿಲ್ಲ, ಏಕೆಂದರೆ, ಪಟಾಕಿ ಸುಡುವುದು ಹಣದ ಅಪವ್ಯಯ. ಹವಾಮಾಲಿನ್ಯ ಉಂಟುಮಾಡಿ ಅನೇಕರ ಉಸಿರಾಟಕ್ಕೆ ತೊಂದರೆ ಉಂಟುಮಾಡುತ್ತದೆ. ಪಟಾಕಿ ಸದ್ದಿನಿಂದ ಜನರ, ಸನಿಹದಲ್ಲಿರುವ ಪ್ರಾಣಿಗಳು ಬೆದರುವುದುಂಟು. ಕಾಲಾನಂತರದಲ್ಲಿ ವಿಚಾರ ವೈಭವ, ವಿದ್ಯುತ್ತಿನಿಂದ ಜನ ಸಮೂಹವನ್ನು ಆಕರ್ಷಿಸಿ, ಶೋಧೆ ಮಾಡಿದವರು ಬರೀ ಮದ್ದು ಸುಡುವ ಕಾರ್ಯಕ್ರಮವನ್ನೇ ಮುಖ್ಯವಾಗಿ ಮಾಡಿಕೊಳ್ಳಬಹುದು. ಆದ್ದರಿಂದ ಇದು ಬೇಡವೇ ಬೇಡ ಎಂದು ಹೇಳಿದೆನು.

ಬಸವ ಧರ್ಮದ ಮಹಾಜಗದ್ಗುರು ಪೀಠದ ಸ್ಥಾಪನೆಯ ಇಂದು 6 ಲಾಂಛನಗಳನ್ನು ಸಾಂಕೇತಿಕವಾಗಿ ಪ್ರಥಮ ಪೀಠಾಧಿಕಾರಿಗಳಿಗೆ ಸಮರ್ಪಿಸಲಾಗುತ್ತಿದೆ. ಪೂಜ್ಯರು ತಮ್ಮ ಉತ್ತರಾಧಿಕಾರಿಗಳಿಗೆ ಇವನ್ನು ಕೊಡುವುದರ ಮೂಲಕ ಅನುಗ್ರಹಿಸುವರು.

(81ನೆ ಪುಟಕ್ಕೆ ಮುಂದುವರಿದಿದೆ)

ವಚನವಾಙ್ಮಯ ಗುಡಿಯ ಜಂಗಮಮೂರ್ತಿ !

—ಲೇಖಕರು : ಶ್ರೀರಾಮಲಿಂಗಸ್ವಾಮಿಗಳು
ವಿಜಾಪುರ

ಕಳ್ಳನಲಿ ಕೂಡಲಸಂಗಮದೇವನನ್ನು ಕಂಡವರೆಲ್ಲರೂ
ಬಸವಣ್ಣನವರಾಗುವರೇನಯ್ಯ ?

ದಿಗಂಬರಿಯಾಗಿ ಕದಳೀಬನಕ್ಕೆ ಹೋದವರೆಲ್ಲರೂ
ಅಕ್ಕಮಹಾದೇವಿಯಾಗುವರೇನಯ್ಯ ?

ಕೈಹಿಡಿದ ಹೆಂಡತಿಯನ್ನು ದೇವಿ ಎಂದು ಪೂಜಿಸಿದವರೆಲ್ಲರೂ
ರಾಮಕೃಷ್ಣ ಪರಮಹಂಸರಾಗುವರೇನಯ್ಯಾ ?

ಪರದೇಶಕ್ಕೆ ಹೋಗಿ ಧರ್ಮಪ್ರಚಾರ ಮಾಡಿಬಂದವರೆಲ್ಲರೂ
ಸ್ವಾಮಿ ವಿವೇಕಾನಂದರಾಗುವರೇನಯ್ಯಾ ?

ವೃತ್ತಿಯನ್ನು ಕೈಬಿಟ್ಟು ವಚನ ಸಾಹಿತ್ಯ ಶೋಧನೆಯಲ್ಲಿ
ಪ್ರವೃತ್ತರಾದವರೆಲ್ಲರೂ ವಚನ ಪಿತಾಮಹರಾಗುವರೇನಯ್ಯ ?

ವಿಶ್ವಧರ್ಮ ಪ್ರವಚನ ಮಾಡುವವರೆಲ್ಲರೂ
ಲಿಂಗಾನಂದಸ್ವಾಮಿಗಳಾಗುವರೇನಯ್ಯಾ ?

ಸ್ವತಂತ್ರಧೀರಬಸವೇಶ್ವರಾ :

—(ಪ್ರೇರಣೆ : ವಚನೋದ್ಯಾನ)

ವಿಶ್ವಧರ್ಮ ಪ್ರವಚನದ ಮೂಲಕ ಕರ್ನಾಟಕದ ಜನಜೀವನದಲ್ಲಿ ನವೋದಯದ ನಾಂದಿಯನ್ನು ಹಾಡಿದ ಯುಗಪುರುಷರು. ಪುರಾಣ ಕಿರ್ತನೆಗಳನ್ನು ಕೇಳಿ ಕೇಳಿ ಮೂಢನಂಬಿಕೆ. ಮೂಢಾಚರಣೆಗಳಿಂದ ಜಿಡ್ಡುಗಟ್ಟಿದ ಸಮಾಜವನ್ನು ಪ್ರವಚನದ ನೂತನ ಸಾಬೂನಿನಿಂದ ತೊಳೆದು ಪರಿಶುದ್ಧಗೊಳಿಸಿದವರು. ಲಕ್ಷ ಲಕ್ಷ ಜನ ಭಾವುಕ ಭಕ್ತರ ಹೃದಯ ಲತೆಗಳಲ್ಲಿ ಭಕ್ತಿ–ಪ್ರೇಮದ ಹೂಗಳನ್ನು ಅರಳಿಸುವ ತಂಗಾಳಿಯಾಗಿ ಸುಳಿದವರು, ಅಲ್ಲಿಯವರೆಗೆ ಈ ಧರ್ಮವನ್ನು ತಮ್ಮ ಸೊತ್ತನ್ನಾಗಿ ಮಾಡಿಕೊಂಡು ಮುಗ್ಧಭಾವುಕ ಭಕ್ತರ ಮೂಢನಂಬಿಕೆ ಮೂಢಾಚರಣೆಗಳನ್ನೇ ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡಿರುವ ಸಂಪ್ರದಾಯ

Digitalized by e-Sahithya Documentation Forum
Sponsored by Sarayu Foundation Trust

ವಾದಿ ಪಟ್ಟಭದ್ರಹಿತಾಸಕ್ತಿಗಳ ಪಾಲಿಗೆ ಚಂಡಮಾರುತವಾಗಿ ಪರಿಣಮಿಸಿದವರು, ಲಿಂಗವಂತ ಧರ್ಮದಲ್ಲಿ ಸ್ಫೂರ್ತಿಯನ್ನು ನವಚೇತನವನ್ನು ತುಂಬಿನಿಂದ ಪುಣ್ಯ ಪುರುಷರು ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳವರು.

ಹನ್ನೆರಡು ವರುಷಗಳ ಹಿಂದಿನ ಮಾತು. ನಾವು ನಾಲ್ಕೈದು ಜನ ಸನ್ಯಾಸಿಗಳು ಕೂಡಿಕೊಂಡು ಮೈಸೂರು ರಸ್ತೆಯ ಶ್ರೀ ಸಿದ್ಧಾರೂಢರ ಮಠದಿಂದ ರಾಜಾಜಿನಗರದ ಬಸವಮಂಟಪಕ್ಕೆ ಹೋಗಿದ್ದೆವು. ಅಂದು ಭಾನುವಾರವಾದುದರಿಂದ ಪೂಜ್ಯ ಶ್ರೀ ಮಾತಾಜಿಯವರ ಪ್ರವಚನ ಕೇಳುವ ಉದ್ದೇಶ ನಮ್ಮದಾಗಿತ್ತು. ಆಗ ಪೂಜ್ಯ ಅಪ್ಪಾಜಿಯವರ ದರ್ಶನವಾಯಿತು. "ನೀವು ಯಾರು ? ಎಲ್ಲಿಂದ ಬಂದಿರುವಿರಿ ?" ಎಂದು ಕೇಳಿದ್ದಕ್ಕೆ—"ನಾವು ಶ್ರೀ ಸಿದ್ಧಾರೂಢರ ಮಠದವರು. ಸಂಸ್ಕೃತದ ಹೆಚ್ಚಿನ ವ್ಯಾಸಂಗಕ್ಕಾಗಿ ಬೆಂಗಳೂರಿಗೆ ಬಂದಿದ್ದೇವೆ" ಎಂದು ಹೇಳಿದೆವು. ಆಗ ಅಪ್ಪಾಜಿಯವರು—"ನೀವು ಇಪ್ಪತ್ತು ವರ್ಷ ಸಂಸ್ಕೃತ ಕಲಿತರೂ ಸಮಾಜಕ್ಕೆ ಏನೂ ಪ್ರಯೋಜನವಿಲ್ಲ. ಜನ ಸಾಮಾನ್ಯರನ್ನು ತಲ್ಪುವ, ಜಾಗ್ರತಿಸುವ ವಚನ ವಾಙ್ಮಯ ಅಭ್ಯಾಸ ಮಾಡಿರಿ." ಎಂದು ಖಡಾ ಖಂಡಿತವಾಗಿಯೆ ಹೇಳಿದರು. ಅವರ ಮುಚ್ಚು ಮರೆಯಿಲ್ಲದ ಬಿಚ್ಚು ಹೃದಯದ ಮಾತುಗಳು ನಮ್ಮನ್ನು ಚಕಿತಗೊಳಿಸಿದವಷ್ಟೇ ಅಲ್ಲ ಅಂತರ್ಮುಖರನ್ನಾಗಿ ಮಾಡಿದವು. ದೂರಾಲೋಚನೆಗೆ ಅವಕಾಶ ಕಲ್ಪಿಸಿ ಕೊಟ್ಟವು. ಆಧ್ಯಾತ್ಮಿಕ ತೃಷೆಯನ್ನು ಹಿಂಗಿಸಿಕೊಳ್ಳಲು ಅನಿವಾರ್ಯವಾಗಿ ಸಂಸ್ಕೃತ-ಪಾಂಡಿತ್ಯದ ಉಪ್ಪು ನೀರನ್ನು ಕುಡಿಯಲು ಹೊರಟ ನಮಗೆ ಅನುಭಾವದ ತರಂಗಿಣಿಯಾದ ವಚನ ಸಾಹಿತ್ಯದ ಬಸವ ಗಂಗೋತ್ರಿಯು ಪ್ರಾಪ್ತವಾದಂತಾಯಿತು. ವಚನ ವಾಙ್ಮಯ ಗುಡಿಯ (ಬಸವ ಮಂಟಪದ) ಮಹಾಜಂಗಮಮೂರ್ತಿಯ ಪ್ರಥಮ ದರ್ಶನಭಾಗ್ಯ ನಮಗಾಯಿತು.

ಹದಿನೈದು ವರುಷಗಳ ಹಿಂದಿನ ಮಾತು. ನಾವು ಹುಮನಾಬಾದ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತ ನಿಂತಿರುವಾಗ ಬೀದರದ ಶಿಕ್ಷಕರ ತರಬೇತಿ ಶಾಲೆಯ ಹಿಂದಿ ಶಿಕ್ಷಕರೊಬ್ಬರ ಪರಿಚಯವಾಯಿತು. ಇಂಡಿ ತಾಲೂಕಿನವರಾದ ಅವರು ಒಂದು ಮಾತು ಹೇಳಿದರು—"ಇಂದಿನ ಸಿನೇಮಾಮಯ ಜಗತ್ತಿನಲ್ಲಿ ದೇವರು–ಧರ್ಮವನ್ನು ನಂಬುವವರೇ ಇಲ್ಲವಾಗಿದ್ದಾರೆ ಐದಾರು ವರುಷಗಳ ಹಿಂದೆ ಶ್ರೀ ಲಿಂಗಾನಂದ ಸ್ವಾಮಿಗಳೆಂಬವರು ಈ ಭಾಗದಲ್ಲೆಲ್ಲ ಪಾದಯಾತ್ರೆ ಮಾಡಿ ಧರ್ಮಜಾಗ್ರತಿ ಮಾಡಿದ್ದರ ಪರಿಣಾಮವಾಗಿ ಲಿಂಗಾಯತರೆನ್ನುವವರ ಹಣೆಯ ಮೇಲೆ ವಿಭೂತಿಯನ್ನಾದರೂ ಕಾಣುವ ಭಾಗ್ಯ ನಮ್ಮದಾಗಿದೆ," ಎಂದರು. ವಿಶ್ವಗುರು ಬಸವಣ್ಣನವರ ಅಷ್ಟಶತಮಾನೋತ್ಸವದ ಸಂದರ್ಭದಲ್ಲಿ ಪೂಜ್ಯ ಶ್ರೀಗಳು ಕಲ್ಯಾಣ ನಾಡಿನ ಪುಣ್ಯಭೂಮಿಯಾದ ಬೀದರ ಜಿಲ್ಲೆಯ ತುಂಬ ಪಾದಯಾತ್ರೆ ಮಾಡಿ ಧರ್ಮ ಜಾಗ್ರತಿ ಮಾಡಿದ್ದರು ಎಂಬುದು ನಂತರ ತಿಳಿದುಬಂದಿತು. ಇಂಥ ಪುಣ್ಯಪುರುಷ

ಜಂಗಮಯೋಗಿಯ ದರ್ಶನಭಾಗ್ಯ ಎಂದು ಒದಗಿಬಂದೀತೋ ಎಂಬ ಮನೋರಥವು ಮೂರು ವರುಷಗಳ ನಂತರ ಈಡೇರಿತ್ತು.

"ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ ?
ಪರಮಾತ್ಮಾ ! ಎನಗೆಯೂ ಶ್ರೀಗುರು ಲಿಂಗಾನಂದ ಸ್ವಾಮಿಗಳವರಿಗೂ
ಎತ್ತಣಿಂದೆತ್ತ ಸಂಬಂಧವಯ್ಯಾ ?

ನಮಗೂ ಪೂಜ್ಯ ಅಪ್ಪಾಜಿಯವರಿಗೂ ಯಾವ ಋಣ ಸಂಬಂಧವಿರಬಹುದು ?

ಜಾತಿ–ಕುಲ ಸಂಬಂಧವೊ ? ರಕ್ತಸಂಬಂಧವೊ ? ಉಂಡ ಅನ್ನದ ಅಥವಾ ಕೊಟ್ಟ ಹಣದ ಋಣ ಸಂಬಂಧವೊ ? ಇವಾವುವೂ ಅಲ್ಲ. ಇದು ಭಕ್ತಿ–ವಿರಕ್ತಿಗಳ ಸಂಬಂಧವಾಗಿದೆ. ಮೂವತ್ತು ವರುಷಗಳ ಹಿಂದಿನ ಮಾತು. ನಾವಿನ್ನೂ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು. ಆಗ ನಮ್ಮೂರಿಗೆ ಒಂದು ತಿಂಗಳಕಾಲ ಅಕ್ಕಮಹಾದೇವಿಯ ಪ್ರವಚನ ಹೇಳಲು ಸ್ವಾಮಿಗಳೊಬ್ಬರು ಬಂದಿದ್ದರು. ಅವರನ್ನು ಕಂಡಾಗ ಸ್ವಾಮಿ ವಿವೇಕಾನಂದರನ್ನು ಕಂಡಷ್ಟೇ ಸಂತೋಷವಾಯಿತು. ನಮಗೇನೂ ತಿಳಿಯುತ್ತಿರಲಿಲ್ಲವಾದರೂ ಅವರು ಹೇಳುವ ಕಥೆಗಳನ್ನಾದರೂ ಕೇಳುವ ಉದ್ದೇಶದಿಂದ ತಪ್ಪದೆ ಪ್ರತಿದಿನ ಪ್ರವಚನಕ್ಕೆ ಹೋಗುತ್ತಿದ್ದೆವು. ಆದರೆ ಅವರು ಬೇರೆ ಯಾರು ಅಲ್ಲ, ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳವರೇ ಬಂದಿದ್ದರೆಂಬುದು ಕಾಲಾನಂತರದಲ್ಲಿ ತಿಳಿದು ಬಂದಿತು. ಆಗ ಕೇಳಿದ ಪ್ರವಚನದ ಭಕ್ತಿಯ ಋಣ ಸಂಬಂಧವೇ ನಮ್ಮನ್ನು ಬೆಂಗಳೂರಿನ ಬಸವ ಮಂಟಪದವರೆಗೆ ಕರೆದು ತಂದಿತ್ತು.

ಪ್ರತಿವರ್ಷದ ಶ್ರಾವಣ ಮಾಸದಲ್ಲಿ ಮಠ-ಮಂದಿರಗಳಲ್ಲಿ ಹಲವಾರು ಕೋಗಿಲೆಗಳು ಬಂದು ಕೂಗಿದ್ದುಂಟು. ಹಲವಾರು ಜನ ಸ್ವಾಮಿಗಳಿಂದ ಪುರಾಣ-ಕೀರ್ತನಗಳನ್ನು ಕೇಳಿದ್ದುಂಟು. ಆದರೆ ಆ ಯಾವ ಕೂಗೂ ನಮ್ಮನ್ನು ಎಚ್ಚರಿಸಲಿಲ್ಲವೆ ?

—ನವಿಲಾಡಿತೆಂದು ಕೆಂಬೂತ ಪುಕ್ಕವ ತೆರಕೊಂಡಂತೆ,
ಹುಲಿಯ ಬಣ್ಣಕ್ಕೆ ನರಿ ಮೈಯ ಸುಟ್ಟುಕೊಂಡಂತೆ,
ಕೋಗಿಲೆ ಸ್ವರಗೈದುದೆಂದು ಕಾಗೆಯೂ ಕರೆದಂತೆ,
ಲಿಂಗನಿಷ್ಠಾಂಗಿ ವಚನ ಹಾಡಿದರೆ ಒಪ್ಪುವೆನಲ್ಲದೆ,
ನಿಷ್ಠೆಹೀನರು ಓದಿ ಹಾಡಿದರೆ, ನಳ್ಳಿಗುಳ್ಳೆಯ ತಿಂದ ನರಿ,
ಹಳ್ಳದ ತಡಿಯಲ್ಲಿ ಬಳ್ಳಿಟ್ಟು ಬಗುಳಿದಂತೆ ಎಂದು
ಪಾಟಿಮಾಡೆನಯ್ಯ ! ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ ॥

"ಮಾಮರ ತಳಿತಲ್ಲದೆ ಸ್ವರಗೈವುದೇ ಕೋಗಿಲೆ ? ತಳಿತ ಮಾಮರವನ್ನು ಮೆಲುವ ಪಕ್ಷಿಗಳೆಲ್ಲ ಹಾಡುವ ಕೋಗಿಲೆಗಳಾಗಬಲ್ಲವೆ ? ಎಂದಿಗೂ ಸಾಧ್ಯವಿಲ್ಲ. ಅದರಂತೆ

Digitalized by e-Sahithya Documentation Forum
Sponsored by Sarayu Foundation Trust

ವಿಷಯುಗಳಲ್ಲಿ ತನ್ಮಯರಾಗಿ ಪರಮಾರ್ಥದ ಮಾತುಗಳನ್ನು ಆಡುವವರೆಲ್ಲರೂ ಅವಹೇಳನಕ್ಕೆ ಗುರಿಯಾಗುತ್ತಾರೆ. ಆಕಾಶದಲ್ಲಿ ಸ್ವಚ್ಛಂದವಾಗಿ ಹಾರಾಡುವ ಕೋಗಿಲೆಗೂ, ಭೂಮಿಯ ಮೇಲೆ ಬೆಳೆಯುವ ಮಾಮರಕ್ಕೂ ಸಂಬಂಧ ಕಲ್ಪಿಸಿದ್ದು ಯಾವುದು ? ವಸಂತಮಾಸೇ ಸಂಪ್ರಾಪ್ತೇ ವಸಂತಮಾಸದಲ್ಲಿ ಮಾತ್ರ ಮಾಮರದ ಚಿಗುರೆಲೆಯನ್ನು ಮೆಲಿದ ಕೋಗಿಲೆ ಹಾಡುತ್ತದೆ. ಅನುಭಾವಿ ಶರಣರಾದ ವಚನ ಪಿತಾಮಹ ಶ್ರೀ ಹಳಕಟ್ಟಿ ಫಕೀರಪ್ಪನವರಿಂದ ಹೊರಬಂದ ವಚನಸಾಹಿತ್ಯದ ತಳಿತ ಮಾಮರವನ್ನು ಮೆಲಿದು, ಪ್ರವಚನ ಪಿತಾಮಹರೆನಿಸಿಕೊಂಡ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ ವಿಶ್ವಧರ್ಮ ಪ್ರವಚನದ ಕೂಗನ್ನು ಕೇಳಿ ಸಂಪ್ರದಾಯದ ಕಾಗೆಯ ಗೂಡಿನಲ್ಲಿರುವ ಕೋಗಿಲೆಯ ಮರಿಗಳೆಲ್ಲ ಬಸವಧರ್ಮ ಪೀಠವನ್ನರಸಿಕೊಂಡು ಬರುವಂತಾಯಿತಲ್ಲವೆ ?

ಹಲವಾರು ಜನ ಮಠ-ಪೀಠಾಧಿಕಾರಿಗಳು ತಮ್ಮ ಕರ್ತವ್ಯವನ್ನು ಮರೆತುದರ ಫಲವಾಗಿ ಸಮಾಜದ ಜನರಲ್ಲಿ ಧರ್ಮ-ದೇವರ ಬಗೆಗಿರುವ ಶ್ರದ್ಧೆ-ನಿಷ್ಠೆಗಳು ಕಡಿಮೆಯಾಗುತ್ತಿವೆ, ಮಠಾಧಿಕಾರಿಗಳಿಗೇ ಧರ್ಮದ ಯಥಾರ್ಥ ಪರಿಚಯವಿಲ್ಲವಾಗಿದೆ ಕೆಲವರಿಗೆ ಪರಿಚಯವಿದ್ದರೂ ಅದನ್ನು ಪ್ರತಿಪಾದಿಸುವ ಸಾಮರ್ಥ್ಯವಿಲ್ಲ. ಇನ್ನೂ ಕೆಲವರಿಗೆ ಪ್ರತಿಪಾದಿಸುವ ಸಾಮರ್ಥ್ಯವಿದ್ದರೂ ಸಮಾಜದ ಪ್ರತಿಭಟನೆಯ ಭಯದಿಂದ ಸತ್ತ ಮೀನಾಗಿ ಸಂಪ್ರದಾಯದ ಪ್ರವಾಹದಲ್ಲಿಯೇ ತೇಲಿಹೋಗುತ್ತಿರುವರು. ಸಾವಿರಾರು ಮಠಗಳಿದ್ದರೂ ಸಾವಿರಾರು ಜನ ಗುರುಗಳಿದ್ದರೂ ಆಧ್ಯಾತ್ಮಿಕ ಹಸಿವೆಯ ತೃಪ್ತಿಗಾಗಿ ಲಿಂಗವಂತರು ಅನಿವಾರ್ಯವಾಗಿ ಅನ್ಯ ಸಂಪ್ರದಾಯಗಳಿಗೆ ಶರಣು ಹೋಗುತ್ತಿದ್ದಾರೆ. ಈ ಅನಿಷ್ಟ (ಕನಿಷ್ಟ) ಪರಂಪರೆಯನ್ನು ನಿವಾರಿಸುವ ಒಬ್ಬ ಸಮರ್ಥ ಧರ್ಮಕ್ರಾಂತಿಯ ಧೀರಯೋಗಿಯ ಬರುವಿಕೆಗಾಗಿ ಜನತೆ ಕಾತರಿಸುತ್ತಿತ್ತು.

ಒಮ್ಮೆ ಮನಗೂಳಿಯ ಸಂಗಮೇಶನೆಂಬ ಪದವೀಧರ ತರುಣನೊಬ್ಬ ಬೆಳಗಾಂವಿಯ ತನ್ನ ಅಧ್ಯಯನದ ಕೋಣೆಯಲ್ಲಿ ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕಾಗಿ ಆಲೋಚನಾ ಮಗ್ನನಾಗಿ ಕುಳಿತಿರುವಾಗ ಅವನ ದೇಹದಲ್ಲಿ ಒಮ್ಮೆಲೆ ಮಿಂಚಿನ ಸಂಚಾರವಾದಂತಾಯಿತು. ದೇಹ ಪುಳಕಿತವಾಗಿ ಆನಂದಾಶ್ರುಗಳು ಧಾರಾಕಾರವಾಗಿ ಸುರಿದವು. ಅದು ಬಸವಣ್ಣನವರ ಅನುಗ್ರಹವೆಂದೇ ತಿಳಿದು ಅಂದೇ ಧರ್ಮ ಜಾಗ್ರತಿಯ ಮಣಿಹವನ್ನು ಸ್ವೀಕರಿಸಿ ಶ್ರೀ ಲಿಂಗಾನಂದಸ್ವಾಮಿಗಳಾದರು. ಇವರ ಈ ಸತ್ಯಸಂಕಲ್ಪಕ್ಕೆ ವಿಜಾಪುರ ಜ್ಞಾನಯೋಗಾಶ್ರಮದ ಪ್ರವಚನಯೋಗಿ, ವೇದಾಂತ ಕೇಸರಿ ಪೂಜ್ಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ಅನುಗ್ರಹವೂ ಪ್ರಾಪ್ತವಾಯಿತು.

ವಿಶ್ವಧರ್ಮ ಪ್ರವಚನದ ಪಾಂಚಜನ್ಯ ಮೊಳಗಿತು. ಧರ್ಮಜ್ಞಾನಜ್ಯೋತಿಯನ್ನು ಹೊತ್ತುಕೊಂಡು ಬಸವ ಚೈತನ್ಯವಾಹಿನಿಯು ಹೊರಟಿತು. ಕಠಿಣವಾದ ಆಧ್ಯಾತ್ಮಿಕ ತತ್ತ್ವಗಳನ್ನು ಲೌಕಿಕ ದೃಷ್ಟಾಂತಗಳೊಂದಿಗೆ ಹೋಲಿಸಿ ಸುಲಭವಾಗಿ ಪ್ರತಿಯೊಬ್ಬರಿಗೂ ಮನಮುಟ್ಟುವಂತೆ ತಿಳಿಸಿ ಹೇಳುವ ಅವರ ಶೈಲಿಯೇ ಮನಸೆಳೆಯುವಂತಹದು. ಧಾರ್ಮಿಕ ಮತ್ತು ಸಾಮಾಜಿಕ ಜ್ವಲಂತ ಸಮಸ್ಯೆಗಳಿಗೆ ಅಷ್ಟೇ ಸಹಜವಾಗಿ ಸುಲಲಿತವಾಗಿ ಪರಿಹಾರವನ್ನು ಕಲ್ಪಿಸಿಕೊಡುವ ಅವರ ವೈಚಾರಿಕ ಪ್ರಜ್ಞೆಯು ಎಂಥವರನ್ನೂ ತಲೆದೂಗಿಸುವಂತಹದು. ಇಂದಿನ ಸಿನಿಮಾಮಯ ಜಗತ್ತಿನ ವೈಜ್ಞಾನಿಕ ಯುಗದಲ್ಲಿ. ಹಾಯ್‌ಬ್ರೀಡ್ ಯುಗದಲ್ಲಿ, ಕಲಬೆರಕೆಯ (ಬಲುಬೆರಕಿ) ಯುಗದಲ್ಲಿ ದೇವರು-ಧರ್ಮವೆಂದರೆ ಮೂಗು ಮುರಿಯುವ ಸುಶಿಕ್ಷಿತ ತರುಣರು ಮೊದಲು ಮಾಡಿಕೊಂಡು ಎಲ್ಲ ವರ್ಗದವರೂ ಎಲ್ಲ ವರ್ಣದವರೂ ಸಾವಿರ ಸಾವಿರ ಸಂಖ್ಯೆಯಲ್ಲಿ ಶ್ರೋತೃಗಳು ನೆರೆದು ಪ್ರವಚನ ಆಲಿಸತೊಡಗಿದರು. ಇವರ ಪ್ರವಚನ ಸಮಯದಲ್ಲಿ ಸಿನೆಮಾ-ನಾಟಕ ಮಂದಿರಗಳನ್ನೇ ಮುಚ್ಚುವಂಥ ವಿಪರೀತ ಪರಿಸ್ಥಿತಿ ಉಂಟಾದುದು ಆಯಾ ಊರಿನ ಇತಿಹಾಸದಲ್ಲಿ ಒಂದು ದಾಖಲೆಯಾಗಿ ಉಳಿಯಿತು. ಪ್ರವಚನ ಕ್ಷೇತ್ರದಲ್ಲಿ ತಮ್ಮದೇ ಒಂದು ವಿನೂತನ ಶೈಲಿಯಲ್ಲಿ ಅಪ್ರತಿಮ ಕ್ರಾಂತಿಯನ್ನುಂಟು ಮಾಡಿದ ಶ್ರೀಗಳು ವಚನ ಪಿತಾಮಹರೆಂಬ ಖ್ಯಾತಿಯನ್ನು ಪಡೆದರು.

ಒಂದು ಅಚ್ಚರಿಯ ಸಂಗತಿ ಏನೆಂದರೆ ಪೂಜ್ಯರು ಯಾವ ಧರ್ಮದಲ್ಲಿ ಜಾಗೃತಿಯನ್ನು ಮಾಡಹೊರಟರೋ ಆ ಧರ್ಮದ ಪ್ರತಿನಿಧಿಗಳೇ ಇವರ ಪ್ರವಚನಗಳಿಗೆ ಅಡ್ಡಿಯನ್ನುಂಟುಮಾಡತೊಡಗಿದರು. ಯಾಕೆಂದರೆ ವ್ಯಕ್ತಿನಿಷ್ಠೆಯಿಂದ ಸಂಪ್ರದಾಯವನ್ನೇ ಸತ್ಯವೆಂದು ನಂಬಿಕೊಂಡು ಬಂದಿರುವ ಇವರಿಗೆ ಪೂಜ್ಯರ ತತ್ತ್ವನಿಷ್ಠೆಯು ನುಂಗಲಾರದ ತುತ್ತಾಗಿ ಪರಿಣಮಿಸಿತು. ಇದ್ದದ್ದು ಇದ್ದಂತೆ ಹೇಳಿದರೆ ಎದ್ದು ಬಂದು ಗುದ್ದಿದಂತಾಗುವದು ಸಹಜವೆ, ಆರೇನು ಮಾಡುವರು ? ಆರಿಂದಲೇನಹುದು ? ಪೂರ್ವಜನ್ಮದ ಕರ್ಮ ವಿಧಿ ಬೆನ್ನುಬಿಡದು. ಊರಲ್ಲಿ ಪ್ರವಚನ ಪ್ರಾರಂಭವಾಗುವದು ಎಂದರೆ ಸಾವಿರಾರು ಜನರು ಸಂತೋಷ ಪಡುವರು, ಆದರೆ ಕೆಲವರಿಗಂತೂ ಒಳಗೊಳಗೇ ತಳಮಳವಾಗುತ್ತದೆ. ನೇರವಾಗಿ ಪ್ರತಿಭಟಿಸುವ ಸಾಮರ್ಥ್ಯವಿಲ್ಲದೆ ಕೆಲವರು ಪುಂಡ-ಪೋಕರಿಗಳನ್ನು ಮುಂದೆ ಮಾಡಿ ಇಲ್ಲದ ಆರೋಪಗಳ ಸರಮಾಲೆಯನ್ನೇ ಹೆಣೆದು ಅಪಪ್ರಚಾರ ಮಾಡುತ್ತಾರೆ. ಇದರಿಂದ ಜನರಲ್ಲಿ ಕುತೂಹಲ ಕೆರಳಿ ಏನಿದೆ ನೋಡಬೇಕೆಂದು ಎಂದೂ ಬಾರದ ಜನರೂ ಸಹ ಪ್ರವಚನ ಕೇಳಲು ಬರುತ್ತಾರೆ. ವೇದಿಕೆಯ ಮೇಲೆ ಧೀರ-ಗಂಭೀರ ಮುಖಮುದ್ರೆಯ ತೇಜೋಮೂರ್ತಿಯನ್ನು ಕಂಡು, ಹಾಸ್ಯದ ಹೊನಲಿನಲ್ಲಿ ತೇಲಿಸಿಕೊಂಡು ಹೋಗುವ ಅಸ್ಖಲಿತವಾದ ವಾಣಿಯನ್ನು ಕೇಳಿ, ಸರ್ವಧರ್ಮ ಸಮನ್ವಯತೆಯ ವಿಶಾಲ ಮನೋ

Digitalized by e-Sahithya Documentation Forum
Sponsored by Sarayu Foundation Trust

ಭಾವವನ್ನರಿತು ತಲೆದೂಗುತ್ತಾರೆ. ಪ್ರವಚನ ಮುಗಿಯುವದರಲ್ಲಿಯೆ ಶರಣಾಗತರಾಗಿರುತ್ತಾರೆ. ಅಪಪ್ರಚಾರ ಮಾಡಿದವರಿಗೇ ಮುಖಭಂಗವಾಗಿ ಪಶ್ಚಾತ್ತಾಪ ಪಡುವಂತಾಗುತ್ತದೆ, 'ಜೋ ಕುಛ್ ಹುವಾ ಅಚ್ಛಾ ಹುವಾ' (ಆಗುವದೆಲ್ಲವೂ ಒಳ್ಳೆಯದಕ್ಕಾಗಿಯೆ) ಎಂಬುದು ಪೂಜ್ಯ ಅಪ್ಪಾಜಿಯವರು ನಂಬಿದ ಒಂದು ಪರಿಹಾರ ಸೂತ್ರವಾಗಿದೆ.

ಇವರನ್ನು ಪ್ರವಚನಕ್ಕೆ ಯಾರು ಕರೆಸುತ್ತಾರೆ ? ಕರೆಯದೇ ಬಂದುದ ಹೇಳದೇ ಹೋದುದ ಆರೂ ಅರಿಯರಲ್ಲ. ಇವರು ಕರೆಯಿಸಿಕೊಂಡು ಬರುವ ಅಭ್ಯಾಗತರಲ್ಲ. ತಿಥಿಮೀರಿ ಬರುವ ಅತಿಥಿಗಳು, ಧಾರ್ಮಿಕ ಕ್ಷೇತ್ರದಲ್ಲಿರುವ ಲೋಪ–ದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಕಿತ್ತೊಗೆಯಲು ಬರುವ ಭವರೋಗ ವೈದ್ಯರು, ಮೇಲಾಗಿ ಶಸ್ತ್ರ ವೈದ್ಯರು, ನ್ಯಾಯನಿಷ್ಠುರಿ ! ದಾಕ್ಷಿಣ್ಯಪರ ನಾನಲ್ಲ, ಲೋಕವಿರೋಧಿ ಶರಣನು ಯಾರಿಗೂ ಅಂಜುವವನಲ್ಲ, ಜನರಲ್ಲಿರುವ ಅಜ್ಞಾನದ ಬಗ್ಗೆ ತಪ್ಪು ತಿಳುವಳಿಕೆಯ ಬಗ್ಗೆ ಇವರಿಗೆ ದಯೆ ಇದ್ದಿತೇ ಹೊರತು ದಾಕ್ಷಿಣ್ಯವಿರಲಿಲ್ಲ. ಸಮಾಜದಲ್ಲಿಯ ಲೋಪ-ದೋಷ (ಮೂಢನಂಬಿಕೆ) ಗಳನ್ನೇ ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡಿರುವ ಮಠಗಳಲ್ಲಿರುವ ಶಸ್ತ್ರವೈದ್ಯರು ವಿಶ್ವಧರ್ಮ ಪ್ರವಚನದ ಶಸ್ತ್ರಚಿಕಿತ್ಸೆಯಿಂದ ರೋಗಗಳೇ ಇಲ್ಲವಾದರೆ ನಮ್ಮ ಗತಿ ಏನು ? ಎಂದು ಕಳವಳಗೊಂಡರು. ಒಂದಾನೊಂದು ಕಾಲದಲ್ಲಿ ಈ ಶಸ್ತ್ರವೈದ್ಯರಿಗೆ ಉಳಿದುಕೊಳ್ಳಲು ಒಳ್ಳೆಯ ಮನೆ ಸಿಗದಂತೆ, ಲಿಂಗವಂತರಾರೂ ಅವರಿಗೆ ಪ್ರಸಾದ ಕೊಡದಂತೆ ಎಚ್ಚರವಹಿಸಿದರು. ಆದರೂ ಇವರು ಬೇಸರಪಟ್ಟುಕೊಳ್ಳದೆ "ಆರು ಮುನಿದು ನಮ್ಮನೇನು ಮಾಡುವರು ? ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲದೆ ?" ಎಂಬ ಆತ್ಮವಿಶ್ವಾಸದಿಂದ ನೂರಾರು ರೂಪಾಯಿ ಹಣತೆತ್ತು ಮನೆ ಬಾಡಿಗೆ ಹಿಡಿದು, ಹಲವಾರು ಜನ ಸಾಧಕ-ಸೇವಕರ ಪ್ರಸಾದದ ವ್ಯವಸ್ಥೆಯನ್ನು ತಾವೇ ಮಾಡಿಸಿಕೊಳ್ಳತೊಡಗಿದರು. ವೇದಿಕೆ, ಧ್ವನಿವರ್ಧಕ. ವಿದ್ಯುತ್ ಸರಬರಾಜು, ಶ್ರೋತೃಗಳಿಗೆ ಕುಳಿತು ಕೇಳಲು ಹಾಸಿಗೆ ಮೊದಲಾದ ಸಕಲ ಸರಂಜಾಮು ಸಹಿತವಾಗಿ ವಿಶ್ವಧರ್ಮ ಪ್ರವಚನ ಒಂದು ಸರ್ಕಸ್ ಕಂಪನಿಯಾಗಿ ಪರಿವರ್ತನೆ ಹೊಂದಬೇಕಾಯಿತು. ಶ್ರೀಗಳಲ್ಲಿರುವ ಧೈರ್ಯ, ಆತ್ಮ ವಿಶ್ವಾಸ, ಧರ್ಮಪ್ರಚಾರದ ಬಗೆಗಿರುವ ಕಳಕಳಿ ಇವುಗಳನ್ನು ಕಂಡು ಜನರ ಮನಸ್ಸು ಕರಗಿತು. ಭಕ್ತಿಯಿಂದ ಇವರ ಪ್ರಸಾದಕ್ಕಾಗಿ ಅನ್ನಧಾನ್ಯ ಸಕಲ ಪಡಿಪದಾರ್ಥಗಳನ್ನು ತಂದುಕೊಡತೊಡಗಿದರು. ಅಷ್ಟೇ ಅಲ್ಲ ಆಧ್ಯಾತ್ಮಿಕ ಗ್ರಂಥಗಳ ಪ್ರಕಟಣೆಗಾಗಿ ಒಂದು ಮಾತೃಸಂಸ್ಥೆಯ ನಿರ್ಮಾಣಕ್ಕಾಗಿ, ಹಲವಾರು ಯೋಜನೆಗಳಿಗಾಗಿ ಸ್ವಯಂ ಪ್ರೇರಣೆಯಿಂದ ಕಾಣಿಕೆಯನ್ನು ಅರ್ಪಿಸತೊಡಗಿದರು.

ಶ್ರೀಗಳವರದು ಹೋರಾಟಮಯ ಜೀವನ. ಅವರು ಧರ್ಮಕ್ರಾಂತಿಯ ಧೀರಯೋಗಿಗಳು, 'ಸಾಧಿಸುತ್ತ ಜಯಿಸುವದೇ ಬಾಳುವುದರ ಸಾರ' ಎಂದು ನಂಬಿದ್ದ

ಅವರು ಈ ಹೋರಾಟದಲ್ಲಿ ತೃಪ್ತಿಯನ್ನು ಕಂಡಿದ್ದಾರೆ. 'ಆನೆ ನಡೆದುದೇ ಮಾರ್ಗ ಅಖಿಳರಿಗೆ' ಎಂಬಂತೆ ಸಂಪ್ರದಾಯ ಬದ್ಧವಾದ ಸಮಾಜದ ಗೊಂಡಾರಣ್ಯದಲ್ಲಿ ಆನೆಯಂತೆ ಗಂಭೀರವಾಗಿ ಸಂಚರಿಸಿ ಧರ್ಮಜಾಗೃತಿಯನ್ನು ಮಾಡಿದ್ದಾರೆ. ಈ ಸಮಾಜದಲ್ಲಿ ಸತ್ಯವನ್ನು ಪ್ರತಿಪಾದನೆ ಮಾಡುವದೆಂದರೆ ಹುಲಿಯ ಮೀಸೆಯ ಹಿಡಿದು ಉಯ್ಯಾಲೆಯಾಡಿದಂತೆ, ಹಾವಿನ ಹೆಡೆಯ ಕೊಂಡು ಕೆನ್ನೆಯ ತುರಿಸಿಕೊಂಡತೆ, ಸತ್ಯವನ್ನು ಪ್ರತಿಪಾದಿಸಲು ಹೊರಟ ಸಾಕ್ರೆಟೀಸನಿಗೆ ವಿಷಪ್ರಾಶನ ! ಗೆಲಿಲಿಯೋಗೆ ಗಲ್ಲು ಶಿಕ್ಷೆಯ ಭಯ, ಬಸವಣ್ಣನವರಿಗೆ ಗಡಿಪಾರು ಶಿಕ್ಷೆ, ಮಹಾತ್ಮ ಗಾಂಧೀಜಿಯವರಿಗೆ ಗುಂಡಿನೇಟು, 'ಸತ್ಯವನ್ನು ನುಡಿಯುವವರು ಜೈಲಿನಲ್ಲಿರಬೇಕು ಇಲ್ಲವೆ ಸ್ವರ್ಗದಲ್ಲಿರಬೇಕು', ಎಂದು ಪಾಶ್ಚಿಮಾತ್ಯ ತತ್ವಜ್ಞಾನಿಯೊಬ್ಬ ಹೇಳಿದ ಮಾತನ್ನು ಇಲ್ಲಿ ಸ್ಮರಿಸಬಹುದು, ಇದನ್ನು ಕಂಡೂ ಕೇಳಿಯೂ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟು ಸತ್ಯ ಧರ್ಮ ರಕ್ಷಣೆಯ ಪಣತೊಟ್ಟು ಹೊರಟವರು ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳವರು, ಶರಣಾಗತರಕ್ಷಕ ವಜ್ರಪಂಜರ ವಿಶ್ವಗುರು ಬಸವಣ್ಣನವರನ್ನೇ ನಂಬಿದವರು ಅವರು— "ಒಂದು ವೇಳೆ ಈ ಹೋರಾಟದಲ್ಲಿ ಮರಣ ಬಂದುದೇ ಆದರೆ ಅದೇ ನನ್ನ ಪಾಲಿಗೆ ಮಹಾನವಮಿಯಾದೀತು ! ಬೆಂಕಿಯನ್ನು ಬಟ್ಟೆಯಲ್ಲಿ ಬಚ್ಚಿಡಲು ಸಾಧ್ಯವೆ ? ಭೂಮಿಯಲ್ಲಿ ಬಿತ್ತಿದ ಬೀಜ ವ್ಯರ್ಥವಾಯಿತೆನಬೇಡ, ಅದನ್ನು ಮುಂದಿನ ಫಲದಲ್ಲಿ ಅರಸಿಕೊ, ನನ್ನ ಒಬ್ಬನ ಬಲಿದಾನದಿಂದ ನೂರಾರು ಜನ ಜಂಗಮರು ಸತ್ಯ ಧರ್ಮದ ರಕ್ಷಕರಾಗಿ ಬರಬೇಕಾಗುತ್ತದೆ." ಎಂಬ ಅದಮ್ಯ ಆತ್ಮವಿಶ್ವಾಸ ಅವರದಾಗಿತ್ತು, ಮರಣಕ್ಕೂ ಅಂಜದ ಇವರನ್ನು ಅಂಜಿಸುವ ಬೇರೊಂದು ಶಕ್ತಿ ಯಾವುದು ಇರಬಲ್ಲುದು ? ಇಂಥ ಒಂದೊಂದು ಮಾತನ್ನು ಕೇಳಿದಾಗ ಶ್ರೋತೃಗಳ ಮೈಯ್ಯಲ್ಲಿ ರೋಮಾಂಚನವಾಗುತ್ತದೆ, ಧರ್ಮಾಭಿಮಾನ ಪುಟಿದೇಳುತ್ತದೆ, ಈ ರೀತಿಯಾದ ವೀರವಾಣಿ, ತತ್ವನಿಷ್ಠೆ, ನಿರ್ಭೀತಿ ನಿಲವು ಇವುಗಳಿಂದ ಸಿಡಿಲು ಸನ್ಯಾಸಿಗಳಾಗಿ ಕರ್ನಾಟಕದ ವಿವೇಕಾನಂದರೆಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

ಸ್ವಭಾವತಃ ನಾಸ್ತಿಕರಾಗಿದ್ದು ಸಮತಾವಾದವನ್ನು ನಂಬಿದ್ದ ಪೂಜ್ಯ ಅಪ್ಪಾಜಿಯವರು ಈ ಧಾರ್ಮಿಕ ಕ್ಷೇತ್ರಕ್ಕೆ ದಾರಿತಪ್ಪಿ ಬಂದವರಲ್ಲ. ಯಾರದೋ ಅಭಿಪ್ರಾಯಕ್ಕೆ ಒಲಿದು ಬಂದವರಲ್ಲ. ವಿಶ್ವಗುರು ಬಸವಣ್ಣನವರೇ ಅವರನ್ನು ಆರಿಸಿಕೊಂಡರು ಎಂದರೆ ತಪ್ಪಾಗದು. ಬಸವಧರ್ಮದ ಪುನರುತ್ಥಾನದ ಮಣಿಹವನ್ನು ಹೊತ್ತುಕೊಂಡು ಬಂದವರು. ಅವರು ಮಾಡುವುದೆಲ್ಲವೂ ಬಸವ ಕಾರ್ಯವಾಯಿತು. ನುಡಿಯುವುದೆಲ್ಲವೂ ಬಸವ ವಾಣಿಯಾಯಿತು. ಬಸವಧರ್ಮವೇ ಅವರ ಜೀವನದ ಉಸಿರಾಯಿತು. ವಿಶ್ವಕಲ್ಯಾಣವೇ ಮುಖ್ಯ ಗುರಿಯಾಯಿತು. ವಿಶ್ವಧರ್ಮ ಪ್ರವಚನವೇ ಕಾಯಕವಾಯಿತು. ಅವರು ಕೈಕೊಂಡ ಪ್ರತಿಯೊಂದು ಕಾರ್ಯದ ಹಿಂದೆಯೂ ಶ್ರೀ ಬಸವ ಗುರುವಿನ ಅಭಯ ಹಸ್ತದ ಶ್ರೀ ರಕ್ಷೆಯಿರುವುದನ್ನು ಕಂಡಾಗ ಅವರ

Digitalized by e-Sahithya Documentation Forum
Sponsored by Sarayu Foundation Trust

ನಿಃಸ್ವಾರ್ಥ ಸೇವೆ, ತ್ಯಾಗ, ಪ್ರಾಮಾಣಿಕವಾದ ಕಳಕಳಿ ಮತ್ತು ಪರಿಶುದ್ಧವಾದ ನಡೆ-ನುಡಿಯ ಅರಿವಾಗದೆ ಇರದು. ವಿಜಾಪುರದ ಮನಗೂಳಿಯಿಂದ ಬೆಂಗಳೂರಿನ ವರೆಗೆ ಅವರ ಕಾರ್ಯಕ್ಷೇತ್ರವು ವ್ಯಾಪಕವಾಗಿದ್ದರೂ ಕೊನೆಗೆ ಕೂಡಲಸಂಗಮದಲ್ಲಿಯೆ ಬಸವಧರ್ಮ ಪೀಠವು ಸ್ಥಾಪನೆಯಾಗಬೇಕಾದರೆ ಕೂಡಲಸಂಗಮದ ಬಸವಮಂಟಪದಲ್ಲಿ ಅವರಿಗೆ ಶ್ರೀಗುರು ಬಸವಣ್ಣನವರ ಸಾಕ್ಷಾತ್ಕಾರವಾಗಿತ್ತು ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಇವೆಲ್ಲ ವಿದ್ಯಮಾನಗಳ ಮೇಲಿಂದ ವಿಶ್ವಗುರು ಬಸವಣ್ಣನವರು ತಮ್ಮ ಶಿವಯೋಗ ಸಾಧನೆಯಲ್ಲಿ ಲಿಂಗಾನಂದದ ನಿಬ್ಬೆರಗಿನಲ್ಲಿ ಕಂಡುಂಡ ಅನುಭಾವವೇ ಗಟ್ಟಿಗೊಂಡು ಪೂಜ್ಯ ಶ್ರೀ ಲಿಂಗಾನಂದಸ್ವಾಮಿಗಳವರ ರೂಪದಲ್ಲಿ ಬಂದಂತಾಗಿದೆ ಎಂದರೆ ಅತಿಶಯೋಕ್ತಿಯಾಗದು.

ವರುಷಗಳು ಗತಿಸಿದಂತೆ ಜನರಲ್ಲಿ ಧಾರ್ಮಿಕ ಪ್ರಜ್ಞೆಯು ಜಾಗೃತವಾಗ ತೊಡಗಿತು. ಸುಶಿಕ್ಷಿತ ವಿಚಾರವಂತ ತರುಣರು ಅಷ್ಟೇ ಅಲ್ಲ ಸಂಪ್ರದಾಯದ ವಿಷ ವೃಕ್ಷದ ನೆರಳಲ್ಲೇ ಹುಟ್ಟಿ ಬೆಳೆದವರೂ ಸಹ ಶರಣರ ತತ್ತ್ವನಿಷ್ಠೆಯನ್ನು ಒಪ್ಪಿಕೊಂಡು ಬಸವ ತತ್ತ್ವದ ಅನುಯಾಯಿಗಳಾಗತೊಡಗಿದರು. ಆಧ್ಯಾತ್ಮಿಕ ಹಸಿವೆಯುಳ್ಳ ಜನಸಾಮಾನ್ಯರು, ಧಾರ್ಮಿಕ ಸಂಸ್ಕಾರದಿಂದ ವಂಚಿತರಾದ ದಲಿತರು, ಹಿಂದುಳಿದವರು ಪೂಜ್ಯರಿಂದ ದೀಕ್ಷಾ ಸಂಸ್ಕಾರವನ್ನು ಪಡೆದು ಧನ್ಯರಾದರು. ಹೆಣ್ಣುಮಕ್ಕಳಲ್ಲಿಯೂ ಅಪೂರ್ವ ಜಾಗೃತಿ ಉಂಟಾಯಿತು. ಏಕೆಂದರೆ ಶ್ರೀಗಳು ಮಾಡಿದ ಧಾರ್ಮಿಕ ಇತಿಹಾಸದಲ್ಲಿಯೆ ಸುವರ್ಣಾಕ್ಷರಗಳಿಂದ ಬರೆದಿಡುವಂತಹ ಅಪ್ರತಿಮ ಕಾರ್ಯವೆಂದರೆ ಮಹಿಳಾ ಜಗದ್ಗುರು ಪೀಠ ಸ್ಥಾಪನೆ ಮಾಡಿದುದು. ಶೂದ್ರರೆಂದು ಧರ್ಮ ಸಂಸ್ಕಾರದಿಂದ ವಂಚಿತರಾದ ಹೆಣ್ಣುಮಕ್ಕಳು ಶ್ರೀಗುರು ಬಸವ ತಂದೆಯ ಅನುಗ್ರಹದಿಂದ ಅಡಿಗೆಯ ಮನೆಯಿಂದ ದೇವರ ಮನೆಗೆ ಬರುವ ಹಕ್ಕನ್ನು ಪಡೆದರೆಂಬುದೇನೋ ನಿಜ. ಆದರೆ ಅವರು ಗುರುವಾಗುವ ಹಕ್ಕನ್ನು ಪಡೆಯಲು ಮತ್ತೆ ಬಸವಣ್ಣನವರೇ ಮತ್ತೊಂದು ರೂಪದಲ್ಲಿ ಬರಬೇಕಾಯಿತೇನೋ ? ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಜಗನ್ಮಾತಾ ಅಕ್ಕಮಹಾದೇವಿಯ ಪ್ರತಿನಿಧಿಯಾಗಿ ಮಹಿಳಾ ಜಗದ್ಗುರು ಪೀಠದ ಪ್ರಥಮ ಪೀಠಾಧಿಕಾರಿಗಳಾಗಿ ಶ್ರೀ ಗುರುಗಳ ಮನೋರಥವನ್ನು ನೆರವೇರಿಸಿದರು. ಇದು ಜಾಗತಿಕ ಮಹಿಳಾ ಕುಲಕ್ಕೆ ಹೆಮ್ಮೆಯ ವಿಷಯವಾಗಿದೆ.

ಪೂಜ್ಯ ಅಪ್ಪಾಜಿಯವರದು ಮಾತೃಹೃದಯ—'ಎಲ್ಲರೂ ಧರ್ಮವಂತರಾಗಬೇಕು, ತತ್ತ್ವನಿಷ್ಠರಾಗಬೇಕು, ನೂರಾರು ಜನ ಸಾಧಕರು ತರಬೇತಿಯನ್ನು ಪಡೆದು ಧರ್ಮಪ್ರಚಾರಕರಾಗಿ, ಹಳ್ಳಿಯಿಂದ ಪಟ್ಟಣದವರೆಗೆ ಸಂಚರಿಸಬೇಕು. ಮನೆಮನೆಗೂ ಮನಮನಕ್ಕೂ ಧರ್ಮವನ್ನು ಒಯ್ದು ಮುಟ್ಟಿಸಬೇಕು.' ಎಂಬುದನ್ನು ಬಿಟ್ಟು ಅವರಿಗೆ ಬೇರೆ ಮತ್ತೆ ಯಾವ ಆಸೆಯೂ ಇರಲಿಲ್ಲ. ಯಾರಾದರೊಬ್ಬ ಸಾಧಕರು

'ನಾನು ಪ್ರವಚನ ಕಲಿಯುತ್ತೇನೆ' ಎಂದು ಬಂದರೆ ಅಪ್ಪಾಜಿಯವರಿಗೆ ಎಲ್ಲಿಲ್ಲದ ಸಂತೋಷ. ಅವರ ಜಾತಿ–ಮತ–ಸಂಪ್ರದಾಯಗಳನ್ನು ಲೆಕ್ಕಿಸದೆ, ಪ್ರತಿಫಲವನ್ನೂ ನಿರೀಕ್ಷಿಸದೆ ಎಲ್ಲ ಅನುಕೂಲತೆಯನ್ನೂ ಒದಗಿಸಿಕೊಡುತ್ತಾರೆ. ಇವರ ದಿವ್ಯಜ್ಞಾನ ವಿದ್ಯಾಲಯದಲ್ಲಿ ನೂರಾರು ಜನ ಪ್ರವಚನಕಾರರು ತರಬೇತಿ ಪಡೆದು ಶರಣರಾಗಿ ಜಂಗಮರಾಗಿ ನಾಡಿನಲ್ಲೆಲ್ಲ ಖ್ಯಾತಿಯನ್ನು ಪಡೆದಿದ್ದಾರೆ. ಇಂದು ಈ ನಾಡಿನಲ್ಲಿರುವ ಬಸವ ತತ್ತ್ವಾಭಿಮಾನಿಗಳೆಲ್ಲರೂ—"ಆರಂಕುರವಿಟ್ಟೊಡಂ ನೆನೆವುದೆನ್ನ ಮನಂ ಶ್ರೀ ಲಿಂಗಾನಂದ ಸ್ವಾಮಿಗಳಂ" ಎಂದು ಅಂತರಂಗ ಸಾಕ್ಷಿಯಾಗಿಯಾದರೂ ಸ್ಮರಿಸಬೇಕಾಗುತ್ತದೆ. ಪ್ರವಚನ ಕೇಳಲು ಅವಕಾಶವಿಲ್ಲದವರಿಗೂ, ಅವಕಾಶವಿದ್ದರೂ ಬಂದು ಕುಳಿತು ಕೇಳಲು ಅಭಿಮಾನದಿಂದ ಹಿಂಜರಿಯುವವರಿಗೂ ಪ್ರಯೋಜನವಾಗಲೆಂದು ತಮ್ಮ ಪ್ರವಚನವನ್ನೆಲ್ಲ ಪುಸ್ತಕರೂಪದಲ್ಲಿ ಬರೆದು ಪ್ರಕಟಿಸಿದ್ದಾರೆ. ಇವರ 'ಆತ್ಮನ ಪ್ರವಚನ' ಎಂಬ ಬೃಹದ್ಗ್ರಂಥವು ಪ್ರವಚನದ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಕೈಪಿಡಿಯಾಗಿ ಉಳಿದಿದೆ. ಶ್ರೀಗಳನ್ನು ವಿರೋಧಿಸುವವರೆಲ್ಲರೂ 'ಅಕ್ಕನ ಪ್ರವಚನ'ವನ್ನು ಮುಚ್ಚಿ ಮುಚ್ಚಿ ಓದುತ್ತಾರೆಂಬುದು ಒಂದು ಹೆಮ್ಮೆಯ ವಿಷಯವಾಗಿದೆ.

"ಅಘಟಿತ ಘಟಿತರು ವಿಪರೀತ ಚರಿತರು, ಕೂಡಲಸಂಗನ ಶರಣರು ಹೋದದಾರಿ ಭಯಕಾಣಿರಣ್ಣಾ !" ಎಂಬ ಶ್ರೀಗುರು ಬಸವವಾಣಿಗೆ ಪೂಜ್ಯ ಶ್ರೀಗಳು ಜೀವಂತ ಸಾಕ್ಷಿಯಾಗಿದ್ದಾರೆ. ಅವರು ತಮ್ಮ ದಿವ್ಯಜೀವನದ ಅರವತ್ತು ವರುಷಗಳ ಜೀವನ ಪಥವನ್ನು ಕ್ರಮಿಸಿದ್ದಾರೆ. ಅವರಿಂದ ಸ್ಫೂರ್ತಿಯನ್ನು ಪಡೆದು, ಅವರ ವಾಣಿಯನ್ನು ಕೇಳಿ, ಅವರಿಂದ ಅನುಗ್ರಹ ಹೊಂದಿ ಧನ್ಯರಾಗಿ ತಮ್ಮ ಬಾಳನ್ನು ಬೆಳಗಿಸಿಕೊಂಡ ಅಸಂಖ್ಯಾತ ಅಭಿಮಾನಿಗಳಾದ ಭಕ್ತರು-ಶಿಷ್ಯರು ಅವರಿಗೆ ಕೃತಜ್ಞತೆಯನ್ನು ಸಮರ್ಪಿಸಲು ಅಭಿನಂದನಾ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿರುವುದು ಸಮಯೋಚಿತವಾಗಿದೆ. ಈ ಶುಭಸಂದರ್ಭದಲ್ಲಿ ಪೂಜ್ಯ ಅಪ್ಪಾಜಿಯವರು ಬಸವ ಧರ್ಮಪೀಠದಲ್ಲಿ ವಿರಾಜಮಾನರಾಗುವದನ್ನು ಕಣ್ಣಾರೆ ಕಂಡು ತಮ್ಮ ಕಂಗಳ ಬರ ಹಿಂಗಿಸಿಕೊಳ್ಳಲು ಕಾತುರತೆಯಿಂದ ಕಾದಿದ್ದರು. ಇದು ಯಾವದೇ ಒಂದು ಸಂಪ್ರದಾಯದ (Ready made) ಪೀಠವಲ್ಲ. ಬಸವ ಧರ್ಮಕ್ಕಾಗಿ ಅವರು ಮಾಡಿದ ಮಹಾಕಾರ್ಯಕ್ಕೆ ಬಸವ ಭಕ್ತರಿಂದ ಸಂದ ಗೌರವದ ಪ್ರತೀಕವಾಗಿದೆ. ಅರವತ್ತರ ಅಂಚಿನಲ್ಲಿಯೂ ಮೂವತ್ತರ ಹರಯದ ಸ್ಫೂರ್ತಿಯ ಚಿಲುಮೆಯಾಗಿರುವ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳವರು ವಚನವಾಙ್ಮಯ ಗುಡಿಯ ಜ್ಞಾನಜ್ಯೋತಿಯಾಗಿ ಶತಾಯುಷಿಗಳಾಗಲಿ ! ಎಂದು ಶ್ರೀಗುರು ಬಸವ ತಂದೆಯಲ್ಲಿ ಪ್ರಾರ್ಥಿಸೋಣ ?

—★—

Digitalized by e-Sahithya Documentation Forum
Sponsored by Sarayu Foundation Trust

ಪೂಜ್ಯ ಅಪ್ಪಾಜಿ: ಅಂದು-ಇಂದು

ಪ್ರೊ॥ ಡಾ॥ ಎಸ್. ಆರ್. ಗುಂಜಾಳ,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗ

ಇಂದಿಗೆ 45 ವರುಷಗಳ ಹಿಂದಿನ ಮಾತು. ನಾನಾಗ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿ (1955-56). ಕನ್ನಡವನ್ನು ಪ್ರಮುಖ ವಿಷಯವನ್ನಾಗಿ ಆಯ್ದುಕೊಂಡು ಎಂ. ಎ. ಪದವಿಗೆ ಅಭ್ಯಸಿಸುತ್ತಿದ್ದೆ. ಆಗ ಧಾರವಾಡದ ನವಕಲ್ಯಾಣ ಮಠದ ಮಹಾಸ್ವಾಮಿಗಳಾದ ಕುಮಾರ ಸ್ವಾಮಿಗಳವರ ದರ್ಶನಕ್ಕೆ ಹೋಗುತ್ತಿದ್ದೆ. ಅವರು ಆಗ ಚಾಮರಸಕವಿಯ 'ಪ್ರಭುಲಿಂಗ ಲೀಲೆ' ಕಾವ್ಯದ ಮೇಲೆ ಪ್ರವಚನ ಹೇಳುತ್ತಿದ್ದರು. ಪ್ರವಚನದ ನಂತರ ನಾವು ಅವರಿಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದೆವು. ಅವರು ಸಮರ್ಪಕ ಉತ್ತರಕೊಡುತ್ತಿದ್ದರು. ರವಿವಾರ ಮತ್ತು ಇತರ ರಜೆ ದಿನಗಳಲ್ಲಿ ಪ್ರವಚನಗಳು ಬೆಳಗಿನ ಜಾವ ಇರುತ್ತಿದ್ದವು. ನಾನು ಅಂಥ ದಿನಗಳಲ್ಲಿ ಪ್ರವಚನ ಕೇಳಲು ಹೋಗುತ್ತಿದ್ದೆ. ಪ್ರವಚನದ ನಂತರ ಸ್ವಾಮಿಗಳು ವಾಯು ವಿಹಾರಕ್ಕೆಂದು ಹೋಗುತ್ತಿದ್ದರು. ಅವರ ಜೊತೆಗೆ ನಾನೂ ಹೋಗುತ್ತಿದ್ದೆ ಇನ್ನು ಕೆಲವರು ನಮ್ಮೊಂದಿಗೆ ಬರುತ್ತಿದ್ದರು. ಅವರಲ್ಲಿ ಪೂಜ್ಯ ಲಿಂಗಾನಂದ ಸ್ವಾಮಿಗಳು ಒಬ್ಬರಿದ್ದರೆಂದು ನನ್ನ ನೆನಪು. ಆಗಲೇ ಅವರ ಪರಿಚಯುವಾದದ್ದು. ಆಗ ಅವರೂ ಕರ್ನಾಟಕ ವಿಶ್ವವಿದ್ಯಾಲಯದ ತತ್ವಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿಯಾಗಿದ್ದರೆಂದು ತಿಳಿದು ಸಂತೋಷವಾಯಿತು. ನಮ್ಮಿಬ್ಬರಲ್ಲಿ ಸ್ನೇಹ ಕುದುರಿತು.

ನಾನಾಗ ಧಾರವಾಡದ 'ಬಸಪ್ಪನ ಖಾನಾವಳಿ'ಯಲ್ಲಿ ಊಟಮಾಡುತ್ತಿದ್ದೆ. ಸಾಯಂಕಾಲ ಊಟಕ್ಕೆ ಒಮ್ಮೆಹೋದಾಗ ಶ್ರೀ ಲಿಂಗಾನಂದರ ಭೆಟಿಯಾಯಿತು. ಆಗ ನಮ್ಮ ಕುದುರಿದ ಸ್ನೇಹ ಅರಳಿತು. ಆಗಿನ್ನೂ ಅವರು ಸ್ವಾಮಿಗಳಾಗಿರಲಿಲ್ಲ. ಪೂರ್ವಾಶ್ರಯದ ಹೆಸರಿನಲ್ಲೇ ವಿದ್ಯಾರ್ಥಿಜೀವನ ಸಾಗಿಸಿದ್ದರು. ಆದರೆ ಅವರ ಮಾತಿನಲ್ಲಿ ಮನದಲ್ಲಿ ಅಕ್ಕಮಹಾದೇವಿಯ ವಚನಗಳು ತುಂಬಿಕೊಂಡಿದ್ದವು.

ನಮ್ಮ ಊಟವಾದ ನಂತರ ಖಾನಾವಳಿಯ ಒಳ ವರಾಂಡದಲ್ಲಿ ಕುಳಿತು ಹರಟೆ ಹೊಡೆಯಲು ಪ್ರಾರಂಭಿಸಿದೆವು. ನಮ್ಮ ಹರಟೆ ಅನೇಕ ವಿಷಯುಗಳನ್ನು-ಸಮಸ್ಯೆಗಳನ್ನು ಕುರಿತಾಗಿರುತ್ತಿತ್ತು ಮೊದಮೊದಲು 10-15 ನಿಮಿಷಗಳ ಅವಧಿಯ ಹರಟೆಗಳಿರುತ್ತಿದ್ದವು. ಕ್ರಮೇಣ ಅವು ಒಂದು ತಾಸಿನ ಅವಧಿಯನ್ನು ಮೀರುತ್ತಿದ್ದವು. ನಮ್ಮಿಬ್ಬರ ಹರಟೆ ಅವಧಿ ಮೀರಿದಂತೆ ಅವುಗಳಲ್ಲಿ ಪಾಲುಗೊಳ್ಳುವವರ

ಸಂಖ್ಯೆಯೂ ಹೆಚ್ಚಾಯಿತು. ಖಾನಾವಳಿಗೆ ಊಟಕ್ಕೆ ಬಂದ ಗಿರಾಕಿಗಳಿಗೆ ನಮ್ಮ ಹರಟೆ ಹಿಡಿಸಿದವು. ಬಂದವರೆಲ್ಲ ತಮತಮಗೆ ಅನುಕೂಲವಾದಂತೆ ಹತ್ತು ನಿಮಿಷದಿಂದ ತಾಸಿನವರೆಗೂ ಕೇಳಲು ಕುಳಿತುಕೊಳ್ಳುತ್ತಿದ್ದರು. ನಮ್ಮ 'ಹರಟೆ' ಆ ಖಾನಾವಳಿಯಲ್ಲಿಯೇ 'ಅನುಭವ ಮಂಟಪ'ವಾಗಿ ಪರಿವರ್ತನೆಗೊಂಡಿತು. ಖಾನಾವಳಿ ಗಿರಾಕಿಗಳೇ ಅದರ ಸದಸ್ಯರಾದರು. ಖಾನಾವಳಿಯೇ 'ದಾಸೋಹ'ನಿಲಯ'ದಂತೆ ಕಾಣಹತ್ತಿತು.

ಶ್ರೀ ಲಿಂಗಾನಂದರು ನನ್ನ ಸ್ನೇಹಿತರಿದ್ದರೆಂದು ದುರಹಂಕಾರ ತುಂಬಿದವನಾಗಿ ಅವರ 'ಪೂರ್ವಾಶ್ರಯ'ದ ವಿವರಣೆಯನ್ನು ನಾನಿಲ್ಲಿ ಕೊಡಲಾರೆ. ಯಾಕೆಂದರೆ ನನ್ನ ಅವರ ಪರಿಚಯುವಾದಾಗ ಆಗಲೇ ಅವರಲ್ಲಿ 'ಸ್ವಾಮಿತ್ವ'ದ ಗುಣಗಳು ಒಡೆದು ತೋರುತ್ತಿದ್ದವು. ನಮ್ಮ 'ಅನುಭವ ಮಂಟಪ'ದ ಚರ್ಚೆಯಲ್ಲಿ ಪತಿತೋದ್ಧಾರ, ಅಸ್ಪೃಶ್ಯತೆಯ ನಿವಾರಣೆ, ಜಾತೀಯತೆಯ ನಿರ್ಮೂಲನೆ, ಬಡತನದ ನಿರ್ಮೂಲನೆ, ಸ್ತ್ರೀಯರ ಕೀಳರಿಮೆ-ಇತ್ಯಾದಿ ವಿಷಯಗಳು ಕಾಣಿಸಿಕೊಳ್ಳುತ್ತಿದ್ದವು. ಆ ಸಮಸ್ಯೆಯ ಓರೆ-ಕೋರೆಗಳನ್ನು ಕುರಿತು ಪ್ರಶ್ನೆ ಕೇಳುವದು ನನ್ನ ಚಟ. ನನ್ನ ಜೊತೆಗೆ ಸಂಗಣ್ಣ ಕುಪ್ಪಸ್ತ ಅವರೂ ಬಾಯಿ ಗೂಡಿಸುತ್ತಿದ್ದರು. ಲಿಂಗಾನಂದ ಸ್ವಾಮಿಗಳು ಆ ಎಲ್ಲ ಪ್ರಶ್ನೆಗಳಿಗೂ-ಸಮಸ್ಯೆಗಳಿಗೂ ಉತ್ತರಗಳನ್ನು ಪರಿಹಾರಗಳನ್ನು ಈಯುತ್ತಿದ್ದರು. ಹೀಗೆ ನಮ್ಮ ಪ್ರಶ್ನೋತ್ತರಗಳ ಕಾಲಕ್ಕೆ ಅವರಿಂದ ಅನೇಕ ಸಮಯೋಚಿತ ವಚನಗಳೂ ಶರಣರ ಚರಿತ್ರೆಗಳೂ ಉದಾಹರಿಸಲ್ಪಡುತ್ತಿದ್ದವು. ಆಗಲೇ ಅವರ ವಚನ ಶಾಸ್ತ್ರದಲ್ಲಿನ ತಿಳಿವಳಿಕೆ ಬಹು ಆಳಕ್ಕೆ ಇಳಿದಿತ್ತೆಂದು ನನಗೆ ಅನುಭವಕ್ಕೆ ಬಂದಿತು. ಬಸವಣ್ಣನವರ ಹಾಗೂ ಅಕ್ಕ ಮಹಾದೇವಿಯವರ ವಚನಗಳು ಅವರ ನಾಲಿಗೆಯ ತುದಿಯ ಮೇಲೆ ನೃತ್ಯವಾಡುತ್ತಿದ್ದವೆಂದು ಹೇಳಬಹುದು.

ನಮ್ಮ ಚರ್ಚೆಯಲ್ಲಿ "ನಾನು ದೀಕ್ಷೆ ಪಡೆದು ಗುರುವಾಗಬೇಕೆಂದಿದ್ದೇನೆ" ಎಂದು ಆಗಾಗ ಹೇಳುತ್ತಿದ್ದರು. ಅವರ ಈ ಮಾತಿಗೆ ನಾನು ಯಾವಾಗಲೂ ವಿರೋಧಿಸುತ್ತಿದ್ದೆ. "ಗುರುತ್ವ ಕೇವಲ ಬಾಯಿಮಾತಿನಿಂದ ಬರುವದಲ್ಲ. ಅದಕ್ಕೆ ಮನಸ್ಸು ಕರಿಗೊಳ್ಳಬೇಕು. ಪ್ರಾಣ ಘಟ್ಟಿಗೊಳ್ಳಬೇಕು. ಸಮಾಜನಿಂದೆಯನ್ನು ಎದುರಿಸಿ ನಿಲ್ಲುವ ಧೈರ್ಯಬೇಕು." ಇತ್ಯಾದಿ ನಾನು ಉತ್ತರಿಸುತ್ತಿದ್ದೆ. "ಆ ಸಾಮರ್ಥ್ಯ ನನ್ನಲ್ಲಿ ಉಂಟು" ಎಂಬ ನಿರ್ಧಾರದ ನುಡಿ ಅವರದಾಗಿರುತ್ತಿತ್ತು.

ಹೀಗೆ ೬-೮ ತಿಂಗಳ ನಮ್ಮ ವಾಗ್ವಾದ ಮುಂದುವರಿಯಿತು. ಮುಂದೆ ಒಂದು ದಿನ ಅವರು ಕಾವಿಯ ಬಟ್ಟೆಗಳನ್ನು ಧರಿಸಿ ಬರುತ್ತಿರುವುದನ್ನು ಕಂಡೆ. ಆಶ್ಚರ್ಯವಾಯಿತು. ನನ್ನ ಕಣ್ಣುಗಳನ್ನು ನಾನೇ ನಂಬದಂತಾಯಿತು ಸ್ವಾಮಿ ಶ್ರೀ ಲಿಂಗಾನಂದರು ಆಡಿದಂತೆ ಮಾಡಿತೋರಿಸಿದ್ದರು.

Digitalized by e-Sahithya Documentation Forum
Sponsored by Sarayu Foundation Trust

ಅಂದಿನಿಂದ ಇಂದಿನವರೆಗೆ ತಮ್ಮ ವ್ಯಕ್ತಿತ್ವವನ್ನು ವಿಕಸನ ಗೊಳಿಸುತ್ತಲೇ ಬಂದಿದ್ದಾರೆ. ಅವರ ಮಾತು ಮಾಣಿಕ್ಯವಾಗಿದೆ; ಮನಸ್ಸು ವಿಶಾಲವಾಗಿದೆ. ಪ್ರಾಣ ಶರಣಮಯವಾಗಿದೆ. ಬಸವ ಗುರುವಿನ ಸೇವೆಯನ್ನು ಮನಃಪೂರ್ವಕ ಮಾಡಿದ್ದಾರೆ. ನಾಡಿನ ತುಂಬ ಬಸವ ತಂದೆಯ ಭಕ್ತಿಯನ್ನು ಬಿತ್ತಿದ್ದಾರೆ. ಅದು ಹುಲುಸಾಗಿ ಬೆಳೆಯುವಂತೆ ಶ್ರಮಿಸಿದ್ದಾರೆ. ಅವರ ಕಾಯ-ಬಸವಕಾಯ, ಅವರ ಪ್ರಾಣ ಬಸವ ಮಯ. ಅವರ ಜೀವನ ಬಸವ ಸೇವೆಗೆ ಮೀಸಲು. ಅವರ ಬಾಳು-ಬದುಕು ಸಾರ್ಥಕವಾಗಿದೆ.

'ನ್ಯಾಯನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ :
ಲೋಕ ವಿರೋಧಿ, ಶರಣನಾರಿಗಂಜುವನಲ್ಲ.
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ'

ಮೇಲಿನ ಬಸವಣ್ಣನವರ ವಚನ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳಿಗೆ ಹೋಲಿಕೆಯಾಗಿದೆ.

ಪೂಜ್ಯ ಅಪ್ಪಾಜಿಯವರು ಸಮಾಜದ ವಿರೋಧನಿಂದೆಗಳನ್ನು ಲೆಕ್ಕಿಸದೆ ಬಸವ ಪ್ರಭುವಿನ ಸೇವೆಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಬಂದಿದ್ದಾರೆ. ಅವರ ೬೦ ವರುಷಗಳ ಬದುಕು ಹೋರಾಟದ ಬದುಕು. ಶರಣ ತತ್ವಗಳ ಪ್ರಚಾರ ಪ್ರಸಾರಕ್ಕಾಗಿ ಸಾಗಿಬಂದ ಬದುಕು.

ಅವರ ಅಮೃತವಾಣಿಯ ಅದ್ಭುತ ಶಕ್ತಿಗೆ ಮಣಿಯದವರಿಲ್ಲ. ಅಂಥ ಚುಂಬಕ ಶಕ್ತಿ ಅವರ ವಾಣಿಯಲ್ಲಿದೆ. ಅವರ ಪ್ರವಚನ ಕೇಳುವುದೇ ಒಂದು ಉತ್ಸಾಹದ ಬುಗ್ಗೆ, ಅವರ ಬರಹದಲ್ಲೂ ಪ್ರಾಸಾದಿಕ ಗುಣವಿದೆ ಸೂಕ್ಷ್ಮದೃಷ್ಟಿಯಿದೆ. ವಿಮರ್ಶಾತ್ಮಕ ಅವಲೋಕನವಿದೆ, ಆಳವಾದ ಚಿಂತನವಿದೆ, ಜನಬದುಕಬೇಕೆಂಬ ಲವಲವಿಕೆಯಿದೆ, ಕಳಕಳಿಯಿದೆ.

ಅವರು ಅನೇಕ ಅದ್ಭುತ ಕಾರ್ಯಗಳನ್ನು ಎಸಗಿದ್ದಾರೆ. ಅವುಗಳ ಎಲ್ಲ ವಿವರಣೆಯನ್ನು ಕೊಡುವ ಇಷ್ಟ ನನಗಿಲ್ಲ. ಆದರೆ ಅವುಗಳಲ್ಲಿ ಅತ್ಯಂತ ಶ್ರೇಷ್ಠವಾದ ಒಂದು ಕಾರ್ಯವನ್ನು ಹೊಗಳದೆ ಇರಲಾರೆ. ಅದು "ಶ್ರೀ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ"ವನ್ನು ಸ್ಥಾಪಿಸಿದ್ದು. ಪ್ರಪಂಚದಲ್ಲಿ ಸ್ತ್ರೀ ಜಗದ್ಗುರುವಿಗಾಗಿ ಮೀಸಲಿಟ್ಟು ಸ್ಥಾಪಿಸಲ್ಪಟ್ಟ ಪ್ರಪ್ರಥಮ ಧರ್ಮಪೀಠ ಇದಾಗಿದೆಯೆಂದು ಹೇಳಬಹುದು. ಆದರೆ ಭಾರತದಲ್ಲಂತೂ ಇದು ಮೊದಲಪೀಠವೆಂದು ಖಚಿತವಾಗಿ ಹೇಳಬಲ್ಲೆ.

ಭಾರತದಲ್ಲಿ ಸ್ತ್ರೀ ಶೂದ್ರಳು, ಅವಳಿಗೆ ಧಾರ್ಮಿಕ ಸಂಸ್ಕಾರಗಳಿಲ್ಲ, ಪುರುಷನ ಭೋಗ್ಯವಸ್ತು ; ಸ್ತ್ರೀ ಮಾಯೆ ;— ಎಂದೆಲ್ಲ ಹಿಂದೂ ಧರ್ಮಶಾಸ್ತ್ರಗಳು ಅವಳನ್ನು

ತಿರಸ್ಕರಿಸಿದಾಗ ಬಸವಣ್ಣನವರು ಹುಟ್ಟಿಬಂದರು. ಶರಣರು ಕಾಣಿಸಿಕೊಂಡರು. "ಹೆಣ್ಣು ಮಾಯೆಯಲ್ಲ; ಹೆಣ್ಣು ರಕ್ಕಸಿಯಲ್ಲ; ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ಉದ್ಘೋಷಿಸಿದರು. ಸಮಾಜದಲ್ಲಿ ಉನ್ನತಸ್ಥಾನ ಕಲ್ಪಿಸಿದರು. ಆಕೆ ತಲೆಯೆತ್ತಿ ಮರ್ಯಾದೆಯಿಂದ ಬಾಳುವಂತೆ ಮಾಡಿದರು.

ಇಂಥ ಅಪೂರ್ವ ಘಟನೆ ಭಾರತೀಯ ಸ್ತ್ರೀ ಬಾಳಿನಲ್ಲಿ ನಡೆದುದು 12ನೆಯ ಶತಮಾನದಲ್ಲಿ.

ಆದರೆ 20ನೆಯ ಶತಮಾನದಲ್ಲಿ 'ಶ್ರೀ ಜಗದ್ಗುರು ಅಕ್ಕಮಹಾದೇವಿಯ ಅನುಭಾವ ಪೀಠ' ಅಸ್ತಿತ್ವಕ್ಕೆ ಬಂದುದು ಆ ನಿಟ್ಟಿನಲ್ಲಿ ಮತ್ತೊಂದು ಮೈಲುಗಲ್ಲು. ಆ ಅನುಭಾವ ಪೀಠಕ್ಕೆ ಯಥಾಯೋಗ್ಯರೂ ಸಮರ್ಥರೂ ಆದ ಪೂಜ್ಯ ಶ್ರೀ ಮಾತೆ ಮಹಾದೇವಿ ಅವರನ್ನು ಪ್ರಥಮ ಜಗದ್ಗುರುಗಳನ್ನಾಗಿ ನಿಯಮಿಸಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಕಾರ್ಯ ಅದ್ಭುತಗಳಲ್ಲಿ ಅತ್ಯದ್ಭುತ !

ಪೂಜ್ಯ ಜಗದ್ಗುರು ಮಾತೆ ಮಹಾದೇವಿ ಅವರು ಅಕ್ಕಮಹಾದೇವಿಯವರ ಚಿತ್ ಕಳೆಯನ್ನು ನಾಡಿನ ನಾಲ್ಕೂ ನಿಟ್ಟಿನಲ್ಲಿ ಪಸರಿಸುತ್ತಿರುವ ವಿಷಯ ಎಲ್ಲರಿಗೂ ತಿಳಿದುದಾಗಿದೆ. ಇದರಿಂದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳ ಅರವತ್ತು ವರುಷಗಳ ತಪಸ್ಸು ಸಿದ್ಧಿಸಿದೆಯೆಂದೇ ಹೇಳಬೇಕು.

ಪರಮಪುರುಷ, ವಿಶ್ವಗುರು ಬಸವಣ್ಣನವರ ಪುಣ್ಯನಾಮದಲ್ಲಿ ಕೂಡಲ ಸಂಗಮದಲ್ಲೊಂದು ಧರ್ಮಪೀಠವನ್ನು ಸ್ಥಾಪಿಸುವ ಯೋಜನೆಯೊಂದು ಇದೀಗ ಪೂರ್ಣಗೊಂಡಿದೆ. ಶಿವಾನುಭವ ಮತ್ತು ಲೋಕಾನುಭವಗಳಿಂದ ಪಕ್ವಗೊಂಡ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳನ್ನು ಆ ಧರ್ಮಪೀಠದ ಪ್ರಥಮ ಅಧಿಕಾರಿಗಳನ್ನಾಗಿ ಆಯ್ಕೆ ಮಾಡಿದ್ದು ಬಂಗಾರಕ್ಕೆ ಕುಂದಣವಿಟ್ಟಂತಾಗಿದೆ.

ಪೂಜ್ಯ ಶ್ರೀಗಳು ನೂರುವರುಷ ಜಗದ ಹಿತಾರ್ಥವಾಗಿ ಬಾಳುವಂತೆ ಪರುಷ ಪುರುಷ ಬಸವೇಶ್ವರನು ಅನುಗ್ರಹಿಸಲಿ.

★

ಬಸವ ವಚನಾಮೃತ

ಆಯುಷ್ಯ ತೀರಿದಲ್ಲದೆ ಮರಣವಿಲ್ಲಯ್ಯ
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲಯ್ಯ
ಅಂಜಲದೇಕೋ ಲೋಕ ವಿಗುರ್ಬಣೆಗೆ
ಅಂಜಲದೇಕೋ ಕೂಡಲ ಸಂಗಮದೇವಾ, ನಿಮ್ಮಾಳಾಗಿ !

Digitalized by e-Sahithya Documentation Forum
Sponsored by Sarayu Foundation Trust

ಕ್ರಾಂತಿಯೋಗಿ

ಪರಮಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿ

—ಡಾ॥ ಹೆಚ್. ಚಂದ್ರಶೇಖರ
ಬೆಂಗಳೂರು.

ಯಾರೀ ಸನ್ಯಾಸಿ ?

ಬಹುಶಃ 1973 ರಲ್ಲಿ ಅಂತ ತೋರುತ್ತದೆ. ಕರ್ನಾಟಕದ ರಾಜಧಾನಿ ಬೆಂಗಳೂರಿನ ರಾಜಾಜಿನಗರ ಬಡಾವಣೆಯ ಬಸವೇಶ್ವರ ಪ್ರೌಢಶಾಲೆಯ ಆಟದ ಮೈದಾನದಲ್ಲಿ ಜನರು ನೆರೆದಿದ್ದರು. ಧಾರ್ಮಿಕ ಸಭೆಗೆ, ಅದೂ ಈ ಕಾಲದಲ್ಲಿ ಅಷ್ಟೊಂದು ಕಿಕ್ಕಿರಿದ ಜನಸಂದಣಿ. ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದರಾಗಿದ್ದರು. ನಾನು ಕುತೂಹಲದಿಂದಲೇ ಮೈದಾನದ ಒಳಗೆ ಹೋದೆ. ಸ್ಥಳವು ಸಿಗದ್ದರಿಂದ ನಿಂತುಕೊಂಡೆ, ಅಂದಿನ ಭಾಷಣ ಕೇಳಲು.

ಸರಿಯಾಗಿ ಏಳುಗಂಟೆಗೆ, ಸಮಯದಲ್ಲಿ ಯಾವ ವ್ಯತ್ಯಯವನ್ನು ಮಾಡದ ಸ್ವಾಮೀಜಿಯೊಬ್ಬರು ಬಂದು ಕುಳಿತರು. ಓಂಕಾರ ನಾದದಿಂದ ಆರಂಭವಾದ ಪ್ರಾರ್ಥನೆಯೇ ವಿಶಿಷ್ಟ ಶೈಲಿಯದು: ಭವ್ಯ ನಿಲುವಿನ, ಹೊಂಬಣ್ಣದ ಶರೀರ ಧಾರಿಯಾದ ಸ್ವಾಮೀಜಿ ಕಾವಿಯ ಬಗಲುಗಸೆ ಅಂಗಿಯನ್ನು ತೊಟ್ಟು, ಕಾವಿಯ ಬಣ್ಣದ ಪೇಟವನ್ನು ಸುತ್ತಿದ್ದರು. ಅವರ ವಾಗ್ಝರಿಯು ಪ್ರಾರಂಭವಾಗುತ್ತಲೇ ವಿಲಕ್ಷಣ ಪ್ರಭಾವ ಎಲ್ಲರ ಮೇಲೆ ಬಿದ್ದಿತು. ಧ್ವನಿಯು ಗಂಟಾನಾದದಂತೆ ಹೊರ ಹೊಮ್ಮುತ್ತ ಜ್ಞಾನ ತರಂಗಗಳನ್ನು ಪಸರಿಸುತ್ತಿದ್ದಿತು. ಕೇವಲ ಕುತೂಹಲದಿಂದ, ಮಾಮೂಲಿನ ಭಾಷಣ ಎಂದು ಕೆಲಕಾಲ ನಿಂತು ಮನೆಗೆ ಹೋಗೋಣವೆಂದು ನಿಶ್ಚಯಿಸಿ ಹೋಗಿದ್ದ ನಾನು ಕಾಲುಕೀಳದಾದೆ. ಆ ಸನ್ಯಾಸಿಯ ವಾಕ್ ಪ್ರವಾಹದಲ್ಲಿ ತೇಲಿ ಹೋದೆ. ಸಮಯ ಸರಿದುದರ ಅರಿವೇ ಆಗಲಿಲ್ಲ. ಸ್ವಾಮೀಜಿಯವರು ಜಯ ಘೋಷದೊಡನೆ ಮಂಗಲ ಮಾಡಿದಾಗಲೇ ನನಗೆ ಎಚ್ಚರ ಮೂಡಿದುದು. ಗಡಿಯಾರವನ್ನು ನೋಡಿಕೊಂಡರೆ ಆಗಲೇ ಒಂದೂವರೆ ಗಂಟೆ ಸರಿದಿವೆ. ಇಷ್ಟು ದೀರ್ಘಕಾಲ ನಾನು ನನಗರಿವಿಲ್ಲದೆಯೇ ನಿಂತು ಕೇಳಿದ್ದೆ ಸುಮಾರು 60 ಕೆ.ಜಿಯ ನನ್ನ ದೇಹದ ಭಾರವನ್ನು ಹೊತ್ತ ನನ್ನ ಕಾಲುಗಳಿಗೂ, ನನಗೂ ಕಾಲದ ಅರಿವು ಮೂಡಿದ್ದು ಆ ಸನ್ಯಾಸಿಯ ಭಾಷಣ ಅಥವಾ ಪ್ರವಚನ ನಿಂತಾಗಲೆ !

ಯಾರೀ ಸನ್ಯಾಸಿ ? ನಾನು ಸ್ವಾಮಿ ವಿವೇಕಾನಂದರನ್ನು ಪ್ರತ್ಯಕ್ಷ ಕಂಡವನಲ್ಲ ಆದರೆ ಅವರ ಭಾಷಣದ ವೈಖರಿಯ ಬಗ್ಗೆ ಸಾಕಷ್ಟು ಓದಿ, ಅವರ ನಿಲುವನ್ನು ಚಿತ್ತಭಿತ್ತಿಯ ಮೇಲೆ ರೂಪಿಸಿಕೊಂಡವನು. ಅಂಥ ಪ್ರಭಾವೀ ವ್ಯಕ್ತಿತ್ವವನ್ನು ನೆನಪಿಗೆ ತರುವ ಈ ಸನ್ಯಾಸಿ ಯಾರಿರಬಹುದು ? ಆತ್ಮ ವಿಶ್ವಾಸದಿಂದ ಮಿನುಗುವ ಕಂಗಳು. ಗಾಂಭೀರ್ಯ-ಮಾಧುರ್ಯ-ಗಡುಸು-ಸ್ಪಷ್ಟ ಚಿಂತನೆಗಳ ಸಂಗಮವಾದ ವಾಕ್‌ಪ್ರವಾಹವನ್ನು ಹರಿಸಿ. ಎಲ್ಲರನ್ನೂ ಮಂತ್ರಮುಗ್ಧರನ್ನಾಗಿ ಮಾಡಿರುವ ಇವರು ಯಾರಿರಬಹುದು ? ಕನ್ನಡನಾಡಿನಲ್ಲಿ ನವಕ್ರಾಂತಿಯ ಮಿಂಚಿನ ಸಂಚಾರವನ್ನು ಮೂಡಿಸಿದ ಬಸವಾದಿ ಶರಣರ ವಚನಗಳಿಗೆ ಸತ್ವತುಂಬಿದ, ಆಳ-ಹರವು,-ಜೀವಂತಿಕೆಗಳ ತ್ರಿವೇಣಿ ಸಂಗಮವಾದ ಹೊಸಬಗೆಯ-ಆದರೆ ನಿಜವಾದ ಅರ್ಥವನ್ನು ತಮ್ಮದೇ ಆದ ಶೈಲಿಯಲ್ಲಿ ಕೆಲವೊಮ್ಮೆ ಗ್ರಾಂಥಿಕ ಭಾಷೆ ಬಳಸಿ, ಮತ್ತೆ ಕೆಲವೊಮ್ಮೆ ಬಿಜಾಪುರ ಜಿಲ್ಲೆಯ ನೆಲದ ಸೊಗಡನ್ನು ತುಂಬಿಕೊಂಡ ಗ್ರಾಮ್ಯಭಾಷೆ ಬಳಸಿ, ಅತ್ಯಂತ ಪರಿಣಾಮಕಾರಿಯಾಗಿ, ಬೆಳಕಿನ ಭಾಷಣ ನೀಡುವ ಈ ಸನ್ಯಾಸಿ ಯಾರು ? ಪಕ್ಕದಲ್ಲಿದ್ದವರನ್ನು ಕೇಳಿದೆ. "ಇವರು ಪೂಜ್ಯ ಶ್ರೀಲಿಂಗಾನಂದ ಸ್ವಾಮೀಜಿ. ಒಂದು ದಿವಸ ಪ್ರವಚನ ಕೇಳಿದವರು ಮತ್ತೆಂದೂ ತಪ್ಪಿಸದಂತೆ ಬರುವರು. ಅಂಥ ಆಕರ್ಷಣೆಯುಂಟು ಇವರ ವಾಣಿಯಲ್ಲಿ." ಎಂದರೊಬ್ಬರು. ಪ್ರವಚನ ಕೇಳಿ ಹೊರಟ ಎಲ್ಲರ ಬಾಯಲ್ಲೂ ಮೆಚ್ಚುಗೆ, ಉದ್ಗಾರ. ಮತ್ತು ಅಂದು ಮಾಡಿದ ಪ್ರವಚನದ ವಿಷಯದ ಬಗ್ಗೆ ಚರ್ಚೆ, ಪೂಜ್ಯರು ಎಲ್ಲಿಯೇ ಮಾಡಲಿ ಅಲ್ಲಿ ಪ್ರವಚನವು ಇಡೀ ನಗರದ ಸುದ್ದಿಯೆ !

ನಾನು ಸ್ವಾಮೀಜಿಯವರ ಹೆಸರು, ಅವರ ವಾಗ್‌ವೈಖರಿಯ ಬಗ್ಗೆ ಬಹುವಾಗಿ ಕೇಳಿದ್ದೆ ; ಪ್ರತ್ಯಕ್ಷವಾಗಿ ಅವರನ್ನು ನೋಡಿರಲಿಲ್ಲ, ಪ್ರವಚನವನ್ನು ಸವಿದಿರಲಿಲ್ಲ; ಅಂದು ಕಂಗಳು ತುಂಬಿದವು, ಕಿವಿಗಳು ಮುದಗೊಂಡವು, ಮನವು ತಣಿಯಿತು; ಅಲ್ಲಿಂದೀಚೆಗೆ ನಾನು ವರ್ಗವಾಗಿ ಹೋದ ಯಾವ ಊರಲ್ಲಿ ಪ್ರವಚನವಾದರೂ ಬಿಡುವು ಮಾಡಿಕೊಂಡು ಕೇಳಿದ್ದೇನೆ; ನನ್ನ ಕಾಯಕದ ನಿಮಿತ್ತ ಪ್ರವಾಸ ಹೋದಾಗ ಆ ಊರಲ್ಲಿ ನಡೆಯುತ್ತಲಿದ್ದರೆ, ತಪ್ಪದೆ ಕೇಳುತ್ತೇನೆ : ಅವರು ಬರೆದ ಗ್ರಂಥಗಳನ್ನೂ ಓದಿದ್ದೇನೆ. ಪ್ರತೀಸಲ ಕೇಳಿದಾಗಲೂ, ಪ್ರವಚನಗಳು ಚಿಂತನೆಯ ಚಿಲುಮೆ ಎನಿಸುತ್ತವೆ ; ಹೊಸ ವಿಚಾರಗಳನ್ನು ಹೊತ್ತಿಸುತ್ತವೆ, ಬೆಳಕಿನತ್ತ ಹೊಸ ಹೆಜ್ಜೆಯನ್ನು ಇಡಿಸುತ್ತವೆ.

ಅಪೂರ್ವ ಚೇತನದ ಜನನ

ಇಂದು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ನೆರೆರಾಜ್ಯಗಳಲ್ಲಿಯೂ ಸಹ ನನ್ನಂಥ ಲಕ್ಷಲಕ್ಷ ಭಕ್ತರನ್ನೂ, ಅಸಂಖ್ಯಾತ ಅಭಿಮಾನಿಗಳನ್ನೂ ಪಡೆದಿರುವ ಈ ಅಪೂರ್ವ ಚೇತನ ಹುಟ್ಟಿದ್ದು ಬಸವಣ್ಣನವರ ಜನ್ಮಭೂಮಿ ಬಾಗೇವಾಡಿಗೆ ಹತ್ತಿರದ, ಐತಿಹಾಸಿಕ

Digitalized by e-Sahithya Documentation Forum
Sponsored by Sarayu Foundation Trust

ಖ್ಯಾತಿಯ ಮನುಗೂಳಿಯಲ್ಲಿ, ಹುಟ್ಟಿದ್ದು ಸಾಧಾರಣ ಆರ್ಥಿಕ ಸ್ಥಿತಿಯ ಮನೆತನದಲ್ಲಿ, ಮಲ್ಲಪ್ಪ ಕಪ್ಪರದ ಮತ್ತು ಕಲ್ಲಮ್ಮನವರ ಚೊಚ್ಚಲು ಮಗನಾಗಿ. ದಿ॥ 15-9-31ರ, ಗಣೇಶ ಚೌತಿಯಂದು ಜನಿಸಿದ ಈ ಚೇತನ ಶಕ್ತಿಯ ಪೂರ್ವಾಶ್ರಮದ ಹೆಸರು 'ಸಂಗಮೇಶ' ಎಂದು. ವ್ಯಾಪಾರವನ್ನು ಕಾಯಕವನ್ನಾಗಿ ಹೊಂದಿದ್ದ ತಂದೆ ಮಲ್ಲಪ್ಪನವರು ತಮ್ಮ ಮೂಢ ನಂಬಿಕೆಗಳಿಂದಾಗಿ ವ್ಯಾಪಾರದಲ್ಲಿ ಹಾನಿಗೀಡಾಗಿ ಬಡತನದ ಬವಣೆಗೆ ಇಡೀ ಕುಟುಂಬವನ್ನೇ ಗುರಿ ಮಾಡಿದರು. ಇದು ಬಾಲಕ ಸಂಗಮೇಶನ ಮೇಲೆ ತೀವ್ರ ಪರಿಣಾಮ ಬೀರಿತಲ್ಲದೆ ಧರ್ಮ-ದೇವರ ಬಗ್ಗೆ ಅಪನಂಬಿಕೆ-ತಿರಸ್ಕಾರಗಳನ್ನು ಹುಟ್ಟಿಸಿತು.

ಮತ್ತೊಂದು ದಿಶೆಯಿಂದ ಈ ಬಡತನವು ಬಾಲಕ ಮತ್ತು ತರುಣ ಸಂಗಮೇಶನನ್ನು ಬಹಳಷ್ಟು ಕಾಡಿತು, ಪರೀಕ್ಷೆ ಮಾಡಿತು. ಆದರೆ ಹುಟ್ಟು ಹೋರಾಟಗಾರನಾದ ಸಂಗಮೇಶ ಬೆದರಲಿಲ್ಲ; ಬಡತನ ಒಡ್ಡಿದ ಸವಾಲನ್ನು ಸ್ವೀಕರಿಸಿ ಮುಂದೆ ಸಾಗಿದನು. ವಾರಾನ್ನವನ್ನುಂಡು, ಧನ ಭಿಕ್ಷೆಯನ್ನು ಪಡೆದು, ಮನೆಪಾಠ ಹೇಳುವ ಕಾಯಕ ಮಾಡಿ, ಒಂದೊಂದು ದಿನ ಅರೆಹೊಟ್ಟೆಗೆ ಉಂಡು, ಒಂದೊಂದು ದಿನ ಉಪವಾಸ ಮಾಡಿ, ಪ್ರತಿಭೆ ಮತ್ತು ಪರಿಶ್ರಮದಿಂದ ಬೆಳಗಾಂವಿಯ ಲಿಂಗರಾಜ ಕಾಲೇಜಿನಲ್ಲಿ ಅಭ್ಯಾಸಮಾಡಿ, ಬಿ.ಎ. (ಆನರ್ಸ್) ಪದವಿಯನ್ನು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದನು. ಪಾಠ-ಪ್ರವಚನಗಳಲ್ಲಿ ಮುಂದೆ ಇದ್ದಂತೆ ಆಟಗಳು, ಈಜುಗಾರಿಕೆ ಮುಂತಾದ ಶಾರೀರಿಕ ಚಟುವಟಿಕೆಗಳಲ್ಲಿಯೂ ಮುಂದು, ಎನ್.ಸಿ.ಸಿ ತರಬೇತಿ, ರೈಫಲ್ ತರಬೇತಿಯ ಜೊತೆಗೆ ಭಾಷಣಕಲೆ ಸಹ ಕರಗತವಾಗಿದ್ದಿತು.

ನಾಡಿನ ಪುಣ್ಯ ಪ್ರಸಂಗ

ಪ್ರೌಢಶಾಲೆಯ ಅಭ್ಯಾಸ ಮುಗಿಸುವ ಹೊತ್ತಿಗೆ, ಬಿಜಾಪುರ ನಗರದಲ್ಲಿರುವಾಗ ಬಡತನ ಮತ್ತು ತಂದೆಯ ಮೂಢ ನಂಬಿಕೆಗಳು ಸಂಗಮೇಶನ ಮೇಲೆ ಪರಿಣಾಮ ಬೀರಿ ಕಮ್ಯುನಿಸಮ್‌ನತ್ತ ಆತನನ್ನು ತಳ್ಳಿದ್ದವು. ಅಷ್ಟೊತ್ತಿಗಾಗಲೇ ಉತ್ತರ ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಕೆಲಸ ಮಾಡುತ್ತ, ಸರ್ಕಾರದ ಕೆಂಗಣ್ಣಿನ ನೋಟಕ್ಕೆ ಗುರಿಯಾಗಿ ಭೂಗತರಾಗಿದ್ದ ಕಾಮ್ರೇಡ್‌ಗಳಿಗೆ ಸಂಗಮೇಶ ಸಹಕಾರಿಯಾಗಿದ್ದ. ಮುಂದೆ ಬೆಳಗಾಂವಿಗೆ ಹೋಗಿ ಅಭ್ಯಾಸ ಮಾಡುವಾಗಲೂ ಕಾರ್ಲ್ ಮಾರ್ಕ್ಸ್‌ನ ಸಾಮ್ಯವಾದವೇ ಸಂಗಮೇಶನ ಮನದಲ್ಲಿ ಅಚ್ಚೊತ್ತಿದ್ದು. ಒಂದು ದಿನ, ಅದು ನಿಜಕ್ಕೂ ಮಹತ್ವದ ದಿನ. ಅಂದು, ಕಾಲೇಜಿನಲ್ಲಿ ತತ್ತ್ವಶಾಸ್ತ್ರವನ್ನು ಬೋಧಿಸುತ್ತಿದ್ದ ಡಾ॥ ರಾಜಗೋಪಾಲ್ ಅವರು ಸಂಗಮೇಶನ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡಿ, ನಾಸ್ತಿಕವಾದದಿಂದ ಆಸ್ತಿಕ ತತ್ತ್ವಜ್ಞಾನಕ್ಕೆ ಆಕರ್ಷಿಸಿಯೇ ಬಿಟ್ಟರು. ಸಮತಾವಾದದ ಆರಾಧಕನಾಗಿದ್ದ ಸಂಗಮೇಶನನ್ನು ಅಧ್ಯಾತ್ಮದ ಅಡಿಪಾಯದ



ಚಿಂತನಶೀಲ ದೂರದರ್ಶಿ - 1984.

Digitalized by e-Sahithya Documentation Forum
Sponsored by Sarayu Foundation Trust

ಲಿಂಗವಂತ ಧರ್ಮಾನುಯಾಯಿಯ ಹತ್ತು ನೇಮ ಕುರಿತು ಗುರು ಬಸವಣ್ಣನವರ ಆದೇಶ.

ಹೇ ಶರಣನೇ,

1. ಜಗತ್ತನ್ನು ನಿರ್ಮಾಣ ಮಾಡಿದ ಸೃಷ್ಟಿಕರ್ತನ ಅಸ್ತಿತ್ವದಲ್ಲಿ ನಂಬಿಕೆ ಇಡು. ಅವನು ಒಬ್ಬನೇ ಮತ್ತು ಪರಮೋನ್ನತ ಶಕ್ತಿ ಎಂದು ನಂಬು.
2. ವಿಶ್ವಗುರು ಬಸವಣ್ಣನವರು ದೇವರು ಲೋಕೋದ್ಧಾರಕ್ಕಾಗಿ ಕಳುಹಿಸಿ ಕೊಟ್ಟ ಪ್ರತಿನಿಧಿ, ದೇವರ ಕರುಣೆಯ ಕಂದ, ನಮ್ಮೆಲ್ಲರ ರಕ್ಷಕ ಎಂದು ತಿಳಿ.
3. ಗುರು ಬಸವಣ್ಣನವರೇ ಆದಿ ಪ್ರಮಥರಾಗಿ, ಅವರ ಸಮಕಾಲೀನರು ಮತ್ತು ಅವರ ಪರಂಪರೆಯ ಶರಣರು ಕೊಟ್ಟ ವಚನ ಸಾಹಿತ್ಯವೇ ನಿನ್ನ ಧರ್ಮ ಸಂಹಿತೆ ಎಂದು ತಿಳಿದು ಶರಣ ಪಥದಲ್ಲಿ ನಡೆ.
4. ಧರ್ಮಪಿತರು ವಿಶ್ವದಾಕಾರದಲ್ಲಿ ರೂಪಿಸಿಕೊಟ್ಟ ವಿಶ್ವಾತ್ಮನ ಕುರುಹಾದ ಇಷ್ಟ ಲಿಂಗವನ್ನು ಶ್ರದ್ಧೆಯಿಂದ ಧರಿಸಿ, ನಿಷ್ಠೆಯಿಂದ ನಿತ್ಯವೂ ಪೂಜಿಸು.
5. ಏಳುದಿವಸಗಳ ವಾರದಲ್ಲಿ ಒಂದು ದಿವಸ ಶರಣರ ಸಂಗದಲ್ಲಿ ಸೇರಿ ಕರ್ತನನ್ನು ಸ್ಮರಿಸಿ, ಧರ್ಮಪಿತರನ್ನು ಕೊಂಡಾಡಿ, ಗಣ ಮೇಳಾಪ-ಅನುಭವ ಗೋಷ್ಠಿಯಲ್ಲಿ ಭಾಗಿಯಾಗು.
6. ಸತ್ಯ ಶುದ್ಧ ಕಾಯಕದಿಂದ ಧನ ಸಂಪಾದಿಸಿ, ದಾಸೋಹ ತತ್ತ್ವದ ಮೂಲಕ ಧರ್ಮ-ಸಮಷ್ಟಿಗಳ ಉದ್ಧಾರಕ್ಕೆ ವಿನಿಯೋಗಿಸು.
7. ಕೂಡಲ ಸಂಗಮ ಕ್ಷೇತ್ರದಲ್ಲಿ ಪ್ರತಿವರ್ಷವೂ ನಡೆಯುವ ಶರಣ ಮೇಳಕ್ಕೆ ಬಾ. ಜೀವಮಾನದಲ್ಲಿ ಒಮ್ಮೆಯಾದರೂ, ಎಷ್ಟೇ ಅನಾನುಕೂಲಗಳಿದ್ದರೂ, ಸಂದರ್ಶಿಸಿ, ಧಾರ್ಮಿಕ ಅನುಯಾಯಿತ್ವ ಸ್ಥಿರೀಕರಿಸು.
8. ಅನ್ಯಾಯವನ್ನು, ಅಸತ್ಯವನ್ನು ಆತ್ಮ ಸ್ಥೈರ್ಯದಿಂದ ಎದುರಿಸಿ, ಸತ್ಯ ಸ್ಥಾಪನೆ ಮಾಡುವ ಗಣಾಚಾರಿಯಾಗು.
9. ಸ್ವಧರ್ಮಿಯರನ್ನು ಧರ್ಮಬಂಧುಗಳೆಂದು, ಪರಧರ್ಮೀಯರನ್ನು ಸ್ನೇಹಿತರೆಂದು ಭಾವಿಸಿ ಆದರಿಸು.
10. ಧರ್ಮಪಿತರ ಸಂಕಲ್ಪದಂತೆ ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಜಾತಿ ವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ (ದೈವೀ) ರಾಜ್ಯ ನಿರ್ಮಾಣಕ್ಕೆ ನಿಷ್ಠೆಯಿಂದ ಪ್ರಯತ್ನ ಮಾಡು.

★

—ಜಗದ್ಗುರು ಮಾತೆ ಮಹಾದೇವಿ. (22-2-1992)

ಮೇಲೆಯೇ ಸಮತಾವಾದವನ್ನು ಪ್ರತಿಪಾದಿಸಿದ ಬಸವಣ್ಣನವರು ಆಕರ್ಷಿಸತೊಡಗಿದ್ದರು. ಅದೊಂದು ನಿಜಕ್ಕೂ ನಾಡಿನ ಪುಣ್ಯಪ್ರಸಂಗ, ಇಂದು ಸ್ವಾಮೀಜಿ ಸಾಧಿಸಿರುವ ಸಿದ್ಧಿಯನ್ನು ನೋಡಿದರೆ !

ಸನ್ಯಾಸದತ್ತ

ಬಿ.ಎ. (ಆನರ್ಸ್) ಪರೀಕ್ಷೆ ಮುಗಿಯಿತು. ಫಲಿತಾಂಶದ ಬಗ್ಗೆ ಕಿಂಚಿತ್ತೂ ಅನುಮಾನವಿರಲಿಲ್ಲ. ಆದರೆ ಕಿತ್ತು ತಿನ್ನುವ ಬಡತನ ಮುಂದಿನ ದಾರಿಯನ್ನು ತೋರದಷ್ಟು ಕಣ್ಣುಕಟ್ಟಿತ್ತು. ಅಷ್ಟು ಹೊತ್ತಿಗಾಗಲೇ ಡಾ|| ರಾಜಗೋಪಾಲರ ಪ್ರಭಾವದಿಂದ, ಕಾರ್ಲ್‌ಮಾರ್ಕ್ಸ್‌ನ ರಕ್ತಕ್ರಾಂತಿಯ ಭ್ರಾಂತ್ಯಾತ್ಮಕ ವಿಚಾರಗಳ ಹಿಡಿತದಿಂದ ಹೊರಬಂದು ಸಮತಾವಾದಿ ಬಸವಣ್ಣನವರ 'ಇಸಂ'ದ ಬೆಳಕಿನಲ್ಲಿ ಅಡಿಯಿಡಲು ಆರಂಭಿಸಿದ್ದ ಸಂಗಮೇಶ. ಅಂದು ಬಸವ ಜಯಂತಿ 1955 ನೆಯ ಇಸವಿಯ 25ನೆಯ ದಿನಾಂಕ. ಸಂಗಮೇಶನ ಬದುಕಿನ ದೃಷ್ಟಿಯಿಂದ ಮಾತ್ರವಲ್ಲ. ಬಸವ ಯುಗದ ಆರಂಭದ ದೃಷ್ಟಿಯಿಂದಲೂ ಕೂಡ. ಹೊಯ್ದಾಡುವ ಮನಸ್ಸಿನ ತುಂಬ ಕತ್ತಲೆ. ಕೋಣೆಯ ತುಂಬ ಕತ್ತಲೆ, ದೀಪವನ್ನೂ ಹಚ್ಚಿಕೊಳ್ಳಲಾರದೆ ಸಂಗಮೇಶ ಧ್ಯಾನಾಸಕ್ತನಾದ. ಆಗ ಫಕ್ಕನೆ ಗೋಡೆಯ ಮೇಲಿದ್ದ ಗುರು ಬಸವಣ್ಣನವರ ಭಾವಚಿತ್ರದಲ್ಲಿ ಬೆಳಕು ಮೂಡಿತು. ಜೀವ ತಳೆಯಿತು. ಧರ್ಮಗುರು ಬಸವಣ್ಣನವರು ಆದೇಶ ನೀಡುವ, ಆದರೆ ಮಮತೆ ತುಂಬಿದ ಧ್ವನಿಯಲ್ಲಿ, "ಸಂಗಮೇಶಾ, ನೀನು ನಿನ್ನ ಜೀವನವನ್ನು ನನಗಾಗಿ ಮುಡುಪಿಡು. ನೀನು ನನ್ನ ಕಂದ. ನನ್ನ ತತ್ತ್ವಗಳ ಪ್ರಚಾರಕ್ಕಾಗಿ ಸಮರ್ಪಿತ ಚೇತನನಾಗು. ನನ್ನ ರಕ್ಷೆ ನಿನಗೆ ಸದಾ ಇದೆ." ಎಂದು ನುಡಿದರು. ಇದರಿಂದ ತುಸು ಗಾಬರಿಗೊಂಡ ಸಂಗಮೇಶನ ಚಿತ್ತಪಟಲದ ಮೇಲೆ ಮನೆಯ ಬಡತನದ ಭೀಕರ ಚಿತ್ರ ಕಣ್ಣುಮುಂದೆ ಕಟ್ಟಿತು. ಹಿರಿಯಮಗ ಉದ್ಯೋಗ ಶೀಲನಾಗಿ ಮನೆಯ ಸಂಕಷ್ಟವನ್ನು ಕಳೆಯುವನು ಎಂದು ಕಾತುರದಿಂದ ಕಾಯುತ್ತಿರುವ ತಾಯಿ-ತಂದೆಯರ ನಿರೀಕ್ಷೆ ಮನಸ್ಸನ್ನು ಕಲಕಿತು. ಆದರೆ ಬಸವಣ್ಣನವರು ಪುನಃ ನುಡಿದರು. "ನೀನು ತ್ಯಾಗ ಮಾಡಲೇ ಬೇಕು. ಸಮಷ್ಟಿ ಸೇವೆಗೆ ಅಣಿಯಾಗಲೇ ಬೇಕು. ಮಾತುಕೊಡು." ಸಂಗಮೇಶ ಮಂತ್ರ ಮುಗ್ಧನಾಗಿ ಮಾತು ಕೊಟ್ಟು ನಮಸ್ಕರಿಸುತ್ತಲೇ ಆ ಬೆಳಕಿನ ಚಿತ್ರ ಮರೆಯಾಯಿತು. ಈ ಪುಳಕಿತಗೊಳಿಸುವ ಅನುಭವದ ಬಳಿಕ ಕೋಣೆಯಿಂದ ಹೊರಬಿದ್ದ ಸಂಗಮೇಶ. ಬೆಳಗಾಂವಿಯ ಬಸವನ ಗಲ್ಲಿಯಲ್ಲಿರುವ ಬಸವೇಶ್ವರ ಗುಡಿಯಲ್ಲಿ ಬಸವ ಜಯಂತಿ ಕಾರ್ಯಕ್ರಮ ನಡೆದಿತ್ತು. ಉತ್ತಮವಾಗ್ಮಿ ಎಂಬ ಹೆಸರು ಪಡೆದು, ಕಾಲೇಜಿನಲ್ಲಿ ಸಾಕಷ್ಟು ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸಂಗಮೇಶನನ್ನು ಕಾಣುತ್ತಲೇ ಕಾರ್ಯಕ್ರಮದ ವ್ಯವಸ್ಥಾಪಕರು ಭಾಷಣ ಮಾಡಲು ಆಹ್ವಾನಿಸಿದರು. ಬಸವಣ್ಣನವರ ವ್ಯಕ್ತಿತ್ವ, ವಿಚಾರಧಾರೆ ಕುರಿತು ಸಂಗಮೇಶ ಮಾಡಿದ ಚೊಚ್ಚಲು ಭಾಷಣವದು. ಆದರದು

Digitalized by e-Sahithya Documentation Forum
Sponsored by Sarayu Foundation Trust

ಸಭಿಕರನ್ನು ಅಯಸ್ಕಾಂತದಂತೆ ಆಕರ್ಷಿಸಿತ್ತು. ಫಲಿತಾಂಶದ ನಂತರ ಬಿಜಾಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ಸೇರಿದ ಸಂಗಮೇಶ ಅಷ್ಟರಿಂದಲೇ ತೃಪ್ತನಾಗದೆ ಮುಂದೆ ಓದಬೇಕೆಂಬ ಮಹತ್ವಾಕಾಂಕ್ಷೆಯಿಂದ, ಕೆಲಸವನ್ನು ತೊರೆದು, ಎಂ. ಎ. ತತ್ತ್ವಜ್ಞಾನವನ್ನು ಓದಲು ಕರ್ನಾಟಕ ವಿಶ್ವವಿದ್ಯಾಲಯವನ್ನು ಪ್ರವೇಶಿಸಿದನು. ಶಿಕ್ಷಕ ವೃತ್ತಿಯ ಈ ಅವಧಿಯಲ್ಲಿ ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಪ್ರವಚನ ಕೇಳಿ ಪ್ರಭಾವಿತರಾಗಿ, ಅವರಿಂದ ಲಿಂಗದೀಕ್ಷೆಯನ್ನು ಪಡೆದುಕೊಂಡರು.

ಚರಜಂಗಮ

ಧಾರವಾಡದಲ್ಲಿ ಓದುತ್ತಿರುವಾಗ ನವ ಕಲ್ಯಾಣಮಠದ ಪೂಜ್ಯ ಶ್ರೀ ಕುಮಾರ ಸ್ವಾಮಿಗಳ ಉಪನ್ಯಾಸಗಳು ಸಂಗಮೇಶನ ಮೇಲೆ ಅಪಾರವಾದ ಪ್ರಭಾವ ಬೀರಿದವು. ಅದೇ ಸಮಯದಲ್ಲಿ ಆರ್ಥಿಕ ಸಂಕಷ್ಟ ಮೇರೆ ಮೀರಿ ಅಭ್ಯಾಸವನ್ನು ಮುಂದುವರಿಸಲು ಆಗಲಿಲ್ಲ. ಬಸವಣ್ಣನವರಿಗೆ ಕೊಟ್ಟಿದ್ದ ವಾಗ್ದಾನವೂ ಮನಸ್ಸಿನಲ್ಲಿ ಮೊಳಕೆಯೊಡೆದು ಬೆಳೆಯುತ್ತಿತ್ತು. ಒಂದು ದಿನ, 1956ರ ನವಂಬರ್ 19 ರಂದು, ನಿರ್ಧಾರಗಟ್ಟಿಗೊಂಡ ಸಂಗಮೇಶ ಧಾರವಾಡ ನಗರದ ಹೊರವಲಯದ ಗುಡ್ಡಕ್ಕೆ ಹೋಗಿ ಸುಪ್ರಭಾತದಲ್ಲಿ ಹೊಂಗಿರಣಗಳನ್ನು ಚೆಲ್ಲುತ್ತಾ ಬಂದ ಸೂರ್ಯನ ಮೂಕಸಾಕ್ಷಿಯಾಗಿ ಕಾವಿವಸ್ತ್ರಗಳನ್ನು ಸ್ವಯಂಪ್ರೇರಣೆಯಿಂದ ಧರಿಸಿ, ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಗುರು ಬಸವಣ್ಣನವರೇ ದೀಕ್ಷಾಗುರುವೆಂದು ಭಾವಿಸಿ ಪ್ರತಿಜ್ಞೆಯನ್ನು ಕೈಗೊಂಡು ಸ್ವಾಮಿ ಲಿಂಗಾನಂದ ಎಂದು ಕರೆದುಕೊಂಡರು. ಮಾಮೂಲಿ ವೇಷದಲ್ಲಿ ಕೋಣೆಯಿಂದ ಹೊರಬಿದ್ದ ತರುಣ ಸಂಗಮೇಶ, ಕಾಷಾಯ ವಸ್ತ್ರಧಾರಿಯಾಗಿ, ಸ್ವಾಮಿ ಲಿಂಗಾನಂದರಾಗಿ ಬಂದಾಗ ಸಹಪಾಠಿಗಳಿಗೆಲ್ಲ ಆಶ್ಚರ್ಯ–ಆಘಾತ. ತಮ್ಮ ಬಳಿ ಇದ್ದ ಬಟ್ಟೆ ಬರೆಗಳನ್ನು ಮಿತ್ರರಿಗೆ ಕೊಟ್ಟು ಅಂದು ಹೊರಬಿದ್ದ ಸ್ವಾಮೀಜಿ ಅಖಂಡ ತಪಶ್ಚರ್ಯೆಯಲ್ಲಿ ತೊಡಗಿದರು. ಸೊಗಲ ಸೋಮೇಶ್ವರ, ಮಾಣಿಕ್ಯಗಿರಿ ಮುಂತಾದ ಕಡೆಗಳಲ್ಲಿ ಅಖಂಡವಾದ ಸಾಧನೆ ಕೈಗೊಂಡರು. ನಿರಂತರ ಧ್ಯಾನ, ಯೋಗಾಭ್ಯಾಸ, ಉಪವಾಸ ಮುಂತಾದ ನೇಮಗಳಿಂದ ಸಂಕಲ್ಪವನ್ನು ಗಟ್ಟಿಗೊಳಿಸಿಕೊಂಡು, ಆಳವಾದ ಶಾಸ್ತ್ರಾಧ್ಯಯನ ಮಾಡಿದರು. ವಚನ ಸಾಹಿತ್ಯವನ್ನು ಅಭ್ಯಸಿಸಿ, ಅದರ ಪ್ರಚಾರ ಮಾಡುತ್ತ, ಅವ್ಯಾಹತವಾಗಿ ಮೂವತ್ತೈದು ವರ್ಷಗಳವರೆಗೆ ಚರಜಂಗಮರಾಗಿ ಸಂಚರಿಸಿದ್ದಾರೆ. ಗೊತ್ತುಗುರಿ ಇಲ್ಲದೆ ಅಲೆದಾಡದೆ ಜನರಿಗೆ ಜ್ಞಾನದ ತಣ್ಣಂಗೆಯನ್ನು ನೀಡುವ ಅರಿವಿನ ವಾಹಿನಿಯಾಗಿ ಹರಿದಾಡಿದ್ದಾರೆ. 1961ರ ಆಗಸ್ಟ್ 7 ರಂದು ಸುತ್ತೂರಿನ ಲಿಂಗೈಕ್ಯ ಜಗದ್ಗುರುಗಳಿಂದ ಕ್ರಿಯಾ ಸನ್ಯಾಸವನ್ನು ವಿಧ್ಯುಕ್ತವಾಗಿ ಪಡೆದು, ಸದ್ಗುರು ಲಿಂಗಾನಂದ ಸ್ವಾಮೀಜಿಯವರಾಗಿ ನಾಡಿನ ಉದ್ದಗಲಕ್ಕೂ ಪ್ರವಾಸ ಮಾಡಿದ್ದಾರೆ.

ಪ್ರವಚನ ಪಿತಾಮಹ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಖ್ಯಾತರಾಗಿರುವುದು ಅವರ ಪ್ರವಚನ ಕಾಯಕದಿಂದ. ಅವರ ಪ್ರವಚನಗಳು ಭಾವಜೀವಿ–ಬುದ್ಧಿಜೀವಿಗಳಿಬ್ಬರನ್ನೂ ಆಕರ್ಷಿಸುವ ವೈಶಿಷ್ಟ್ಯ ಹೊಂದಿವೆ. ಯಾವುದೋ ಪುರಾಣಗಳಿಂದ ಆಯ್ದು, ವಿಜ್ಞಾನವು ಅನುಮೋದಿಸದ, ವಿಮರ್ಶಾಪ್ರಜ್ಞೆ ಒಪ್ಪದ ಕಥೆಗಳನ್ನು ಹೇಳಿ ಜನರಂಜನೆ ಮಾಡದೆ, ತತ್ತ್ವಜ್ಞಾನ–ವಿಜ್ಞಾನಗಳೆರಡರ ಹಿನ್ನೆಲೆಯಲ್ಲಿ ಪ್ರವಚನವನ್ನು ಮಾಡುವರು. ಅಖಂಡವಾಗಿ ನಲವತ್ತು–ಐವತ್ತು ದಿವಸಗಳ ಕಾಲ ದಿನಕ್ಕೆರಡು ಗಂಟೆಗಳ ಕಾಲ ಉಪನ್ಯಾಸ ಮಾಡಿದರೂ ವಿಷಯವು ಪುನರಾವರ್ತನೆಯಾಗದ ವಿದ್ವತ್ತು ಪೂಜ್ಯ ಸ್ವಾಮೀಜಿಯವರದು : ವಚನ ಸಾಹಿತ್ಯವು ಕನ್ನಡದ ಅಮೂಲ್ಯ ಆಸ್ತಿಯಷ್ಟೆ. ಅಂಥ ವಚನ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸುತ್ತ, ಜೀವನದ ಎಲ್ಲ ರಂಗಗಳಲ್ಲೂ ಮಾರ್ಗದರ್ಶನ ಮಾಡುವ ವಿಷಯ ವಿಸ್ತಾರದಿಂದ ಪ್ರವಚನ ಮಾಡುವುದರಿಂದ ಪ್ರವಚನಗಳು ಕೇಳುಗರ ಹೃನ್ಮನಗಳನ್ನು ಸೆರೆಹಿಡಿಯುತ್ತವೆ. ಸಮಯದ ಪರಿವೆ ಇಲ್ಲದೆ ಜನರು ಮಂತ್ರಮುಗ್ಧರಾಗಿ ಆಲಿಸುತ್ತಾರೆ. ಘಂಟಾನಾದದಂತಹ ಧ್ವನಿ, ವಿಚಾರಗಳ ಸ್ಪಷ್ಟತೆ, ತಾತ್ತ್ವಿಕ ನಿಖರತೆ ಇಂತಹ ಗುಣಗಳಿಂದ ಪ್ರವಚನಗಳು ವೈಶಿಷ್ಟ್ಯಪೂರ್ಣವಾಗಿರುತ್ತವೆ. ಪೂಜ್ಯ ಸ್ವಾಮೀಜಿಯವರ ಉಪನ್ಯಾಸಗಳ ಇನ್ನೊಂದು ವಿಶೇಷವೆಂದರೆ ನಿರ್ಭೀತವಾಗಿ ಸತ್ಯ–ತತ್ತ್ವಗಳನ್ನು ಮಂಡಿಸುವಿಕೆ. ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ರಾಷ್ಟ್ರೀಯ ಜೀವನಕ್ಕೆ ಸಂಬಂಧಪಟ್ಟ ವೈವಿಧ್ಯ ವಿಷಯಗಳೊಡನೆ, ಸಮಾನತೆಯ ಧೋರಣೆ ಅನುಸರಿಸುವುದರಿಂದ ಜಾತಿಮತಪಂಥ ಭೇದವಿಲ್ಲದೆ ಜನರು ಕಿಕ್ಕಿರಿದು ನೆರೆಯುತ್ತಾರೆ.

ತಾವಷ್ಟೆ ಶ್ರೇಷ್ಠ ಪ್ರವಚನಕಾರರಾಗದೆ ಇನ್ನೂ ಅನೇಕ ಪ್ರಚಾರಕರನ್ನು ತರಬೇತಿಗೊಳಿಸಿದ ಹಿರಿಮೆ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರದು: ಶ್ರೀಗಳ ಶಿಷ್ಯವೃಂದದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು, ಪೂಜ್ಯ ಸದ್ಗುರು ಗಂಗಾದೇವಿಯವರು, ಪೂಜ್ಯ ದಯಾನಂದ ಸ್ವಾಮಿಗಳು, ಶ್ರೀ ಚನ್ನಬಸವಾನಂದರು, ಶ್ರೀ ನಿಜಗುಣಾನಂದರು, ಪ್ರಮುಖರು.

ಪೂಜ್ಯರ ವಿಶೇಷ ಸಾಧನೆಯ ಗಣನೀಯ ಘಟನೆ ಸ್ತ್ರೀ ಜಗದ್ಗುರು ಪೀಠಸ್ಥಾಪನೆ. ಚರಜಂಗಮರಾಗಿ ಸಂಚರಿಸುತ್ತ ಸಾಗಿದ್ದ ಪೂಜ್ಯ ಶ್ರೀಗಳ ಆಶ್ರಯಕೋರಿ ಐತಿಹಾಸಿಕ ಚಿನ್ಮೂಲಾದ್ರಿ (ಚಿತ್ರದುರ್ಗದ)ಯಿಂದ ಮಾತೆ ಮಹಾದೇವಿಯರು ಬಂದಾಗ ಅವರ ಮುಮುಕ್ಷತ್ವ, ಪ್ರತಿಭೆ ಗುರುತಿಸಿ ಶಿಷ್ಯರನ್ನಾಗಿ ಸ್ವೀಕರಿಸಿದ್ದೇ ಅಲ್ಲದೆ. ಅವರನ್ನು ಜಗದ್ಗುರು ಪೀಠಕ್ಕೆ ಏರಿಸಿದರು. ಹನ್ನೆರಡನೆಯ ಶತಮಾನದಲ್ಲಿ ಜಾತಿವರ್ಣವರ್ಗ ರಹಿತ ಕಲ್ಯಾಣರಾಜ್ಯವನ್ನು ಈ ಮರ್ತ್ಯದಲ್ಲಿ ಕಟ್ಟಲು ಬಸವಣ್ಣನವರು ಪ್ರಯತ್ನಿಸಿದರು. ಆ ಬಸವ ಪಥ ಹಿಡಿದ ವಿರಕ್ತ ಪರಂಪರೆ ಅಂದಿನಿಂದಲೂ ಸಾಗಿ ಬಂದಿತು. ಅಕ್ಕಮಹಾದೇವಿಯ ಪಥ ಹಿಡಿದ ಮಹಿಳಾ ಗುರು ಪರಂಪರೆ ಸಾಗಿಬರಲಿಲ್ಲ. ಅಂಥ

Digitalized by e-Sahithya Documentation Forum
Sponsored by Sarayu Foundation Trust

ಮಹಿಳಾಗುರು ಪರಂಪರೆಯನ್ನು ಎತ್ತಿ ಹಿಡಿಯಲು, ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಧಾರವಾಡದಲ್ಲಿ 1970 ರಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠವನ್ನು ಸ್ಥಾಪಿಸಿದರು ; ಪೂಜ್ಯ ಮಾತಾಜಿಯವರನ್ನು ಪ್ರಥಮ ಪೀಠಾಧಿಕಾರಿಣಿಯನ್ನಾಗಿ ಮಾಡಿದರು.

ಬಸವ ಧರ್ಮಪೀಠ-ಶರಣ ಮೇಳ

ಕನ್ನಡ ನಾಡಿನ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಸಾಹಿತ್ಯ ಮತ್ತು ಧಾರ್ಮಿಕ ಆಂದೋಲನದ ದೃಷ್ಟಿಯಿಂದ ಸುವರ್ಣಯುಗ. ನಾಡು ಶರಣ ಸಮುದಾಯದಿಂದ, ನುಡಿಯು ವಚನ ಶಾಸ್ತ್ರದಿಂದ ಶ್ರೀಮಂತಗೊಂಡವು-ಧೀಮಂತಗೊಂಡವು. ಈ ಚಳುವಳಿಯ ಸೂತ್ರಧಾರರು ಬಸವಣ್ಣನವರು. ಅವರ ಮಾರ್ಗದರ್ಶನದ ಬೆಳಕಿನಲ್ಲಿ ಅಸಂಖ್ಯಾತ ಶರಣರು ನವಸಮಾಜ ನಿರ್ಮಾಣಕ್ಕೆ ಯತ್ನಿಸಿದರು. ಕಲ್ಯಾಣ ಕ್ರಾಂತಿಯು ವರ್ಣಾಂತರ ವಿವಾಹದ ದೆಸೆಯಿಂದ ಆದಾಗ ವಚನ ವಾಙ್ಮಯವನ್ನು ಜಾತಿವಾದಿಗಳಿಂದ ರಕ್ಷಿಸಲು ಶರಣರು ಶ್ರಮಿಸಿದರು. ಆಗ ಗುಪ್ತಗಾಮಿನಿಯಾದ ವಚನ ವಾಙ್ಮಯ 20ನೆಯ ಶತಮಾನದಲ್ಲಿ ಹೊರಬಂದಿತು. ಇಂತಹ ವಚನ ಸಾಹಿತ್ಯವನ್ನು ಜನ ಸಾಮಾನ್ಯರಿಗೆ ಮುಟ್ಟಿಸಿದ ಶ್ರೇಯಸ್ಸು ಪೂಜ್ಯ ಶ್ರೀಗಳು ಸ್ಥಾಪಿಸಿದ ವಿಶ್ವಕಲ್ಯಾಣ ಮಿಷನ್‌ಗೆ ಸಲ್ಲುತ್ತದೆ. ಈ ಧರ್ಮ ಪ್ರಚಾರ ಕಾರ್ಯ ಇನ್ನಷ್ಟು ವ್ಯಾಪಕವಾಗಿ ಆಗಲು ಸಾಧನವಾಗುವಂತೆ ಮತ್ತು ಕೂಡಲ ಸಂಗಮ ಸುಕ್ಷೇತ್ರವನ್ನು ಸರ್ವಾಂಗೀಣವಾಗಿ ಬೆಳೆಸಲು ಅನುಕೂಲವಾಗುವಂತೆ 1988ರಲ್ಲಿ ಬಸವ ಧರ್ಮಪೀಠ ಟ್ರಸ್ಟ್ ಅನ್ನು ಪೂಜ್ಯರು ಸ್ಥಾಪಿಸಿದ್ದಾರೆ. ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರವಾದ ಕೂಡಲ ಸಂಗಮಕ್ಕೆ ಐತಿಹಾಸಿಕ ಮಹತ್ವವಿದ್ದೂ, ಅದು ಅತ್ಯಂತ ನಿರ್ಲಕ್ಷಿತ ಕ್ಷೇತ್ರವಾಗಿತ್ತು. ಪೂಜ್ಯ ಸ್ವಾಮೀಜಿಯವರ ಸತ್ಸಂಕಲ್ಪದ ಫಲವಾಗಿ ಈಗ ಅದು ಸರ್ವಾಂಗೀಣವಾಗಿ ಬೆಳೆಯುತ್ತಿದೆ. ಇದಕ್ಕೆ ಪೋಷಕವಾಗಿದೆ 'ಶರಣ ಮೇಳ'. ಪ್ರತಿವರ್ಷದ ಜನವರಿಯಲ್ಲಿ ಬಸವ ಕ್ರಾಂತಿದಿನ (ಸಂಕ್ರಾಂತಿ)ದ ಅಂಗವಾಗಿ 13, 14, 15 ರಂದು ನಡೆಯುವ ಶರಣಮೇಳ ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಮಾತ್ರವಲ್ಲ ಹೊರರಾಜ್ಯಗಳಿಂದೆಲ್ಲ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿದೆ. ಈ ಶರಣ ಮೇಳದ ಹಿಂದಿನ ಸಚೇತಕ ಶಕ್ತಿ ಪೂಜ್ಯ ಸ್ವಾಮೀಜಿಯವರು.

ಮಾನವೀಯತೆಯ ಸಾಕಾರ

ಪೂಜ್ಯರು ತತ್ತ್ವನಿಷ್ಠೆಯ ವಿಷಯದಲ್ಲಿ ಎಷ್ಟು ದೃಢಚಿತ್ತರೋ, ಬಿರುಸು ಎನಿಸುವರೋ ಮಾನವೀಯತೆಯ ದೃಷ್ಟಿಯಿಂದ ಅಷ್ಟೆ, ಮೃದುಹೃದಯಿ. ಬಾಲ್ಯದಿಂದಲೂ ಆ ಸದ್ಗುಣವನ್ನು ಮೆರೆಯುತ್ತ ಬಂದವರು. ಆಕರ್ಷಕ ನಿಲುವು, ಮುದ್ದು

ಮಾತುಗಳಿಂದ ಶ್ರೀಮಂತ ದಾನಿಗಳಲ್ಲಿ ಬೇಡಿ, ಸಂಗ್ರಹಿಸಿ ತಂದ ಹಣದಿಂದ ಶಾಲಾ ಶುಲ್ಕ ಕಟ್ಟಿ ಹಣವು ಉಳಿದಾಗ ತನ್ನ ಬಟ್ಟೆ ಹರಿದು, ಬಟ್ಟೆಯ ಅಗತ್ಯ ತೀವ್ರವಾಗಿದ್ದರೂ, ಬಟ್ಟೆ ಕೊಳ್ಳದೆ ತನ್ನ ಬಡಮಿತ್ರರಿಗೆ ಪರೀಕ್ಷೆಯ ಶುಲ್ಕ ಕಟ್ಟಲು ಹಣ ಕೊಡುತ್ತಿದ್ದ ದಯಾಶೀಲರು. ಬಗೆಬಗೆಯ ತಿನಿಸುಗಳನ್ನು ಮಾಡಿಕೊಡಲಾಗದ ತಾಯಿ ಉತ್ತರ ಕರ್ನಾಟಕದ ವೈಶಿಷ್ಟ್ಯವಾದ ಕಟಕು ರೊಟ್ಟಿಯನ್ನು ಮಾಡಿ, ಕಟ್ಟಿಕೊಟ್ಟರೆ ಅದನ್ನು ತಾನೇ ಇಟ್ಟುಕೊಂಡು ತಿನ್ನದೆ, ಅಷ್ಟನ್ನೂ ತರಲು ಶಕ್ತಿ ಇಲ್ಲದ ಬಡ ಹುಡುಗರನ್ನು ಸುತ್ತಲೂ ಕುಳ್ಳಿರಿಸಿಕೊಂಡು ಹಂಚಿ ತಿನ್ನುವ ಸ್ವಭಾವ ಅವರದು. ಮನೆಯಿಂದ ಶ್ರೀಮಂತ ಹುಡುಗರು ಬಗೆಬಗೆಯ ತಿಂಡಿ ಕಟ್ಟಿಕೊಂಡು ಬಂದು ಮುಚ್ಚಿಟ್ಟುಕೊಂಡು ತಿನ್ನುತ್ತಿದ್ದರೆ, ಅವರಿಗೆಲ್ಲ ಹಿತೋಪದೇಶ-ಎಲ್ಲರೊಡನೆ ಹಂಚಿಕೊಂಡು ತಿನ್ನಲು, ಈಗಲೂ ಶಿಷ್ಯರನ್ನು ವಾತ್ಸಲ್ಯದಿಂದ ಪೋಷಿಸುವುದರಲ್ಲಿ ಅಪ್ರತಿಮರು. ಶಿಷ್ಯರು ತಮಗಿಂತ ಹೆಚ್ಚಿನ ಸಾಧನೆ ಮಾಡುವುದರಲ್ಲಿ ಯಶಸ್ವಿಯಾದರೆ ಮತ್ಸರಿಸುವ ಗುರುಗಳು ಇರಬಹುದೇನೊ. ಆದರೆ ಪೂಜ್ಯರು ತಮ್ಮ ಶಿಷ್ಯರು ತಮಗಿಂತಲೂ ಪ್ರತಿಭಾವಂತರಾದರೆ ಹೆಮ್ಮೆಪಡುವ ಮತ್ತು ಹಾಗಾಗಬೇಕೆಂದು ಸಂಕಲ್ಪಿಸುವ ಹೃದಯವಂತರು.

ಶ್ರೀಗಳ ಮಾನವೀಯ ಗುಣಕ್ಕೆ ಸಾಕ್ಷಿಯಾದ ಒಂದು ಘಟನೆ ಹೀಗಿದೆ. 1974ರ ನವೆಂಬರ್ 2; ಮಾತೆಯವರು 'ತರಂಗಿಣಿ' ಅಕ್ಕಮಹಾದೇವಿಯನ್ನು ಕುರಿತಾದ ಕಾದಂಬರಿಯನ್ನು ಬರೆಯುತ್ತಿದ್ದರು. ಅಕ್ಕನು ಐಕ್ಯಳಾದ ಕದಳಿಬನದ ಪ್ರತ್ಯಕ್ಷ ಸಂದರ್ಶನ ಅಗತ್ಯವೆನಿಸಿದಾಗ ಸುಮಾರು 40 ಜನ ಭಕ್ತವೃಂದದೊಡನೆ ಹೊರಟರು. ದುರ್ಗಮವಾದ ಪ್ರವಾಸ ಸುಸೂತ್ರವಾಗಿ ಸಾಗಿತು. ಕೃಷ್ಣಾನದಿಯನ್ನು ಅಕ್ಕನ ಹಳ್ಳ ಕೂಡುವ ಒಂದು ಸುಂದರ ಸ್ಥಳವಿದೆ. ಅಲ್ಲಿ ಒಂದು ಬ್ರಾಹ್ಮಣ ಮಠಕ್ಕೆ ಅಧಿಕಾರಿಯಾಗಲಿರುವ ಓರ್ವ ವ್ಯಕ್ತಿ ಪೂರ್ವಭಾವಿ ತಪಸ್ಸಿಗಾಗಿ ಕುಟೀರವೊಂದನ್ನು ರಚಿಸಿಕೊಂಡು ಸಾಧನೆಯಲ್ಲಿದ್ದರು. ಓರ್ವ ಪರಿಚಾರಕ ಮಾತ್ರ ಜೊತೆಗಿದ್ದ. ಎಲ್ಲ ಸಾಮಗ್ರಿಗಳನ್ನು ಕೊಟ್ಟು ಉಳಿದವರು ಹೊರಟುಹೋಗಿದ್ದರು. ನದಿಯ ದಂಡೆ, ವಿಪರೀತ ಚಳಿ. ಸೊಳ್ಳೆಗಳ ಕಾಟ ; ಕಠಿಣವ್ರತ; ಆ ಭಾವೀ ಸನ್ಯಾಸಿಗೆ ಜ್ವರ ಬಂದಿತ್ತು. ಕದಳೀವನ ನೋಡಿಕೊಂಡು ಸ್ವಾಮೀಜಿಯವರ ತಂಡ ವಾಪಸ್ಸು ಬರುವಾಗ, ಆ ಸ್ವಾಮೀಜಿ ವಿಪರೀತ ಬಳಲಿದ್ದರು. ಜ್ವರ ಹೆಚ್ಚಾಗಿ ಬಡಬಡಿಸುತ್ತಿದ್ದರು. ಪರಿಚಾರಕ ನಿಸ್ಸಹಾಯಕನಾಗಿದ್ದ. ಆ ವಟುವೋ ಎತ್ತರವಾದ ಬಲಿಷ್ಠ ವ್ಯಕ್ತಿ. ಅವರ ಪರಿಸ್ಥಿತಿ ನೋಡಿ ಎಲ್ಲರಿಗೂ ವ್ಯಥೆ. ಪ್ರವಾಸಿಕರ ಬಳಿ ಇದ್ದವು ಸಾಮಾನ್ಯ ಔಷಧಿ ಮಾತ್ರ. ಇಂಥ ನಿಸ್ಸಹಾಯಕ ಸ್ಥಿತಿಯಲ್ಲಿ ಆ ವಟುವನ್ನು ಬಿಟ್ಟುಬಂದರೆ ಆತ ಉಳಿಯುವುದು ಸಾಧ್ಯವಿರಲಿಲ್ಲ. ಇನ್ನು ಆತನನ್ನು ಎತ್ತಿಕೊಂಡು ಬೆಟ್ಟ ಹತ್ತುವ ಧೈರ್ಯ ಯಾರಿಗೂ ಇರಲಿಲ್ಲ. ಕಡಿದಾದ ಪರ್ವತ ಕಾಯ್ದು ಬಂಡೆಗಲ್ಲು ಮುಳ್ಳು-ಕಂಟಿಗಳ ಮಧ್ಯೆ ಸಾಗ

Digitalized by e-Sahithya Documentation Forum
Sponsored by Sarayu Foundation Trust

ಬೇಕು. ಜೊತೆಗೆ ಹುಲ್ಲು ಎದೆಮಟ್ಟ ಬೆಳೆದು ಕಾಲಿಡಲು ಸಾಧ್ಯವಿಲ್ಲದಷ್ಟು ದಟ್ಟವಾಗಿತ್ತು. ಮಾನವೀಯತೆ–ಅಸಹಾಯಕತೆಗಳ ಮಧ್ಯೆ ಎಲ್ಲರೂ ಹೊಯ್ದಾಡಿದರು. ಆಗ ಲಿಂಗಾನಂದ ಸ್ವಾಮೀಜಿಯವರು ನುಡಿದರು. "ಇದು ನಮ್ಮ ಸತ್ವ ಪರೀಕ್ಷೆ; ಮಾನವೀಯತೆ ಇಲ್ಲದ ಆದರ್ಶಕ್ಕೆ ಯಾವ ಬೆಲೆ ಇದೆ? ನಾನು ಇವರನ್ನು ಹೊರುತ್ತೇನೆ. ಕೆಲವರು ಅಲ್ಲಲ್ಲೇ ನೆರವು ನೀಡಿ." ಎಂದವರೆ ಹೆಗಲ ಮೇಲೆ ಆತನನ್ನು ಹಾಕಿಕೊಂಡರು. ಅದೊಂದು ಮರೆಯಲಾಗದ ಪ್ರಸಂಗವಂತೆ. ಹತ್ತು ಹತ್ತು ಹೆಜ್ಜೆ ಏರುವುದು, ನೀರು ಕುಡಿದು ಸುಧಾರಿಸಿಕೊಳ್ಳುವುದು. ಆ ವಟುವೂ ಬಿಸಿಲು ಮತ್ತು ಜ್ವರದಿಂದ ಕಂಗಾಲಾಗಿದ್ದ; ಎಚ್ಚರ ತಪ್ಪಿದಂತಿದ್ದು ಇನ್ನಷ್ಟು ಭಾರವೆನಿಸುತ್ತಿದ್ದ. ಆತನಿಗೂ ನೀರನ್ನು ಗುಟುಕು ಗುಟುಕಾಗಿ ಕುಡಿಸುತ್ತ ಒಯ್ಯಬೇಕು. ಒಮ್ಮೆ ಪೂಜ್ಯ ಸ್ವಾಮೀಜಿ ತಾವೇ ಹೆಜ್ಜೆ ಇಡಲಾರದಷ್ಟು ಬಳಲಿದರು. ಆದರೂ ಹಿಡಿದ ಕರ್ತವ್ಯ ಬಿಡದ ಛಲಗಾರರು. ಸಿಕ್ಕ ಒಂದು ಗಿಡದ ನೆರಳಲ್ಲಿ ಆ ವ್ಯಕ್ತಿಯನ್ನು ಮಲಗಿಸಿ, ಸುಧಾರಿಸಿಕೊಂಡು ಮುನ್ನಡೆದರು. ಉತ್ತಮ ಆಟಗಾರರಾಗಿ ವಿದ್ಯಾರ್ಥಿ ಜೀವನದಲ್ಲಿ ಶಾರೀರಿಕ ದಾರ್ಢ್ಯವನ್ನು, ಯೋಗಾಸನ ಪರಿಣಿತರಾಗಿ ಅಂತಃಶಕ್ತಿಯನ್ನು ಬೆಳೆಸಿಕೊಂಡುದು ಈಗ ಸಾರ್ಥಕವಾಗಿತ್ತು. ಮಧ್ಯಾಹ್ನ ಒಂದು ಗಂಟೆಗೆ ಆರಂಭವಾಗಿದ್ದ ಈ ಆರೋಹಣ ಮುಗಿದುದು ಸಂಜೆ 6ಕ್ಕೆ, ಬೆಟ್ಟಹತ್ತಿ ಒಂದು ಹೆದ್ದಾರಿಯನ್ನು ಸೇರಿದಾಗ. ಕೆಲವರನ್ನು ಕಾಲ್ನಡಿಗೆಯಲ್ಲಿ ಮುಂದೆ ಶ್ರೀಶೈಲ ತಲ್ಪಲು ಕಳಿಸಿ, ರೋಗಿಯನ್ನು ದಾರಿಬದಿ ಕೂರಿಸಿಕೊಂಡು ವಾಹನವೊಂದರ ಬರವಿಗಾಗಿ ಕಾಯ್ದುದಾಯಿತು. ಒಂದು ಲಾರಿ ಬಂದಾಗ ಸಂಗತಿಯನ್ನು ವಿವರಿಸಿ, ಆಸ್ಪತ್ರೆ ಇರುವ ಹಳ್ಳಿಯ ಬಳಿ ರೋಗಿಯನ್ನು ಇಳಿಸಲು ವಿನಂತಿಸಿಕೊಂಡುದಾಯಿತು. ಪ್ರವಾಸಿ ತಂಡ ಹೋಗುವಾಗ ಹಳ್ಳಿಯಲ್ಲಿದ್ದ ವೈದ್ಯರನ್ನು ಕಂಡು, ಎಲ್ಲ ವಿವರ ತಿಳಿಸಿ ಚಿಕಿತ್ಸೆಗೆ ಹಣಕೊಟ್ಟು ಪೂಜ್ಯ ಸ್ವಾಮೀಜಿ ತಮ್ಮ ಪರಿವಾರದೊಡನೆ ಶ್ರೀಶೈಲದತ್ತ ಸಾಗಿದರು. ನಿಜಕ್ಕೂ ಇದು ಅತ್ಯಂತ ಹೃದಯಸ್ಪರ್ಶಿ ಘಟನೆಯಲ್ಲವೆ?

ಶ್ರೀಗಂಧದಂತಹ ತ್ಯಾಗ

ಪೂಜ್ಯ ಸ್ವಾಮೀಜಿಯವರ ಬದುಕು ನಿಸ್ವಾರ್ಥದ ಗೌರಿಶಂಕರ. ಜೀವನದುದ್ದಕ್ಕೂ ತ್ಯಾಗದಲ್ಲೇ ಆನಂದಪಟ್ಟಿದ್ದಾರೆ. ಶ್ರೀಗಂಧದ ವೃಕ್ಷ ಇನ್ನೊಂದು ವೃಕ್ಷದ ಆಸರೆ ಪಡೆದು ಬೆಳೆದು, ಪರಿಮಳಯುಕ್ತವಾದ ಗಿಡವಾಗಿ ಬಾಳಿ, ತೇಯ್ದರೆ ಗಂಧವನ್ನು ಕೊಟ್ಟು, ಉರಿದರೆ ಸುಮಧುರ ವಾಸನೆ ನೀಡಿ, ಕೆತ್ತಿದರೆ ಕಲಾಕೃತಿಯಾಗಿ ಸಾರ್ಥಕದ ಬಾಳು ಬಾಳುತ್ತದೆ. ಹಾಗೆಯೇ ಸ್ವಾಮೀಜಿ ಗುರು ಬಸವಣ್ಣನವರ ಆಸರೆಯಲ್ಲಿ, ಅವರ ಕರುಣಾರಸವನ್ನು ಹೀರಿ ಜ್ಞಾನದ ಪರಿಮಳ ನೀಡಿದ್ದಾರೆ; ಸಮಾಜಕ್ಕಾಗಿ, ತತ್ತ್ವಪ್ರಚಾರಕ್ಕಾಗಿ ತಮ್ಮನ್ನು ತಾವು ಸವೆದುಕೊಂಡಿದ್ದಾರೆ. ಸಾರ್ಥಕದ ಬಾಳು ಬಾಳಿ, ತಮ್ಮ ಜೀವನವನ್ನು ಒಂದು ಕಲಾಕೃತಿಯನ್ನಾಗಿ ಮಾಡಿಕೊಂಡಿದ್ದಾರೆ. ತಮ್ಮ

ಭಕ್ತರಿಗೆ ಗುರೂಜಿಯಾಗಿ, ಶಿಷ್ಯವೃಂದಕ್ಕೆ ಅಪ್ಪಾಜಿಯಾಗಿರುವ ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಇದೇ ಗಣೇಶ ಚೌತಿಗೆ 60 ವರ್ಷಗಳನ್ನು ಪೂರೈಸಿ, 61ಕ್ಕೆ ಪಾದಾರ್ಪಣ ಮಾಡಿದ್ದಾರೆ. ಅದಕ್ಕಾಗಿ ಪೂಜ್ಯರ ಭಕ್ತರು, ಶಿಷ್ಯರು, ಅಭಿಮಾನಿಗಳು ಅಕ್ಟೋಬರ್ 27 ರಂದು ಕರ್ನಾಟಕದ ರಾಜಧಾನಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪೂಜ್ಯರಿಗೆ ಅಭಿನಂದನ ಸಮಾರಂಭವನ್ನು ಹಮ್ಮಿಕೊಂಡಿದ್ದಾರೆ.

ಪೂಜ್ಯರು ತಮ್ಮ ಅಧ್ಯಾತ್ಮಿಕ ಜೀವನದ 35 ವರ್ಷಗಳ ಸುದೀರ್ಘ ಜೀವನ ಯಾತ್ರೆಯಲ್ಲಿ ಹಲವು ಸಾಧನೆಗಳನ್ನು ಮಾಡಿದ್ದಾರೆ. ಒಂದು ಸಣ್ಣ ಬರಹದಲ್ಲಿ ಅವುಗಳನ್ನು ಪಟ್ಟಿಮಾಡುವುದು ಕಷ್ಟಸಾಧ್ಯ. ತಮ್ಮ ಅಗಾಧವಾದ ಸಂಕಲ್ಪ, ಸತತವಾದ ಪರಿಶ್ರಮ, ಅನುಪಮ ಪಾಂಡಿತ್ಯ, ವೀರ ವೈರಾಗ್ಯ, ಅವಿಶ್ರಾಂತ ಪ್ರಯತ್ನ, ಅದಮ್ಯವಾದ ಆತ್ಮಬಲ, ವಿನೂತನ ವಿಚಾರಧಾರೆ, ನಿರ್ಭೀತ ನಿಲುವು–ಇವುಗಳಿಂದ ಈ ನಾಡುನುಡಿಗಳಿಗೆ ಬಹುಮುಖವಾದ ಸೇವೆಯನ್ನು ಸಲ್ಲಿಸಿದ್ದಾರೆ. ಷಷ್ಠ್ಯಬ್ದಿಯ ನಿಮಿತ್ತ ಅಭಿಮಾನಿಗಳು ಅಭಿನಂದಿಸುವ ಮಂಗಳ ಪ್ರಸಂಗದಲ್ಲಿ ಗುರು ಬಸವಣ್ಣನವರು ತಾನು ಆಯ್ದುಕೊಂಡ ತನ್ನ ಕಂದನಿಗೆ ಸುದೀರ್ಘ ಆಯುಷ್ಯ, ಸದೃಢ ಆರೋಗ್ಯಭಾಗ್ಯ ಕರುಣಿಸಲೆಂದು ಅವರಲ್ಲಿ ಪ್ರಾರ್ಥಿಸುತ್ತೇನೆ.

★

ಇಷ್ಟಲಿಂಗದ ಮಹತ್ವ

ಕಸವಕೊಂಡು ಹೊಸಧ್ಯಾನದ ಕೊಟ್ಟಡೆ,
    ಒಲ್ಲೆಂಬ ಚದುರರಾರು?
ಜಲವಕೊಂಡು ಅಮೃತವ ಕೊಟ್ಟಡೆ
    ಒಲ್ಲೆಂಬ ಭಾಷೆಯುದಾರದು?
ಎನ್ನಂತರಂಗದಜ್ಞಾನವ ಕೊಂಡು
    ಸುಜ್ಞಾನವಪ್ಪ ನಿಮ್ಮ ಕರತೇಜವ ಕೊಟ್ಟಡೆ,
ಒಲ್ಲೆಂಬ ಪಾತಕಿ ಯಾರು,
    (ಕಪಿಲ ಸಿದ್ಧಮಲ್ಲಿಕಾರ್ಜುನ) ಮಡಿವಾಳ ತಂದೆ?

—ಶ್ರೀ ಶಿವಯೋಗಿ ಸಿದ್ಧರಾಮೇಶ್ವರ, 194

Digitalized by e-Sahithya Documentation Forum
Sponsored by Sarayu Foundation Trust

ಧರ್ಮಕ್ರಾಂತಿಯ ಧೀರಯೋಗಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ

—ಪೂಜ್ಯ ಶ್ರೀ ದಯಾನಂದ ಸ್ವಾಮಿ

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬರುವಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆವಿರಿ॥

ಎಂದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳನ್ನು ಕುರಿತು ಬರೆದ ಸಾಲುಗಳು ಅಕ್ಷರಶಃ ಸತ್ಯವಾಗಿವೆ. ಹರಿವ ಗಂಗೆಯಂತೆ ಜಂಗಮಲಿಂಗವಾಗಿ ಸಂಚರಿಸಿ ಜ್ಞಾನಬೋಧೆ ಮಾಡುವ ಶ್ರೀಗಳು ಅಡಿಯನ್ನು ಇಟ್ಟು ನಡೆದಲ್ಲೆಲ್ಲ ಅನೇಕ ದೀಪಗಳನ್ನು ಹಚ್ಚಿಬರುವರು, ಅವರ ಪ್ರವಚನಗಳಿಂದ ಹಲವು ಬಗೆಯ ಅಂದರೆ ತಾತ್ತ್ವಿಕ, ನೈತಿಕ, ಅಧ್ಯಾತ್ಮಿಕ, ಬೌದ್ಧಿಕ ಪರಿವರ್ತನೆ ತರುವರು. ವಾಙ್ಮಯ ತಪಸ್ವಿಯಾಗಿ, ಪ್ರವಚನ ಕಾಯಕ ಮಾಡುತ್ತ ನಿರಂತರವಾಗಿ, ಚರಜಂಗಮರಾಗಿ 1956ರಿಂದ ಇಲ್ಲಿಯವರೆಗೂ ಸಂಚರಿಸುತ್ತ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮಾತ್ರವಲ್ಲದೆ ಗಡಿನಾಡುಗಳಲ್ಲಿಯೂ ಚಿರಪರಿಚಿತರಾಗಿರುವ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಕ ಧರ್ಮಪ್ರಚಾರಕರು. ಧರ್ಮದ ಕಡೆಗೆ ಜನರು ಬರದಾಗ ಧರ್ಮವನ್ನೇ ಅವರ ಕಡೆಗೆ ಒಯ್ಯಬೇಕೆಂದು ಘೋಷಿಸಿ, ಅದರಂತೆ ನಡೆದು ತೋರಿಸಿದವರು.

ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೋಕಿನ ಮನುಗೂಳಿಯಲ್ಲಿ ಮಂಗಳವಾರ ದಿ॥ 15-9-1931 ರಂದು ಲಿಂಗವಂತ ಸದ್ಭಕ್ತ ದಂಪತಿಗಳಾದ ಮಲ್ಲಪ್ಪ ಕಪ್ಪರದ-ಕಲ್ಲಮ್ಮನವರ ಮಗನಾಗಿ ಹುಟ್ಟಿದ ಸ್ವಾಮೀಜಿಯವರ ಜನ್ಮನಾಮ 'ಸಂಗಮೇಶ'. ಮುದ್ದುಮಗು ಸಂಗಮೇಶ ಸುಂದರ ಶರೀರಿಯೂ, ಲವಲವಿಕೆಯ ಬಾಲಕನೂ ಆಗಿ ತಾಯಿ-ತಂದೆಯರ ಮಮತೆಯ ಹೆಚ್ಚಿನ ಪಾಲನ್ನು ಪಡೆದನು. ಎಳೆವರೆಯದಿಂದಲೂ ಚುರುಕು ಬುದ್ಧಿ, ಗುಣವಂತಿಕೆ ಸಾಹಸ, ಮುಂದಾಳತ್ವದ ಗುಣಗಳಿಂದ ಶಿಕ್ಷಕರು-ಸಹಪಾಠಿಗಳಿಗೆಲ್ಲ ಅಚ್ಚುಮೆಚ್ಚು. ತಕ್ಕಮಟ್ಟಿಗೆ ಅನುಕೂಲವಾಗಿದ್ದ ಆರ್ಥಿಕ ಸ್ಥಿತಿ ಹೊಂದಿದ್ದ ತಂದೆ ಮಲ್ಲಪ್ಪನವರು ವ್ಯಾಪಾರದಲ್ಲಿ ಸೋಲನ್ನನುಭವಿಸಿದರು. ವ್ಯಾಪಾರವನ್ನು ಮುಖ್ಯ ವೃತ್ತಿಯನ್ನಾಗಿರಿಸಿಕೊಂಡಿದ್ದ ಅವರು ಗಿರಾಕಿಗಳಿಗೆ ಔದಾರ್ಯದಿಂದ ಉದ್ರಿಯಾಗಿ ಸಾಮಾನುಕೊಡುವುದು; ವಾಪಸ್ಸು ಕೊಡಲು ಒತ್ತಾಯಿಸದಿರುವುದು; ಮುಂತಾದ ಕಾರಣಗಳಿಂದ ದಿನದಿನಕ್ಕೆ ಸಂಕಷ್ಟ ಹೆಚ್ಚಿದವು.

ಇದರಿಂದ ಹಣವು ಸರಿಯಾಗಿ ಬರದೆ ಹೋಯಿತು. ಇಂಥ ಅವ್ಯವಹಾರಿಕ ಪ್ರಜ್ಞೆಯೊಡನೆ ಮೂಢನಂಬಿಕೆ ಬೇರೆ ಮನದಲ್ಲಿ ಭದ್ರವಾಗಿ ಬೇರೂರಿತ್ತು. ಸುಗ್ಗಿಯ ಕಾಲದಲ್ಲಿ ಕಣ ಮಾಡಿದಾಗ, ಧಾನ್ಯ ಮಾರಿದಾಗ ಗಿರಾಕಿಗಳಿಂದ ಉದ್ರಿಯನ್ನು ವಸೂಲು ಮಾಡಬೇಕಾಗಿದ್ದಿತು. ಆಗೆಲ್ಲ ದಾರಿಯಲ್ಲಿ ಶಕುನಗಳನ್ನು ನೋಡುತ್ತಿದ್ದರು. ಏನಾದರೂ ಅಪಶಕುನ ಎನಿಸಿದರೆ ಮನೆಯಿಂದ ಹೊರಡುತ್ತಲೇ ಇರಲಿಲ್ಲ, ಹೊರಟರೂ ವಾಪಸ್ಸಾಗುತ್ತಿದ್ದರು. ಹೀಗಾಗಿ ವ್ಯಾಪಾರ ಪಾತಾಳಕ್ಕಿಳಿಯಿತು. ಜೊತೆಗೆ ಮಕ್ಕಳ ಸಂಖ್ಯೆಯೂ ಬೆಳೆದು ಮಾನಸಿಕವಾಗಿ ಜರ್ಜರಿತರಾದರು.

ಇಂಥ ತೊಂದರೆಯ ಮಧ್ಯೆಯೂ ಸಂಗಮೇಶನಿಗೆ ದೇವರು ಕೊಟ್ಟಿದ್ದ ವರವೆಂದರೆ ಬೌದ್ಧಿಕ ಪಟುತ್ವ. ತನ್ನ ಬುದ್ಧಿವಂತಿಕೆ ಮತ್ತು ಉತ್ತಮ ವ್ಯಾಸಂಗದಿಂದಾಗಿ ಸ್ಕಾಲರ್‌ಷಿಪ್ ಪರೀಕ್ಷೆಯಲ್ಲಿ ಬಿಜಾಪುರ ಜಿಲ್ಲೆಗೇ ಮೊದಲಿಗನಾಗಿ ತೇರ್ಗಡೆಯಾದ ಸಂಗಮೇಶ ವಿದ್ಯಾರ್ಥಿ ವೇತನವನ್ನು ಪಡೆದುದೇ ಅಲ್ಲದೆ ವಾರಾನ್ನವನ್ನುಂಡು ಓದನ್ನು ಮುಂದುವರಿಸಿದ. ಉಳ್ಳವರಿಂದ ಬೇಡಿ ಪರೀಕ್ಷಾಶುಲ್ಕ ಸಂಗ್ರಹಿಸಿ. ಕೆಲವೊಮ್ಮೆ ಉಚಿತ ವಿದ್ಯಾರ್ಥಿ ನಿಲಯದಲ್ಲಿದ್ದುಕೊಂಡು, ಸಾರ್ವಜನಿಕ ನಲ್ಲಿಯಲ್ಲಿ ಸ್ನಾನ ಮಾಡುತ್ತ, ಬೀದಿ ದೀಪದ ಬೆಳಕಿನಲ್ಲಿ ಓದುತ್ತ, ಎಲ್ಲ ಅನುಕೂಲತೆಗಳನ್ನು ಪಡೆದು ಓದುತ್ತಿದ್ದ ಶ್ರೀಮಂತರ ಮಕ್ಕಳನ್ನು ವಿದ್ಯಾಭ್ಯಾಸದಲ್ಲಿ ಹಿಂದಕ್ಕೆ ಹಾಕಿ ತೇರ್ಗಡೆಯಾಗುತ್ತಿದ್ದನು.

ಸಂಗಮೇಶನಿಗೆ ಆಟ–ಪಾಠ, ಆಶುಭಾಷಣ-ಪ್ರಬಂಧ ರಚನೆ, ಚರ್ಚಾಗೋಷ್ಠಿ ಮುಂತಾದ ಚಟುವಟಿಕೆಗಳಲ್ಲಿ ಅಪಾರ ಆಸಕ್ತಿ. ಮೂರು ವರ್ಷದ ಮಗುವಿದ್ದಾಗಲೇ ಗುಡದಿನ್ನಿಯ ಬಳಿ ಹರಿದ ಕೃಷ್ಣಾನದಿಯಲ್ಲಿ ಈಜು ಕಲಿತ ಸಂಗಮೇಶ ಮುಂದೆ ಉತ್ತಮ ಈಜುಗಾರನಾಗಿ, ಆಟದಲ್ಲೂ ಬಲ್ಲಿದನಾಗಿ ಮಿಂಚಿದುದುಂಟು. ಸಾಹಸ ಪ್ರವೃತ್ತಿಯ ಜೊತೆಗೆ ಅಪಾರ ದಯಾಶೀಲತೆ. ರಜಾಕಾಲದಲ್ಲಿ ಮನೆಗೆ ಹೋಗಿ ಬರುವಾಗ ಅಥವಾ ಊರಿನ ಮಂದಿಯ ಕೈಲಿ ತಾಯಿ ಕಳಿಸಿಕೊಟ್ಟ ಕಟಕುರೊಟ್ಟಿ-ಚಟ್ನಿಪುಡಿಗಳನ್ನೇ ಇತರ ಸಹಪಾಠಿಗಳೊಡನೆ ಹಂಚಿಕೊಂಡು ತಿನ್ನುವ ಔದಾರ್ಯ, ತಾನು ಭಿಕ್ಷೆ ಎತ್ತಿ ದೈನಂದಿನ ಖರ್ಚು, ಪರೀಕ್ಷಾಶುಲ್ಕ ಕಟ್ಟಲು ಸಂಗ್ರಹಿಸಿದ ಹಣವು ಜಾಸ್ತಿ ಉಳಿದರೆ ಅದರಲ್ಲೇ ಇನ್ನೋರ್ವ ಬಡಮಿತ್ರನಿಗೆ ಪರೀಕ್ಷಾ ಶುಲ್ಕ ಕಟ್ಟುವ ಔದಾರ್ಯ. ಆಗ ತನ್ನ ಬಟ್ಟೆಗಳು ಹರಿದಿದ್ದು, ಅವನ್ನು ಹೊಲಿಸುವುದು ಅಗತ್ಯವಿದ್ದರೂ, ತನ್ನ ಬಟ್ಟೆಗಿಂತಲೂ ಮತ್ತೊಬ್ಬನು ಪರೀಕ್ಷೆಗೆ ಕೂಡುವುದು ಹೆಚ್ಚಿನ ಅಗತ್ಯವಾಗಿ ಸಂಗಮೇಶನಿಗೆ ತೋರುತ್ತಿತ್ತು.

ಅಡೆತಡೆಗಳ ಓಟ (Hurdle race)ದ ಸ್ಪರ್ಧೆಗಳಲ್ಲಿ ಯಶಸ್ವಿಯಾಗುತ್ತಿದ್ದಂತೆ ಸಂಗಮೇಶನು ಬದುಕಿನ ಎಡರು ತೊಡರುಗಳ ಮಧ್ಯೆಯೂ ಮುಂದುವರಿಯುತ್ತಲಿದ್ದ. ಕಷ್ಟಕಾರ್ಪಣ್ಯಗಳ ಮಧ್ಯದಲ್ಲೂ ಎದೆಗೆಡದ ಮುನ್ನಡೆವ ಉತ್ಸಾಹ, ಕುಗ್ಗದ ಧೈರ್ಯ !

Digitalized by e-Sahithya Documentation Forum
Sponsored by Sarayu Foundation Trust

ಬಿಜಾಪುರ, ಬಾಗಲುಕೋಟೆಗಳಲ್ಲಿ ಪ್ರೌಢಶಾಲಾ ಅಭ್ಯಾಸ ಮುಗಿಸಿ, ಹೆತ್ತವರಿಂದ ಯಾವ ಸಹಾಯವನ್ನೂ ನಿರೀಕ್ಷಿಸದೆ ಸ್ವಂತ ಪರಿಶ್ರಮದ ಮೇಲೆಯೇ ಕಾಲೇಜಿನ ಕಲಿಕೆಯಲ್ಲೂ ತೊಡಗಿದ. ಕಾಲೇಜು ವಿದ್ಯಾಭ್ಯಾಸಕ್ಕೆ ಬೆಳಗಾಂವಿಗೆ ಹೋದುದಾಯಿತು ಬೆಳಗಾಂವಿಯ ಲಿಂಗರಾಜಾ ಕಾಲೇಜಿನ ವಿದ್ಯಾರ್ಥಿಯಾಗಿ ತತ್ತ್ವಜ್ಞಾನ ಆನರ್ಸ್ ಪದವಿಗೆ ಅಭ್ಯಾಸ ಮಾಡತೊಡಗಿದ ತರುಣ ಸಂಗಮೇಶ.

ಪರಿವರ್ತನೆ

ಬಿಜಾಪುರದಲ್ಲಿ ವಿದ್ಯಾಭ್ಯಾಸ ಮಾಡುವಾಗ, ಜೀವನ ವೈಪರೀತ್ಯಗಳು ಸಮಾಜದ ಅನಿಷ್ಟಗಳಾದ ಬಡತನ, ಮೂಢನಂಬಿಕೆ ಮುಂತಾದವು ಸಂಗಮೇಶನ ಹೃನ್ಮನಗಳಲ್ಲಿ ದೇವರು-ಧರ್ಮದ ಬಗ್ಗೆ ಅವಿಶ್ವಾಸವನ್ನು ಹುಟ್ಟಿಸಿ, ಕಾರ್ಲ್‌ಮಾರ್ಕ್ಸ್‌ನ ವಿಚಾರ ಧಾರೆ ಬಗ್ಗೆ ಒಲವನ್ನು ಉಂಟುಮಾಡಿದ್ದವು. ಸ್ವಾತಂತ್ರ್ಯದ ಹೋರಾಟದಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರು ಭಾಗಿಗಳಾಗಿ ಬ್ರಿಟಿಷ್ ಸರ್ಕಾರದ ಕೆಂಗಣ್ಣಿಗೆ ಬಿದ್ದು, ಭೂಗತರಾಗಿರುತ್ತಿದ್ದಾಗ ಸಾಹಸೀ ಬಾಲಕರು ತಮ್ಮ ಕಾಮ್ರೇಡ್‌ಗಳಿಗೆ ಊಟ-ಉಪಾಹಾರ ಒದಗಿಸುವ ಅವರ ಮನೆಗಳವರಿಗೆ ಸುದ್ದಿ ತಲುಪಿಸುವ ಕಾರ್ಯಮಾಡುತ್ತಿದ್ದರು. ಈ ತಂಡದಲ್ಲಿ ಸಾಹಸ ಪ್ರವೃತ್ತಿಯ ಸಂಗಮೇಶ ಎಲ್ಲರಿಗಿಂತಲೂ ಮುಂದು. ಬಾಳಿನ ಬನ್ನಗಳು ಅಧಿಕಗೊಂಡಂತೆ, ಸಮಾಜದಲ್ಲಿ ತುಂಬಿದ್ದ ಕಷ್ಟ-ಕಾರ್ಪಣ್ಯ, ಬಡತನದ ಕ್ರೂರ ಚಿತ್ರಗಳು ಕಣ್ಣಿಗೆ ಕಾಣುತ್ತ ಹೋದಂತೆ ಸಂಗಮೇಶನ ಮನಸ್ಸು ಹೆಚ್ಚು ನಾಸ್ತಿಕವಾದಕ್ಕೆ ಮನ ಸೋತಿತು. ಧರ್ಮ-ದೇವರು ಶೋಷಣೆಯ ಸಾಧನಗಳು ಎಂದು ಅವುಗಳ ಬಗ್ಗೆ ತೀವ್ರತರ ಜಿಗುಪ್ಸೆ, ರೋಷ ಬೆಳೆದವು. ಸಾಮಾಜಿಕ ಅಸಮಾನತೆ, ಬಡತನ ಇವುಗಳ ಬಗ್ಗೆ ಚಿಂತನೆ ಅಧಿಕಗೊಂಡು ಬಡತನದ ವಿರುದ್ಧ ಮನಸ್ಸು ಹೋರಾಟಕ್ಕೆ ಅಣಿಯಾಯಿತು. ಇಂಥ ಸಂಘರ್ಷವು ಮನಸ್ಸಿನಲ್ಲಿ ಸಾಗಿರುವಾಗಲೇ ತತ್ತ್ವಜ್ಞಾನದ ಅಧ್ಯಾಪಕರಾದ ಡಾ|| ರಾಜಗೋಪಾಲ್ ತರಗತಿಗಳಲ್ಲಿ ಪಾಠ ಮಾಡುವಾಗ ಸಂಗಮೇಶನ ವಿಚಾರಧಾರೆಯನ್ನು ಬದಲಾಯಿಸತೊಡಗಿದರು. ತರಗತಿಯಲ್ಲಿ ಪ್ರಶ್ನೆಗಳ ಸುರಿಮಳೆಯನ್ನು ಸುರಿಸುತ್ತಿದ್ದ, ದೇವರು ಕೇವಲ ಭ್ರಾಂತ್ಯಾತ್ಮಕ ಕಲ್ಪನೆ ಎಂದು ವಾದಿಸುತ್ತಿದ್ದ ಸಂಗಮೇಶನಿಗೆ ದೇವರ ಅಸ್ತಿತ್ವವನ್ನು ಸಾಧಾರಪೂರ್ವಕವಾಗಿ ಸಿದ್ಧಪಡಿಸಿದಾಗ ಅವನ ನಂಬಿಕೆಯಲ್ಲಿ ಅದ್ಭುತ ಬದಲಾವಣೆಯಾಗಿದ್ದಿತು. ಅಂದು ಜೀವನಕ್ಕೆ ಹೊಸ ತಿರುವು ಒದಗಿತು.

ಸಮತಾವಾದ ಇರಬೇಕು ; ಆದರೆ ಅದಕ್ಕೆ ಅಡಿಪಾಯ ದೇವರು-ಧರ್ಮವಿಲ್ಲದ ಭೌತಿಕವಾದವಾಗಿರದೆ, ಅಧ್ಯಾತ್ಮವಾದವಾಗಬೇಕು ಎಂಬ ಚಿಂತನ ಧಾರೆಯು ಮೂಡುತ್ತಲೇ ಕಾರ್ಲ್‌ಮಾರ್ಕ್ಸ್‌ನ ಸ್ಥಾನದಲ್ಲಿ ಕ್ರಾಂತಿಯೋಗಿ ಬಸವಣ್ಣನವರು ಬಂದು ಕುಳಿತರು. ಮಾರ್ಕ್ಸ್‌ನ ವಿಚಾರಧಾರೆಯು ಕಂಡ ಸಾಮ್ಯವಾದೀ ಸಮಾಜದ ಕನಸು, ಧರ್ಮ-ದೇವರು-ಅಧ್ಯಾತ್ಮಗಳ ತಳಹದಿಯ ಮೇಲೆ ಬಸವಣ್ಣನವರ ವಿಚಾರ

ಧಾರೆಯಲ್ಲಿ ನನಸಾದುದನ್ನು ಕಂಡ ಸಂಗಮೇಶ ವಚನ ಶಾಸ್ತ್ರದ ಅಧ್ಯಯನದಲ್ಲೇ ತೊಡಗಿದ. ಇಂತಹ ಘಟ್ಟದಲ್ಲಿಯೇ ಬಿ.ಎ. ಆನರ್ಸ್ ಪರೀಕ್ಷೆ ಮುಗಿಸಲು ಸಿದ್ಧತೆ ಸಾಗಿತ್ತು. ಮತ್ತು ಪರೀಕ್ಷೆಯೂ ಮುಗಿಯಿತು.

ಫಲಿತಾಂಶದ ವಿಷಯದಲ್ಲಿ ಸಂದೇಹವಿರಲಿಲ್ಲ ಮುಂದಿನ ದಾರಿಯನ್ನು ನಿರ್ಧರಿಸಿಕೊಳ್ಳುವ ಬಗ್ಗೆ ಅಂತರಂಗದಲ್ಲಿ ಹೊಯ್ದಾಟ ನಡೆದಿತ್ತು. ಒಂದು ಕಡೆ ಮುಂದೆ ಓದಬೇಕೆಂಬ ಬಯಕೆ ಉತ್ಕಟವಾಗಿದ್ದಿತು. ಕೆಲವರು ಕನ್ಯಾಪಿತೃಗಳು, ತಮ್ಮ ಮಗಳನ್ನು ಮದುವೆಯಾದರೆ ಮುಂದೆ ಓದಿಸುವ ಒಲವು ತೋರಿದ್ದರು, ಆದರೆ ಈ ಸೌಲಭ್ಯ ಪಡೆದು ಪಾರತಂತ್ರ್ಯಕ್ಕೆ ಒಳಗಾಗಿ, ತನ್ನ ಆದರ್ಶಗಳನ್ನು ಬಲಿಗೊಡುವುದೆ? ಇದಕ್ಕೆ ಮನಸ್ಸು ಒಪ್ಪಲಿಲ್ಲ. ಅತ್ತ ತಾಯಿ ತಂದೆಗಳು ಬೇರೆ ತಮ್ಮ ಕುಟುಂಬವು ಬಡತನದ ಅಷ್ಟಪದಿಯ ಹಿಡಿತದಲ್ಲಿ ಸಿಕ್ಕಿಬಿದ್ದಿರುವುದರಿಂದ, ಮಗ ನೌಕರಿ ಹಿಡಿದು ತಮ್ಮನ್ನು ಪಾರುಮಾಡುವನೆಂದು ಹಾತೊರೆಯುತ್ತಿದ್ದರು. ಉದ್ಯೋಗವೊಂದನ್ನು ಆಶ್ರಯಿಸಿ, ಅವರನ್ನು ಸಾಕಬೇಕಾದುದು ಆದ್ಯ ಕರ್ತವ್ಯವಾಗಿತ್ತು. ಈ ದಿಶೆಯಲ್ಲಿ ಚಿಂತನೆ ಮಾಡುತ್ತಲಿರುವಾಗಲೇ ಜೀವನದಲ್ಲಿ ಒಂದು ವಿಶೇಷ ಪ್ರಸಂಗವು ಜರುಗಿತು.

ಗುರುಬಸವಣ್ಣನವರಿಂದ ಕರೆ

ಅಂದು ಬಸವ ಜಯಂತಿ ; ಬೆಳಗಿನ ಜಾವದಲ್ಲಿಯೇ ಎದ್ದು ತಣ್ಣೀರಿನಲ್ಲಿ ಮಿಂದು ಗುರುವಿನ ಭಾವಚಿತ್ರಕ್ಕೆ ಊದುಬತ್ತಿ ಬೆಳಗಿ, ದೀಪವನ್ನೂ ಹಾಕಿಕೊಳ್ಳದೆ ಮನಸ್ಸಿನ ಒಳಹೊರಗೆ ಕತ್ತಲೆ ತುಂಬಿದ ಸ್ಥಿತಿಯಲ್ಲಿ ಒಂದು ಕಡೆ ಚಿಂತೆ, ಇನ್ನೊಂದು ಕಡೆ ಧ್ಯಾನ ಮಾಡುತ್ತ ಕುಳಿತಾಗ ಇದ್ದಕ್ಕಿದ್ದಂತೆಯೆ ಬೆಳಕು ಕಾಣಿಸಿತು ಬಸವ ಗುರುವಿನ ಭಾವಚಿತ್ರದಲ್ಲಿದ್ದ ರೂಪು ಜೀವಂತಿಕೆ ತಳೆದಿತ್ತು. "ಮಗು ಸಂಗಮೇಶ, ನಿನ್ನ ಬಾಳನ್ನು ನನಗಾಗಿ ಸಮರ್ಪಿಸು. ಆದ್ದರಿಂದ ತ್ಯಾಗ ಜೀವನ ಸ್ವೀಕರಿಸು". ಸಂಗಮೇಶನಿಗೆ ಸಂತೋಷವಾಗುವುದರ ಬದಲು ಗಾಬರಿ ಉಂಟಾಯಿತು, ಮನೆಯ ಬಡತನ, ತಾಯಿ ತಂದೆಯರ ಕರುಣಾಜನಕ ಚಿತ್ರ ಕಣ್ಣಿಗೆ ಕಟ್ಟಿ, "ನನ್ನಿಂದ ಸಾಧ್ಯವಿಲ್ಲ" ಎಂದು ನಿರಾಕರಿಸಿದ. ಆದರೆ ಬಸವಣ್ಣನವರು ಬಿಡಲಿಲ್ಲ. "ನಾನು ನಿನ್ನ ತಂದೆಯಲ್ಲವೆ? ಧರ್ಮಪ್ರಚಾರದ ಉದಾತ್ತ ಉದ್ದೇಶಕ್ಕಾಗಿ ನೀನು ತ್ಯಾಗಮಾಡಬೇಕು". ಆ ಧ್ವನಿಯಲ್ಲಿದ್ದ ವಾತ್ಸಲ್ಯ ಸಂಗಮೇಶನನ್ನು ಕಟ್ಟಿಹಾಕಿತು. ಮಂತ್ರ ಮುಗ್ಧನಾಗಿ ಶರಣಾಗಿ, ಒಪ್ಪಿಗೆ ನೀಡುತ್ತಲೇ ಆ ರೂಪವು ಕರಗಿ ಹೋಯಿತು.

ತನಗೆ ಅರಿವಿಲ್ಲದೆ ತಾನು ಸಮ್ಮೋಹಿತನಾಗಿ ಒಪ್ಪಿಗೆ ನೀಡಿದ್ದು ಆಶ್ಚರ್ಯ ಆಘಾತಗಳನ್ನು ಉಂಟು ಮಾಡಿದ್ದಿತು. ನಂತರ ಕೋಣೆಯನ್ನು ಬಿಟ್ಟು ಹೊರ ಬಂದಾಗ ಬಸವ ಜಯಂತಿ ನಿಮಿತ್ತ ಬಸವನಗಲ್ಲಿಯ ದೇವಾಲಯದಲ್ಲಿ ಕಾರ್ಯಕ್ರಮವಿರುವುದು ನೆನಪಾಗಿ, ಕಾಲುಗಳು ಅತ್ತ ಸಾಗಿದವು. ಅಂತರ್‌ಪ್ರೇರಣೆಯಂತೆ

Digitalized by e-Sahithya Documentation Forum
Sponsored by Sarayu Foundation Trust

ತಾನಾಗಿ ವ್ಯವಸ್ಥಾಪಕರನ್ನು ಸಂಪರ್ಕಿಸಿ, ಭಾಷಣ ಮಾಡಲು ಕೇಳಿದಾಗ ಸಂಗಮೇಶ ಉತ್ತಮ ಭಾಷಣಕಾರ ಎಂದರಿತಿದ್ದ ಅವರು ತಕ್ಷಣ ಒಪ್ಪಿದರು. ಮೊಟ್ಟ ಮೊದಲ ಬಾರಿಗೆ ಬಸವಣ್ಣನವರ ತತ್ತ್ವಗಳನ್ನು ಕುರಿತು ನಿರರ್ಗಳವಾಗಿ, ಅಸ್ಖಲಿತವಾಣಿಯಿಂದ ಮಾತನಾಡಿದಾಗ ಸಭಿಕರು ಮಂತ್ರಮುಗ್ಧರಾದರು.

ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ, ತೇರ್ಗಡೆಯಾದುದಾಯ್ತು. ಓದುವುದನ್ನು ಮುಂದುವರಿಸಬೇಕೆಂಬ ಹಂಬಲ ಉತ್ಕಟವಾಗಿದ್ದರೂ ಆರ್ಥಿಕ ಸಂಕಷ್ಟದಿಂದಲೂ, ತಾಯಿ-ತಂದೆಯರ ತಾಪತ್ರಯವನ್ನು ಕೊಂಚವಾದರೂ ಕಡಿಮೆ ಮಾಡಲೋಸುಗ ನೌಕರಿ ಹಿಡಿದುದಾಯಿತು. ಬಿಜಾಪುರದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕ ಹುದ್ದೆ ದೊರೆಯಿತು. ಇದೇ ಸಮಯದಲ್ಲಿ ಪೂಜ್ಯಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಯವರ ಪ್ರವಚನಗಳು ಬಿಜಾಪುರದಲ್ಲಿ ನಡೆಯುತ್ತಿದ್ದು, ಸಂಗಮೇಶ ಅವರಿಂದ ಲಿಂಗದೀಕ್ಷೆಯನ್ನು ಹೊಂದಿದ. ನೌಕರಿಯಲ್ಲಿ ಸಂತೃಪ್ತಿ ದೊರೆಯದೆ, ಹೇಗಾದರೂ ಮುಂದೆ ಓದಬೇಕೆಂದು ಸಂಗಮೇಶ ಕೆಲಸಕ್ಕೆ ರಾಜಿನಾಮೆ ಕೊಟ್ಟು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ. ಎ. ತತ್ತ್ವಜ್ಞಾನ ಓದಲು ಪ್ರವೇಶ ಪಡೆದ. ಹಣದ ಅಡಚಣೆ ತೀವ್ರವಾಯಿತು ಜೊತೆಗೆ ಬಸವ ಗುರುವಿಗೆ ಕೊಟ್ಟ ಭಾಷೆಯೂ ಅಂತರಂಗದಲ್ಲಿ ಮೊರೆಯ ತೊಡಗಿತ್ತು. ಧಾರವಾಡದ ವಾಸ್ತವ್ಯದ ಈ ಸಮಯದಲ್ಲಿ ನವ ಕಲ್ಯಾಣಮಠದ ಕುಮಾರಸ್ವಾಮಿಗಳ ಉಪನ್ಯಾಸಗಳಿಂದ ಸಂಗಮೇಶ ಬಹಳ ಪ್ರಭಾವಿತನಾದ. ಧರ್ಮಪ್ರಚಾರ ಕ್ಷೇತ್ರಕ್ಕೆ ಮುಂಸಾಗುವ; ಆಕಾಂಕ್ಷೆ ಬಲವತ್ತರವಾಯಿತು.

ಅಂದು ಸೋಮವಾರ, ದಿ. 19 ನವಂಬರ್ 1956. ಸುಪ್ರಭಾತದಲ್ಲಿ ಸೂರ್ಯನು ತನ್ನ ಹೊಂಗಿರಣಗಳನ್ನು ಚೆಲ್ಲುತ್ತಾ ಮೇಲಕ್ಕೇರಿ ಬರುವಾಗ, ಧಾರವಾಡದ ಹೊರಗಿನ ಹದ್ದಿನ ಗುಡ್ಡದ ಮೇಲೆ ಧ್ಯಾನಾಸಕ್ತನಾದ ಸಂಗಮೇಶ ಬಸವ ಗುರುವಿನ ಸಾಕ್ಷಿಯಾಗಿ ಕಾವಿಲಾಂಛನವನ್ನು ಧರಿಸಿ, ಜ್ಞಾನ ಸನ್ಯಾಸವನ್ನು ಸ್ವೀಕರಿಸಿದ. ಅಂದಿನ ಆ ಶುಭದಿನದಂದು ಸಂಗಮೇಶ ಸ್ವಾಮಿ ಲಿಂಗಾನಂದರಾಗಿ ಪರಿವರ್ತನೆಗೊಂಡರು. ಹಸಿರು ತುಂಬಿದ ನಿಸರ್ಗದ ಮಡಿಲಿನಲ್ಲಿ ತಮ್ಮ ಬದುಕನ್ನು ಧರ್ಮಪ್ರಚಾರಕ್ಕಾಗಿ ಮೀಸಲಿಡುವ ಪ್ರತಿಜ್ಞೆ ಕೈಗೊಂಡರು: ಅಲ್ಲಿಂದ ವಿದ್ಯಾರ್ಥಿ ನಿಲಯಕ್ಕೆ ಬಂದವರೇ ತಮ್ಮ ಪೂರ್ವಾಶ್ರಮದ ವೇಷ-ಭೂಷಣ, ಪುಸ್ತಕ-ವಸ್ತುಗಳನ್ನು ಸಹಪಾಠಿಗಳಿಗೆ ಕೊಟ್ಟು ಹೊರಟು ಬಿಟ್ಟರು, ಚರಜಂಗಮರಾಗಿ. ಸಾಹಸೀ ತರುಣ, ಕ್ರೀಡಾಪಟು ಯುವನಾಯಕ, ಕ್ರಾಂತಿಕಾರಿ ವಿಚಾರವಾದಿ ಹೀಗೆ ಕಾಷಾಯ ವಸ್ತ್ರಧಾರಿಯಾಗುವನೆಂದು ಯಾರೂ ಊಹಿಸಿರಲಿಲ್ಲ. ಇದೆಂಥಾ ಕೆಲಸ ಮಾಡಿಬಿಟ್ಟೆ ! ಎಂದು ಉದ್ಗರಿಸಿದ ಮಿತ್ರರು ಚಕಿತರಾದಾಗ ಸ್ವಾಮೀಜಿ ಉತ್ತರಿಸಿದರು. "ಉತ್ತಮವಾದುದನ್ನು, ನನ್ನ ಅಂತರಾತ್ಮದ ಆದೇಶದಂತೆ ಮಾಡಿದೆ." ಎಂದು.

ಉತ್ಕಟ ಸಾಧನೆಯನ್ನು ಮಾಡಿ ಸಂಕಲ್ಪವನ್ನು ಗಟ್ಟಿಗೊಳಿಸಲು ಸ್ವಾಮೀಜಿಯವರು ಸೊಗಲ ಸೋಮೇಶ್ವರ, ಮಾಣಿಕ್ಯಗಿರಿ ಮುಂತಾದ ಗುಡ್ಡಗಳಲ್ಲಿ, ಸುತ್ತೂರು, ಮೈಸೂರು, ಬಸವ ಕಲ್ಯಾಣ, ಕೂಡಲ ಸಂಗಮ, ಉಳವಿ ಮುಂತಾದ ಸ್ಥಳಗಳಲ್ಲಿ ಕಠಿಣವಾದ ತಪಸ್ಸು-ಅಧ್ಯಯನ ಕೈಗೊಂಡರು. ಮನುಷ್ಯರು ವಾಸಿಸಲು ಹೆದರುವ, ಕಾಡು ಪ್ರಾಣಿಗಳ ಓಡಾಟವಿದ್ದಂತಹ ದುರ್ಗಮವಾದ ಸೊಗಲದ ಗುಡ್ಡದಲ್ಲಿ ತಪಸ್ಸು ಮಾಡುತ್ತಿದ್ದ ಸ್ವಾಮೀಜಿಯವರನ್ನು ಇಂದಿಗೂ ಬೈಲಹೊಂಗಲದ ಜನ ನೆನಪಿಸಿಕೊಳ್ಳುತ್ತಾರೆ. ಈ ತಪಸ್ಸು ಅಧ್ಯಯನದ ಬಳಿಕ ಚರಜಂಗಮರಾಗಿ ಸಂಚಾರ ಕೈಗೊಂಡರು, ಸ್ವಾಮೀಜಿ.

ಹೀಗೆ ಸಂಚರಿಸುತ್ತ ಮೈಸೂರಿಗೆ ಆಗಮಿಸಿ ಪ್ರವಚನವನ್ನು ಮಾಡುವಾಗ, ಜ್ಞಾನ ಸನ್ಯಾಸವನು ಸ್ವೀಕರಿಸಿ ಸ್ವಯಂ ಪ್ರತಿಭಾವಂತರಾಗಿ ಬೆಳೆದಿದ್ದ ಸ್ವಾಮೀಜಿ ಸುತ್ತೂರುಮಠದ ಲಿಂಗೈಕ್ಯ ಪೂಜ್ಯ ಜಗದ್ಗುರುಗಳವರ ಸಹೃದಯಕ್ಕೆ ಮಾರುಹೋಗಿ, ಅವರಿಂದ ವಿಧ್ಯುಕ್ತವಾಗಿ ಕ್ರಿಯಾಸನ್ಯಾಸವನ್ನು ಅಂದರೆ ಜಂಗಮದೀಕ್ಷೆಯನ್ನು 1961 ರಲ್ಲಿ ಅಗಸ್ಟ್ 7 ರಂದು ಸುತ್ತೂರಿನಲ್ಲಿ ಪಡೆದು ಕೊಂಡರು. ತಾನು ತನ್ನದು ಎಂಬ ಮಮಕಾರವಳಿದು ವಿಶ್ವಕುಟುಂಬಿಯಾಗಿ ಅಂದಿನಿಂದ ಇಂದಿನವರೆಗೆ ಜ್ಞಾನ ದಾಸೋಹ ಮಾಡುತ್ತ ಪೂಜ್ಯ ಸ್ವಾಮೀಜಿ ಸಂಚರಿಸುತ್ತಲಿದ್ದಾರೆ. ಧರ್ಮದ ಕಡೆಗೆ ಅಜ್ಞಾನದಿಂದಲೋ, ಉದಾಸೀನದಿಂದಲೋ, ತಿರಸ್ಕೃತರಾಗಿಯೋ ಜನರು ಬರದಾಗ ಜನರ ಕಡೆಗೇ ಧರ್ಮವನ್ನು ಒಯ್ಯಬೇಕು ಎನ್ನುವ ಘೋಷಣೆ, ಕಳಕಳಿ ಶ್ರೀಗಳಲ್ಲಿದೆ, ಕೇವಲ ಘೋಷಣೆ ಮಾಡಿ ಸುಮ್ಮನೆ ಕೂಡದೆ ಪೂಜ್ಯರು ತಾವೇ ಕಾರ್ಯನಿರತರಾಗಿದ್ದಾರೆ. ಪೂಜ್ಯರ ಧರ್ಮ ಪ್ರಚಾರ ಕೇವಲ ಧಾರ್ಮಿಕ ಬೋಧನೆಗೆ ಸೀಮಿತವಾಗದೆ ಜಾತ್ಯತೀತ ಆದರೆ ಧರ್ಮಸಹಿತ, ಸಮತಾವಾದಿ ಸಮಾಜ ರಚನೆಯ ಗುರಿಯುಳ್ಳದಾಗಿದೆ. ವೈಜ್ಞಾನಿಕಯುಗದಲ್ಲಿ ಧರ್ಮ-ಅಧ್ಯಾತ್ಮಗಳ ಪಾತ್ರವೇನೆಂಬುದನ್ನು ಹೃದಯಂಗಮವಾಗಿ ಶ್ರೀಗಳು ಪ್ರತಿಪಾದಿಸಿ, ಧರ್ಮವೆಂದರೆ ಮಡಿವಂತಿಕೆ, ಮೂಢ ನಂಬಿಕೆ, ಕಂದಾಚಾರವಲ್ಲ ಅದು ಬಾಳುವ ಬಗೆ ಎಂದು ಪ್ರತಿಪಾದಿಸುತ್ತಾರೆ. ಶ್ರೀಗಳ ಪ್ರವಚನದಲ್ಲಿ ನೈತಿಕ, ಶೈಕ್ಷಣಿಕ, ರಾಷ್ಟ್ರೀಯ ಮೌಲ್ಯಗಳೆಲ್ಲ ಸಂಗಮವಾಗುವುದರಿಂದ ಪ್ರವಚನವು ಆಕರ್ಷಣೀಯವಾಗಿ ಪಂಡಿತ ಪಾಮರರನ್ನೆಲ್ಲ ತನ್ನತ್ತ ಸೆಳೆದುಕೊಳ್ಳುತ್ತದೆ. ಕರ್ನಾಟಕದ ಕಿರೀಟದಂತಿರುವ ಬೀದರದಿಂದ ಮಡಿಕೇರಿ ಮಂಗಳೂರುವರೆಗೆ ಪೂಜ್ಯರು ಸಂಚರಿಸಿ ಪ್ರವಚನ ಮಾಡಿದ್ದಾರೆ. ಸೊಲ್ಲಾಪುರ, ಅಕ್ಕಲಕೋಟ. ಲಾಥೂರ್, ಉದಗೀರ, ಗಡಹಿಂಗ್ಲಾಜ್ ಮುಂತಾದ ಮಹಾರಾಷ್ಟ್ರದ ಪ್ರದೇಶಗಳಲ್ಲಿಯೂ, ಸದಾಶಿವಪೇಟೆ, ತಾಂಡೂರು ಮುಂತಾದ ಆಂಧ್ರದ ನಾಡಿನಲ್ಲಿಯೂ ಸಂಚರಿಸಿದ್ದಾರೆ. ಜ್ಞಾನದ ತರಂಗಿಣಿಯಾಗಿ ಅವಿಶ್ರಾಂತವಾಗಿ ಪ್ರವಾಸ ಮಾಡುತ್ತ, ಧರ್ಮಜಾಗೃತಿಯನ್ನು ಮಾಡಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

ಪ್ರವಚನ ಪಿತಾಮಹ

ಪೂಜ್ಯ ಶ್ರೀಗಳ ಉಪನ್ಯಾಸ ಬಹಳ ವೈಶಿಷ್ಟ್ಯ ಪೂರ್ಣವಾಗಿರುತ್ತದೆ. ಅದು ಕೇವಲ ಭಾವಾವೇಶದ ಧರ್ಮವಂತಿಕೆಯಿಂದಲೂ ಕೂಡಿರದು, ಅಥವಾ ಬರಿಯ ವೈಚಾರಿಕ ಘರ್ಷಣೆಯ ಮರುಭೂಮಿಯೂ ಆಗಿರದು. ಬದುಕು ಹೇಗೆ ಭಾವ ಬುದ್ಧಿಗಳೆರಡರ ಪ್ರಯೋಗಶಾಲೆಯೋ ಹಾಗೆ ಸ್ವಾಮೀಜಿಯವರ ಪ್ರವಚನ ಧಾರ್ಮಿಕ ಶ್ರದ್ಧೆ-ವೈಚಾರಿಕತೆ-ವೈಜ್ಞಾನಿಕ ದೃಷ್ಟಿಯ ತ್ರಿವೇಣಿ ಸಂಗಮ. ಸ್ಫುಟವಾದ ಅಸ್ಖಲಿತ ವಾಣಿ, ಘಂಟಾನಾದದಂತಹ ಕಂಠ, ವಿಚಾರಗಳ ಸ್ಪಷ್ಟತೆ, ಮತ್ತು ಸುಸಂಬದ್ಧತೆ ಪೂಜ್ಯರ ಪ್ರವಚನದ ಗಣನೀಯ ಅಂಶಗಳು. ಸಮಾಜವು ಬಯಸಿದ್ದನ್ನು ಕೊಡದೆ, ಸಮಾಜಕ್ಕೆ ಅಗತ್ಯವಾದುದನ್ನು ಕೊಡಬೇಕೆನ್ನುವ ಸ್ವಾಮೀಜಿಯವರ ನಿಲುಮೆಯಲ್ಲಿ ಕವಿ ಸರ್ವಜ್ಞನ ಧೋರಣೆಯನ್ನು ಕಂಡರೆ, ಹಿಂದೂ ಸಮಾಜ ಸಂಘಟನೆಯ ಕಳಕಳಿಯಲ್ಲಿ ಸ್ವಾಮಿ ವಿವೇಕಾನಂದರ ವಿಶಾಲತೆಯನ್ನು ಗುರುತಿಸಬಹುದು. ಹಿಂದು ಎನ್ನುವುದು ಒಂದು ವಿಶಿಷ್ಟ ಧರ್ಮವಲ್ಲ, ಹಲವಾರು ಧರ್ಮಗಳ ಒಕ್ಕೂಟ ಎನ್ನುವ ಸ್ವಾಮೀಜಿ ವೈದಿಕರು, ಬೌದ್ಧರು, ಜೈನರು, ಲಿಂಗವಂತರು, ಸಿಖ್ಖರು ಎಲ್ಲರೂ ಹಿಂದೂ ಕಕ್ಷೆಯಲ್ಲಿರುವವರೆ ಎಂದು ಪ್ರತಿಪಾದಿಸುವರು. ಹೇಗೆ ಒಂದು ವಿಶ್ವವಿದ್ಯಾಲಯದಲ್ಲಿ ಬೇರೆ ಬೇರೆ ವಿಷಯಗಳನ್ನು ಅಭ್ಯಾಸ ಮಾಡುತ್ತ ಬೇರೆ ಬೇರೆ ವಿಭಾಗೀಯ ಮುಖ್ಯಸ್ಥರನ್ನು ಹೊಂದಿ, ತಮ್ಮ ತಮ್ಮ ಪಠ್ಯ ಗ್ರಂಥಗಳನ್ನು ಓದುತ್ತ ವಿದ್ಯಾರ್ಥಿಗಳಿರುವರೋ ಹಾಗೆ ಹಿಂದೂಗಳು ಸಹ. ಭಾರತ ದೇಶದಲ್ಲಿ ಹುಟ್ಟಿದ ಧರ್ಮಗಳ ಅನುಯಾಯಿಗಳು ತಮ್ಮ ಪ್ರವಾದಿಗಳು, ಸಂತರು ಕೊಟ್ಟ ವಾಣಿಯನ್ನು ತಮ್ಮ ಧರ್ಮಶಾಸ್ತ್ರವೆಂದು ತಿಳಿದು ಆಚರಿಸಿಯೂ ಹಿಂದೂ ಕಕ್ಷೆಯಲ್ಲಿ ಇರಲು ಸಾಧ್ಯವಿದೆ. ಇದರಿಂದ ಈ ದೇಶವನ್ನು ಬಲಪಡಿಸಬಹುದು ಎಂದು ಪ್ರತಿಪಾದಿಸುತ್ತಾರೆ. ಅಂತೆಯೇ ಸ್ವಾಮೀಜಿಯವರು ಬೋಧಿಸುವ ವಿಶ್ವಧರ್ಮ ಪ್ರವಚನ ಕಾರ್ಯಕ್ರಮಕ್ಕೆ ಜನರು ಜಾತಿ, ಮತ, ಪಂಥಗಳ ಭೇದವಿಲ್ಲದೆ ಸೇರುತ್ತಾರೆ. "ಇಂದು ನಮಗೆ ಧರ್ಮ ಬೇಕು, ಜಾತಿ ಬೇಡ. ಜಾತಿ ಕತ್ತಲೆ ಇದ್ದಂತೆ ಧರ್ಮವು ಜ್ಯೋತಿ ಇದ್ದಂತೆ. ಹೇಗೆ ಕತ್ತಲೆ-ಬೆಳಕುಗಳು ಒಟ್ಟಿಗೆ ಇರಲಾರವೋ. ಹಾಗೆ ಧರ್ಮಪ್ರಜ್ಞೆ-ಜಾತೀಯ ಮನೋಭಾವ ಕೂಡಿರಲಾರವು, ಜಾತಿಯು ಮನುಷ್ಯ ಸಮಾಜಕ್ಕೆ ರೋಗದಂತಿದ್ದರೆ, ಧರ್ಮವು ರೋಗಕ್ಕೆ ಔಷಧಿಯಂತಿರುತ್ತದೆ." ಹೀಗೆ ಪ್ರತಿಪಾದಿಸುತ್ತ ಸ್ವಾಮೀಜಿಯವರು ತಮ್ಮ ಪ್ರವಚನಗಳ ಮೂಲಕ ಧರ್ಮವನ್ನು ಕುರಿತಾದ ತಪ್ಪು ಕಲ್ಪನೆಗಳನ್ನು ನಿವಾರಿಸುವರು.

ಮಹಿಳಾಗುರು ಪೀಠ ಸ್ಥಾಪನೆ

ಹನ್ನೆರಡನೆಯ ಶತಮಾನದಲ್ಲಿ ಆಗಿಹೋಗಿ, ಕನ್ನಡ ಸಾಹಿತ್ಯದಲ್ಲಿ ಸುವರ್ಣಯುಗವೊಂದನ್ನು ರೂಪಿಸಿದ ವಿಶ್ವಗುರು ಬಸವಣ್ಣನವರು ಸರ್ವ ಮಹೋನ್ನತ

ಸಮತಾವಾದಿಗಳು. ಜಾತಿ, ವೃತ್ತಿ, ಲಿಂಗಭೇದವಿಲ್ಲದೆ ಎಲ್ಲರಿಗೂ ಧಾರ್ಮಿಕ ಸಮಾನತೆ ನೀಡಿದರು. ಅರ್ಹತಾ ಪರಂಪರೆಯನ್ನು ಎತ್ತಿ ಹಿಡಿದು, ಶೂನ್ಯ ಪೀಠಕ್ಕೆ ಅಲ್ಲಮ ಪ್ರಭುದೇವರನ್ನು ಪ್ರಥಮ ಅಧಿಕಾರಿಯನ್ನಾಗಿ ಮಾಡಿದರು. ಅಂದಿನಿಂದಲೂ ವಿರಕ್ತ ಮಠಗಳ ಪರಂಪರೆ ಸಾಗಿಬಂದಿದೆ ಅನುಭವ ಮಂಟಪದಲ್ಲಿ ವೀರವಿರಾಗಿಣಿ ಅಕ್ಕಮಹಾದೇವಿಗೆ ಉನ್ನತ ಸ್ಥಾನ-ಗೌರವ ಲಭ್ಯವಾದವು. ಆದರೆ ಮಹಿಳಾಗುರು ಪರಂಪರೆ ಸಾಗಿಬರಲಿಲ್ಲ. ಈ ಕೊರತೆಯನ್ನು ತುಂಬಲು, ಬಸವೇಶ್ವರ ಅಷ್ಟಶತಮಾನೋತ್ಸವ ಕಾಲದಲ್ಲಿ, ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸುವುದಾಗಿ ಪೂಜ್ಯ ಮಾತೆ ಮಹಾದೇವಿಯವರು ಘೋಷಿಸಿದರು. ಈ ಘೋಷಣೆಯನ್ನು ಕೃತಿಗಿಳಿಸಲು ಪೂಜ್ಯ ಸ್ವಾಮೀಜಿಯವರು 1970ರಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠವನ್ನು, ಧಾರವಾಡದಲ್ಲಿ ಸ್ಥಾಪಿಸಿದರು. ಮಹಿಳಾ ಜಗದ್ಗುರು ಪೀಠಕ್ಕೆ ಪೂಜ್ಯ ಮಾತೆ ಮಹಾದೇವಿಯವರನ್ನೇ ಪ್ರಥಮ ಅಧಿಕಾರಿಣಿಯನ್ನಾಗಿ ಮಾಡಿದರು, ಇಂದು ಪೂಜ್ಯ ಮಾತಾಜಿಯವರು ಅಪೂರ್ವವಾಗ್ಮಿಯೂ, ಶ್ರೇಷ್ಠ ಬರಹಗಾರರು, ಕ್ರಾಂತಿಕಾರಿ ಧರ್ಮಪ್ರಚಾರಕರು ಆಗಿದ್ದಾರೆ. ಅವರು ತಮ್ಮ ಸಾಹಿತ್ಯ ಮತ್ತು ಪ್ರವಚನಗಳ ಮೂಲಕ ಕೀರ್ತಿವಂತರಾಗಿ, ಕರ್ನಾಟಕ ರಾಜ್ಯದ ಎಲ್ಲೆಡೆ, ಹೊರರಾಜ್ಯಗಳಲ್ಲಿ, ಮಾತ್ರವಲ್ಲ 1976ರಲ್ಲಿ ಇಂಗ್ಲೆಂಡ್ ಮತ್ತು 1981 ರಲ್ಲಿ ಅಮೆರಿಕಾ-ಕೆನಡಾಗಳಿಗೆ ಹೋಗಿ ಧರ್ಮಪ್ರಚಾರ ಮಾಡಿ ಬಂದಿದ್ದಾರೆ. ಪೂಜ್ಯ ಗುರುಗಳವರ ದಿವ್ಯಪ್ರವಚನಗಳಿಂದ ಪ್ರಭಾವಿತನಾಗಿ, ಅವರ ತ್ಯಾಗಜೀವನಕ್ಕೆ ಮಾರುಹೋಗಿ, ಜೀವನವನ್ನು ಒಂದು ಉದಾತ್ತ ಉದ್ದೇಶಕ್ಕೆ ಮುಡುಪಿಡಬೇಕೆಂದು ಅವರ ಶಿಷ್ಯತ್ವ ಸ್ವೀಕರಿಸಿ, ಇಂದು ಗೋರಕ್ಷಾ ಮುಂತಾದ ಆಂದೋಲನದಲ್ಲಿ ನಾನು ಭಾಗಿಯಾಗಲು ಪೂಜ್ಯರೇ ಪ್ರೇರಕ ಶಕ್ತಿ ಎಂದರೆ ಉತ್ಪ್ರೇಕ್ಷೆಯಾಗದು. ಧರ್ಮಜ್ಞಾನವನ್ನು ಮನೆ ಮನೆಗೂ ಮನ ಮನಕ್ಕೂ ಕೊಂಡೊಯ್ಯಲು ಹಗಲಿರುಳು ಸಮರ್ಪಿತ ಚೇತನರಾಗಿ ಪೂಜ್ಯ ಮಾತೆ ಗಂಗಾದೇವಿ, ಚನ್ನಬಸವಾನಂದ, ನಿಜಗುಣಾನಂದಸ್ವಾಮಿ ಸೋದರಿ ಮಲ್ಲಮ್ಮ, ನಾಗರತ್ನಮ್ಮ ಮುಂತಾದವರು ಹಗಲಿರುಳು ಶ್ರಮಿಸುತ್ತಿರುವುದು ಪೂಜ್ಯ ಗುರುಗಳ ಪ್ರೇರಣೆಯಿಂದಲೆ.

ಸಂಸ್ಥೆಯ ನಿರ್ಮಾತೃಗಳು

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಪ್ರವಚನವನ್ನು ಒಂದು ಕಾಯಕವನ್ನಾಗಿ ಸ್ವೀಕರಿಸಿದವರು. "ಕೃಷಿಯೋಗಿಯು ಭೌತಿಕವಾದ ಭೂಮಿಯಲ್ಲಿ ಬೀಜಗಳನ್ನು ಬಿತ್ತಿ ಬೆಳೆ ತೆಗೆದು ಕೊಟ್ಟರೆ, ಜ್ಞಾನಯೋಗಿಯು ತನ್ನ ಬದುಕಿನಲ್ಲಿ ಪಾರಮಾರ್ಥದ ಬೀಜವನ್ನು ಬಿತ್ತಿ, ದಿವ್ಯಜ್ಞಾನದ ಬೆಳೆ ತೆಗೆದು ಲೋಕಕ್ಕೆ ಕೊಡುವನು; ಧ್ಯಾನದಿಂದ ವೈಯಕ್ತಿಕ ಆನಂದವಾದರೆ ಪ್ರವಚನಯೋಗದಿಂದ ವೈಯಕ್ತಿಕ ಆನಂದದೊಡನೆ ಸಮಷ್ಟಿಯ ಆನಂದವೂ ಪ್ರಾಪ್ತಿಯಾಗುತ್ತದೆ." ಎಂದು

Digitalized by eSahithya Documentation Forum
Sponsored by Sarayu Foundation Trust

ಪ್ರತಿಪಾದಿಸುವ ಶ್ರೀಗಳು, ತಮ್ಮ ಜೀವನದ 35 ವರ್ಷಗಳನ್ನು ಪ್ರವಚನದಲ್ಲಿ ಸವೆಸಿದ್ದಾರೆ. ಅದೂ ವರ್ಷದಲ್ಲಿ ಕೆಲವು ದಿನಗಳ ಕಾಲವಲ್ಲ, ಇಡೀ ವರ್ಷಪೂರ್ತಿ! ಪ್ರವಚನವೆಂದರೆ ಹತ್ತಾರು ಜನಗಳ ಮುಂದಲ್ಲ ಸಹಸ್ರಾರು ಜನ ಸಭಿಕರ ಮುಂದೆ. ಯಾವುದೇ ಸಾಂಪ್ರದಾಯಿಕ ಮಠಕ್ಕೆ ಅಧಿಕಾರಿಯಾಗದೆ, ಸನ್ಯಾಸಿಯಾಗುತ್ತಲೇ ಯಾವುದಾದರೂ ಆದಾಯ-ಆಸ್ತಿಯ ವಾರಸುದಾರರಾಗದೆ ಸ್ವಂತ ಪ್ರತಿಭೆ-ಪರಿಶ್ರಮ ದಿಂದ ಪೂಜ್ಯರು ಬೆಳೆದು ನಿಂತರು. ಪ್ರವಚನ ಕೇಳಿದ ಸದ್ಭಕ್ತರು, ಸಹೃದಯರು ಕೊಟ್ಟ ದೇಣಿಗೆಯನ್ನು ವಿನಿಯೋಗಿಸಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯನ್ನು ಕಟ್ಟಿದ್ದಾರೆ. ಈ ಸಂಸ್ಥೆಯು ನೂರಾರು ಗ್ರಂಥಗಳನ್ನು ಪ್ರಕಟಿಸಿದೆ, ವಚನ ವಾಙ್ಮಯದ ಪ್ರಚಾರಕ್ಕೋಸ್ಕರ ಧ್ವನಿ ಸುರುಳಿಗಳನ್ನು, ದೃಶ್ಯ-ಶ್ರಾವ್ಯ (ವೀಡಿಯೋ ಕೆಸೆಟ್ಟು) ಸುರುಳಿಗಳನ್ನು ಸಿದ್ಧಪಡಿಸಿದೆ. ಪ್ರತಿವರ್ಷವೂ ರಜಾದಿನಗಳಲ್ಲಿ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ. ಪೂಜ್ಯ ಶ್ರೀಗಳ ಅವಿಶ್ರಾಂತ ಪರಿಶ್ರಮದ ಫಲ, ಕೂಡಲ ಸಂಗಮದ ಮಹಾಮನೆ ಮಹಾಮಠ. ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೋಕಿನಲ್ಲಿರುವ ಕೂಡಲ ಸಂಗಮವು ಕ್ರಾಂತಿಕಾರಿ ಸಮಾಜ ಸುಧಾರಕ ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ. ಅತ್ಯಂತ ನಿರ್ಲಕ್ಷಿತ ಕ್ಷೇತ್ರವಾದ ಕೂಡಲ ಸಂಗಮಕ್ಕೆ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು ಧಾವಿಸಿ ಅದನ್ನು ಸರ್ವಾಂಗೀಣವಾಗಿ ಬೆಳೆಸುವ ಸಂಕಲ್ಪ ಮಾಡಿದರು. ಕೂಡಲ ಸಂಗಮೇಶ್ವರ ದೇವಾಲಯವನ್ನು ಸ್ಥಳಾಂತರಿಸಲು ಕರ್ನಾಟಕ ಸರ್ಕಾರವು ಪ್ರಯತ್ನ ಮಾಡುವಾಗ, "ಸಂಗಮೇಶ್ವರ ದೇವಾಲಯವು ಮುಳುಗಡೆ ಪ್ರದೇಶದಲ್ಲಿ ಬರದು ; ಅದನ್ನು ಮೂಲ ಸ್ಥಳದಲ್ಲಿಯೇ ಉಳಿಸಬಹುದು. ಈ ರೀತಿ ಮಾಡುವುದರಿಂದ ಬಸವ ಸಾಗರ (ನಾರಾಯಣಪುರ) ಅಣೆಕಟ್ಟಿನ ನಿರ್ಮಾಣಕ್ಕೆ ಯಾವ ತೊಂದರೆಯೂ ಇಲ್ಲ." ಎಂಬ ಆಂದೋಲನದಲ್ಲಿ ಭಾಗಿಗಳಾಗಲು 1987ರಲ್ಲಿ ಪೂಜ್ಯರು ಅತ್ತ ಹೋದರು. ಬಾಗಲುಕೋಟೆ ನಗರದ ಜನತೆಯ ಗಮನವನ್ನು ತಮ್ಮ ಪ್ರವಚನಗಳ ಮೂಲಕ ಸೆಳೆದಾಗ ಪ್ರಸ್ತುತ ಚಳುವಳಿಗೆ ಅಲ್ಲಿಯ ಜನರು ಸಂಪೂರ್ಣ ಬೆಂಬಲ ನೀಡಿದರು. ಮಾತ್ರವಲ್ಲ ಈ ಚಳುವಳಿ ಯಶಸ್ವಿಯಾದ ನಂತರವೂ ಪೂಜ್ಯರು ಕೂಡಲ ಸಂಗಮದಲ್ಲಿ ನೆಲೆಸಿ, ಇದನ್ನು ಅಭಿವೃದ್ಧಿ ಪಡಿಸಬೇಕೆಂದು ತಾವು ತನು-ಮನ-ಧನಗಳಿಂದ ಸಹಾಯ ಸಹಕಾರ ನೀಡುವ ಭರವಸೆ ಇತ್ತರು. ಸಂಗಮ ಕ್ಷೇತ್ರದಲ್ಲಿ ಮಠವನ್ನು ಕಟ್ಟಲು ಬೇಕಾದ ಭೂಮಿಯನ್ನು ಖರೀದಿಸಲು ಧನ ಸಹಾಯ ಮಾಡಲು ಮುಂದಾದರು. ಹೀಗಾಗಿ 1987ರಲ್ಲಿ ಬಸವ ಧರ್ಮಪೀಠ ಟ್ರಸ್ಟ್ ಅನ್ನು ಸ್ಥಾಪಿಸಿ ಪೂಜ್ಯ ಶ್ರೀಗಳು ಮಹಾಮನೆಯ ನಿರ್ಮಾಣ ಆರಂಭಿಸಿದರು ಶ್ರೀಗಳ ಕಾರ್ಯಕ್ಷಮತೆಯ ಫಲವಾಗಿ ಧ್ಯಾನಮಂಟಪ, 16 ಜನರ ಶರಣರ ಮಂಟಪಗಳು, ಸುಂದರವೂ ಭವ್ಯವೂ ಆದ ಅತಿಥಿ ಗೃಹ ಸಿದ್ಧವಾಗುತ್ತಿವೆ. ಎರಡು ಭವ್ಯ ನದಿಗಳ ಸಂಗಮ, ಅವುಗಳ ದಂಡೆಯ



ಪರಮ ತೇಜಸ್ವಿನ ತರುಣ ಸನ್ಯಾಸಿ. 11-4-60
(ನಾಗೌಡ ಆರ್ಟ್ ಸ್ಟುಡಿಯೋ, ಸಂಕೇಶ್ವರ)

Digitalized by e-Sahithya Documentation Forum
Sponsored by Sarayu Foundation Trust

Estd. 1906 Phones : 63283, 66304
With best compliments from Branch : 67040

THE HUBLI URBAN CO-OPERATIVE BANK LTD. HUBLI

Financial Position as on 20-12-1991.

1.	Authorised Capital	35,00,000
2.	Paid up Share Capital	34,14,100
3.	Statutory and other Reserves	60,39,900
4.	Head Office Deposit	4,31,72,500
5.	Branch Deposit	38,29,300
6.	Working Capital	5,30,41,700
7.	Dividend for 1989-90	12 pr.
8.	Loans and Advances, Head office	3,66,11,600
9.	-do- Branch	9,09,100
10.	Net Profit as on 30-6-1991	17,00,900

★ OLDEST URBAN BANK IN THE AREA ★

1. Rate of interest on S. B. Account – 6 percent
2. Rate of interest on F.D. Account.
   Veries from 9 percent to 11 percent.
3. Safe Deposit Lockers facility in Head office and old Hubli Branch.
4. Godown Facilities.
5. Cumulative Deposit Scheme.
6. Ganesh Lakhapati Deposit.
7. Platinum Jubilee Reinvestment Certificate.
8. Ganesh Insurance Linked Certificate.

✻ PLATINUM JUBILEE CELEBRATED IN MAY 1981. ✻

Deposits are insured under Deposit Insurance and credit Guarantee corporation.

C.M. Uppin, B.A. (Hons) M.com.
Manager.

V.H. Mathad
vice-chairman. D.M.E.

B.S. Hombali, B.Sc.
Chairman.

S.S. Shettar, B.A.LL.B.
Director

Dr. S.G. Joshi M.S.F.R.C.S.D.O.R.L.
Director

M.B. Hosmani.
Director

D.H. Kanchi
Director

S.K. Marathe D.C.E
Director

G.S. Hutagikar, B.Com.
Director

Smt. S.N. Tabib, B.Sc,
Director

ಮೇಲಿರುವ ಸಂಗಮೇಶ್ವರ ದೇವಾಲಯ, ವಿಸ್ತಾರವಾಗಿ ಹರವಿಕೊಂಡು ನಿಂತಿರುವ ಬಸವ ಸಾಗರದೊಡನೆ ಮಹಾಮನೆಯ ಮಹಾ ಮಠವು ಪ್ರೇಕ್ಷಣೀಯ ಸ್ಥಳವಾಗಿದೆಯಲ್ಲದೆ ಶ್ರದ್ಧಾ-ಭಕ್ತಿಗಳ ಕೇಂದ್ರವಾಗಿದೆ.

ಶರಣ ಮೇಳ

ಪೂಜ್ಯ ಶ್ರೀಗಳ ಸಾಧನೆಯಲ್ಲಿ ವಿಶೇಷವಾಗಿ ಉಲ್ಲೇಖನೀಯವಾಗಿರುವುದು ಬಸವ ಕ್ರಾಂತಿ ದಿನ (ಮಕರ ಸಂಕ್ರಾಂತಿ) ದಂದು ನಡೆಯುವ ಶರಣ ಮೇಳ: "ಬಸವ ತತ್ತ್ವಾನುಯಾಯಿಗಳು ಮುಸ್ಲೀಮ್ ಬಂಧುಗಳು ಹಜ್‌ಯಾತ್ರೆ ಕೈಗೊಳ್ಳುವಂತೆ ಪ್ರತಿವರ್ಷವೂ ಕೂಡಲಸಂಗಮದಲ್ಲಿ ಸೇರಬೇಕು. ಕೇವಲ ನದಿಯ ಸಂಗಮದಲ್ಲಿ ಮಿಂದರೆ ಸಾಲದು, ಜ್ಞಾನಧಾರೆಯಲ್ಲೂ ಮೀಯಬೇಕು." ಎಂದು ಶ್ರೀಗಳು ನೇತಾರರಾಗಿ ಆರಂಭಿಸಿದ ಶರಣ ಮೇಳ ಕೂಡಲ ಸಂಗಮಕ್ಕೆ ಲಕ್ಷಾಂತರ ಜನರನ್ನು ಆಕರ್ಷಿಸುತ್ತದೆ. ಪ್ರತಿವರ್ಷದ ಜನವರಿ 13, 14, 15ರಂದು ನಡೆಯುವ ಶರಣ ಮೇಳಕ್ಕೆ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಿಂದ ಮಾತ್ರವಲ್ಲ ಹೊರರಾಜ್ಯಗಳಿಂದಲ್ಲ ಜನರು ಲಕ್ಷಾಂತರ ಸಂಖ್ಯೆಯಲ್ಲಿ ಸಮಾವೇಶವಾಗುತ್ತಾರೆ. ಅಷ್ಟು ಜನರಿಗೆ ಅತ್ಯಂತ ಅಚ್ಚುಕಟ್ಟಾಗಿ ಊಟ-ವಾಸ್ತವ್ಯದ ವ್ಯವಸ್ಥೆಯನ್ನು ಮೇಳದ ಉತ್ಸವ ಸಮಿತಿಯು ಮಾಡುತ್ತದೆ.

ಚಲಿಸುವ ಜ್ಞಾನ ದೇವಾಲಯ

ಪೂಜ್ಯ ಸ್ವಾಮೀಜಿಯವರು ಹುಟ್ಟು ಹೋರಾಟಗಾರರು. ಬಾಲ್ಯದಲ್ಲಿ ಬಡತನವೊಡ್ಡಿದ ಸವಾಲನ್ನು ಸ್ವೀಕರಿಸಿ ಯಶಸ್ಸನ್ನು ಹೊಂದಿದರೆ, ನಂತರ ಮೂಢ, ಜಡಗಟ್ಟಿದ ಸಂಪ್ರದಾಯದ ವಿರುದ್ಧ ಹೋರಾಡಬೇಕಾಯಿತು. ಈ ಹೋರಾಟದಲ್ಲಿ ಅವರಿಗೆ ಶಸ್ತ್ರದಂತೆ ನೆರವಾದುದು ಕ್ರಾಂತಿಕಾರಿ ಮೌಲ್ಯಗಳನ್ನು ಒಡಲಲ್ಲಿ ತುಂಬಿಕೊಂಡ ವಚನ ಸಾಹಿತ್ಯ ; ಗುರು ಬಸವಣ್ಣನವರ ಹೆಸರನ್ನು ಹೇಳಿದರೂ ಅವರು ಬೋಧಿಸಿದ ಸಮಾನತೆಯನ್ನು ಒಪ್ಪದೆ ಇದ್ದ ಜನರಿಗೆ ವಚನ ವಾಙ್ಮಯದ ಕನ್ನಡಿ ತೋರಿ, ಸಮಾಜವನ್ನು ಎಚ್ಚರಿಸಿದರು." ಪ್ರವಾಸದ ಸೆಳೆವಿನ ಗುಂಟ ಸಾಗುವ ಸತ್ತ ಮೀನಾಗದೆ, ತನ್ನ ಗುರಿ ಎಡೆಗೆ-ಸೆಳವನ್ನೂ ಮೀರಿ ಸಾಗುವ ಜೀವಂತ ಮೀನಿನಂತೆ ಪೂಜ್ಯರು ಸತ್ಯದ ದಿಕ್ಕಿನತ್ತ ಸಾಗಿದರು ; ಸತ್ಯವನ್ನು ಸಮಾಜವು ಅರಿತುಕೊಳ್ಳುವಂತೆ ಮಾಡಿದರು. ನಿರ್ಭೀತ ನಿಲುವು, ತತ್ತ್ವನಿಷ್ಠೆ, ಅಸ್ಖಲಿತವಾಣಿ, ಅವಿಶ್ರಾಂತ ಪರಿಶ್ರಮ, ಸ್ಪಷ್ಟವಿಚಾರಧಾರೆ, ಚಿಂತನ ಶೀಲತೆಗಳಿಂದ ಅಪಾರ ಜಾಗೃತಿಯನ್ನು ಉಂಟುಮಾಡಿದ್ದಾರೆ.

ಜಂಗಮನ ಸಮಾಜ ಕಳಕಳಿ, ಜ್ಞಾನದಾಸೋಹ, ನಿಸ್ವಾರ್ಥ ಜೀವನ, ತಾನು ತನ್ನದೆಂಬ ಸೀಮಿತ ಮಮಕಾರವಳಿದು ವಿಶ್ವವೇ ತನ್ನದೆಂಬ ಉದಾತ್ತ ಚಿಂತನೆ

Digitalized by e-Sahithya Documentation Forum
Sponsored by Sarayu Foundation Trust

ಆಳವಟ್ಟ ಪೂಜ್ಯ ಸ್ವಾಮೀಜಿ "ಜಂಗಮ" ತತ್ತ್ವಕ್ಕೆ ಜೀವಂತಿಕೆ ತಂದಿದ್ದಾರೆ. ಕೀರ್ತಿ ವಾರ್ತೆಯನ್ನು ಬಯಸದೆ, ವೈಭವ ಆಡಂಬರಗಳಿಂದ ದೂರವಿದ್ದು, ಸಮಾಜದೊಳ ಹೊರಗಣ ಗುಣದೋಷಗಳನ್ನರಿತು ಕಳಕಳಿಯಿಂದ ತಿದ್ದುತ್ತ ತಾವಾಗಿಯೇ ಜನತೆಯ ಬಳಿಗೆ ಹೋಗಿ ಸದ್ದಿಲ್ಲದೆ ಸಂಚರಿಸಿ, ಗೌಜು ಗದ್ದಲವಿಲ್ಲದೆ ಜ್ಞಾನದಾಸೋಹ ಮಾಡಿ, ದುಶ್ಚಟ-ದುರ್ಗುಣಗಳಿಂದ ಜನರನ್ನು ದೂರಮಾಡಿ, ಜನಮಾನಸದಲ್ಲಿ ಅಪೂರ್ವ ಪರಿವರ್ತನೆ ತರುವ "ನಡೆಲಿಂಗ" ಪೂಜ್ಯ ಸ್ವಾಮೀಜಿಯವರು.

ಇಂತಹ ಪೂಜ್ಯರು 11–9–91 ರಂದು 60 ವರ್ಷಗಳನ್ನು ಪೂರೈಸಿ, 61 ವರ್ಷಕ್ಕೆ ಪಾದಾರ್ಪಣ ಮಾಡಿರುವ ನಿಮಿತ್ತ ಶ್ರೀಗಳ ಪ್ರವಚನದಿಂದ ಪ್ರೇರಿತರಾದರು, ದೀಕ್ಷಾನುಗ್ರಹವನ್ನು ಪಡೆದ ಭಕ್ತರು, ಅನುಗ್ರಹ-ಆಶ್ರಯ ಪಡೆದು ಶಿಷ್ಯರಾದವರು ಈ ಎಲ್ಲರೂ ಕೂಡಿ ಇದೀಗ ತಮ್ಮ ಗೌರವವನ್ನು ಸೂಕ್ತವಾಗಿ ಹೇಳಬೇಕೆಂದರೆ ಕೃತಜ್ಞತೆಯನ್ನು ಅರ್ಪಿಸಲು ಸಿದ್ಧರಾಗಿದ್ದಾರೆ. ಕರ್ನಾಟಕದ ರಾಜಧಾನಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ತಾ॥ 27-10-1991 ರಂದು ಪೂಜ್ಯರಿಗೆ ರಾಜ್ಯಮಟ್ಟದ ಅಭಿನಂದನ ಸಮಾರಂಭವನ್ನು ಏರ್ಪಡಿಸಿದ್ದಾರೆ.

ಹರಿವ ನದಿಯಂತೆ ಸದಾ ಸಂಚರಿಸುತ್ತ, ಉರಿವ ಜ್ಯೋತಿಯಂತೆ ಜ್ಞಾನ ಪ್ರಕಾಶವನ್ನು ಬೀರುತ್ತ, ಸುಡುವ ಊದಿನ ಕಡ್ಡಿಯಂತೆ ಸದ್ಭಾವದ ಪರಿಮಳವನ್ನು ಬೀರುತ್ತಿರುವ ಪೂಜ್ಯ ಶ್ರೀ ಲಿಂಗಾನಂದ ಸದ್ಗುರುಗಳಿಗೆ ಪರಮಾತ್ಮನು ಆಯುರಾರೋಗ್ಯಭಾಗ್ಯವನ್ನು ಕರುಣಿಸಲೆಂದು ಷಷ್ಠ್ಯಬ್ದಿಯ ನಿಮಿತ್ತದ ಈ ಸಂದರ್ಭದಲ್ಲಿ ಹಾರೈಸೋಣ. ★

ಸಿದ್ಧರಾಮೇಶ್ವರರ ಪ್ರಸಾದ ವಾಣಿ

ಶಿಷ್ಯನೆಂಬ ವನಕ್ಕೆ ವಸಂತ ನೋಡಾ ಗುರು
ಶಿಷ್ಯನೆಂಬ ತಿಮಿರಕ್ಕೆ ಜ್ಯೋತಿ ನೋಡಾ ಗುರು
ಶಿಷ್ಯನೆಂಬ ರಾತ್ರಿಗೆ ಸೂರ್ಯ ನೋಡಾ ಗುರು
ಶಿಷ್ಯನೆಂಬ ನನಗೆ ಪ್ರಕೃಷ್ಟ ಪ್ರಮಥ ಚಿಂತಾಮಣಿ
ಚನ್ನಬಸವ ಗುರು, ಕಪಿಲ ಸಿದ್ಧಮಲ್ಲಿಕಾರ್ಜುನಾ —ಸಿ. ವ. 758

ಚಿರಂಜೀವಿ ಎಂದಡೆ ನಿರೋಗಿ, ಚಿರಂಜೀವಿ ಎಂದಡೆ ಸಶಕ್ತ
ಚಿರಂಜೀವಿ ಎಂದಡೆ ಬಹುಕಾಲ ಬದುಕುವವನು.
ಚಿರಂಜೀವಿ ಎಂದಡೆ ಪ್ರಳಯವ ಮೀರುವವನಲ್ಲ
ಕಪಿಲ ಸಿದ್ಧಮಲ್ಲಿಕಾರ್ಜುನಾ, ಬ್ರಹ್ಮವೆಂಬ ಶಬ್ದ ಬೇರುಂಟೆ ?
—ಸಿ. ವ. 126

ಧರ್ಮಕ್ರಾಂತಿಯ ಧೀರಯೋಗಿ

ಪೂಜ್ಯ ಶ್ರೀ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮೀಜಿ ಕುರಿತು

ಭವ್ಯವಾದ ನಿಲುವು, ವಿಶಾಲವಾದ ತೇಜಸ್ವಿ ಕಂಗಳು, ಕ್ರೀಡಾಪಟುವಿನ ದೇಹದಾರ್ಢ್ಯ. ದಿಟ್ಟತನ-ಸ್ವತಂತ್ರ ವಿಚಾರವಂತಿಕೆಯ ಸಮ್ಮಿಶ್ರಕಳೆ, ಘಂಟಾನಾದದಂತಹ ಸ್ಫುಟವಾದ ವಾಣಿ, ಅದರಲ್ಲಿ ಹೊರಹೊಮ್ಮುವ ಸ್ಪಷ್ಟ ಸುಸಂಬದ್ಧ ವಿಚಾರಧಾರೆ, ಇವುಗಳಿಂದ ಶೋಭಿತರಾದ, ವೀರ ಸನ್ಯಾಸಿ ವಿವೇಕಾನಂದರನ್ನು ನೆನಪಿಗೆ ತರುವ ಧೀಮಂತ ಸನ್ಯಾಸಿ ಪೂಜ್ಯ ಶ್ರೀ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮೀಜಿ.

ಉತ್ತರ ಕರ್ನಾಟಕದ ಪುಣ್ಯಭೂಮಿ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೋಕಿನ ಮನುಗೂಳಿಯಲ್ಲಿ 15-9-1931 ರಂದು ಜನನ; ತಂದೆ ಮಲ್ಲಪ್ಪ ಕಪ್ಪರದ, ತಾಯಿ ಕಲ್ಲಮ್ಮ. ಹುಟ್ಟಿದಾಗ ತಕ್ಕಮಟ್ಟಿಗೆ ಸಿರಿವಂತಿಕೆ ಇದ್ದರೂ ಕಾಲಾನಂತರ ಬಂದೆರಗಿದ ಬಡತನದ ವಿರುದ್ಧ ಸೆಣೆಸುತ್ತ ತಮ್ಮ ಸ್ವಂತ ಪ್ರತಿಭೆ ಮತ್ತು ಪ್ರಯತ್ನದಿಂದ ಮುಂದುವರಿದು 1955 ರಲ್ಲಿ ಬಿ.ಎ. ಆನರ್ಸ್ ಪೂರೈಕೆ. ತಾ॥ 25-4-1955 ರ ಬಸವ ಜಯಂತಿಯಂದು ಆಧ್ಯಾತ್ಮಿಕ ತ್ಯಾಗಜೀವನಕ್ಕೆ ಬರಲು ಬಸವ ಗುರುವಿನ ಕರೆ. ಧಾರವಾಡದಲ್ಲಿ ಎಂ.ಎ. ತತ್ತ್ವಜ್ಞಾನ ಓದುವಾಗ 19-11-56 ರಂದು ಜ್ಞಾನ ಸನ್ಯಾಸ ಸ್ವೀಕಾರ ; ವಿದ್ಯಾಭ್ಯಾಸಕ್ಕೆ ಪೂರ್ಣವಿರಾಮ. ಮುಂದೆ ಸದಾ ಸಂಚಾರ. ಸುತ್ತೂರು ಜಗದ್ಗುರುಗಳಿಂದ ತಾ॥ 7-8-1961 ರಂದು ಕ್ರಿಯಾ ಸನ್ಯಾಸ. 1970 ರಲ್ಲಿ ಧಾರವಾಡದಲ್ಲಿ ಪ್ರಥಮ ಮಹಿಳಾ ಜಗದ್ಗುರು ಪೀಠ ಸ್ಥಾಪನೆ. 1972 ರಲ್ಲಿ ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಆಗಮನ. 1975 ರಲ್ಲಿ ವಿಶ್ವಕಲ್ಯಾಣ ಮಿಷನ್ ಸ್ಥಾಪನೆ.

ಬಸವ ಸಾಗರ (ನಾರಾಯಣ ಪುರ) ಅಣೆಕಟ್ಟಿನಿಂದಾಗಿ ಕೂಡಲ ಸಂಗಮದ ಸಂಗಮೇಶ್ವರ ದೇವಾಲಯವು ಅಳಿವು-ಉಳಿವಿನ ಮಧ್ಯೆ ಹೊಯ್ದಾಡುತ್ತಿರುವಾಗ ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷ ಶ್ರೀ ಐ. ಎಂ. ಮಗದುಮ್ಮರ ಆಹ್ವಾನ-ಆಗ್ರಹದ ಮೇರೆಗೆ ಸಂಗಮಕ್ಕೆ ಬಂದ ಪೂಜ್ಯ ಶ್ರೀಗಳಿಗೆ ಸಂಗಮ ಕ್ಷೇತ್ರವನ್ನು ಸರ್ವಾಂಗೀಣವಾಗಿ ಬೆಳೆಸುವ ಅಪೇಕ್ಷೆ ಹುಟ್ಟಿ, ಬಸವ ಧರ್ಮ ಪೀಠ ಟ್ರಸ್ಟ್ ಅನ್ನು 1987 ರಲ್ಲಿ ಸ್ಥಾಪಿಸಿದರು. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮತ್ತು ಹೊರ ರಾಜ್ಯಗಳಿಂದಲೂ ಬಸವ ತತ್ತ್ವಾನುಯಾಯಿಗಳು ಪ್ರತಿವರ್ಷಕ್ಕೊಮ್ಮೆ ಕೂಡಲ ಸಂಗಮದಲ್ಲಿ ಸಮಾವೇಶವಾಗುವಂತೆ ಮಾಡಿದ ಶರಣ ಮೇಳದ ಸಚೇತಕ ಶಕ್ತಿ ಪೂಜ್ಯ ಸ್ವಾಮೀಜಿ.

ಇಂತಹ ಸ್ವಾಮೀಜಿಯವರನ್ನು ಪೂಜ್ಯರ ಕರಕಮಲ ಸಂಜಾತರಾದ ಶ್ರೀ ದಯಾನಂದ ಸ್ವಾಮೀಜಿಯವರು ಸಂದರ್ಶಿಸಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

ಜಗದ್ಗುರುಗಳೊಡನೆ ಶಿಷ್ಯರ ಸಂದರ್ಶನ

—ಶ್ರೀ ದಯಾನಂದ ಸ್ವಾಮೀಜಿ

ಪ್ರ * ಪೂಜ್ಯ ಗುರೂಜಿಯವರೇ, ತಮ್ಮ ಶಿಷ್ಯನಾಗಿದ್ದರೂ ಧರ್ಮ, ಸಂಘಟನೆ ಕುರಿತಾಗಿ ಕೆಲವು ಪ್ರಶ್ನೆಗಳನ್ನು ಕೇಳಲು ಇಚ್ಛಿಸಿದ್ದೇನೆ. ತನ್ಮೂಲಕ ತಮ್ಮ ಅಮೂಲ್ಯ ವಿಚಾರಧಾರೆ ಪತ್ರಿಕೆಯ ಓದುಗರಿಗೂ ತಲ್ಪಲೆಂಬುದು ನನ್ನ ಅಪೇಕ್ಷೆ. ತಾವು ಬಾಲ್ಯ ಮತ್ತು ತಾರುಣ್ಯದಲ್ಲಿ ಕಾರ್ಲ್‌ಮಾರ್ಕ್ಸ್‌ರವರ ವಿಚಾರಧಾರೆಗೆ ಒಳಗಾಗಿದ್ದು, ಧರ್ಮದ ಕಟ್ಟಾ ವಿರೋಧಿಯಾಗಿದ್ದವರು ಧರ್ಮಬೋಧಕರಾಗಿ ಪರಿವರ್ತನೆಗೊಂಡುದು ಹೇಗೆ ?

ಉ x ಬಾಲ್ಯದಲ್ಲಿ ಬಂದೆರಗಿದ ಬಡತನ ನನ್ನನ್ನು ವಿಚಾರವಾದಿಯನ್ನಾಗಿಸಿತು. ಜನ್ಮಕೊಟ್ಟ ತಂದೆ ಮೂಢನಂಬಿಕೆ, ಶಕುನ-ಅಪಶಕುನ ಮುಂತಾದ ಭ್ರಾಂತಿಯಲ್ಲಿ ಸಿಲುಕಿ, ತಾವು ನಡೆಸುತ್ತಿದ್ದ ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸಿ, ಬಡತನವನ್ನು ತಂದುಕೊಂಡಾಗ ಧರ್ಮದ ಬಗ್ಗೆ ಜಿಗುಪ್ಸೆ, ದೇವರನ್ನು ಕುರಿತು ಅಪನಂಬಿಕೆ ಹುಟ್ಟಿದವು. ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಬಿಜಾಪುರದಲ್ಲಿ ಮಾಡುವಾಗ ಸಾಮ್ಯವಾದಿ ಧುರೀಣರ ಉಪನ್ಯಾಸಗಳನ್ನು ಕೇಳಿ ಮನದಲ್ಲಿ ಮಾರ್ಕ್ಸ್‌ವಾದ ಅಚ್ಚೊತ್ತಿತು. ಧರ್ಮವನ್ನು ನಂಬಿದರೆ ಜಾತೀಯತೆ, ಮೂಢನಂಬಿಕೆ, ದೇವರನ್ನು ನಂಬಿದರೆ ಕರ್ಮವಾದ ಬೆನ್ನು ಹತ್ತುವುವು ಎಂಬ ಭಾವ ನನ್ನಲ್ಲಿ ಬೇರೂರಿತ್ತು.

ಬೆಳಗಾಂವಿಯ ಲಿಂಗರಾಜಾ ಮಹಾವಿದ್ಯಾಲಯದಲ್ಲಿ ಓದುವಾಗ ನಮಗೆ ತತ್ತ್ವಜ್ಞಾನ ಕಲಿಸುತ್ತಿದ್ದ ಡಾ॥ ರಾಜಗೋಪಾಲರವರು ದೇವರನ್ನು ಕುರಿತ ತಾತ್ತ್ವಿಕ ಕಲ್ಪನೆ ನೀಡಿ, ನನ್ನ ಸಂದೇಹಗಳನ್ನು ಸೂಕ್ತ ಉತ್ತರದಿಂದ ಪರಿಹರಿಸಿದಾಗ ನನ್ನಲ್ಲಿ ಸೈದ್ಧಾಂತಿಕ ಬದಲಾವಣೆ ಉಂಟಾಯಿತು:

ಪ್ರ * ಇಂದಿಗೂ ದೇವರ ಅಸ್ತಿತ್ವದಲ್ಲಿ ಅಪನಂಬಿಕೆ ಇರುವ ಬಹಳ ಜನ ಇರುವರು ದೇವರು ಸತ್ತ, ದೇವರು ಪರಾರಿ, ದೇವರು ಕೇವಲ ಕಲ್ಪನೆ ಮಾತ್ರ ಎನ್ನುವ ನಾಸ್ತಿಕರು ಇದ್ದೇ ಇರುವರಲ್ಲ.

ಉ x ಅವರು ಇರುವವರೇ ; ದೇವರ ನಂಬುಗೆಯಂತೆ ನಾಸ್ತಿಕವಾದವೂ ಮಾನವ ಸಮಾಜದಲ್ಲಿ ಎಂದಿನಿಂದಲೂ ಬಂದಿದೆ, ಒಂದೊಂದು ಕಾಲಕ್ಕೆ ವ್ಯಕ್ತಿಯಲ್ಲಿ

ಬಸವ ಧರ್ಮದ ಮಹಾಜಗದ್ಗುರು ಪೀಠ

ವಿಶ್ವಗುರು ಬಸವಣ್ಣನವರು ನವ ಪಥದ ನಿರ್ಮಾಪಕರು, ಅನುಭವ ಮಂಟಪದ ಸಂಸ್ಥಾಪಕರು, ಅಸಂಖ್ಯಾತ ಶರಣರ ರೂಹಾರಿಗಳು, ಬಸವ ಸಂಪ್ರದಾಯದ ಅನೇಕ ಮಠಗಳು ಸಾಗಿ ಬಂದಿದ್ದರೂ, ಗುರು ಬಸವಣ್ಣನವರ ಹೆಸರಿನ ಧರ್ಮಪೀಠ ಇಲ್ಲದ್ದು ಒಂದು ಕೊರತೆ ಎಂದು ಭಾವಿಸಿದ ಬಸವ ತತ್ತ್ವಾನುಯಾಯಿಗಳ ಸಂಕಲ್ಪದಂತೆ ಇದೀಗ ಕೂಡಲ ಸಂಗಮದಲ್ಲಿ ಬಸವ ಧರ್ಮಪೀಠವು 13-1-1992 ರಂದು ಸ್ಥಾಪನೆಗೊಂಡಿದ್ದು, ಪೂಜ್ಯ ಶ್ರೀ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳು ಅದರ ಪ್ರಥಮ ಜಗದ್ಗುರುಗಳಾಗಿ ಪೀಠಾರೋಹಣ ಮಾಡಿದ್ದಾರೆ. ಪೂಜ್ಯ ಶ್ರೀ ಸ್ವಾಮೀಜಿ ಅಪೂರ್ವ ವಾಗ್ಮಿಗಳು, ಮಾನವತಾವಾದಿಗಳು, ಅವಿಶ್ರಾಂತ ಸ್ಫೂರ್ತಿಯಿಂದ ನಾಡಿನ ಎಲ್ಲೆಡೆ ಮತ್ತು ಗಡಿನಾಡುಗಳಲ್ಲಿಯೂ ಸಂಚರಿಸಿ ಪ್ರವಚನ ಸುಧೆಯನ್ನು ಹರಿಸಿದವರು.

ತಾವಷ್ಟೇ ಶ್ರೇಷ್ಠ ಪ್ರವಚನಕಾರರಾಗದೆ ಅನೇಕ ಪ್ರವಚನಕಾರರನ್ನು ತರಬೇತಿಗೊಳಿಸಿದವರು, ಜನಪ್ರಿಯ ಧಾರ್ಮಿಕ ನೇತಾರರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು. ಪೂಜ್ಯ ಶ್ರೀ ದಯಾನಂದ ಸ್ವಾಮೀಜಿಯವರು, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು, ನಿಜಗುಣಾನಂದ ಸ್ವಾಮಿ, ಚನ್ನಬಸವಾನಂದರು ಮುಂತಾದವರು ಶ್ರೀ ಸ್ವಾಮೀಜಿಯವರ ಶಿಷ್ಯೋತ್ತಮರಲ್ಲಿ ಪ್ರಮುಖರು. ಈ ಪೀಠದ ಉತ್ತರಾಧಿಕಾರಿಗಳನ್ನು ಅರ್ಹತಾ ಪರಂಪರೆಯ ಮೇಲೆ ಆರಿಸುವ ಉದಾತ್ತ ಬಯಕೆ ಹೊಂದಿದ್ದಾರೆ ಸ್ವಾಮೀಜಿ.

ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿರುವ ಕೂಡಲ ಸಂಗಮವು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ. ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪನೆಯಿಂದ ಈ ಕ್ಷೇತ್ರ ಇದೀಗ ಇನ್ನಷ್ಟು ಹಿರಿಮೆಯನ್ನು ಪಡೆಯುತ್ತಲಿದೆ.

Digitalized by e-Sahithya Documentation Forum
Sponsored by Sarayu Foundation Trust

ವಿಚಾರಪಲ್ಲಟವಾಗುತ್ತದೆ. ಬಹಳ ಜನರು ನಾಸ್ತಿಕರಾಗಿ ವಾದ ಮಾಡಲು ಮುಖ್ಯ ಕಾರಣ ಅವರು ಮಾನವರೆಲ್ಲರನ್ನು, ಈ ವಿಶ್ವವನ್ನು ಸೃಷ್ಟಿ ಮಾಡಿರುವ ಕರ್ತನನ್ನು ಅರಿಯುವುದನ್ನು ಬಿಟ್ಟು, ಮಾನವರು ಕಲ್ಪಿಸಿ ಕೊಂಡ ಮತ್ತು ದೈವೀಕರಿಸಿದ ವ್ಯಕ್ತಿಗಳನ್ನು ದೇವರೆಂದು ತಿಳಿದು, ದೇವರ ಅಸ್ತಿತ್ವವನ್ನು ನಿರಾಕರಿಸುವರು. ದೇವರು ಎಂದರೆ ನಾಮರೂಪ ಕ್ರಿಯಾತೀತವಾಗಿ, ನಿರಂಜನ ಸ್ವರೂಪವಾಗಿ ವಿಶ್ವವನ್ನು ಸುಸಂಬದ್ಧವಾಗಿ ಸೃಷ್ಟಿಸಿ, ನಡೆಸುತ್ತಿರುವ ಶಕ್ತಿ ಎಂದು ತಿಳಿದುಕೊಂಡಾಗ ದೇವರನ್ನು ನಂಬದಿರಲು ಕಾರಣವೇ ಇಲ್ಲ.

ಪ್ರ * "ಧರ್ಮವೆಂದರೆ ಜಾತೀಯತೆ, ದೇವರನ್ನು ನಂಬಿದರೆ ವಿಧಿವಾದಿಯಾಗಬೇಕು ಆದ್ದರಿಂದ ಧರ್ಮ-ದೇವರು ಬೇಡವೇ ಬೇಡ." ಎನ್ನುವವರ ಸಂಖ್ಯೆ ಬಹಳವಿದೆ. ಇವರ ತಿಳುವಳಿಕೆಯ ಬಗ್ಗೆ ತಮ್ಮ ಅಭಿಪ್ರಾಯವೇನು ?

ಉ x ಮೊದಲು ನಾನೂ ಹೀಗೇ ತಿಳಿದಿದ್ದೆನಷ್ಟೆ, ಧರ್ಮ ಮತ್ತು ಜಾತೀಯತೆ ಪರಸ್ಪರ ವಿರುದ್ಧವಾದ ತತ್ತ್ವಗಳು; ಬೆಳಕು ಮತ್ತು ಕತ್ತಲೆಯಂತೆ. ಬೆಳಕು ಇದ್ದಲ್ಲಿ ಕತ್ತಲೆ ಇರುವುದಿಲ್ಲ; ಒಂದು ವೇಳೆ ಕತ್ತಲೆ ಇದ್ದರೆ ಅಲ್ಲಿ ಬೆಳಕು ಇಲ್ಲವೆಂದು ಹೇಗೆ ಅರ್ಥವಾಗುವುದೋ ಹಾಗೆ ಧರ್ಮವಂತರಲ್ಲಿ ಜಾತೀಯತೆ ಇರಬಾರದು, ಜಾತೀಯತೆಯಿದ್ದರೆ ಅವನು ಧರ್ಮವಂತನಲ್ಲ, ದೇವರನ್ನು ನಂಬಿದವನು ಆಶಾವಾದಿಯೂ, ಉತ್ತಮ ಪ್ರಯತ್ನ ಶೀಲನೂ ಆಗುವನೇ ವಿನಾ ವಿಧಿವಾದಿಯಲ್ಲ. ವಿಧಿವಾದಿಯಾಗಿ ಕೈಚೆಲ್ಲಿ ಕೂರುವವನು ಅಜ್ಞಾನಿಮಾತ್ರ, ಜೀವನವನ್ನು ಸಂಕಷ್ಟಗಳ ಮಧ್ಯದಲ್ಲೂ ಹೆದರದೆ ಎದುರಿಸಬೇಕು ಎಂಬ ಆತ್ಮವಿಶ್ವಾಸವನ್ನು ದೇವರ ನಂಬಿಕೆ ಮೈಗೂಡಿ ಸುತ್ತದೆ.

ಪ್ರ * ಸಮಾಜ ಸುಧಾರಕ, ವಿಚಾರವಾದಿ ಬಸವಣ್ಣನವರ ತತ್ತ್ವಗಳನ್ನು ಸರಿ ಯಾಗಿ ಪ್ರಚಾರ ಮಾಡಿದವರಲ್ಲಿ ಅಗ್ರಗಣ್ಯರು ತಾವು. ಬಸವಣ್ಣನವರು ಯಾವುದೋ ಒಂದು ಜಾತಿಗೆ ಸೀಮಿತರಾದವರು ಎಂಬ ಕಲ್ಪನೆ ಜನರಲ್ಲಿ ದ್ದಾಗ, ಅವರು ವಿಶ್ವಮಾನವರು, ವಿಶ್ವವಿಭೂತಿ, ಸಕಲ ಮಾನವರ ಲೇಸಿಗೆ ಶ್ರಮಿಸಿದವರು ಎಂಬುದನ್ನು ಮನಗಾಣಿಸಿಕೊಟ್ಟವರು ತಾವು. ತಾವು ಬಸವಣ್ಣನವರ ವಿಚಾರಧಾರೆಯ ಪ್ರಭಾವಕ್ಕೆ ಒಳಗಾದುದು ಹೇಗೆ ?

ಉ x ನಾಸ್ತಿಕತೆಯಿಂದ ಆಸ್ತಿಕತೆಗೆ ಪರಿವರ್ತನೆಯಾಗುವ ಘಟ್ಟದಲ್ಲಿ ಡಾ॥ ರಾಜ ಗೋಪಾಲರ ಉಪನ್ಯಾಸಗಳು ಪರಿಣಾಮ ಮಾಡುವಾಗಲೇ ವಚನ ಸಾಹಿತ್ಯ ವನ್ನು ಓದಲಾರಂಭಿಸಿದೆ. ಏಕದೇವೋಪಾಸನೆ, ಜಾತ್ಯತೀತತ್ವ, ಸಮತಾ

ವಾದ, ಮೂಢನಂಬಿಕೆ ತೊರೆದ ಪ್ರಗತಿಪರ ಧರ್ಮದ ಕಲ್ಪನೆ ವಚನ ವಾಙ್ಮಯದಲ್ಲಿ ತುಂಬಿದ್ದರಿಂದ ಸಾಮ್ಯವಾದದ ವಿಚಾರಧಾರೆಯ ಪ್ರಭಾವ ದಲ್ಲಿದ್ದ ನನಗೆ ಬಲುಬೇಗನೆ ಬಸವ ತತ್ತ್ವವು ಹಿಡಿಸಿತು. ಧರ್ಮ ಮತ್ತು ದೇವರನ್ನು ಮೂಲಭೂತ ಮೌಲ್ಯಗಳನ್ನಾಗಿಟ್ಟುಕೊಂಡೇ ಬಸವಾದಿ ಪ್ರಮಥರು 800 ವರ್ಷಗಳಷ್ಟು ಹಿಂದೆಯೇ ಸಮತಾವಾದೀ ಸಮಾಜ ರಚನೆಗೆ ಪ್ರಯತ್ನಿಸಿದ್ದು ನನಗೆ ಬಹಳ ಮೆಚ್ಚುಗೆಯಾಯಿತು. ವಚನ ವಾಙ್ಮಯವು ಬೋಧೆ ಮಾಡುವ ತತ್ತ್ವಗಳ ಪ್ರಚಾರಕ್ಕಾಗಿ ನನ್ನ ಜೀವನ ವನ್ನೇ ಮುಡುಪಿಡುವ ನಿರ್ಧಾರ ಮಾಡಿದೆ.

ಪ್ರ * "ಬಸವಣ್ಣನವರು ಸ್ಥಾಪಿಸಿದ ಧರ್ಮಾನುಯಾಯಿಗಳಾದ ಲಿಂಗಾಯತರು ಹಿಂದುಗಳಲ್ಲ". ಎಂದು ಕೆಲವರು ಪ್ರತಿಪಾದಿಸಿ, ಹಿಂದು ಸಮಾಜದಿಂದ ಪ್ರತ್ಯೇಕವಾಗುವ ಪ್ರಯತ್ನವಾಗಿ ಜನಗಣತಿಯಲ್ಲಿ ಸ್ವತಂತ್ರ ಕಾಲಮ್ ಕೇಳುವರಲ್ಲ. ಈ ಬಗ್ಗೆ ತಮ್ಮ ಅಭಿಪ್ರಾಯ ?

ಉ x ಮೊದಲು ಹಿಂದುತ್ವದ ಬಗ್ಗೆ ಸರಿಯಾದ ಕಲ್ಪನೆ ಬೆಳೆಯಬೇಕು. ಭಾರತವು ಯಾರಿಗೆ ಧರ್ಮಭೂಮಿಯೋ, ಯಾರು ಓಂಕಾರವನ್ನು ನಂಬಿ ತಮ್ಮ ಮಂತ್ರದಲ್ಲಿ ಅಳವಡಿಸಿಕೊಳ್ಳುವರೋ ಅವರೆಲ್ಲರು ಹಿಂದುಗಳೆ; ಯಾವ ಧರ್ಮಗಳ ಆದ್ಯರು ಭಾರತದಲ್ಲಿ ಹುಟ್ಟಿರುವರೋ ಅವರು ಕೊಟ್ಟ ಧರ್ಮ ಗಳು ಹಿಂದು ಧರ್ಮಗಳೇ ! ಹಿಂದು ಅನ್ನುವುದು ಒಂದು ಧರ್ಮವಲ್ಲ, ಅದು ಒಂದು ಸಾಂಸ್ಕೃತಿಕ ಪರಂಪರೆ. ಬ್ರಿಟಿಷ್ ವಿದ್ವಾಂಸರು ಹಿಂದು ಸಮಾಜವು ಬಲಿಷ್ಠವಾಗುವುದನ್ನು ತಪ್ಪಿಸಲು, ಜಗತ್ತಿನ ದೊಡ್ಡ ಜನ ಸಂಖ್ಯೆಯ ಅನುಯಾಯಿಗಳುಳ್ಳ ಧಾರ್ಮಿಕ ಪರಂಪರೆಯಾಗುವುದನ್ನು ತಪ್ಪಿಸಲು ಜೈನ, ಬೌದ್ಧ, ಸಿಖ್ ಮುಂತಾದುವನ್ನು ಅಹಿಂದು ಧರ್ಮಗಳ ನ್ನಾಗಿ ಮಾಡಿದರು. ಬುದ್ಧಿವಂತರ ಈ ಕುತಂತ್ರಕ್ಕೆ ಬಲಿಯಾಗಿ, ಅದೇ ನಂಬಿಕೆಯನ್ನು ಅನೇಕ ಹಿಂದುಗಳು ಬೆಳೆಸಿಕೊಂಡರು, ಜೈನ, ಬೌದ್ಧ, ಲಿಂಗಾಯತ, ಸಿಖ್ ಧರ್ಮಗಳು ಅವೈದಿಕ ಧರ್ಮಗಳೇ ವಿನಾ ಅಹಿಂದು ಧರ್ಮಗಳಲ್ಲ, ಆತ್ಮ, ಮೋಕ್ಷ, ಕರ್ಮಸಿದ್ಧಾಂತ ಮುಂತಾದವುಗಳಲ್ಲಿ ಪರಸ್ಪರ ಸಾಮ್ಯವನ್ನು ಈ ಎಲ್ಲ ಧರ್ಮಗಳು ಹೊಂದಿವೆ. ಹಿಂದೂ ಸಾಂಸ್ಕೃತಿಕ ಕಕ್ಷೆಯಲ್ಲಿ ಬರುವ ಲಿಂಗಾಯತ ಧರ್ಮಾನುಯಾಯಿಗಳು ಎಷ್ಟು ಜನಸಂಖ್ಯೆಯಲ್ಲಿ ಇದ್ದಾರೆ ಎಂದು ಗುರುತಿಸಿಕೊಳ್ಳಲು ಜನಗಣತಿ ಕಾಲಮ್‌ದಲ್ಲಿ ಪ್ರತ್ಯೇಕವಾದ ಕೋಡ್‌ವರ್ಡ್ ಕೇಳಲಾಗುತ್ತಿದೆಯೇ ವಿನಾ ಹಿಂದು ಸಮಾಜದಿಂದ ಪ್ರತ್ಯೇಕವಾಗಲು ಅಲ್ಲ.

Digitalized by e-Sahithya Documentation Forum
Sponsored by Sarayu Foundation Trust

ಪ್ರ * ನಮ್ಮ ನಾಡಿನಲ್ಲಿ ಅಸಂಖ್ಯಾತ ಮಠ–ಪೀಠಗಳಿವೆ. ಆದರೇನು ಜನರಲ್ಲಿ ಹೆಚ್ಚಿನ ಬದಲಾವಣೆ ತೋರದು. ದಿನದಿನಕ್ಕೂ ಧಾರ್ಮಿಕ ಶ್ರದ್ಧೆ ಕಡಿಮೆಯಾಗುತ್ತಿರುವುದು ಒಂದು ಕಡೆ ; ಇನ್ನೊಂದು ಕಡೆ ಮೂಢನಂಬಿಕೆಗಳು ಮಿತಿ ಮೀರುತ್ತಿವೆ. ದೀನ ದಲಿತರ ಮೇಲೆ ಹಿಂಸಾಚಾರ ಹೆಚ್ಚುತ್ತಿವೆ. ಧರ್ಮಗುರುಗಳು ಏನಾದರೂ ಪರಿಹಾರ ಒದಗಿಸಬಲ್ಲರೆ ?

ಉ x ಪರಿಹಾರ ಒದಗಿಸಲು ಸಾಧ್ಯ ತಮ್ಮ ತಮ್ಮ ಕರ್ತವ್ಯ ಮಾಡಿದಾಗ. ಉಪಜೀವನದ ವಿದ್ಯೆಯನ್ನು ನೀಡುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಲೌಕಿಕ ಕೆಲಸದಲ್ಲಿ ಹೆಚ್ಚು ನಿರತರಾಗುವ ಬದಲಿಗೆ ಹಿಂದೂ ಮಠಾಧೀಶರು ಕ್ರೈಸ್ತ ಸಂಸ್ಥೆಗಳಂತೆ ಧರ್ಮ ಪ್ರಚಾರದಲ್ಲಿ ನಿರತರಾಗಬೇಕು. ಧರ್ಮದಲ್ಲಿ ಶ್ರದ್ಧೆಯನ್ನು ಕಳೆದುಕೊಂಡು ನಾಸ್ತಿಕರಾಗುವ ಜನರನ್ನು ಆಸ್ತಿಕರನ್ನಾಗಿ ಇರಿಸಿಕೊಳ್ಳುವುದರ ಜೊತೆಗೆ, ಸ್ವಧರ್ಮದಿಂದ ಹೊರಹೋಗದಂತೆ ತಡೆಯಲೂ ಬರುತ್ತದೆ.

ಪ್ರ * ಮಧ್ಯದಲ್ಲೇ ತಡೆಯುತ್ತಿರುವುದಕ್ಕೆ ಕ್ಷಮಿಸಿರಿ. ಮೇಲಿನ ಪ್ರಶ್ನೆಗೆ ಪೂರಕವಾಗಿದೆ ಇದೊಂದು ಪ್ರಶ್ನೆ. ಹಿಂದು ಸಮಾಜದಿಂದ ಅನೇಕರು ಮತಾಂತರಗೊಂಡು ಹೋಗುತ್ತಿದ್ದಾರೆ, ಇಲ್ಲಿಯ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯಿಂದ ಬೇಸತ್ತು. ಈ ಬಗ್ಗೆ ತಮ್ಮ ಅನಿಸಿಕೆ ಮತ್ತು ಯೋಜನೆಗಳೇನು ?

ಉ x ಹೇಗೆ ಕ್ರೈಸ್ತ, ಮುಸ್ಲೀಮ್, ಯಹೂದ್ಯರಿಗೆ ಹುಟ್ಟಿನಿಂದಲೇ ಧರ್ಮಸಂಸ್ಕಾರ ಕೊಡಲಾಗುವುದೋ ಹಾಗೆ ಪ್ರತಿಯೊಬ್ಬ ಹಿಂದುವಿಗೂ ಒಂದು ಸಂಸ್ಕಾರ ದೊರೆಯಬೇಕು. ಹಿಂದು ಕಕ್ಷೆಯಲ್ಲಿ ಬರುವ ಬೌದ್ಧ, ಜೈನ, ಲಿಂಗಾಯತ, ಸಿಖ್ಖರಿಗೆ ಈ ಬಗೆಯ ಧರ್ಮಸಂಸ್ಕಾರವಿದೆ. ವೈದಿಕ ಧರ್ಮದ ನಂಬಿಕೆಯಂತೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಉಂಟು. ಬಹುದೊಡ್ಡ ಸಂಖ್ಯೆಯಲ್ಲಿರುವ ಶೂದ್ರರು ಮತ್ತು ದಲಿತರಿಗೆ ಈ ಅವಕಾಶ ವಿಲ್ಲ. ಅವರಲ್ಲಿ ಹಿಂದುತ್ವದ ಅಭಿಮಾನ ಬೆಳೆಯ ಬೇಕಾದರೆ ಮತ್ತು ಉಳಿಯಬೇಕಾದರೆ ಅವರೆಲ್ಲರಿಗೆ ಧಾರ್ಮಿಕ ಸಂಸ್ಕಾರ ನೀಡುವ ಬಗ್ಗೆ ಗಂಭೀರವಾಗಿ ಮಠಾಧೀಶರು ಆಲೋಚಿಸಬೇಕು.

ಹಿಂದು ಜನಾಂಗದ ಅವಿಭಾಜ್ಯ ಅಂಗವಾಗಿ ಬಂದಿರುವ ದಲಿತರು ಹಿಂದು ಬಂಧುಗಳೊಡನೆ ಅವಿಶ್ವಾಸಭಾವ ತಾಳಿ ಹೊರಹೋಗದಂತೆ ಮಾಡಲು ಧರ್ಮಜಾಗೃತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. “ಅಸ್ಪೃಶ್ಯತೆ ಮಹಾಪರಾಧ, ದೇವರ ಇಚ್ಛೆಗೆ ವಿರುದ್ಧ ; ಜಾತಿ ವ್ಯವಸ್ಥೆ ಮಾನವ ಕಲ್ಪಿತವೇ ವಿನಾ ದೇವ ನಿರ್ಮಿತವಲ್ಲ ; ಸೈದ್ಧಾಂತಿಕವಾಗಿ ಜಾತೀಯತೆ-ಅಸ್ಪೃಶ್ಯತೆಗೆ ಯಾವುದೇ ಆಧಾರವಿಲ್ಲ”. ಎಂಬುದಾಗಿ ಸತತವಾಗಿ

ಬೋಧನೆ ಮಾಡಬೇಕು. ಮೇಲ್ಜಾತಿಯ ಹಿಂದುಗಳೆಂಬ ಹಮ್ಮಿರುವವರ ಹೃದಯ ಪರಿವರ್ತನೆ ಮಾಡಬೇಕು. ಕಾಯಿದೆ-ಕಾನೂನು ಸಾವಿರ ಆದರ್ಶ ಹೇಳಲಿ ; ಅದರಿಂದ ನಾವು ಪರಿವರ್ತನೆ ತರಲು ಸಾಧ್ಯವಿಲ್ಲ. ಧಾರ್ಮಿಕ ನೇತಾರರು, ಮಠ–ಪೀಠಾಧೀಶರು ಹೇಳುವುದು ಸರಿಯಾದ ಪರಿಣಾಮ ಬೀರುತ್ತದೆ. ಒಡೆದು ಆಳುವ ನೀತಿಯನ್ನು ಆದರ್ಶವಾಗಿಟ್ಟುಕೊಂಡ, ಮನೆಗೆ ಬೆಂಕಿ ಹಚ್ಚಿ ಗಳು ಹಿರಿದುಕೊಳ್ಳುವಂಥ ಪಟ್ಟಭದ್ರಹಿತಾಸಕ್ತ ರಾಜಕಾರಣಿಗಳ ಸಹಕಾರ ಇಂಥಲ್ಲಿ ಅತ್ಯವಶ್ಯ. ಯಾಕೆಂದರೆ ಕೋಮುಗಲಭೆ ಪ್ರಚೋದಿಸಿ ತಮ್ಮ ನಾಯಕತ್ವ ಗಟ್ಟಿ ಮಾಡಿಕೊಳ್ಳಬೇಕೆಂಬ ಕೀಳುಮನಸ್ಸಿನವರು ದೇಶದ ಹಿತವನ್ನು ಗಮನದಲ್ಲಿಟ್ಟುಕೊಳ್ಳುವುದು ಅಗತ್ಯ. ‘ಜಾತೀಯತೆ ಅಸ್ಪೃಶ್ಯತೆಗಳು ಧರ್ಮಾಚರಣೆಯ ಅಂಗ, ಧರ್ಮವಂತನ ಕರ್ತವ್ಯ.’ ಎಂಬ ತಪ್ಪು ತಪ್ಪಾದ ಅವಮಾನವೀಯ ನಂಬುಗೆ ಜನರಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಬೇರುಬಿಟ್ಟಿದೆ. ಇದನ್ನು ನಿವಾರಿಸಬೇಕಾದರೆ ಮೆದುಳು ತೊಳೆಯುವ ಕೆಲಸ ವ್ಯವಸ್ಥಿತವಾಗಿ ಆಗಬೇಕಾಗಿದೆ. ಸರ್ಕಾರವು ಕೊಡುವ ಜಾಹಿರಾತು ಮತ್ತು ಎಚ್ಚರಿಕೆಗಿಂತಲೂ ಧಾರ್ಮಿಕ ನೇತಾರರು ಮಾಡುವ ಬೋಧೆ ಹೆಚ್ಚಿನ ಹೃದಯ ಪರಿವರ್ತನೆ ತರಬಲ್ಲುದು ಎಂಬುದು ನಮ್ಮ ವಿಚಾರ. ಸವರ್ಣೀಯ ಹಿಂದುಗಳಲ್ಲಿ ದಲಿತರ ಬಗ್ಗೆ ಸಮಾನತಾ ಭಾವ, ಆದರ ಹುಟ್ಟುವುದು ಮತಾಂತರವನ್ನು ತಡೆಗಟ್ಟುವಲ್ಲಿ ಪ್ರಮುಖ ಸಾಧನವಾಗುವುದು.

ಈ ಬಗ್ಗೆ ದಲಿತ ನೇತಾರರು ಆಲೋಚಿಸಬೇಕು ; ಧಾರ್ಮಿಕ ಮತ್ತು
ಸಾಮಾಜಿಕ ಸ್ಥಾನಮಾನಗಳನ್ನು ಪಡೆದುಕೊಳ್ಳುವುದು, ತನ್ಮೂಲಕ
ಅಸ್ಪೃಶ್ಯತೆಯ ಕಲಂಕ ತೊಡೆದುಕೊಳ್ಳುವುದು ಮುಖ್ಯ ಉದ್ದೇಶವಾಗಿ
ದ್ದರೆ, ಹಿಂದು ಕಕ್ಷೆಯಲ್ಲಿ ಬರುವ ಭಾರತೀಯ ಧರ್ಮವೊಂದರ ಸಂಸ್ಕಾರ
ವನ್ನು ಪಡೆದುಕೊಳ್ಳುವುದು ಹೆಚ್ಚು ಸೂಕ್ತ. ಗುರು ಬಸವಣ್ಣನವರು
ಅವರ ಸಮಕಾಲೀನರು ಎಂತಹ ದೊಡ್ಡ ಹೋರಾಟವನ್ನು ಧರ್ಮ ಸಂಸ್ಕಾರ
ವಂಚಿತರು, ಸ್ತ್ರೀಯರು, ದಲಿತರಿಗಾಗಿ ಕೈಗೊಂಡರು ಎಂಬುದನ್ನು ಅರಿಯ
ದವರಾರು ? ಕಲ್ಯಾಣದ ಕ್ರಾಂತಿ ನಡೆದುದೇ ದಲಿತರ ಉದ್ಧಾರದ ಕ್ರಾಂತಿ
ಕಹಳೆ ಮೊಳಗಲಿಕ್ಕೆ.

ಹಲವಾರು ಲೋಪ-ದೋಷಗಳಿಂದ ಕೂಡಿದ್ದರೂ ಭಾರತೀಯ ಹಿಂದೂ ಪರಂಪರೆ ತನ್ನದೇ ಆದ ಗೌರವಾನ್ವಿತ ಸ್ಥಾನವನ್ನು ಜಗತ್ತಿನಲ್ಲಿ ಪಡೆದಿದೆ. ಯಾವುದೋ ಉದ್ವೇಗದಲ್ಲಿ ಹಿಂದೂ ಕಕ್ಷೆಯ ಹೊರಗಿರುವ ಧರ್ಮಗಳಿಗೆ ಮತಾಂತರಗೊಂಡು, ಹಿಂದೂ ಪರಂಪರೆಯ ಕರುಳ

Digitalized by e-Sahithya Documentation Forum
Sponsored by Sarayu Foundation Trust

ಬಳ್ಳಿಯನ್ನು ಕತ್ತರಿಸಿಕೊಳ್ಳುವುದು ಬೇಡ. ಒಳಗಿದ್ದುಕೊಂಡೇ ಜಾತೀಯತೆ, ಅಸ್ಪೃಶ್ಯತೆ ಮೂಢನಂಬಿಕೆ, ಶೋಷಣೆಗಳ ವಿರುದ್ಧ ಹೋರಾಡೋಣ.

ಪ್ರ * ಬಸವ ಧರ್ಮ ಪೀಠದ ಶಾಸಕಾಂಗವಾಗಿ ಬಸವ ಧರ್ಮಸಂಸತ್ ಅನ್ನು, ಕಾರ್ಯಾಂಗವಾಗಿ ರಾಷ್ಟ್ರೀಯ ಬಸವ ದಳಗಳನ್ನು ರೂಪಿಸಿದ್ದೀರಿ. ಇವುಗಳ ಗುರಿ-ಗಮ್ಯವೇನು?

ಉ x ಮಾನವ ಶರೀರಕ್ಕೆ ಹೇಗೆ ಕಾಯಿಲೆಗಳು ಬರುತ್ತವೋ, ಸಮಾಜಕ್ಕೂ ಬರುತ್ತವೆ. ಕಾಲಕಾಲಕ್ಕೆ ಪರಿಸರ ಬದಲಾದಂತೆ ಮನುಷ್ಯನ ಜೀವನ ವಿಧಾನದಲ್ಲೂ ಬದಲಾವಣೆ ಆಗುತ್ತದೆ. ಮಗುವು ಚಿಕ್ಕದಿದ್ದಾಗ ಹೊಲಿಸಿದ ಅಂಗಿ, ಯುವಕನಾದಾಗ ಹೇಗೆ ತೊಡಲು ಬರದೋ ಹಾಗೆಯೇ ಪ್ರವಾದಿಗಳು, ಶರಣರು, ಋಷಿ ಮುನಿಗಳು ಎಂದೋ ಕೊಟ್ಟ ವಿಚಾರ ಧಾರೆ ಇಂದಿನ ವೈಜ್ಞಾನಿಕ ಯುಗದಲ್ಲಿ ಸರಿ ಹೊಂದದಿರಬಹುದು ಆದ್ದರಿಂದ ಧಾರ್ಮಿಕ ನಂಬಿಕೆ, ಆಚಾರ-ವಿಚಾರಗಳಲ್ಲಿ ಸೂಕ್ತ ಬದಲಾವಣೆ, ತಿದ್ದುಪಡಿ ಅಗತ್ಯ. ಈ ಬದಲಾವಣೆ-ತಿದ್ದುಪಡಿಗಳನ್ನು ವ್ಯಕ್ತಿಗಳು ಮನ ಬಂದಂತೆ ಮಾಡದೆ, ಅನೇಕ ಚಿಂತನಶೀಲ ವ್ಯಕ್ತಿಗಳು ಸೇರಿ ಮಾಡಬೇಕು ಎಂದು ಬಸವ ಧರ್ಮ ಸಂಸತ್ ಅನ್ನು ರೂಪಿಸಲಾಗಿದೆ. ಬಸವಣ್ಣನವರ ಅನುಭವ ಮಂಟಪದ ಮಾದರಿಯಲ್ಲಿ ಚಿಂತನೆ- ಚರ್ಚೆ ನಡೆಸಿ ಈ ಸಂಸತ್ ನಿರ್ಣಯ ಕೈಗೊಳ್ಳುವುದು.

ರಾಷ್ಟ್ರೀಯ ಬಸವ ದಳಗಳು ಅಲ್ಲಲ್ಲೇ ಸಾಮೂಹಿಕ ಪ್ರಾರ್ಥನೆ ಚಿಂತನಗೋಷ್ಠಿ, ತರಬೇತಿ ಶಿಬಿರಗಳನ್ನು ನಡೆಸಿ ಧರ್ಮಜಾಗೃತಿ ಮಾಡುತ್ತವೆ. ಉತ್ತಮ ಕಾರ್ಯಕರ್ತರನ್ನು, ಪ್ರಗತಿಪರ ಚಿಂತನಶೀಲರನ್ನು ರೂಪಿಸುವುದು ಬಸವ ದಳಗಳ ಗುರಿಯಾಗಿದೆ. ಚಿಂತನಶೀಲ ಜನರನ್ನು ಸಂಘಟಿಸಿ ದೇವರು-ಧರ್ಮದ ಹೆಸರಿನಲ್ಲಿ ನಡೆಯುವ ದಬ್ಬಾಳಿಕೆ, ಶೋಷಣೆ, ಮೂಢಾಚಾರ, ಪಶುಬಲಿ ಮುಂತಾದುವನ್ನು ತಡೆಗಟ್ಟುವುದು ರಾಷ್ಟ್ರೀಯ ಬಸವ ದಳಗಳ ಗುರಿ, ಸಾರರೂಪದಲ್ಲಿ ಹೇಳುವುದಾದರೆ ಜಾತಿ, ವರ್ಣ ವರ್ಗರಹಿತ ಧರ್ಮಸಹಿತ ಕಲ್ಯಾಣ ರಾಜ್ಯ ನಿರ್ಮಾಣವೇ ಈ ಸಂಘಟನೆಯ ಉದ್ದೇಶ.

ಪ್ರ* ನಿಜಕ್ಕೂ ಇದು ವೈಶಿಷ್ಟ್ಯಪೂರ್ಣವೆ! ಇದೀಗ ಬಸವ ಧರ್ಮ ಪೀಠ ಎಂಬ ಜಗದ್ಗುರು ಪೀಠವೊಂದು ವಿಶ್ವಗುರು ಬಸವಣ್ಣನವರ ವಿದ್ಯಾ-ತಪೋಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ಸ್ಥಾಪನೆಗೊಂಡಿದೆಯೆಷ್ಟೆ? ಮತ್ತು ಬಸವ ಧರ್ಮ ಸಂಸತ್ ತಮ್ಮನ್ನೇ ಪ್ರಥಮ ಪೀಠಾಧಿಕಾರಿ

ಯನ್ನಾಗಿ ಒಮ್ಮತದಿಂದ ಆಯ್ಕೆ ಮಾಡಿ, ಪೀಠಾರೋಹಣವನ್ನೂ ಯಶಸ್ವಿಯಾಗಿ ಮಾಡಿರುವ ಬಗ್ಗೆ ತಿಳಿದು ಸಂತೋಷವೆನಿಸಿದೆ. ಈ ಪೀಠದ ವೈಶಿಷ್ಟ್ಯವೇನು?

ಉ x ಗುರು ಬಸವಣ್ಣನವರ ಹೆಸರಿನಲ್ಲಿ ಆಗುತ್ತಿರುವ ಈ ಪೀಠವು ಪ್ರಾಮಾಣಿಕವಾಗಿ ಅವರ ತತ್ತ್ವಗಳ ಪ್ರಚಾರಕ್ಕೆ ಮತ್ತು ಅನುಷ್ಠಾನಕ್ಕೆ ಯತ್ನಿಸುವುದು. ಗಮನಾರ್ಹ ಅಂಶವೆಂದರೆ ಗುಣೈಕ, ಅರ್ಹತಾ ಪರಂಪರೆಯನ್ನು ಎತ್ತಿ ಹಿಡಿಯುವುದು.

ಬಸವಣ್ಣನವರು ಎಲ್ಲ ಜಾತಿ ಮತ ಪಂಥ ವೃತ್ತಿಗಳವರನ್ನೂ ಇಂಬಿಟ್ಟುಕೊಂಡು, ಅವರಿಗೆ ಸಂಸ್ಕಾರ ನೀಡಿ ಅವರನ್ನು ಶರಣರನ್ನಾಗಿ, ಪ್ರಾತಃ ಸ್ಮರಣೀಯರನ್ನಾಗಿ ಮಾಡಿದರು: ಅವರು ನಿರ್ಮಿಸಿದ ಶೂನ್ಯ ಪೀಠದ ಪ್ರಥಮ ಅಧಿಕಾರಿಯನ್ನಾಗಿ ಅತ್ಯಂತ ಕೆಳಶ್ರೇಣಿಯ ನಟುವರ ಜಾತಿಯಲ್ಲಿ ಹುಟ್ಟಿದ ಅಲ್ಲಮ ಪ್ರಭುದೇವರನ್ನು ಆರೋಹಿಸಿದರು. ಎಂತಹ ಉದಾತ್ತ-ಕ್ರಾಂತಿಕಾರಕ ಆಲೋಚನೆ ಮತ್ತು ಪ್ರಯತ್ನವದು! ಕಲ್ಯಾಣ ಕ್ರಾಂತಿಯ ನಂತರ ಬಸವ ಧರ್ಮ ಅನೇಕ ವಿಪತ್ತುಗಳನ್ನು ಮತಾಂಧರಿಂದ ಎದುರಿಸಬೇಕಾಯಿತು. ಅಂಥ ಕಾಲದಲ್ಲಿ ಬಸವಾದಿ ಪ್ರಮಥರು ಹೊರ ಹಾಕಿದ್ದ ಅನೇಕ ಸಲ್ಲದ ವಿಚಾರಗಳು ಪುನಃ ಒಳಸೇರಿ, ವಚನ ಸಾಹಿತ್ಯ ಸಂವಿಧಾನಕ್ಕೆ ಹೊರತಾದ ಜಾತಿ ಪರಂಪರೆ ರೂಢಿಗೊಂಡಿತು. ನನ್ನ ಸನ್ಯಾಸ ಜೀವನ ಈ ಹೋರಾಟದೊಡನೆಯೇ ಆರಂಭವಾಯಿತು. ಈವರೆಗೆ ಜಡ ಸಂಪ್ರದಾಯದ ಮತ್ತಿನಲ್ಲಿದ್ದ ಜನರು ಈಗೀಗ ಜಾಗೃತಗೊಂಡಿದ್ದಾರೆ: ಗುರುತ್ವವು ಬರುವುದು ಸಾಧನೆ, ಆಚಾರ-ಅರಿವು-ಅನುಭಾವಗಳಿಂದಲೇ ವಿನಾ ಜಾತಿಯಿಂದಲ್ಲ ಎಂಬುದನ್ನು ವಚನ ಶಾಸ್ತ್ರವನ್ನು ಓದಿ ಅರಿತು ಕೊಳ್ಳುತ್ತಿದ್ದಾರೆ, ಸಾಮಾನ್ಯವಾಗಿ ಬಹುಪಾಲು ಮಠಗಳಿಗೆ ಆಯಾ ಜಾತಿಯವರನ್ನೇ ಮಠಾಧಿಕಾರಿಯನ್ನಾಗಿ ಮಾಡುವ, ಜಾತಿಯಲ್ಲಿರುವ ಉಪ ಪಂಗಡಗಳವರನ್ನೇ ಆರಿಸುವ ಪರಿಪಾಠವಿದೆ. ಬಸವ ಧರ್ಮಪೀಠ ಈ ಸಂಪ್ರದಾಯವನ್ನು ಮುರಿದು, ಪೂರ್ವಾಶ್ರಮದಲ್ಲಿ ವ್ಯಕ್ತಿ ಯಾವ ಜಾತಿಯವನಿದ್ದರೇನು, ಈಗ ಅವನು ಬಸವ ತತ್ತ್ವಕ್ಕೆ ಬದ್ಧನಾಗಿ, ಆಚಾರ-ಅರಿವು-ಅನುಭಾವ ಸಂಪನ್ನನಾಗಿದ್ದರೆ ಅವನು ಪೀಠಾಧಿಕಾರಿಯಾಗಬಲ್ಲ ಎಂಬುದನ್ನು ಅನುಷ್ಠಾನಕ್ಕೆ ತರುವ ಸಂಕಲ್ಪ ಹೊಂದಿದೆ. ಅರ್ಹತೆಯುಳ್ಳ ಮಹಿಳೆಯರೂ ಈ ಪೀಠಕ್ಕೆ ಅಧಿಕಾರಿಗಳಾಗಬಹುದು.

ಪ್ರ * ಕ್ರೈಸ್ತರ ಪೋಪ್ ಜಗದ್ಗುರುಗಳ ಪೀಠದಂತೆ ಈ ಜಗದ್ಗುರು ಪೀಠವು, ವ್ಯಾಟಿಕನ್ ನಗರದಂತೆ ಕೂಡಲ ಸಂಗಮ ಸುಕ್ಷೇತ್ರವು ಆಗಬಹುದೆಂದು ನಾವು ನಿರೀಕ್ಷಿಸಬಹುದೆ?

Digitalized by e-Sahithya Documentation Forum
Sponsored by Sarayu Foundation Trust

ಉ x ಪರಮಾತ್ಮನ ಇಚ್ಛೆ, ಬಸವ ಗುರುವಿನ ಸಂಕಲ್ಪವೇನಿದೆಯೋ ತಿಳಿಯದು. ನಾವು ಆ ಗುರುವಿನ ಚರಣಕ್ಕೆ ಶರಣಾಗತರಾಗಿ ಸೇವೆ ಮಾಡುವವರು ಮಾತ್ರ.

ಪ್ರ * ತಮ್ಮೊಡನೆ ಮಾತನಾಡಿದಂತೆಲ್ಲ ಅತ್ಯಮೂಲ್ಯ ವಿಚಾರಗಳು ಸ್ಫುರಣವಾಗುತ್ತಿವೆ. ಕೇಳಬೇಕಾದ್ದು ಬಹಳವಿದೆಯಾದರೂ ಈ ಪ್ರಶ್ನೆಯಿಂದ ಸಂವಾದವನ್ನು ಕೊನೆ ಮಾಡುತ್ತೇನೆ. ಬಸವ ಧರ್ಮ ಪೀಠಾರೋಹಣ ಮಾಡಿರುವ ತಮ್ಮ ಅಮೂಲ್ಯ ಸಂದೇಶವೇನು, ಇಂದಿನ ಜನತೆಗೆ.

ಉ x ಇಂದು ದೇಶದ ತುಂಬೆಲ್ಲ ವಿಚಿತ್ರವಾದ ವಾತಾವರಣ ಮೂಡುತ್ತಿದೆ. ತತ್ತ್ವನಿಷ್ಠೆ, ಸರಳತೆ, ದೇಶಪ್ರೇಮ, ಸದಾಚಾರ ಮುಂತಾದ ಮೌಲ್ಯಗಳು ಹೇಳಹೆಸರಿಲ್ಲದಂತಾಗುತ್ತಿವೆ, ರಾಜಕಾರಿಣಿಗಳು ತಮ್ಮ ಪ್ರಭಾವ ಬೆಳೆಸಿಕೊಳ್ಳಲು ಪರಸ್ಪರರನ್ನು ಎತ್ತಿಕಟ್ಟುತ್ತಿದ್ದಾರೆ. ಅಧಿಕಾರಶಾಹಿ ಸಂಪತ್ತನ್ನು ಕೂಡಿಹಾಕಿಕೊಂಡು ತಮ್ಮ ಮಡದಿ-ಮಕ್ಕಳ ಹಿತಾಸಕ್ತಿ ಕಾಪಾಡಿಕೊಳ್ಳುವುದರಲ್ಲಿ ನಿರತವಾಗಿದೆ. ದಿನದಿನಕ್ಕೂ ದುರ್ಭರವಾಗುತ್ತಿರುವ ಜೀವನ ಶ್ರೀಸಾಮಾನ್ಯನಿಗೆ ದೊಡ್ಡ ಹೊರೆಯಾಗಿದೆ. ಬಹುಪಾಲು ಜನ ಸ್ವಸುಖಾಸಕ್ತರಾಗಿ ಸಮಷ್ಟಿಯ ಹಿತಚಿಂತನೆಯತ್ತ ಗಮನ ಹರಿಸದವರಾಗಿದ್ದಾರೆ. ಇದು ಸೃಷ್ಟಿಯ ಕಿರೀಟದಂತಿರುವ ಮಾನವನನ್ನು ವಿನಾಶದ ಅಂಚಿಗೆ ತಳ್ಳುವ ಪರಿಸ್ಥಿತಿ ತಂದೊಡ್ಡಿದೆ.

ಆದ್ದರಿಂದ ನಿಜ ಧರ್ಮವನ್ನು ಮನುಷ್ಯನಲ್ಲಿ ಬಿತ್ತಬೇಕಾಗಿದೆ. ಜೊತೆಗೆ ರಾಷ್ಟ್ರಪ್ರೇಮವನ್ನೂ ಬೆಳೆಸಬೇಕಾಗಿದೆ. ದಂತಗೋಪುರದ ತತ್ತ್ವಜ್ಞಾನ, ಸಾಹಿತ್ಯ ರಚಿಸುತ್ತ ಕೂರದೆ, ಸಮಸ್ಯೆಗಳಿಗೆ ಪ್ರಾಮಾಣಿಕ ಪರಿಹಾರ ಹುಡುಕುವ ಪ್ರಯತ್ನ ಮಾಡಬೇಕಾಗಿದೆ. ಇದಕ್ಕಾಗಿ ತತ್ತ್ವನಿಷ್ಠರು, ತ್ಯಾಗಿಗಳೂ ಧರ್ಮವಂತರೂ ಆದ ಜನಾಂಗ ನಿರ್ಮಾಣವಾಗಬೇಕಾಗಿದೆ. ಕರ್ತಾರನ ಕಮ್ಮಟವಾದ ಈ ಮರ್ತ್ಯಲೋಕವನ್ನು ಕಟುಕರ ಕೇರಿಯನ್ನಾಗಿ ಮಾಡದೆ ಶಾಂತಿ-ಸಮೃದ್ಧಿ-ಸುಜ್ಞಾನ-ಸಂತೃಪ್ತಿಗಳ ನೆಲೆಯನ್ನಾಗಿ ಮಾಡಲು ಎಲ್ಲರೂ ಸಂಕಲ್ಪ ಮಾಡೋಣ.

★

ಶ್ರೀ ಸಿದ್ಧರಾಮೇಶ್ವರ ವಾಣಿ

ಕಪಿಲ ಸಿದ್ಧಮಲ್ಲಿಕಾರ್ಜುನಾ,
ನಿಮ್ಮ ಸಂಗನ ಬಸವಣ್ಣ ಬಂದು, ಮರ್ತ್ಯದಲ್ಲಿ ಮಹಾಮನೆಯ
ಕಟ್ಟಿದಡೆ, ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು.

'ಪ್ರವಚನದ ಬಗ್ಗೆ ನನ್ನ ಅನಿಸಿಕೆಗಳು'

ಶರಣೆ. ಶಾಂತಾ. ಶಿವಗೌಡ ಪಾಟೀಲ
ಬಸವನಗಲ್ಲಿ, ಸಂಕೇಶ್ವರ

ವಿಶ್ವಗುರು ಮಂತ್ರ ಪುರುಷ ಕ್ರಾಂತಿಯೋಗಿ ಕಾರಣಿಕ ಪುರುಷ ಅಪ್ಪ ಬಸವಣ್ಣನವರ ಅಡಿದಾವರೆಗಳಲ್ಲಿ ಪೊಡಮೊಟ್ಟು ಪೂಜ್ಯದ್ವಯರಾದ ಅಪ್ಪಾಜಿ ಹಾಗೂ ಮಾತಾಜಿಯವರ ಚರಣಾರವಿಂದಗಳಲ್ಲಿ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುವೆ.

ಪೂಜ್ಯ ಅಪ್ಪಾಜಿ ಮತ್ತು ಮಾತಾಜಿಯವರೆಂದರೆ ವಚನ ಸಾಹಿತ್ಯವನ್ನೆ ಅರೆದು ಕುಡಿದ ಅನರ್ಘ್ಯರತ್ನಗಳು. ಎಲ್ಲ ಕಡೆಗೂ ಬಸವತತ್ವ, ಬಸವಧರ್ಮಗಳ ಕಹಳೆಯನ್ನು ಮೊಳಗಿಸುತ್ತಿದ್ದಾರೆ. ಅವರು ಮಾಡುತ್ತಿರುವ ಈ ಕಾಯಕ ವರ್ಣನಾತೀತ. ಸಮಾಜಕ್ಕೆ ಅವರ ಈ ಸೇವೆ ಅತ್ಯಂತ ಅವಶ್ಯಕ ಹಾಗೂ ಮಾರ್ಮಿಕ. ಧರ್ಮ ಅವನತಿ ಹೊಂದಿದಾಗ ಮಹಾತ್ಮರು ಉದಯಿಸುತ್ತಾರೆ ಎನ್ನುವುದಕ್ಕೆ ಇವರೇ ಸಾಕ್ಷಿ.

ಪೂಜ್ಯ ಅಪ್ಪಾಜಿ ಹಾಗೂ ಮಾತಾಜಿಯವರ ಪ್ರವಚನದ ಬಗ್ಗೆ ನಾನು ಅಲ್ಪ ತಿಳುವಳಿಕೆಯಿಂದ ನನ್ನ ಒಂದೆರಡು ಅನಿಸಿಕೆಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ನಾನೇನು ಬಹಳ ಓದಿದವಳಲ್ಲ ಆದ್ದರಿಂದ ತಪ್ಪು ತಡೆಗಳಾದಲ್ಲಿ ಕ್ಷಮಿಸಬೇಕೆಂದು ಕೋರುವೆ.

ವಿಷಯವೆಂಬ ಹಸುರ ತಂದು ಎನ್ನ ಮುಂದೆ ಪಸರಿಸಿದಿರಯ್ಯ
ಪಶುವೇನ ಬಲ್ಲುದು ಹಸುರೆಂದೆಳೆಸುವದು
ವಿಷಯ ರಹಿತನ ಮಾಡಿ ಭಕ್ತಿರಸವ ದಣಿಯ ಮೇಯಿಸಿ
ಸುಬುದ್ಧಿಯೆಂಬ ಉದಕವನೆರೆದು
ನೋಡಿ ಸಲುಹಯ್ಯ ಕೂಡಲ ಸಂಗಮದೇವಾ.

ಈ ಸಂಸಾರವೆಂಬ ಭವಸಾಗರದಲ್ಲಿ ತೇಲಲೀಯದೆ ಮುಳುಗಲೀಯದೆ, "ದೇವರು ಹುಟ್ಟಿಸಿದ್ದಾನೆ; ಕರೆ ಬಂದಾಗ ಹೋಗುವದು" ಎಂಬ ನಿರ್ಲಿಪ್ತ ಭಾವದಿಂದ ಜೀವಿಸುವುದೇ ಇಂದಿನ ಮನುಜ ಕುಲದ ರೀತಿಯಾಗಿದೆ. ನೆಮ್ಮದಿಗಳಂತೂ ಮೊದಲೆ ಇಲ್ಲ. ಯಾಂತ್ರಿಕ ಬದುಕನ್ನು ಬಾಳುತ್ತಾ ಸಹನೆ ಕಳೆದುಕೊಂಡು ನಿರಾಶಾವಾದಿಗಳಾಗಿ ನಾಸ್ತಿಕರಾಗಿ ಗುರಿಯಿಲ್ಲದೇ ಜೀವಿಸುತ್ತಿರುವ ಮಾನವನು ತಾಹೆಚ್ಚು ನಾಹೆಚ್ಚು ಎಂದೋ ಅಧಿಕಾರಕ್ಕಾಗಿಯೋ ಹಣಕ್ಕಾಗಿಯೋ ಒಣಆಡಂಬರಕ್ಕಾಗಿಯೋ

Digitalized by e-Sahithya Documentation Forum
Sponsored by Sarayu Foundation Trust

ನಿಜತ್ವವನ್ನು ಬಿಟ್ಟು ಬೇರೆ ಬೇರೆ ಮುಖವಾಡ ಧರಿಸಿ ಬಾಳುತ್ತ ದೇವರು ಧರ್ಮ ಮರೆತು ಮನಬಂದಂತೆ ವರ್ತಿಸಿ ಮನುಷ್ಯತ್ವವನ್ನೇ ಮರೆತಿದ್ದಾನೆ.

ಈ ರೀತಿ ಧರ್ಮವು ಅವನತಿ ಹೊಂದಿದಾಗ, ಸೃಷ್ಟಿಕರ್ತನಾದ ಪರಮಾತ್ಮನನ್ನು ಮರೆತಿರುವಾಗ, ಅಜ್ಞಾನದ ಅಂಧಕಾರದಲ್ಲಿ ತಡಕಾಡುತ್ತಿರುವಾಗ. ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಧರ್ಮಪೀಠ ಸ್ಥಾಪಿಸಿ ಧರ್ಮದೀವಟಿಗೆಯನ್ನು ಹಿಡಿದು ಸಂಚರಿಸುತ್ತಾ ಅಜ್ಞಾನದ ಕತ್ತಲೆಯನ್ನು ಓಡಿಸುವ ಮಹತ್ಕಾರ್ಯವನ್ನು ಕೈಗೊಂಡಿ ದ್ದಾರೆ. ಧರ್ಮ ಎಲ್ಲರ ಮನೆ ಬಾಗಿಲಿಗೂ ತಲ್ಪುವಂತೆ ಯೋಜನೆ ಹಾಕಿದ್ದಾರೆ. ಅದರಂತೆ ಈಗ ನಮ್ಮ ಊರಾದ ಸಂಕೇಶ್ವರಕ್ಕೂ ಬಂದಿದ್ದಾರೆ. ೪೫ ದಿನಗಳವರೆಗೆ ಅಖಂಡವಾಗಿ, ಅನೇಕ ಎಡರು ತೊಡರು ಮಳೆರಾಯನ ಕೋಪ-ತಾಪ ಇವೆಲ್ಲವನ್ನೂ ಎದುರಿಸಿ ತಮ್ಮ ಕಂಚಿನ ಕಂಠದಿಂದ ಅವಿರತವಾಗಿ ನಮ್ಮೆಲ್ಲರಿಗೆ ವಚನಾಮೃತದ ಸವಿಯನ್ನು ಧರ್ಮದ ತಿರುಳನ್ನು, ದೃಷ್ಟಾಂತಗಳ ಸಿಹಿಯನ್ನು ದ್ರಾಷ್ಟಾಂತ ತತ್ವ ಗಳನ್ನು ಉಣಿಸಿದ್ದಾರೆ.

ದೇವರು, ಧರ್ಮ, ಕಾಯಕದ ಮಹತ್ವ, ಮೂಢನಂಬಿಕೆ, ಜಾತೀಯತೆ ಪುನರ್ಜನ್ಮ, ಕನಸುಗಳು, ಹಿಂದೂ ಯಾರು, ಶಿಕ್ಷಣ, ಇಷ್ಟಲಿಂಗ, ದ್ವೈತ ಅದ್ವೈತ, ವಿಶಿಷ್ಟಾದ್ವೈತ, ಮುಂತಾದ ಅನೇಕ ವಿಷಯುಗಳನ್ನೂ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಇನ್ನೂ ಅನೇಕ ಶರಣರ ತತ್ವ ವಿಚಾರಗಳನ್ನೂ ಜೀವನ ಚರಿತ್ರೆಯನ್ನೂ ಅಲ್ಲದೆ ಕ್ರಿಸ್ತ, ಬುದ್ಧ, ಅರವಿಂದ, ಪರಮಹಂಸ, ವಿವೇಕಾನಂದ, ಸಿಗ್ಮಂಡಫ್ರಾಯ್ಡ ಮುಂತಾದವರ ತತ್ವ ವಿಚಾರಗಳನ್ನು ಅತಿ ಸರಳವಾಗಿ ಚಿಕ್ಕವರಿಂದ ಹಿಡಿದು ದೊಡ್ಡವರಿಗೂ ತಿಳಿಯುವ ಹಾಗೆ ಕಬ್ಬಿಣದ ಕಡಲೆಗಳಂತಹ ವಿಷಯುಗಳನ್ನು ಉಪ್ಪಿನಕಾಯಿ ಚೀಪುವಷ್ಟು ಸುಲಭವಾಗಿ ತಿಳಿಸಿ ದ್ದಾರೆ. ಎಷ್ಟೋ ಸಲ ಭಾವಾವೇಶರಾಗಿ ಅನೇಕ ಸನ್ನಿವೇಶಗಳನ್ನು ವಿವರಿಸಿದ್ದಾರೆ.

ಭಾವವೆಂಬುವ ಹಾಲು ಸುಜ್ಞಾನವೆಂಬುವ ತುಪ್ಪ
ಪಾರಮಾರ್ಥವೆಂಬ ಸಕ್ಕರೆ ಇಂತಪ್ಪ ತ್ರಿವಿಧಾಮೃತವ
ದಣಿಯಲೆರೆದು ಸಲಹಿದಿರಿ. ಎಂದು ಅಕ್ಕಮಹಾದೇವಿ ಹೇಳುವಂತೆ

ನಮ್ಮೆಲ್ಲರಿಗೂ ತ್ರಿವಿಧಾಮೃತವನ್ನು ಉಣಬಡಿಸಿದ್ದಾರೆ. ಮಾತಾಜಿಯವರೂ ಸಹ ತಮ್ಮ ವಾಕ್ ಚಾತುರ್ಯದಿಂದ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿದ್ದಾರೆ.

ಆಳದಲ್ಲಿ ಆಳ ಅತಿ ಆಳವಾದ ವಜ್ರದ ಖಣಿಯಂತಿರುವ ವಚನ ಸಾಹಿತ್ಯದ ಖಣಿಯು ಆಗಿರುವ, ಎತ್ತರದಲ್ಲಿ ಎತ್ತರ ಅತಿ ಎತ್ತರ ಭಕ್ತಿಯ ಉತ್ತುಂಗ ಶಿಖರವೇ ಆದ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಇನ್ನೂ ಅನೇಕ ಶರಣರ ಜೀವನ

ಚರಿತ್ರೆಯಿಂದ ನಮ್ಮನ್ನೆಲ್ಲ ಬಡಿದೆಬ್ಬಿಸಿದ್ದಾರೆ. ಅತ್ಯಂತ ಕಳಕಳಿಯಿಂದ ತಾಯಿ ಮಗು ವನ್ನು ಉಪಚರಿಸುವಂತೆ ಭವರೋಗ ವೈದ್ಯರಾಗಿ ಗುಳಿಗೆ, ಇಂಜೆಕ್ಷನ್, ಟಾನಿಕ್ ಆಪರೇಶನ್ ಯಾರಿಗೆ ಯಾವುದು ಬೇಕು. ಆ ರೀತಿ ಚಿಕಿತ್ಸೆ ಮಾಡಿದ್ದಾರೆ. ಅವರ ನರನಾಡಿಗಳಲ್ಲಿ ವಚನ ಸಾಹಿತ್ಯವೆಂಬ ರಕ್ತವೇ ಹರಿಯುತ್ತಿರಬೇಕು ಎಂದೆನಿಸುತ್ತದೆ.

೮೦೦ ವರ್ಷಗಳ ಹಿಂದೆ ಅನುಭವ ಮಂಟಪ ಅನೇಕ ಶರಣ ಶರಣೆಯರು, ಅಲ್ಲಿ ನಡೆಯುವ ಅನುಭವಗೋಷ್ಠಿ ಇವೆಲ್ಲ ಕೇಳಿ, ಓದಿ ಗೊತ್ತು ಆದರೆ ಅದೇ ಸ್ವರದಲ್ಲಿ ಅದೇ ದಾಟಿಯಲ್ಲಿ ಅದೇ ಕಳಕಳಿಯಿಂದ ಜನರ ತನು–ಮನ–ಧನಗಳನ್ನು ಶುದ್ಧಿ ಗೊಳಿಸಲು ಸಾಕಷ್ಟು ಪರಿಶ್ರಮ ಪಟ್ಟಿದ್ದಾರೆ. ಬಸವ ತತ್ವ ಪ್ರಚಾರಕ್ಕಾಗಿ ಅನೇಕ ರೂಪದಲ್ಲಿ ಕೆಲಸ ನಡೆದಿದೆ. ಅನೇಕ ಧಾರ್ಮಿಕ ಪುಸ್ತಕಗಳು, ಭಕ್ತಿಗೀತೆಗಳು ಹಾಗೂ ಅವುಗಳ ಕ್ಯಾಸೆಟ್‌ಗಳು, ಕ್ಯಾಲೆಂಡರ. ಚಲನಚಿತ್ರ, ಉಂಗುರಗಳು ಹೀಗೆ ವಿಭಿನ್ನ ಅಭಿರುಚಿಯ ಜನರಿಗೆ ಅವರ ರುಚಿಗೆ ತಕ್ಕಂತೆ ಹಲವಾರು ವಿಧದಲ್ಲಿ ಕಾರ್ಯ ಕೈಗೊಂಡಿ ದ್ದಾರೆ. ದೀಕ್ಷಾ ವಿಧಾನವಂತೂ ಮಹತ್ವದ ಮೈಲಿಗಲ್ಲು, ದೀಕ್ಷೆ, ಪ್ರಾರ್ಥನೆ, ಬಸವೇಶ್ವರ ಪೂಜಾವ್ರತ, ಸಾಮೂಹಿಕ ಲಿಂಗಪೂಜೆ ಇನ್ನೂ ಎಷ್ಟೋ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಇಂದು ಲಿಂಗವಂತ ಸಮಾಜಕ್ಕೆ ಧರ್ಮಕ್ಷೇತ್ರ ಮತ್ತು ಧರ್ಮಗ್ರಂಥದ ಅವಶ್ಯಕತೆ ಬಹಳೇ ಇತ್ತು. ಈ ಕೊರತೆಯನ್ನು ಅವರು ಹೋಗಲಾಡಿಸಿದ್ದಾರೆ.

ಜನರಲ್ಲಿ ಭಯಂಕರವಾಗಿ ಬೇರೂರಿರುವ ಮೂಢನಂಬಿಕೆ ತಪ್ಪು ಆಚಾರ, ವಿಚಾರ, ಅಜ್ಞಾನವನ್ನು ಬೇರು ಸಹಿತ ಕೀಳಬೇಕೆಂದು ಕಂಕಣ ಬದ್ಧರಾಗಿದ್ದಾರೆ. ಇಂತಹ ಘನಕಾರ್ಯಗಳನ್ನು ಮಾಡುವದೇನು ಸಾಮಾನ್ಯ ಕೆಲಸವಲ್ಲ, ಹೆಜ್ಜೆ ಹೆಜ್ಜೆಗೂ ಪ್ರತಿರೋಧ ಎದುರಿಸಬೇಕಾಗುವದು. ಪ್ರವಾಹದ ವಿರುದ್ಧ ಅದೂ ಸೆಳವಿನಲ್ಲಿ ಈಜಲು ಗುರುತರವಾದ ಶಕ್ತಿಯೇ ಬೇಕು.

ನಾನು ಬಸವಣ್ಣನೇ ಗುರು ಎಂದು ನಂಬಿದ್ದೇನೆ. ಬಸವಣ್ಣನವರಿಗೆ ಸಂಗಮ ನಾಥನ ಒಲುಮೆಯಾಗಿದೆ. ಎಂದ ಮೇಲೆ ನಾವು ಬಸವಣ್ಣನ ಸಮೀಪವಾದರೆ ಸಾಕು. ದೇವರಿಗೆ ಸಮೀಪವೇ ಇದ್ದಂತೆ ಎಂದು ನಂಬಿದ್ದೇನೆ. "ಬಸವಣ್ಣ ಮೆಚ್ಚಲು ಒಗೆ ತನವ ಮಾಡುವೆ" ಎಂದು ಅಕ್ಕ ಹೇಳುವಂತೆ. ನಮ್ಮ ಕೆಲಸವೂ ಇಷ್ಟೇ ಬಸವಣ್ಣ ಮೆಚ್ಚುವಂತೆ ನಡೆದರೆ ನಮ್ಮ ಕೆಲಸ ಆಯಿತೆಂದು ನನ್ನ ಭಾವನೆ.

ಬಸವಣ್ಣ ಮೆಚ್ಚುವಂತೆ ಎಂದರೆ ಹೇಗೆ ? ಎಂದರೆ ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳ ೪೫ ದಿನಗಳ ಹಾಗೂ ಜಗದ್ಗುರು ಮಾತೆ ಮಹಾದೇವಿಯವರ ೩ ದಿನಗಳ ಹೀಗೆ ೪೮ ದಿನಗಳ ಪ್ರವಚನದ ಸಾರವನ್ನು ಶಕ್ಯವಿದ್ದಷ್ಟು ಮಟ್ಟಿಗೆ ನಮ್ಮ ನಡೆನುಡಿ ಆಚಾರ, ವಿಚಾರಗಳಲ್ಲಿ ಬಳಸಿ ಬಸವಣ್ಣನನ್ನು ಮೆಚ್ಚಿಸುವದೇ ಆ

Digitalized by e-Sahithya Documentation Forum
Sponsored by Sarayu Foundation Trust

ಸರಳ ಉಪಾಯ ! ಈ ಭವಸಾಗರದಲ್ಲಿ ಮುಳುಗುತ್ತಿರುವ ನಮ್ಮನ್ನು ದಾಟಿಸಲು ಪ್ರವಚನವೆಂಬ ಕೊರಡನ್ನು ಕರುಣಿಸಿದ್ದಾರೆ. ಮುಳುಗುವವನು ಕೊರಡನ್ನು ಹಿಡಿದರೂ ಬಾಯಲ್ಲಿ ನೀರು ಹೋಗದಂತೆ ಈಸಬೇಕು. ನೀರು ಕುಡಿದರೆ ದಡ ಮುಟ್ಟಲು ಸಾಧ್ಯವಿಲ್ಲವಷ್ಟೆ ?

೨೦ ವರ್ಷಗಳ ಹಿಂದೆ ನಾನು ಕೂಡಲ ಸಂಗಮ, ಐಕ್ಯಮಂಟಪ ಸಂಗಮನಾಥನ ಗುಡಿ ಇವನ್ನೆಲ್ಲ ಸುಸ್ಥಿತಿಯಲ್ಲಿ ನೋಡಿದ್ದೆನು, ಅದರ ನಂತರ ಅನೇಕ ಸಲ ಸಂಗಮನಾಥನ ದರ್ಶನ ಪಡೆಯುವ ಭಾಗ್ಯ ಸಿಕ್ಕಿದೆ. ಈಗ್ಗೆ ೩ ವರ್ಷಗಳ ಹಿಂದೆ ೧೯೮೬ರಲ್ಲಿ ಮತ್ತೆ ಸಂಗಮ ಕ್ಷೇತ್ರಕ್ಕೆ ಹೋದಾಗ ಅಲ್ಲಿಯ ಸ್ಥಿತಿ ಕಂಡು ಮಮ್ಮಲ ಮರುಗಿದ್ದೇನೆ. ಆಣೆಕಟ್ಟಿನ ಬಾಧೆಯಿಂದ ಐಕ್ಯಮಂಟಪವೆಲ್ಲ ಬೃಹದಾಕಾರವಾದ ಸಿಮೆಂಟ ಕೊಳವೆಯಲ್ಲಿ ಮರೆಯಾಗಿದೆ. ಸಂಗಮನಾಥನ ಗರ್ಭಗುಡಿ ಬಿಟ್ಟು ಮುಂಭಾಗ ಎನ್ನೆಲ್ಲಾ ತೆಗೆದು ಹಾಕಿದ್ದರು. ಇದನ್ನೆಲ್ಲ ನೋಡಿ ನಾನು ಕಣ್ಣೀರು ಸುರಿಸಿದ್ದೇನೆ, 'ಅಯ್ಯೋ ! ಸಂಗಮನಾಥ ಈ ಕಲಿಯುಗದ ಜನರ ಕೈಯಲ್ಲಿ ಸಿಕ್ಕು ನಿನ್ನ ಸ್ಥಿತಿ ಇಂತಾಯಿತಲ್ಲ.' ಎಂದು ಚಡಪಡಿಸಿದ್ದೇನೆ. ಆಗ ನಾನು ಈ ರೀತಿ ಗೋಳಾಡಿದ್ದೇನೆ. ಪರಿತಪಿಸಿದ್ದೇನೆ.

ನೋಡು ಬಾ ಬಸವಣ್ಣ

ನೋಡು ಬಾ ನೋಡು ಬಾ ಬಸವಣ್ಣ
ನೀ ಒಮ್ಮೆ ನೋಡು ಬಾ.॥
ನೀ ಬಿಟ್ಟು ಹೋದ ಭೂಲೋಕ ಒಮ್ಮೆ
ನೋಡು ಬಾ॥

ಸತ್ಯವೆಂಬುದಕೆ ಸುಖವು ಇಲ್ಲ.
ಮರೆ ಮೋಸ ಕಪಟಕೆ ಕೊರತೆ ಇಲ್ಲ.
ದುಡಿಯದೆ ಐಸಿರಿ ಪಡೆವರು ಎಲ್ಲ
ಕಾಯಕಕ್ಕೆ ಬೆಲೆಯೇ ಇಲ್ಲ ॥೧॥ ನೋಡು ಬಾ.॥

ಕೊಲೆ ಸುಲಿಗೆ ದರೋಡೆ ದಿನನೂರಾರು
ಕಳ್ಳ ಸಾಗಾಟ ಇಲ್ಲದೆ ಭರಪೂರು
ಭಾರತವಾಗಿದೆ ಅಶಾಂತಿಯ ಬೆಂಗಾಡು
ಬಾಳುವದು ಹೇಗೆಂಬ ಚಿಂತೆ ಹಗಲಿರುಳು ॥೨॥ ನೋಡು ಬಾ॥

(97 ನೆಯ ಪುಟಕ್ಕೆ ಮುಂದುವರಿದಿದೆ)



ಮಹಾಜಗದ್ಗುರು ಪೀಠದ ಪೀಠಾಧಿಕಾರಿ ಧರಿಸುವ
ರುದ್ರಾಕ್ಷಿ ಮುಕುಟ.

Digitalized by e-Sahithya Documentation Forum
Sponsored by Sarayu Foundation Trust

With best compliments from :

M/s. Sree Lakshmi Suppliers

14-24-A, Kamalanagar, ANANTAPUR-515 001
Andhra Pradesh – Phone : **20229**

\+ ✻ +

Suppliers of :
Shamiyanas, Chairs, Tables, Tarpaulins
Water Drums, Cooking Utensils

Sister Concerns :

M/s. Gayathri Suppliers
9-368, DMM Gate Road
GUNTAKAL-515 801. Andhra Pradesh

AND



M/s. Nagamanagala Shamiyana Suppliers
Sante Beedi, Nagamangala, Dist. Mandya
Karnataka State

(32ನೇ ಪುಟದಿಂದ ಮುಂದುವರಿದಿದೆ)

1. ಧರ್ಮಗುರುವಿನ ಭಾವಚಿತ್ರ.
2. ಧರ್ಮ ಪೀಠ.
3. ಧರ್ಮ ಸಂಹಿತೆ ವಚನ ಸಾಹಿತ್ಯ.
4. ಗುರು ಮುಕುಟ.
5. ಧರ್ಮ ದಂಡ.
6. ಪರುಷ ಬಟ್ಟಲು.

ಆರು ತತ್ತ್ವಗಳನ್ನು ಮುಖ್ಯವಾಗಿ ಬಸವ ಪಥಿಕರು ಗುರುತಿಸಿಕೊಂಡಿದ್ದಾರೆ.

1. ಪರಂಪರೆಯ ಸೂಚಕವಾಗಿ, ಆರು ಶರಣಗಣಗಳು

ವಿಶ್ವಗುರು ಬಸವಣ್ಣ, ಚಿನ್ಮಯಜ್ಞಾನಿ ಚನ್ನಬಸವಣ್ಣ, ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವ, ಶಿವಯೋಗಿ ಸಿದ್ಧರಾಮೇಶ್ವರ, ವೀರ ವಿರಾಗಿಣಿ ಅಕ್ಕ ಮಹಾದೇವಿ, ವೀರಶರಣ ಮಡಿವಾಳ ಮಾಚಿದೇವರು.

2. ಷಟ್ ಸೂತ್ರಗಳು

ಧರ್ಮಗುರು– ಬಸವಣ್ಣ, ಧರ್ಮ ಸಂಹಿತೆ– ವಚನ ಸಾಹಿತ್ಯ, ಧರ್ಮ ಲಾಂಛನ– ಇಷ್ಟ ಲಿಂಗ, ಧರ್ಮ ಕ್ಷೇತ್ರ– ಕೂಡಲ ಸಂಗಮ, ಧರ್ಮ ಧ್ವಜ– ಬಸವ ಧ್ವಜ, ಧರ್ಮದ ಧ್ಯೇಯ– ಕಲ್ಯಾಣ ರಾಜ್ಯ ನಿರ್ಮಾಣ.

3. ಬಸವ ಧರ್ಮ ಪೀಠಾಧಿಕಾರಿಗೆ ಕೊಡುವ ಷಟ್‌ಲಾಂಛನಗಳು

ಧರ್ಮಗುರು, ಧರ್ಮಪೀಠ. ಗುರುಮುಕುಟ, ಧರ್ಮದಂಡ, ಧರ್ಮಗ್ರಂಥ, ಪರುಷ ಬಟ್ಟಲು,

೧. ಧರ್ಮಗುರು ಬಸವಣ್ಣನವರ ಭಾವಚಿತ್ರವನ್ನು(ಮೂರ್ತಿಯನ್ನು)ಪೀಠಾಧಿಕಾರಿಗಳಿಗೆ ಕೊಡಲೇಬೇಕು.

೨. ಆರು ಜನ ಶರಣರ ಮೂರ್ತಿಗಳನ್ನು, ಷಟ್‌ಸೂತ್ರಗಳ ಚಿತ್ರಗಳನ್ನು ಒಳಗೊಂಡ ಧರ್ಮಪೀಠ ಬಹಳ ಸಂಕೇತಿಕವಾಗಿದೆ.

೩. ಲಿಂಗವಂತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯವನ್ನು ಮುಖ್ಯವಾಗಿ ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ಸಿದ್ಧರಾಮೇಶ್ವರ. ಅಕ್ಕಮಹಾದೇವಿ ಮತ್ತು ಇನ್ನಿತರ ಶರಣರ ವಚನಗಳ್ನ ಕೃತಿಗಳನು ಗಂಟುಕಟ್ಟಿ ಧರ್ಮ ಸಾಹಿತ್ಯವೆಂದು ಕೊಡಲೇಬೇಕು.

೪. **ಗುರು ಮುಕುಟ :** ಕಿರೀಟವೆಂದು ಇದನ್ನು ನಾವು ಕರೆಯುವುದಿಲ್ಲ. ಏಕೆಂದರೆ ಬಂಗಾರ, ವಜ್ರ, ಮುತ್ತು ನವರತ್ನಗಳನ್ನು ಯಾವುವನ್ನೂ ಇಲ್ಲಿ ಉಪಯೋಗಿಸುವುದಿಲ್ಲ. ಕಿರೀಟ ರಾಜನ ಕುರುಹು. ಇಲ್ಲಿ ಬೆಳ್ಳಿಯ ತಗಡಿಗೆ ರುದ್ರಾ

Digitalized by e-Sahithya Documentation Forum
Sponsored by Sarayu Foundation Trust

ಕ್ಷಿಯ ಮಣಿಸಾಲುಗಳನ್ನು ಸ್ಫಟಿಕಮಣಿಯ ಸಾಲುಗಳೊಡನೆ ಸೇರಿಸಿ ಹೆಣೆದು ರುದ್ರಾಕ್ಷಿ ಮುಕುಟವಾಗಿ ಮಾಡಲಾಗಿದೆ. ಜೊತೆಗೆ ಷಟ್‌ಸೂತ್ರಗಳನ್ನು ಚಿತ್ರೀಕರಿಸಿ ಮುಕಟಕ್ಕೆ ಹಾಕಲಾಗಿದೆ. ಒಂದು ಧಾರ್ಮಿಕ ಹೊಣೆಗಾರಿಕೆಯ ಸಂಕೇತವಾಗಿ ಈ ಗುರು ಮುಕುಟವಿದೆಯೇ ವಿನಾ, ವೈಭವ ಮತ್ತು ಶ್ರೀಮಂತಿಕೆಯ ಸಂಕೇತವಾಗಿ ಅಲ್ಲ.

ಅಪ್ಪನವರು ಕಿರೀಟಧಾರಿಯಾಗಿದ್ದುದರಿಂದ, ಬಸವ ಧರ್ಮ ಪೀಠದ ಅಧಿಕಾರಿಯೂ ಧರಿಸಬಹುದು ಎಂದು ಸಮರ್ಥಿಸಿಕೊಳ್ಳಲವಕಾಶವಿದ್ದರೂ ತ್ಯಾಗಿಯಾದ ಗುರುವು ಸರಳತೆಯ ಪ್ರತೀಕವಾಗಿರುವುದಗತ್ಯವಾದ ಕಾರಣ ಕಿರೀಟ ಬೇಕಿಲ್ಲ. ಅಂದು ಅಪ್ಪನವರು ಧರಿಸಿದ್ದುದು ಪ್ರಧಾನಿಯ ಅಧಿಕಾರ ಸೂಚಕ ಲಾಂಛನ(ಸಮವಸ್ತ್ರ)ವೆಂದೇ ವಿನಾ ವೈಭವ ಪ್ರದರ್ಶನಕ್ಕಾಗಿ ಅಲ್ಲ.

ಮುಂದೆ ಬರುವ ಯಾರೂ ಬಂಗಾರದ ಕಿರೀಟವನ್ನು ಧರಿಸಬಾರದು, ಅಡ್ಡ ಪಲ್ಲಕ್ಕಿ ಏರಬಾರದು ಎಂಬ ಈ ಆದೇಶವನ್ನು ಮುಂದಿನ ಪೀಠಾಧಿಕಾರಿಗಳು ಪಾಲಿಸುವಂತೆ ಬಸವ ತತ್ತ್ವಾನುಯಾಯಿಗಳು ಗಮನಿಸಬೇಕು.

೫. **ಧರ್ಮದಂಡ :** ಧರ್ಮವು ನ್ಯಾಯನೀತಿಗಳ ರಕ್ಷಕವೂ ಹೌದು, ಶಿಕ್ಷಕವೂ ಹೌದು ಗುರು ಬಸವಣ್ಣನವರು ಪ್ರತಿಪಾದಿಸಿದ ಗಣಾಚಾರದ, ಧರ್ಮತತ್ತ್ವಗಳ ರಕ್ಷಣೆಯ ಸಂಕೇತ ಈ ಧರ್ಮದಂಡ. ಈ ಧರ್ಮ ದಂಡದಲಿ ಆರು ಹಂತಗಳು ಅಲ್ಲಲ್ಲಿ ಷಟ್ ಸೂತ್ರಗಳನ್ನು ಕೆತ್ತಲಾಗಿದೆ.

೬. **ಪರುಷ ಪಾತ್ರೆ (ಬಟ್ಟಲು) :** ಗುರುಬಸವಣ್ಣನವರ ಒಂದು ವಚನದಲ್ಲಿ ದೇವರು, ಒಂದು ಕೈಯಲ್ಲಿ ಹಾಲು ಬಟ್ಟಲು, ಇನ್ನೊಂದು ಕೈಯಲ್ಲಿ ಓಜುಗಟ್ಟಿಗೆ ಹಿಡಿದಂತೆ ಭಾವಿಸಲ್ಪಟ್ಟಿದಾನೆ. ಓಜುಗಟ್ಟಿಗೆ ಗಣಾಚಾರದ ಸಂಕೇತ; ಹಾಲ ಬಟ್ಟಲು ಪ್ರೀತಿಯ ಸಂಕೇತ, ಸೇವೆಯ ಸಂಕೇತ. ಪರುಷ ಬಟ್ಟಲು ಭಕ್ತರಿಗೆ ನೀಡುವ ಪ್ರಸಾದವನ್ನು ತುಂಬಿಕೊಂಡಿರುತ್ತದೆ. ಗುರುಬಸವಣ್ಣನವರು ನೀಡಿದ ಪ್ರಸಾದ ತತ್ತ್ವದ ಸಂಕೇತವಾಗಿಯೂ ನಿಲ್ಲುತ್ತದೆ.

ಹೀಗೆ ಈ ಆರು ಲಾಂಛನಗಳನ್ನು, ಅಧಿಕಾರವನ್ನು ವಹಿಸಿಕೊಡುವಾಗ ಗುರುವು ಉತ್ತರಾಧಿಕಾರಿಗೆ ನೀಡುವರು.

ಅಧಿಕಾರಿ ಆಯ್ಕೆಯ ವಿಧಾನ

ಇಲ್ಲಿಯುವರೆಗೂ ಅನೇಕ ಮಠಪೀಠಗಳಿಗೆ ಅಧಿಕಾರಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಸಾಮಾನ್ಯವಾಗಿ ಆಯಾ ಜಾತಿ ಆಯಾ ಉಪಪಂಗಡಗಳಿಂದ ಆಯ್ಕೆ ಮಾಡುವುದನ್ನು ಕಾಣುವಿರಿ. ಪ್ರಸ್ತುತ ಉತ್ತರಾಧಿಕಾರಿಯ ಅತ್ಯಂತ ಹತ್ತಿರದ ಬಂಧು ವರ್ಗದಿಂದ [ಒಂದು ವಂಶ ಪಾರಂಪರ್ಯ ಆಸ್ತಿಯೇನೋ ಅವರು ವಹಿಸಿಕೊಂಡ ಮಠ ಎಂಬ

ಭಾವ ಬರುವಂತೆ] ಪಟ್ಟವನ್ನು ಆರಿಸಲಾಗೇವುದನ್ನು ಗಮನಿಸಬಹುದು. ಉತ್ತರ ಕರ್ನಾಟಕದಲ್ಲಿ ಬಳಿಕೆಯಲ್ಲಿದ್ದು ಎಲ್ಲ ಕಡೆಗೂ ಹಬ್ಬುತ್ತಿರುವಂತೆ ಒಂದು ಜಾತಿಯಿಂದಲೇ ಮಠಾಧಿಕಾರಿಗಳನ್ನು ಆಯ್ಕೆ ಮಾಡುವುದನ್ನು ರೂಢಿಯಲ್ಲಿ ಕಾಣಬಹುದು. ಈ ವ್ಯವಸ್ಥೆಗೆ ಹೊರತಾಗಿ ಅರ್ಹತಾ ಪರಂಪರೆಯನ್ನು ಆಚರಣೆಗೆ ತರುವ ಉದ್ದೇಶ ಇಲ್ಲಿದೆ.

ವ್ಯಕ್ತಿಯ ಹುಟ್ಟು ಯಾವುದೇ ಜಾತಿಯಲ್ಲಿರಬಹುದು, ಅವನ ಮನೆತನದ ಉದ್ಯೋಗವೂ ಯಾವುದಾದರೂ ಇರಬಹುದು. ಅಥವಾ ಅವನ ಪೂರ್ವಾಶ್ರಮದ ಉದ್ಯೋಗವೂ ಏನಾದರಿರಲಿ. ಸ್ತ್ರೀ-ಪುರುಷರು ಯಾರೇ ಇರಲಿ. ಬಸವ ತತ್ತ್ವದಲ್ಲಿ ವಿಶ್ವಾಸ- ಇಷ್ಟಲಿಂಗ ನಿಷ್ಠೆ ಹೊಂದಿರಬೇಕು. ತ್ಯಾಗಜೀವನಕ್ಕೆ ಬಂದ ನಂತರ ಪೂರ್ವಾಶ್ರಮ ನಿವೃತ್ತಿ ಮಾಡಿಕೊಂಡಿರಬೇಕು. ಸದಾಚಾರ-ಸುಜ್ಞಾನ ಸಂಪನ್ನರಾಗಿರಬೇಕು. ಸೇವಕರಾಗಿ, ಸಾಧಕರಾಗಿ, ಬೋಧಕರಾಗಿ ಬಸವ ಪಥದಲ್ಲಿ ಸಾಗಬೇಕು. ನಂತರ ಅವರ ನಿಷ್ಠೆಯ ತಳಹದಿಯ ಮೇಲೆ ಬಸವ ಧರ್ಮ ಪೀಠ ಟ್ರಸ್ಟಿಗೆ ತೆಗೆದುಕೊಳ್ಳಲಾಗುವುದು. ಅಧಿಕಾರದಲ್ಲಿರುವವರು ತಮ್ಮ ಉತ್ತರಾಧಿಕಾರಿಯನ್ನು ಈ ವಿಶ್ವಸ್ಥ ಮಂಡಳಿಯಿಂದ ಆಯ್ಕೆ ಮಾಡುವರು; ಬಸವ ಧರ್ಮ ಸಂಸತ್ ಈ ಆಯ್ಕೆಯನ್ನು ಅನುಮೋದಿಸಬೇಕು.

ಬಸವ ಧರ್ಮ ಪೀಠ[ನ್ಯಾಯಾಂಗ]ದ ಶಾಸಕಾಂಗವಾಗಿ ಬಸವ ಧರ್ಮ ಸಂಸತ್, ಕಾರ್ಯಾಂಗವಾಗಿ ರಾಷ್ಟ್ರೀಯ ಬಸವ ದಳಗಳನ್ನು ಮಾಡಲಾಗಿದೆ. ಇವರೆಲ್ಲರ ಮಹತ್ವಪೂರ್ಣವಾದ ಹೊಣೆಗಾರಿಕೆ ಇದೆ. ಹೇಗೆ ಒಂದು ಭವ್ಯಭವನ ಕಟ್ಟುವಾಗ ಮೂಲೆಗಲ್ಲು ಸೈಜುಗಲ್ಲುಗಳಷ್ಟೆ ಮಹತ್ವ ಚೀಪು ಕಲ್ಲಿಗೂ ಇರುತ್ತದೆಯೋ, ಯಂತ್ರದಲ್ಲಿ ಒಂದು ಚಿಕ್ಕ ಸ್ಕ್ರೂಗೂ ಇರುವುದೋ ಹಾಗೆ ಬಸವ ತತ್ತ್ವದ ಮಹಾಮನೆ ಕಟ್ಟುವಲ್ಲಿ ಪ್ರತಿಯೊಬ್ಬರದೂ ಹೊಣೆಗಾರಿಕೆ ಇದೆ.

ಆದ್ದರಿಂದ ಇಂದು ಎಲ್ಲರೂ ಸತ್ ಸಂಕಲ್ಪ ತೊಡಬೇಕು, ವಿಶ್ವಗುರು ಬಸವಣ್ಣನವರು ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಟ್ಟಬಯಸಿದ ಕಲ್ಯಾಣರಾಜ್ಯವನ್ನು ಕಟ್ಟುವ ಮಹಾಮಣಿಹದಲ್ಲಿ ನಮ್ಮನ್ನು ನಾವುತೊಡಗಿಸಿಕೊಳ್ಳುತ್ತೇವೆಂದು. ಈ ಕಾರ್ಯದಲ್ಲಿ ದಿಕ್ಸೂಚಿಯಾಗುವ ಹೊಣೆಯನ್ನು ಬಸವ ಧರ್ಮದ ಮಹಾಜಗದ್ಗುರು ಪೀಠ ಹೊರ ಬಯಸುತ್ತದೆ. ಇದಕ್ಕೆ ಪ್ರಥಮ ಅಧಿಕಾರಿಯಾಗಿ ಪೂಜ್ಯ ಅಪ್ಪಾಜಿ ದೊರೆರುತಿವುದು ನಮ್ಮೆಲ್ಲರ ಪುಣ್ಯ. ಏಕೆಂದರೆ ಪೂಜ್ಯರು ಸ್ವಾಮಿಯಾಗಿ ಮಾಡಲ್ಪಟ್ಟವರಲ್ಲ, ತಮ್ಮಿಂದತಾವು ಬೆಳೆದು ನಿಂತವರು. ಪೀಠದಿಂದ ಅವರಿಗೆ ಬೆಲೆಯೋ? ಅವರಿಂದ ಪೀಠಕ್ಕೆ ಬೆಲೆಯೋ ? ಎಂದು ಆಲೋಚಿಸಿದರೆ ಉತ್ತರಿಸಲೇ ಆಗದು. ಪುಷ್ಪದಿಂದ ಪರಿಮಳವೋ, ಪರಿಮಳದಿಂದ ಪುಷ್ಪವೋ? ಎರಡೂ ಸತ್ಯ! ಪುಷ್ಪವಿಲ್ಲದಿದ್ದರೆ ಪರಿಮಳಕ್ಕೆ ಆಶ್ರಯವೆಲ್ಲಿ? ಪರಿಮಳವಿಲ್ಲದಿದ್ದರೆ ಪುಷ್ಪಕ್ಕೆ ಹೆಚ್ಚಿನ ಮಹತ್ವವಿರುವುದೆ?

Digitalized by e-Sahithya Documentation Forum
Sponsored by Sarayu Foundation Trust

ಪೂಜ್ಯಅಪ್ಪಾಜಿಯವರ ಸಾಧನೆ, ಸಿದ್ಧಿಗಳಿಂದ ಈ ಪೀಠಕ್ಕೆ ಮಹತ್ವ ಬರುತ್ತದೆ. ಈ ಮಹಾ ಪೀಠದಿಂದ ಗುರು ಬಸವಣ್ಣನವರ ಸತ್ಸಂಕಲ್ಪ ಈಡೇರುವುದರೊಡನೆ ಪೂಜ್ಯರ ಖ್ಯಾತಿಯೂ ಬೆಳಗುತ್ತದೆ. ಪೂಜ್ಯರ 36 ವರ್ಷಗಳ ಅಖಂಡ ಪ್ರವಚನ ತಪಸ್ಸಿನ ಪ್ರತಿಫಲವಾಗಿಯೇ, ಗುರು ಬಸವಣ್ಣನವರು ಅನುಗ್ರಹಿಸಿರುವ ಕೊಡುಗೆ ಈ ಪದವಿ. ಪೂಜ್ಯರಿಗೆ ಯಾವ ಪದವಿಯ ಮೋಹವಿಲ್ಲ; ಅತ್ಯಂತ ಸರಳ ವ್ಯಕ್ತಿಗಳು ಇವರು. ಆದರೆ ಬಸವ ತತ್ತ್ವನುಯಾಯಿಗಳಿಗೆ ಒಂದು ನೆಲೆಯಾಗಿ ಈ ಪೀಠ ಬೇಕು. ಇಂಥ ಬಸವ ಶಕೆ 886 ವರ್ಷ, ಸೋಮವಾರ ಗುರುಬಸವಣ್ಣನವರ ವಿದ್ಯಾಭೂಮಿ. ತಪೋ ಸ್ಥಾನ, ಐಕ್ಯಕ್ಷೇತ್ರದಲ್ಲಿ ಸ್ಥಾಪನೆಯಾಗುತ್ತಿದೆ. ಇದರ ಪ್ರಥಮ ಗುರುವಾಗಿ ಅಧಿಕಾರ ಸ್ವೀಕರಿಸಲಿರುವ ಶ್ರೀಮನ್ ನಿರಂಜನ ಮಹಾಜಗದ್ಗುರು ಪೂಜ್ಯ ಶ್ರೀ ಶ್ರೀ ಲಿಂಗಾನಂದ ಮಹಾಸ್ವಾಮಿಗಳವರು, ಮಹಾಮನೆ ಮಹಾಮಠ ಇವರಿಗೆ ಜಗತ್ಕರ್ತನಾದ ಪರಮಾತ್ಮನು, ವಿಶ್ವಗುರು ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ನೀಡಲೆಂದು ಪ್ರಾರ್ಥಿಸಿ, ನನ್ನ ಪ್ರಸ್ತಾವನೆಗೆ ಪೂರ್ಣವಿರಾಮ ನೀಡುತ್ತೇನೆ.

—ಜಗದ್ಗುರು ಮಾತೆ ಮಹಾದೇವಿ

ಪ್ರಿಯ ಓದುಗರೇ,

ಜಾತಿ, ವರ್ಣ, ವರ್ಗರಹಿತವಾದ, ಸಕಲ ಜೀವರಾಶಿಗೂ ಲೇಸನ್ನು ಬಯಸುವ, ವಿಶ್ವಭ್ರಾತೃತ್ವವನ್ನು ಸಾರುವ ಲಿಂಗವಂತ, (ಬಸವ) ಧರ್ಮದ ತತ್ತ್ವನಿಷ್ಠ ಆಚಾರ-ವಿಚಾರಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳಬೇಕೇ ? ಹಾಗಿದ್ದರೇ ಓದಿರಿ...

" ಲಿಂಗಾಯತ ಧರ್ಮ ಕೈಪಿಡಿ " ಯನ್ನು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ವಚನಗಳ ಸಾಕ್ಷ್ಯಾಧಾರದಿಂದ ರಚಿಸ್ಪಟ್ಟಿರುವ ಈ ಕಿರುಹೊತ್ತಿಗೆ 6ನೆಯ ಮುದ್ರಣ ಕಂಡು ಕೂಡಲ ಸಂಗಮದ ಐದನೆಯ ಶರಣ ಮೇಳದಲ್ಲಿ ಬಿಡುಗಡೆಯಾಗಿದೆ.

ಬೆಲೆ : 10-00 ರೂ. **ಅಂಚೆವೆಚ್ಚ : 1-00**

ಹನ್ನೊಂದು ರೂಪಾಯಿಗಳನ್ನು ಇಂದೆ ಎಂ. ಓ. ಮಾಡಿರಿ.

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ

ನಂ. 2035 – 2ನೇ ಬ್ಲಾಕ್,

ರಾಜಾಜಿನಗರ, ಬೆಂಗಳೂರು-560 010



॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವೇಶನೆ ಬಸವರಾಜನೆ
ಬಸವಣ್ಣನೆ ಬಸವತಂದೆ ಬಸವ ಕೃಪಾನಿಧಿ
ಬಸವ ಪರಮೇಶ್ವರೀಶ್ವರ
ಬಸವ ಪ್ರಮಥಾದಿದೇವ ರಕ್ಷಿಸು ಬಸವ ॥

ಪ್ರವಚನ ಪಿತಾಮಹರು, ಬಸವ ಯುಗ ನಿರ್ಮಾಪಕರು, ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಿ ಧರ್ಮ ಪ್ರಸಾರಕರು, ಕೂಡಲ ಸಂಗಮದ ಬಸವ ಧರ್ಮದ ಮಹಾ ಜಗದ್ಗುರು ಪೀಠದ ಪ್ರಥಮ ಪೀಠಾಧೀಶರೂ ಆದ

ಶ್ರೀಮನ್ ನಿರಂಜನ ಮಹಾಜಗದ್ಗುರು
ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳು

(ಮಹಾಮನೆ ಮಹಾಮಠ)

ಇವರ ಚರಣಾರವಿಂದಗಳಿಗೆ

ಬಸವ ಧರ್ಮದ ಮಹಾಜಗದ್ಗುರು ಪೀಠದ

ಆರೋಹಣದ ಶುಭ ಸನ್ನಿವೇಶದಲ್ಲಿ

ಬಸವ ಶಕೆ ೮೮೬ ನೇ ವರ್ಷ, ಸೋಮವಾರ ದಿ. ೧೩-೧-೧೯೬೫ ರಂದು

ಅರ್ಪಿಸಿದ

-: ಅಭಿನಂದನ ಪತ್ರ :-

ಪರಮ ಪೂಜ್ಯ ಮಹಾಜಗದ್ಗುರುಗಳವರೇ,

ಈ ದಿವಸವು ಲಿಂಗಾಯತ ಧರ್ಮದ ಇತಿಹಾಸದಲ್ಲಿ ಒಂದು ಅವಿಸ್ಮರಣೀಯ, ಮಹತ್ವಪೂರ್ಣ ದಿವಸ. ಲಿಂಗವಂತ ಧರ್ಮದ ಆದ್ಯರಾದ ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣವನ್ನೇ ಪ್ರಣತೆಯನ್ನಾಗಿ ಮಾಡಿ, ಭಕ್ತಿರಸವನ್ನು ತೈಲವನ್ನಾಗಿ ಎರೆದು, ಸದಾಚಾರವನ್ನು ಬತ್ತಿಯಾಗಿ ಹಾಕಿ, ತಾವೇ ಜ್ಯೋತಿಯಾಗಿ ಸ್ಪರ್ಶಿಸಲು ದೈವೀ ಪ್ರಕಾಶವು ತೊಳಗಿ ಬೆಳಗಿತು. ಆ ಪ್ರಕಾಶದಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಂಡು ಬೆಳಗಲು ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗಿನ, ಆಫ್‌ಘಾನೀಸ್ಥಾನದಿಂದ ಬಂಗಾಳದವರೆಗಿನ ಭೂಭಾಗದಿಂದೆಲ್ಲ

Digitalized by e-Sahithya Documentation Forum
Sponsored by Sarayu Foundation Trust

ಸಾಧಕರು, ಸಿದ್ಧಪುರುಷರು ಮುಮುಕ್ಷುಗಳು, ಜೀವನ್ಮುಕ್ತರು, ಧಾವಿಸಿ ಬಂದರು. ಕಲ್ಯಾಣವು ಕೈಲಾಸವನ್ನು ನಾಚಿಸಿತು; ಬಸವಣ್ಣನವರು ಬೋಧಿಸಿದ ಕಾಯಕ ತತ್ತ್ವ ಕೈಲಾಸವನ್ನು ಮರೆಸಿತು. ಅನುಭವ ಮಂಟಪವೆಂಬ ಅಧ್ಯಾತ್ಮಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಅದರ ಮೂಲಕ ಜನರನ್ನು ಸಂಸ್ಕರಿಸಲು ಗುರು ಬಸವಣ್ಣನವರು ಅಪೂರ್ವ ಯೋಜನೆ ಹಾಕಿದರು ; ವಿಶ್ವಾತ್ಮನನ್ನು ವಿಶ್ವದ ಆಕಾರದಲ್ಲಿ ಚುಳುಕಾಗಿಸಿ, ಇಷ್ಟಲಿಂಗವೆಂದು ಕರೆದು, ಎಲ್ಲ ಮಾನವರಿಗೂ ಪೂಜೆಯ ಸದವಕಾಶವನ್ನು ನೀಡಿ ದೇವಭಕ್ತರ, ದೇವಶರಣರ ನವ ಸಮಾಜವನ್ನು ಕಟ್ಟಿದರು. ಇಂತಹ ಶರಣರ ಸಮಾಜವನ್ನು ಮುನ್ನಡೆಸಲು ಧರ್ಮಪೀಠ ಒಂದರ ಅಗತ್ಯವಿದೆಯೆಂದರಿತು ಧರ್ಮಪಿತ ಬಸವಣ್ಣನವರು ಪ್ರಭುನಾಮ ಸಂವತ್ಸರ ಯುಗಾದಿ ಪ್ರತಿಪದೆಯಂದು (ಕ್ರಿ. ಶ. 1156) ಶೂನ್ಯಪೀಠಕ್ಕೆ ಯೋಮಕಾಯ ಸಿದ್ಧ ಜಗದ್ಗುರು ಶ್ರೀಮದಲ್ಲಮ ಪ್ರಭುದೇವರನ್ನು ಪ್ರಥಮ ಅಧಿಕಾರಿಯನ್ನಾಗಿ ಆರೋಹಿಸಿದರು. ಅಲ್ಲಮ ಪ್ರಭುದೇವರು ಕದಳಿವನಕ್ಕೆ ನಿರ್ಗಮಿಸಿದ ನಂತರ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಎರಡನೆಯ ಅಧಿಕಾರಿಗಳಾದರು. ಕಲ್ಯಾಣ ಕ್ರಾಂತಿಯಾಗಿ ವಚನ ವಾಙ್ಮಯವನ್ನು ಜಾತಿವಾದಿಗಳಿಂದ ರಕ್ಷಿಸಬೇಕಾಗಿ ಬಂದಾಗ ಶ್ರೀ ಚನ್ನಬಸವಣ್ಣನವರು ಸಹ್ಯಾದ್ರಿಯ ಘಟ್ಟಗಳ ಕಡೆಗೆ ಸಾಹಿತ್ಯ ಹೊತ್ತು ಸಾಗುವಾಗ ಸೊನ್ನಲಾಪುರದ ಶಿವಯೋಗಿ ಸಿದ್ಧರಾಮೇಶ್ವರರಿಗೆ ಶೂನ್ಯಪೀಠದ ಅಧಿಕಾರವನ್ನು ಹಸ್ತಾಂತರಿಸಿದರು. ಜಾತಿವಾದಿಗಳ ಧೂರ್ತ ಸಂಚಿನಿಂದಾಗಿ ಶರಣ ಧರ್ಮಕ್ಕೆ ವಿಪತ್ತು ಬಂದೆರಗಿತು. ಧರ್ಮಪಿತ ಬಸವಣ್ಣನವರು ಸಚೇತಕ ಶಕ್ತಿಯಾಗಿ, ಶ್ರೀ ಪ್ರಭುದೇವರು ಪ್ರಥಮ ಪೀಠಾಧೀಶರಾಗಿ ಆರಂಭವಾದ ಪೀಠಪರಂಪರೆ ಅಖಂಡವಾಗಿ ಸಾಗಿಬರಲಿಲ್ಲ; ವಿರಕ್ತ ಪರಂಪರೆಯ ಮಠಗಳು ಅನೇಕವು ಸಾಗಿ ಬಂದಿದ್ದರೂ, ಅಪವಾದವೆಂಬಂತೆ ಕೆಲವನ್ನು ಹೊರತು ಪಡಿಸಿ ಉಳಿದವು ಬಸವ ನಿಷ್ಠೆಯನ್ನು ಹೊಂದಿಲ್ಲ, ವಚನ ವಾಙ್ಮಯದಲ್ಲಿ ಶ್ರದ್ಧೆಯನ್ನು ತಾಳಿಲ್ಲ. ಬಸವಾದಿ ಪ್ರಮಥರ ಆದೇಶದಂತೆ ನಡೆಯುವ ಆಸಕ್ತಿಯನ್ನೂ ಹೊಂದಿಲ್ಲ. 800 ವರ್ಷಗಳ ಕಾಲ ಅಂತರಂಗಿಕ-ಬಹಿರಂಗಿಕ ಒಳಹೊರಗಿನ ಶತ್ರುಗಳಿಂದ ವಿಪತ್ತುಗಳನ್ನು ಎದುರಿಸಿಯೂ ಲಿಂಗವಂತ ಧರ್ಮ-ಬಸವ-ಭಕ್ತಿಗಳು ಗುರು ಬಸವಣ್ಣನವರ ಅದ್ಭುತ ವ್ಯಕ್ತಿತ್ವ-ವಚನ ಸಾಹಿತ್ಯದ ಅಂತಃಸತ್ವಗಳ ಬಲದಿಂದ ಉಳಿದುಕೊಂಡು ಬಂದಿವೆ. ಈಗ ಪುನಶ್ಚೇತನ ಕೊಡಲು ಬಸವ ಧರ್ಮ ಪೀಠವು ಉದಿಸಿ ಬರುತ್ತಿರುವುದು ಬಸವ ತತ್ತ್ವಾನುಯಾಯಿಗಳ ಪುಣ್ಯವೇ. ಸರಿ. ಇದರಿಂದಾಗಿ ನಮ್ಮ ಸಂತೋಷ ಮೇರೆ ಮೀರಿದೆ. ಇದಕ್ಕಾಗಿ ನಾವು ಚಿರಋಣಿಗಳು.

ಬಸವ ಯುಗ ನಿರ್ಮಾಪಕರೇ,

ವಿಶ್ವಗುರು ಬಸವಣ್ಣನವರು ಪರಮಾತ್ಮನ ಸೃಷ್ಟಿಯ ಅದ್ಭುತ ಕೊಡುಗೆಯಾಗಿ ಅವತರಿಸಿ ಬಂದರು. "ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯ ಒಬ್ಬ ಶರಣನ" ಎಂದು ಶ್ರೀ ಪ್ರಭುದೇವರು ಹೇಳುವಂತೆ ಬಂದು,

Digitalized by e-Sahithya Documentation Forum
Sponsored by Sarayu Foundation Trust

ಈ ಮರ್ತ್ಯದ ಮಾನವ ಕುಲದ ಹಿತಕ್ಕಾಗಿ ಹೊಸಧರ್ಮವನ್ನು ನೀಡಿದರು; ಜಗ ಬದುಕುವ, ಜನ ಬದುಕುವ ಸಂದೇಶ ಸಾರುವ ವಚನ ಸಾಹಿತ್ಯವನ್ನು ಕೊಟ್ಟರು. ಅವರ ಸತ್ಸಂಕಲ್ಪದಿಂದ ಒಂದು ಶರಣ ಬಳಗ ನಿರ್ಮಾಣವಾಯಿತು. ಅವರೇ ಈ ಧರ್ಮದ ಹೃದಯ ಸ್ವರೂಪರೆಂದು ಆದ್ಯರೆಂದು ಸಮಕಾಲೀನ ಶರಣರು ಕೊಂಡಾಡಿದರು. ಆದರೆ ಕಾಲಾನಂತರದಲ್ಲಿ ಗುರು ಬಸವಣ್ಣನವರ ಸ್ಥಾನವನ್ನು ಕಡಿಮೆ ಮಾಡುವ ಸಂಚು ನಡೆಯಿತು. ಇಂದಿಗೂ ನಡೆಯುತ್ತಲಿದೆ. ಇದನ್ನು ಬಯಲಿಗೆ ಎಳೆದುದೇ ಅಲ್ಲದೆ ಭಕ್ತರ ಮನೆ-ಮನಗಳಲ್ಲಿ ಧರ್ಮಗುರು ಬಸವಣ್ಣನವರನ್ನು ಪ್ರತಿಷ್ಠಾಪಿಸುವ ಘನ ಕರ್ತವ್ಯ ಮಾಡಿದ್ದೀರಿ. ಅವಿಶ್ರಾಂತ ದುಡಿಮೆ ಮಾಡಿ ಯಶಸ್ಸು ಸಾಧಿಸಿ ಈಗ ಬಸವ ಭಕ್ತಿಯ ಗಾಳಿ ಎಲ್ಲೆಡೆ ಬೀಸುವಂತೆ ಗೈದಿದ್ದೀರಿ. ತಮ್ಮ ಹೆಸರು ಚರಿತ್ರಾರ್ಹವಾಗಲಿದೆ. ಶ್ರೀ ಗುರು ಬಸವಣ್ಣನವರ ಕಾಲದಲ್ಲಿ ನಡೆದ ಗಣಪರ್ವದ ನಂತರ ಅದೇ ಮಾದರಿಯಲ್ಲಿ **'ಶರಣ ಮೇಳ'** ಆರಂಭಿಸಿದ್ದೀರಿ. ಈ ಶರಣ ಮೇಳದ ಫಲವಾಗಿ ಹರಿದು ಹಂಚಿಹೋಗಿದ್ದ ಲಿಂಗವಂತ ಧರ್ಮೀಯರು ವರ್ಷಕ್ಕೊಮ್ಮೆಯಾದರೂ ಒಂದು ಕಡೆ ಸೇರುವಂತೆ ಆಗಿ ಅತ್ಯುತ್ತಮ ಸಂಘಟನೆ ಆಗಲು ಸಾಧ್ಯವಾಯಿತು. ಲೌಕಿಕರಿಗೆ ತೌರು ಇದ್ದಂತೆ ಧಾರ್ಮಿಕವಾದ ಒಂದು ತೌರು ಬಸವ ತತ್ತ್ವಾನುಯಾಯಿಗಳಿಗೆ ಅಗತ್ಯವಿತ್ತು. ಬೌದ್ಧರಿಗೆ ಬುದ್ಧಗಯೆ, ಮುಸ್ಲೀಮರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ ಇರುವಂತೆ ಲಿಂಗವಂತ ಧರ್ಮೀಯರಿಗೆ **' ಕೂಡಲ ಸಂಗಮವೇ ಧರ್ಮಕ್ಷೇತ್ರ '** ಎಂಬುದನ್ನು ಗುರುತಿಸಿ, ಘೋಷಿಸಿ, ಧಾರ್ಮಿಕ ತೌರನ್ನು ಒದಗಿಸಿ ಕೊಟ್ಟಿದ್ದೀರಿ. ಧರ್ಮಕ್ಷೇತ್ರದ ಸರ್ವಾಂಗೀಣ ಬೆಳವಣಿಗೆಯಾಗಲು ಅಮೂಲ್ಯ ಯೋಜನೆಗಳನ್ನು ರೂಪಿಸಿದ್ದೀರಿ; ಹೀಗಾಗಿ ನಿಮ್ಮ ಧರ್ಮಗುರು ಯಾರು? ಧರ್ಮಕ್ಷೇತ್ರವಾವುದು? ಧರ್ಮಶಾಸ್ತ್ರಯಾವುದು? ಎಂದು ಕೇಳುವವರಿಗೆ ಉತ್ತರ ಕೊಡಲು ಧರ್ಮಗುರು-ಬಸವಣ್ಣ, ಧರ್ಮ ಸಂಹಿತೆ- ವಚನ ಸಾಹಿತ್ಯ, ಧರ್ಮ ಲಾಂಛನ- ಇಷ್ಟಲಿಂಗ, ಧರ್ಮಕ್ಷೇತ್ರ-ಕೂಡಲ ಸಂಗಮ, ಧರ್ಮ ಧ್ವಜ- ಬಸವ ಧ್ವಜ, ಧರ್ಮದ ಧ್ಯೇಯ- ಕಲ್ಯಾಣರಾಜ್ಯ ನಿರ್ಮಾಣ ಎಂಬ ಷಟ್ ಸೂತ್ರಗಳನ್ನು ನಮಗೆ ನೀಡಿದ್ದೀರಿ.

ಸಮಾಜದ ಹಿತಚಿಂತನೆ ಮಾಡುವುದು ಎಲ್ಲರ ಕರ್ತವ್ಯ, ಕಾಲವು ಬದಲಾದಂತೆ ವಿಜ್ಞಾನವು ಮುಂದುವರಿದಂತೆ ಧಾರ್ಮಿಕ ಆಚರಣೆಗಳಲ್ಲಿ ಬದಲಾವಣೆ ಅಗತ್ಯ ; ಸಾಮೂಹಿಕ ಚಿಂತನ-ಮಂಥನ ತೀರಾ ಅವಶ್ಯಕ ಎಂದು **"ಬಸವ ಧರ್ಮ ಸಂಸತ್"** ಎಂಬ ಶಾಸಕಾಂಗವನ್ನು ರೂಪಿಸಿರುವುದು ಒಂದು ಅದ್ಭುತ ಕಲ್ಪನೆ; ಎಲ್ಲರೊಡನೆ ಚಿಂತನೆ ಮಾಡಿ, ತತ್ತ್ವ–ಸಿದ್ಧಾಂತ–ಆಚರಣೆಗಳನ್ನು ನಿರ್ಣಯಿಸುವ ಈ ಪ್ರಜಾಪ್ರಭುತ್ವವಾದಿ ವಿಧಾನ ಸ್ತುತ್ಯಾರ್ಹ. ವಿಚಾರ–ಆಚಾರಗಳನ್ನು ಕೇವಲ ತಿಳಿದುಕೊಂಡರೆ ಸಾಲದು ಅವನ್ನು ಪ್ರಚಾರ ಮಾಡಲು, ಅನುಷ್ಠಾನಗೊಳಿಸಲು **'ರಾಷ್ಟ್ರೀಯ ಬಸವ ದಳ'**ದ ಕಲ್ಪನೆ ನೀಡಿದ್ದೀರಿ. ರಾಷ್ಟ್ರೀಯ ಬಸವ ದಳಗಳವರು ಅಲ್ಲಲ್ಲಿಯೇ ಶಾಖೆ ತೆರೆದು ಉತ್ತಮ ರೀತಿಯಲ್ಲಿ ಜನರನ್ನು ಸಂಘಟಿಸಿ, ಸಂಸ್ಕರಿಸುತ್ತಿರುವರು.

ರಾಷ್ಟ್ರೀಯ ಬಸವ ದಳದ ಉಪಾಂಗಗಳನ್ನಾಗಿ "ಭೃತ್ಯಾಚಾರ ಗಣವನ್ನು ಸೇವಾ ಕಾರ್ಯ ನಿರ್ವಹಣೆಗೆ ; ಗಣಾಚಾರ ದಳವನ್ನು ಧರ್ಮರಕ್ಷಣೆಗೆ" ಎಂದು ತರಬೇತಿಗೊಳಿಸುತ್ತಿದ್ದೀರಿ. ಹೀಗೆ ಬಸವ ತತ್ತ್ವಾನುಯಾಯಿಗಳಿಗೆ ನ್ಯಾಯಾಂಗವಾಗಿ ಬಸವ ಧರ್ಮಪೀಠ, ಶಾಸಕಾಂಗವಾಗಿ ಬಸವ ಧರ್ಮ ಸಂಸತ್, ಕಾರ್ಯಾಂಗವಾಗಿ ರಾಷ್ಟ್ರೀಯ ಬಸವ ದಳಗಳು ರೂಪುಗೊಂಡಿರುವುದು ಅಪೂರ್ವ ಭಾಗ್ಯ.

ವಿಶ್ವಧರ್ಮ ಪ್ರವಚನಕಾರರೇ,

ವಿಶ್ವಧರ್ಮ ಪ್ರವಚನ ಎಂಬ ತಮ್ಮ ಬೋಧನ ಮಾಧ್ಯಮ ಅತ್ಯಪೂರ್ವವಾದುದು. ಅದರ ಸಾಧನೆ ವರ್ಣಿಸಲು ಅಸದಳವಾದುದು. ಇದು ಪಂಡಿತ ಪಾಮರರು, ವಿದ್ವಾಂಸರು ಶ್ರೀಸಾಮಾನ್ಯರನ್ನು ಬಡವ-ಬಲ್ಲಿದರೆಂಬ ಭೇದವಿಲ್ಲದೆ ಕರೆದು ಜ್ಞಾನದ ತುತ್ತನ್ನು ನೀಡಿದೆ. ಸಮಾಜ ಜಾಗೃತಿಯನ್ನು ಮಾಡಿದೆ, ಧರ್ಮದಲ್ಲಿ ಆಸಕ್ತಿಯನ್ನು ಹುಟ್ಟಿಸಿದೆ. ಐತಿಹಾಸಿಕ ಒಂದು ಮಹಾನ್ ಪರಂಪರೆಯನ್ನು ನಾವು ಹೊಂದಿದ್ದರೂ ನಮ್ಮತನವನ್ನು ನಾವು ಮರೆತು " ಬಸವಣ್ಣ " ಎಂದರೆ ನಾಲ್ಕುಕಾಲಿನ ಎತ್ತು ಎಂದು ತಿಳಿದು ಬಸವ ಜಯಂತಿಯನ್ನು ಎತ್ತಿನ ಹಬ್ಬವನ್ನಾಗಿ ನಾವು ಆಚರಿಸುತ್ತಿದ್ದೆವು. ಬಸವಣ್ಣನವರು ಯುಗಪುರುಷರು, ಮಹಾನ್ ಚಿಂತನಶೀಲರು, ಪ್ರಪ್ರಥಮ ಸಮತಾವಾದಿ; ಇವೆಲ್ಲಕ್ಕಿಂತ ಮಿಗಿಲಾಗಿ ಅವರು ನಮ್ಮ ಧರ್ಮಗುರು, ಮಂತ್ರಪುರುಷ ಎಂಬುದನ್ನು ಮನವರಿಕೆ ಮಾಡಿಕೊಟ್ಟಿರಿ. ಗೊತ್ತುಗುರಿಯಿಲ್ಲದೆ ವಿವಿಧ ಮತಪಂಥಗಳಿಗೆ ಅಲೆಯುತ್ತಿದ್ದ ನಮಗೆ ವಚನ ಸಾಹಿತ್ಯ ಎಂಬ ಹೊನ್ನಸಿರಿಯನ್ನು ತೋರಿಸಿಕೊಟ್ಟು ಸರ್ವಸಂಪತ್ತಿನಿಂದ ಶೋಭಿಸುವಂತೆ ಮಾಡಿದ್ದೀರಿ. ಧರ್ಮಗುರು ಬಸವಣ್ಣ-ಧರ್ಮಸಂಹಿತೆ ವಚನ ಸಾಹಿತ್ಯ ಇವುಗಳಿಂದ ಹಳಿತಪ್ಪಿದ ಲಿಂಗವಂತ ಸಮಾಜದ ಟ್ರೇನನ್ನು ವಿಶ್ವಧರ್ಮ ಪ್ರವಚನ ಎಂಬ ಕ್ರೇನ್ ಮೂಲಕ ಪುನಃ ಹಳಿಗೆ ಸೇರಿಸಿ, ಸರಿದಾರಿಯಲ್ಲಿ ನಡೆಯುವಂತೆ ಮಾಡಿದವರು ತಾವು.

ಸರ್ವಶ್ರೇಷ್ಟ ಬಾಣಸಿಗರೇ,

ತಾವು ಅತ್ಯಂತ ಶ್ರೇಷ್ಟ ಬಾಣಸಿಗರು. ಬಸವಾದಿ ಪ್ರಮಥರು ತಮ್ಮ ಜೀವನಾನುಭವಷ ಹೊಲದಲ್ಲಿ ಬೆಳೆದು ವಚನ ಸಾಹಿತ್ಯದ ಕಾಳುಗಳನ್ನು ಕೊಟ್ಟು ಹೋಗಿದ್ದರು. ಅವನ್ನು ನಿಮ್ಮ ಶ್ರದ್ಧೆಯ ಜಲದಲ್ಲಿ ತೋಯಿಸಿ, ವಿಚಾರ ಶೀಲತೆಯ ಅಗ್ನಿಯಲ್ಲಿ ಬೇಯಿಸಿ, ದೃಷ್ಟಾಂತ ಕಥೆಗಳು– ಉದಾಹರಣೆಗಳು ಎಂಬ ದ್ರಾಕ್ಷಿಗೋಡಂಬಿಗಳನ್ನು ಸೇರಿಸಿ, ಪ್ರವಚನವೆಂಬ ಸೌಟಿನ ಮೂಲಕ ನಮ್ಮ ಹೃದಯ-ಬುದ್ಧಿ-ಮನಗಳಿಗೆ ಉಣ್ಣಿಸುತ್ತಿದ್ದೀರಿ. ಶರಣನಾರು? ಶ್ರದ್ಧಾವಂತ, ಕಾಯಕವಂತ, ತತ್ತ್ವವಂತ, ಶೌರ್ಯವಂತ, ಹೃದಯವಂತ ಎಂದು ಹೇಳಿ ಸ್ವಧರ್ಮಶ್ರದ್ಧೆಯನ್ನು, ಕ್ರಿಯಾಶೀಲ ಮನೋಭಾವವನ್ನು, ತತ್ತ್ವನಿಷ್ಠೆಯನ್ನು, ಧರ್ಮರಕ್ಷಣೆಗಾಗಿ ಹೋರಾಡುವ ಶೌರ್ಯವನ್ನು ಸಕಲ ಜೀವಾವಳಿಗೆ ಲೇಸನ್ನು ಬಯಸುವ ಹೃದಯವಂತಿಕೆಯನ್ನು

ಬೆಳೆಸುತ್ತಿದ್ದೀರಿ. ಆದಿ ಶರಣರ ಸಂದೇಶವನ್ನು ವ್ಯಾಖ್ಯಾನಿಸಲು, ಅರ್ಥೈಸಲು ಹುಟ್ಟಿಬಂದಿರುವ ಧೀಮಂತರಂತೆ ತೋರುತ್ತಿದ್ದೀರಿ.

ಸ್ತ್ರೀ ಜಗದ್ಗುರು ಪೀಠ ಸಂಸ್ಥಾಪಕರೇ,

ವಿಶ್ವಗುರು ಬಸವಣ್ಣನವರು ಸಮಾನತೆಯನ್ನು ತಂದಿರುವುದರಲ್ಲಿ ವಿಶ್ವದಲ್ಲಿಯೇ ಪ್ರಥಮರು. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಧಾರ್ಮಿಕ ಸಮಾನತೆ ತಂದರು. ಧಾರ್ಮಿಕ ಸಮಾನತೆಯು ವರ್ಣ, ವೃತ್ತಿ, ಜಾತಿ, ವರ್ಗ, ಲಿಂಗ ಭೇಧಗಳನ್ನು ಮೀರಿ ಎಲ್ಲರಿಗೂ ಸದವಕಾಶ ನೀಡಿತು. ಗುರುತ್ವವು ಜಾತಿಯಿಂದಲ್ಲ ಆತ್ಮ ಜ್ಯೋತಿಯಿಂದ ಎಂದು ಸಾರಿದ ಅಪ್ಪ ಬಸವಣ್ಣನವರು ಶ್ರೇಣೀಕೃತ ಸಮಾಜ ವ್ಯವಸ್ಥೆಯ ಕೆಳಶ್ರೇಣಿಯಿಂದ ಬಂದ ಪ್ರಭುದೇವರನ್ನು ಶೂನ್ಯಪೀಠಾಧೀಶರನ್ನಾಗಿ ಮಾಡಿದರು. ಕಲ್ಯಾಣಕ್ರಾಂತಿ ಆಗದೆ ಹೋಗಿದ್ದರೆ ಬಹುಶಃ ಮಹಿಳಾ ಗುರುಪೀಠವು ಆಗಬಹುದಿತ್ತೇನೂ ! ಅಥವಾ ಶೂನ್ಯಪೀಠಕ್ಕೆ ಮಹಿಳಾ ಗುರುವನ್ನೇ ಅಧಿಕಾರಿಯನ್ನಾಗಿ ಮಾಡುತ್ತಿದ್ದರೇನೋ ! ಕಲ್ಯಾಣಕ್ರಾಂತಿಯ ಆಕಸ್ಮಿಕ ಘಟನೆಯಿಂದ ಬಸವಾದಿ ಪ್ರಮಥರ ಇನ್ನೂ ಅನೇಕ ಯೋಜನೆ ಕೈಗೂಡಲಿಲ್ಲ. ವಚನ ಸಾಹಿತ್ಯ ಸಂವಿಧಾನದಲ್ಲಿ ಮಾತ್ರ ಉಳಿದ ಈ ತತ್ತ್ವವು ತಮ್ಮ ಧೃಡಸಂಕಲ್ಪದಿಂದ ಕೈಗೂಡಿತು. ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠವನ್ನು ಮಾಡಿ ತಮ್ಮ ಕರಕಮಲ ಸಂಜಾತೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಮಹಿಳಾ ಜಗದ್ಗುರುವನ್ನಾಗಿ ಮಾಡುವುದರ ಮೂಲಕ ತಮ್ಮ ಜೀವನದ ಸ್ಥಾವರ ಕೊಡುಗೆಗಳು ಸಂಘ-ಸಂಸ್ಥೆಗಳಾದರೆ ಮಹಾನ್ ಜಂಗಮ ಕೊಡುಗೆ ಪೂಜ್ಯ ಮಾತಾಜಿಯವರು. ಅವರ ವ್ಯಕ್ತಿತ್ವ, ಸಾಧನೆ, ಸಿದ್ಧಿ, ಚಿಂತನೆಗಳು ತಮ್ಮ ಪ್ರೋತ್ಸಾಹದ ಫಲ ಎಂಬುದಾಗಿ ಇಡೀ ಜಗತ್ತೇ ಕೊಂಡಾಡುತ್ತಲಿದೆ.

ಬಸವ ಧರ್ಮದ ಪರಮೋಚ್ಚ ಪೀಠದ ಪ್ರಥಮ ಪೀಠಾಧೀಶರೇ,

ವಿಶ್ವಗುರು ಬಸವಣ್ಣನವರ ದಿವ್ಯ ಆದೇಶದಂತೆ ತ್ಯಾಗ ಜೀವನಕ್ಕೆ ಬಂದು, ಅಂತರಂಗ ಬಹಿರಂಗಗಳಲ್ಲಿ ಬಸವ ಚೇತನವನ್ನು ತುಂಬಿಕೊಂಡು, ಪ್ರಾಮಾಣಿಕವಾಗಿ ಬಸವ ತತ್ತ್ವಪ್ರಚಾರಕ್ಕೆ ದುಡಿದು, 'ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದರೆ ಭಕ್ತಿ ಎಂಬ ವಾತಾವರಣ ಮೂಡಿಸಿದ ತಾವು ಬಸವ ಧರ್ಮ ಪೀಠಕ್ಕೆ ಅತ್ಯಂತ ಸೂಕ್ತರು. ಪುಷ್ಪದಿಂದ ಪರಿಮಳಕ್ಕೆ ಬೆಲೆಯೋ, ಪರಿಮಳದಿಂದ ಪುಷ್ಪಕ್ಕೆ ಬೆಲೆಯೋ? ಎಂದು ಸಂದೇಹ ಉಂಟಾಗುವಂತೆ, ಪೀಠದಿಂದ ತಮಗೆ ಮಹತ್ವವೋ ತಮ್ಮಿಂದ ಪೀಠಕ್ಕೆ ಮಹತ್ವವೋ ಎಂದು ಹುಬ್ಬೇರಿಸುವಂತಾಗುತ್ತಿದೆ. ಈ ಎರಡೂ ಸತ್ಯವೆ ! ತಮ್ಮ ಕ್ರಿಯಾಶೀಲತೆಯಿಂದ ಧರ್ಮಪೀಠವು ಕೀರ್ತಿವಂತವಾದರೆ, ಧರ್ಮಪೀಠದ ಸ್ಥಾಪನೆಯಿಂದ ತಮ್ಮ ಹೆಸರು ಅಮರವಾಗುತ್ತದೆ. ಬಸವ ತತ್ತ್ವಾನುಯಾಯಿಗಳನ್ನು ಸಮರ್ಥವಾಗಿ, ಪ್ರಜಾಪ್ರಭುತ್ವದ ಪಥದಲ್ಲಿ ಮುನ್ನಡೆಸಲು ಪರಮೋಚ್ಚ ಪೀಠವೊಂದರ ಅಗತ್ಯ ನಮಗೆ ಇದ್ದಿತು.

Digitalized by e-Sahithya Documentation Forum
Sponsored by Sarayu Foundation Trust

ಈ ಅಪೇಕ್ಷೆ ಇದೀಗ ಪೂರೈಸುತ್ತಿದೆ. ಬಸವ ಧರ್ಮದ ಮಹಾಜಗದ್ಗುರು ಪೀಠವು ನಮ್ಮೆಲ್ಲರ, ಮತ್ತು ಬಸವಾದಿ ಪ್ರಮಥರ ಆಶೆ-ಆಶೋತ್ತರ-ಸಂಕಲ್ಪಗಳನ್ನು ಪೂರೈಸುವಂತೆ ಆಗಲಿ. ಜಗತ್ಕರ್ತನಾದ ಪರಮಾತ್ಮನು ಮತ್ತು ಮಂತ್ರಪುರುಷ ಬಸವಣ್ಣನವರು ತಮಗೆ ಸಧೃಢ ಆರೋಗ್ಯ, ಭಾಗ್ಯ ಆಯುಷ್ಯ, ಸಂಪತ್ತನ್ನು ಕರುಣಿಸಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

*** ಅರ್ಪಿಸಿದವರು ***

ಬಸವ ಧರ್ಮ ಸಂಸತ್ ಸದಸ್ಯರು ರಾಷ್ಟ್ರೀಯ ಬಸವ ದಳದವರು

ಬಸವ ಧರ್ಮ ಪೀಠದ ಸಮಸ್ತ ಸದ್ಭಕ್ತರು

ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮಸಂಗನ ಬಸವಣ್ಣ ಬಂದು ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು.

—ಶಿವಯೋಗಿ ಸಿದ್ಧರಾಮೇಶ್ವರರು

" ಕಲ್ಯಾಣ ಕಿರಣ ಮಾಸಪತ್ರಿಕೆಗೆ ಚಂದಾದಾರರಾಗಿರಿ "

ವೈಚಾರಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಮೌಲ್ಯಗಳನ್ನುಳ್ಳ, ಧರ್ಮಜಾಗೃತಿ ಮಾಡುತ್ತ ಪ್ರತಿ ತಿಂಗಳು ಮನೆಗೆ ಬರುವ "ಕಲ್ಯಾಣ ಕಿರಣ" ಮಾಸ ಪತ್ರಿಕೆಗೆ ಚಂದಾದಾರರಾಗಿರಿ.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ "ಮಾತೃಹರಕೆ"
- ಓದುಗರು ಕೇಳುವ ಅನೇಕ ಸಮಸ್ಯೆಗಳಿಗೆ ಸೂಕ್ತ ಸಮಾಧಾನ.
- ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳವರಿಂದ ವಚನಗಳ ವ್ಯಾಖ್ಯಾನವುಳ್ಳ "ವಚನ ನವನೀತ"
- ಅತ್ಯಂತ ಉಪಯುಕ್ತವಾದ ಲೇಖನಗಳು, ಸ್ಫುರಣ-ಕಿರಣ. ದೃಷ್ಟಾಂತ ಕಥೆ ಮುಂತಾದುವನ್ನು ಒಳಗೊಂಡು ಬರುವ ಅತ್ಯಂತ ಉಪಯುಕ್ತ ಮಾಸಪತ್ರಿಕೆ ಕಲ್ಯಾಣ ಕಿರಣ.

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ.

— ವ್ಯವಹರಿಸುವ ವಿಳಾಸ —

ಕಲ್ಯಾಣ ಕಿರಣ ಮಾಸ ಪತ್ರಿಕೆ, ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ನಾ ಕಂಡಂತೆ 'ಪ್ರವಚನ ಪಿತಾಮಹ'

—ಶ್ರೀ ಎಂ. ವೀರಭದ್ರಸ್ವಾಮಿ

'ನೀನೊಲಿದರೆ ಕೊರಡು ಕೊನರುವುದಯ್ಯ' ಎಂಬಂತೆ ಶ್ರೀ ಗುರು ಕರುಣೆಯ ಕಿರಣ ಸೋಂಕಿದಾಗಲೆ ಅಂತರ್ಯದ ಅರಿವಿನಂಬುಜ ಅರಳಿ ಕಳಿಕಳಿಸಿ ಕಂಗೊಳಿಸಿ ಸುವಾಸಿತ ಮಕರಂದವನ್ನು ಹೊರಚೆಲ್ಲುವುದು.

'ಮಹತ್ತು ಮಾತಿನಲಿಲ್ಲ, ಕಾರ್ಯದಲ್ಲಿದೆ ; ಕೀರ್ತಿ ಪದವಿಯಲಿಲ್ಲ, ಕ್ರಿಯೆಯಲ್ಲಿದೆ, ಎಂಬ ಹಿರಿಯ ಅನುಭವೋಕ್ತಿಯ ಭಂಡಾರದ ಬಾಯಿ ತೆಗೆದಾಗ ತಿಳಿಯುವುದು ಹಿರಿಯರ ತಿಳಿವಿನ ಆಳ ಅಗಲಗಳ ಪರಿಮಿತಿಗಳು, ಮುಳುಗಿದಾಗ ಆಳವನ್ನು, ಈಜಿದಾಗ ಅಗಲಗಳನ್ನು ತಿಳಿಯುವಂತೆ. ಶರಣರ ಮಹತ್ತರವಾದ ಮಹಿಮೆಯನ್ನು ಅವರ ಆದಿ ಅಂತ್ಯವೆರಡರಲ್ಲೂ ಕಾಣಬಹುದಾಗಿದೆ, ದಿನಕರನ ಉದಯಾಸ್ತಗಳಿಂದ ಅವನ ಶ್ರೇಷ್ಟತೆಯನ್ನು ತಿಳಿಯುವಂತೆ. ಈ ಉಕ್ತಿಗೆ ಪ್ರತ್ಯಕ್ಷ ಪರಿಪೂರ್ಣ ಸಾದೃಶ್ಯ ಸಾಕ್ಷಿಗಳಾಗಿದ್ದಾರೆ ಪೂಜ್ಯ ಶ್ರೀ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳು. ಇವರ ಮಹತ್ತಿಗೆ ಈಗ ನಡೆಯಲಿರುವ ಅರುವತ್ತು ವರ್ಷಗಳ ಮಹಾಸಾಧನೆಯ ಮಹೋತ್ಸವವೇ ಇದಕ್ಕೆ ಸಾಕ್ಷಿಯಾಗಿದೆ.

ಲೋಕೋಭಿನ್ನರುಚಿಃ ಎಂಬ ಮಾತು ನೂರಕ್ಕೆ ನೂರರಷ್ಟು ಸತ್ಯವಾದುದು. ಯಾವುದೇ ವ್ಯಕ್ತಿಯನ್ನು, ವಸ್ತುವನ್ನು, ಪ್ರಾಣಿಯನ್ನು ಕಂಡಾಗ ಸರ್ವರ ಅಭಿಪ್ರಾಯವು ಒಂದೇ ಸಮನಾಗಿರಲು ಸಾಧ್ಯವಿಲ್ಲ. ದೃಷ್ಟಿಯಂತೆ ಸೃಷ್ಟಿ. ಮನಸ್ಸಿನಂತೆ ಮಹಾದೇವ. ರವಿಯನ್ನು ಕಂಡ ಕಮಲ ತನ್ನ ಶತದಳವನ್ನು ಬಿಚ್ಚಿ ಅರಳಿ ಪ್ರಫುಲ್ಲವಾದರೆ, ಬೆಳಕನ್ನು ಕಂಡ ಗೂಬೆ ಪ್ರಕಾಶವನ್ನು ನಿಂದಿಸುತ್ತ ಕತ್ತಲು ಕೋಣೆಯನ್ನು ಸೇರುತ್ತದೆ. ಜೇನು ಹುಳ ಮಕರಂದವನ್ನು ಹುಡುಕುತ್ತ ಹೂವಿಂದ ಹೂವಿಗೆ ಹಾರಿದರೆ, ಮನೆಯ ನೊಣ ಕೊಳೆಯನ್ನು ಪ್ರೀತಿಸುತ್ತದೆ. ಯೋಗಿ–ಜೋಗಿಗೆ, ಕಾಗೆ–ಕೋಗಿಲೆಗೆ, ಉಪ್ಪು–ಸಕ್ಕರೆಗೆ ಭೇದವರಿಯದ ಮಾನವರೂ ಇದ್ದಾರೆ, ಅಂದರೆ ಕೆಲವರು ಆಶ್ಚರ್ಯಪಡಬಹುದು. ಇದಕ್ಕೆ ಕಾರಣವಿಲ್ಲ. ಈ ಮರ್ತ್ಯದಲ್ಲಿ ಹುಟ್ಟಿಬಂದ ಮೇಲೆ ನಿಂದೆ ವಂದನೆಗಳು ಬರುವುದು ಸಹಜ, ಇದು ಯಾರಿಗೂ ತಪ್ಪಿದ್ದಲ್ಲ. ಯೋಗಿಯಾಗಿರಲಿ ಭೋಗಿಯಾಗಿರಲಿ, ವಿದ್ವಾಂಸನಾಗಿರಲಿ ರಾಜಕಾರಣಿಯಾಗಿರಲಿ, ಏನೇ ಆಗಿರಲಿ ಬಂದೇ ಬರುತ್ತವೆ. ಶುಕ್ಲಪಕ್ಷ ಕೃಷ್ಣಪಕ್ಷಗಳಂತೆ ಮರ್ತ್ಯದ ಬಾಳು. ಅಕ್ಕ ಹೇಳಿರುವಂತೆ- ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯ, ಎಂಬ ತತ್ತ್ವದಲ್ಲಿ ಶರಣರು, ಮಹಾತ್ಮರು ಸಾಗರದಶಿಲೆಯಂತೆ ಸದೃಢವಾಗಿರುತ್ತಾರೆ. ಸಾಮಾನ್ಯರು ಸಾಗರದ ತೀರದ ಮರಳಿನಂತೆ ಕರಗಿ ಹೋಗುತ್ತಾರೆ. ಹಣ್ಣುಬಿಡುವ ಮರಕ್ಕೆ ಕಲ್ಲಿನ ಏಟು ಹಾಲುಕೊಡುವ ಹಸುವಿಗೆ ದೊಣ್ಣೆಯ ಏಟು. ಮುಳ್ಳಿನ ಮರ,

Digitalized by e-Sahithya Documentation Forum
Sponsored by Sarayu Foundation Trust

ಗೊಡ್ಡು ಹಸುವಿನ ತಂಟೆಗೆ ಯಾರು ಹೋಗುತ್ತಾರೆ? ಕಬ್ಬಿನ ಕೋಲು ಗಾಣದಲ್ಲಿ ಸಿಕ್ಕು ಜಜ್ಜಿ ನುಚ್ಚಿದರೂ ಪರರಿಗೆ ಸಿಹಿರಸವನ್ನೇ ಕೊಡುವಂತೆ ಕೀಳು ಜನರ ಕೀಳುನುಡಿ, ವರ್ತನೆಯಿಂದ ಮನನೊಂದರೂ ಜ್ಞಾನಿಗಳು ಪರರಿಗೆ ಹಿತವನ್ನೇ ಬಯಸುತ್ತಾರೆ, ಹಿತವನ್ನು ಮಾಡುತ್ತಾರೆ. ಇದಕ್ಕೆ ಪೂಜ್ಯ ಶ್ರೀ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳವರ ಬಾಳು ಕನ್ನಡಿ ಹಿಡಿದಂತಿದೆ.

ಯಾವುದೋ ಗಣಿಯ ಗರ್ಭದಿಂದ ಹೊರ ಬಂದ ಕೋಹಿನೂರ ವಜ್ರವು ವಿಶ್ವ ಪ್ರಖ್ಯಾತವಾಗಿರುವಂತೆ, ಒಂದು ಮೂಲೆಯ ಹಳ್ಳಿಯ ಸಾಮಾನ್ಯ ಕುಟುಂಬದ ದಂಪತಿಗಳ ಗರ್ಭದಿಂದ ಉದಿಸಿ ಬಂದು ತನ್ನ ಸಾಧನೆಯ ಶಕ್ತಿ ಕಿರಣಗಳಿಂದ, ವಾಕ್ ಶಕ್ತಿಯಿಂದ ನಾಡು ಹೊರನಾಡುಗಳಲ್ಲೆಲ್ಲಾ ಪ್ರಜ್ವಲಸಿ ಬೆಳಗಿಸಿ ಥಳಥಳಿಸಿ ತೊಳಗುತ್ತಿದ್ದಾರೆ, ಸದ್ಗುರು ಲಿಂಗಾನಂದ ಮಹಾಸ್ವಾಮಿಗಳವರು. ಈ ಮಹಾನ್ ಬೆಳಗು ಇನ್ನೂ ವೃದ್ಧಿಯಾಗಿ ಜಗದ ಕತ್ತಲೆಯನ್ನು ಕಳೆಯಲು ಕಾರಣವಾಗಲೆಂದು ಇಂಥ ಮಹಾನ್ ಶಕ್ತಿಯನ್ನು ಶ್ರೀಗಳವರಿಗೆ ಕರುಣಿಸಲೆಂದು ವಿಶ್ವಗುರು ಬಸವಣ್ಣನವರಲ್ಲಿ ಬೇಡಿಕೊಳ್ಳುವೆನು.

ನಾನು ಶ್ರೀಗಳವರ ಬಗ್ಗೆ ಜನಗಳ ಬಾಯಿಂದ ಪತ್ರಿಕೆಗಳ ಪ್ರಕಟಣೆಗಳಿಂದ ಕೇಳಿ ತಿಳಿದಿದ್ದೆನು. ಅವರ ಅಮೋಘವಾದ ಪ್ರವಚನದ ಬಗ್ಗೆ ಸಾಕಷ್ಟು ಕೇಳಿ - ಅವರನ್ನು ಕಾಣುವ ಮತ್ತು ಅವರ ಪ್ರವಚನದ ಸುಧೆಯನ್ನು ಕೇಳುವ ಕಾತುರವುಳ್ಳವನಾಗಿದ್ದೆನು. ಆದರೆ ಶ್ರೀಗಳವರನ್ನು ಕಾಣುವ ಮತ್ತು ಅವರ ಪ್ರವಚನ ಸುಧೆ ು ಸವಿಯನ್ನು ಸವಿಯುವ ಸಮಯಾನುಕೂಲ ಒದಗಿ ಬಂದಿರಲಿಲ್ಲ. ಪುಣ್ಯ ಪುರುಷರ, ಶರಣರ, ಪುಣ್ಯ ಕ್ಷೇತ್ರಗಳ ಸಂತಸದ್ಗುರುಗಳ ಸಂದರ್ಶನ ಶರಣರ ಸಂಗ ಪೂರ್ವಪುಣ್ಯವಿಲ್ಲದೆ ಲಭಿಸುವುದಿಲ್ಲವೆಂಬ ಹಿರಿಯರ ಅನುಭವ-ನುಡಿ ಸತ್ಯವಾದುದು. 'ಕೂಡಿಬಾರದೆ ಯಾವುದೂ ಮೂಡಿಬರುವುದಿಲ್ಲ' ಎಂಬ ನುಡಿಯಂತೆ ನನಗೆ ಶ್ರೀಗಳವರ ದರ್ಶನ ಭಾಗ್ಯವಾಗಲೀ ಅವರ ಪ್ರವಚನದ ಸುಧೆಯನ್ನು ಸವಿಯುವ ಪುಣ್ಯವಾಗಲೀ ನನಗೆ ಲಭಿಸಲಿಲ್ಲ. ಇದಕ್ಕಾಗಿ ನಾನು ಜಾತಕದಂತೆ ಕಾದು ಕುಳಿತ್ತಿದ್ದೆನು. ಪುಣ್ಯಗಳ ಕಾಲಕ್ಕೆ ಎಲ್ಲವೂ ತನ್ನಂತಹವು ಎನ್ನುವಂತೆ, ಹೆಳವನ ಬಾಗಿಲಿಗೆ ಭಾಗೀರಥಿಯು ಬರುವಂತೆ ಅಂತರ್ಯದ ಆಧ್ಯಾತ್ಮಿಕ ಈ ಅಂತರ್ಜಲದ ಬಾಹ್ಯಬೆಂಗಾಂಡಿಗೆ ಜ್ಞಾನ ಜಾಹ್ನವಿಯ ಅಮೃತವನ್ನುಣಿಸಲು ಎಳಗಂದಿಯು ತನ್ನ ಹಸಿದ ಕರುವಿಗೆ ಹಾಲುಣಿಸಲು ಓಡೋಡಿ ಬರುವಂತೆ ಈ ನಮ್ಮ ಚಳ್ಳಕೆರೆಗೆ ಒಂದಲ್ಲ ಎರಡು ಸಾರಿ ಬಂದು ಇಲ್ಲಿಯ ಆಸಕ್ತರಿಗೆಲ್ಲ ಆನಂದವನ್ನುಂಟು ಮಾಡಿದರು. ಮೊದಲನೆ ಸಾರಿ 12-12-81 ರಿಂದ 25-1-1982 ರ ವರೆಗೂ, ಎರಡನೆ ಸಾರಿ 12-6-90 ರಿಂದ 2-8-1990 ರ ವರೆಗೂ ತಮ್ಮ ಸಿಂಹ ವಾಣಿಯಿಂದ ಪ್ರವಚನವನ್ನು ಮಾಡಿದರು. ಈ ಪ್ರವಚನ ಮೋಡಿಕಾರನ ಮೋಡಿ ಎಂದರೆ ಈ ಪ್ರವಚನಕ್ಕೆ ಬಂದವರಿಗೆ ಸಮಯದ ಅರಿವಾಗಲಿ ಪರಿಸ್ಥಿತಿಯ ನೆನಪಾ

ಗಲೀ ಇರುತ್ತಿರಲಿಲ್ಲ. ಈ ಪ್ರವಚನವು ಅನೇಕ ದಿನಗಳು ಸತತವಾಗಿ ನಡೆಯುತ್ತಿದ್ದರೂ ದಿನದಿನಕ್ಕೂ ಶ್ರೋತೃಗಳ ಸಂಖ್ಯೆ ಅಧಿಕವಾಗುತ್ತಿತ್ತು. ಕೇಳುವವರಿಗೆ ಎಂದೂ ಸಾಕೆನಿಸಲಿಲ್ಲ. ಮಳೆ ಬರುತ್ತಿದ್ದರೂ ಛತ್ರಿ ಹಿಡಿದು ಕುಂತು ನಿಂತು ಮಂಗಳ ಹಾಡುವವರೆಗೂ ಕದಲುತ್ತಿರಲಿಲ್ಲವೆಂದಾಗ ಈ ಮೋಡಿಯ ಮಹಿಮೆಯನ್ನು ತಿಳಿದು ನೋಡಿ ಶ್ರೀಗಳವರು ತಮ್ಮ ಪ್ರವಚನದಿಂದ ಜನಮಾನಸ ಗಹ್ವರದ ಕತ್ತಲೆಯನ್ನು ಕಳೆದು ಬೆಳಗಿ ಅರಿವನ್ನುಂಟು ಮಾಡಿದರು.

ನಾನು ಈ ಎರಡು ಸಾರಿಯ ಪ್ರವಚನ ಸಭೆಯಲ್ಲಿ ಒಂದು ದಿನವೂ ತಪ್ಪದಂತೆ ಭಾಗವಹಿಸಿ ಅಂದಂದಿನ ವಿಷಯಗಳನ್ನು ಯಥಾಶಕ್ತಿ ಟಿಪ್ಪಣಿ ಮಾಡಿಕೊಂಡಿರುವೆನು. ಈ ಪ್ರತ್ಯಕ್ಷ ದರ್ಶನ ಮತ್ತು ಶ್ರವಣದ ಪ್ರಭಾವ ಅಪಾರವಾಗಿದೆ, ಮಾತಿನಲ್ಲಿ ಬಣ್ಣಿಸಲು ಬಾರದಾಗಿದೆ. ನನ್ನ ಅನುಭವವನ್ನೇ ಪ್ರಸಾದದ ರೂಪದಲ್ಲಿ ನಿಮ್ಮೆಲ್ಲರಲ್ಲಿ ಹಂಚಿಕೊಳ್ಳುತ್ತಿರುವೆನು.

ಶ್ರೀಗಳವರ ಪ್ರವಚನ ವೈಖರಿ ಅಸಾಧಾರಣ ಅಪೂರ್ವವಾದುದು. ಇದನ್ನು ಕೇಳಿಯೇ ಆನಂದಿಸಬೇಕಲ್ಲದೆ ಮಾತಿನಲ್ಲಿ ಹೇಳಲಾಗದು. ಪ್ರವಚನಕ್ಕೆ ಒಂದು ವಿಷಯವಿದ್ದರೂ ಅದರ ವಿಶಾಲತೆ ವಿಶ್ವ ವಿಚಾರವನ್ನೆಲ್ಲಾ ಆವರಿಸಿರುತ್ತದೆ. ಮರಕ್ಕೆ ಒಂದು ಬುಡವಿದ್ದರೂ ಅದರ ಸಾರಸರ್ವಸತ್ವವೂ ಕೊಂಬೆ ಕೊಂಬೆಗಳಲ್ಲಿ ಪಸರಿಸಿ ಕೊನರಿ ಪಲ್ಲವಿಸುವಂತೆ, ಶ್ರೀಗಳವರ ಪ್ರವಚನದ ವೈಶಿಷ್ಟ್ಯವೆಂದರೆ ಜಾತಿ, ಧರ್ಮ, ಮತ, ಪಂಗಡ, ಪಂಥಗಳ ಸೋಂಕಿಲ್ಲದೆ ಸರ್ವಮಾನವರಿಗೂ ಮಾರ್ಗದರ್ಶನ ಮಾಡುವಂತದ್ದು. ಭಾಸ್ಕರನ ಬೆಳಕಿನಂತೆ, ಬೀಸುವ ಗಾಳಿಯಂತೆ, ಅದ್ಭುತವಾದುದು ಮತ್ತು ಎಲ್ಲಾಮಟ್ಟದ ಎಲ್ಲಾ ಭಾವನೆಯ ಜನರಿಗೂ ಹಿಡಿಸುವಂಥದ್ದು. ಅಂದರೆ ಸರ್ವಧರ್ಮಗಳ ಸಾರವನ್ನು ಒಳಗೊಂಡಂಥದ್ದು. ಈ ಕಾರಣದಿಂದಲೇ ಇವರ ಪ್ರವಚನ ಸಭೆಯು ಸರ್ವ ಧರ್ಮದವರಿಂದ ಜಾತಿಕುಲದ ಜಟಿಲವಿಲ್ಲದೆ ಆಬಾಲ ವೃದ್ಧ ಮಹಿಳೆ ಮತ್ತು ಪುರುಷರಿಂದ ಕಿಕ್ಕಿರಿದು ತುಂಬಿರುತ್ತದೆ. ಇವರ ಪ್ರವಚನ ಸಭೆ ಕನ್ನಡಿಯಿದ್ದಂತೆ. ನೋಡಿಕೊಳ್ಳಬಯಸುವವರು ತಮ್ಮ ತಮ್ಮ ಯಥಾವತ್ತಾದ ಆಕಾರದ ಪ್ರತಿಬಿಂಬವನ್ನು ನೋಡಿಕೊಳ್ಳಬಹುದು. ಇವರ ಈ ಪ್ರವಚನದ ಅಂಗಡಿಯಲ್ಲಿ ಸರ್ವರಿಗೂ ಬೇಕಾದ ಸಾಮಾನು ಸಿಗುತ್ತದೆ. ಅದನ್ನು ಕೊಡುವಾಗ ನಿಷ್ಣಾತ ವೈದ್ಯರಂತೆ ಸೂಕ್ತ ಅನುಪಾನದೊಂದಿಗೆ ಕೊಡುತ್ತಾರೆ. ಸ್ತ್ರೀ ಪುರುಷರ ಬಗ್ಗೆ ಹೇಳುತ್ತ ಅವರವರ ಹಿರಿಮೆ ಗರಿಮೆ ಸಂಸಾರದಲ್ಲಿ ಅವರ ಸ್ಥಾನ ಮಾನ, ಕರ್ತವ್ಯ ಜವಾಬ್ದಾರಿಗಳನ್ನು ಹರಿತವಾದ ನುಡಿಯಲ್ಲಿ ಹೇಳಿದರೂ ಗಂಭೀರ ಹಾಸ್ಯರಸಗಳ ಸಂಯೋಜನೆಯಲ್ಲಿ ಮನಮುಟ್ಟುವಂತೆ ಇವರು ನಾಡಿನ ಜ್ಯೋತಿಗಳಾಗುವಂತೆ ವಿಶ್ವಮಾವನರಾಗುವಂತೆ ಹಿರಿಯ ಮಾನವ ಪಾತ್ರಗಳನ್ನೇ ಕೇಳುಗರ ಮುಂದೆ ತಮ್ಮ ಹೇಳಿಕೆಯ ಮೂಲಕ ತಂದು ನಿಲ್ಲಿಸುವ ಮಹಾಕಲೆ ಈ ಕಲಾಕಾರರಿಗೆ ಸಿದ್ಧಿಸಿ ಬಂದಿರುವ ಆಜನ್ಮಸಿದ್ಧ ಹಕ್ಕಾಗಿದೆ.

ಶ್ರೀಗಳವರು ತಮ್ಮ ಪ್ರವಚನ ಪ್ರಸಾದದಲ್ಲಿ ಕೇವಲ ಲಾಡು, ಪಾಯಸ, ಜಿಲೇಬಿ, ಮೈಸೂರು ಪಾಕು, ಇವನ್ನೇ ಕೊಡದೆ, ಇಲ್ಲ ಒಣಗಿದ ಕಡುಕಲು ರೊಟ್ಟಿಯನ್ನೇ

Digitalized by e-Sahithya Documentation Forum
Sponsored by Sarayu Foundation Trust

ಕೊಡವೆ ಈ ಸುಮಧುರ ಆಹಾರ ಸಂಪೂರ್ಣವಾಗಿ ಜೀರ್ಣಿಸಿ ರಕ್ತಗತವಾಗಲು, ಜೀರ್ಣ ಕ್ರಿಯೆಯ ಸಹಾಯಕವಾದ ಉಪ್ಪಿನಕಾಯಿಯನ್ನೂ ಕೊಡುತ್ತಾರೆ. ಉಪ್ಪಿನಕಾಯಿ ಎಂದರೆ ಜಾಡಿಯಲ್ಲಿ ಹಾಕಿದ್ದಲ್ಲ ಅದು ಶ್ರೀಗಳವರ ಅನುಭವಕೋಶದಲ್ಲಿದ್ದು ಸಮಯಕ್ಕೆ ತಕ್ಕಂತೆ ಹೊರಗೆ ಬಂದ ಸಮಯ ಸ್ಫೂರ್ತಿಯದು. ಈ ಉಪ್ಪಿನ ಕಾಯಿ (ದೃಷ್ಟಾಂತ ಉಪಕಥೆ, ನಿದರ್ಶನ)ಗಳು ಸಮಯ ಸಂದರ್ಭಕ್ಕೆ ಎಷ್ಟು ಸೂಕ್ತವಾಗಿರುತ್ತವೆ ಎಂದರೆ 'ಪ್ರಸ್ತುತಕೆ ಬೆಸ್ತಂತೆ' ಇರುತ್ತವೆ. ಬಿಸಿಲಿನ ಬೇಗೆಗೆ ಸುಳಿಗಾಳಿ, ಎಳನೀರು ಇದ್ದಂತೆ! ಇದರ ಪರಿಣಾಮ ಅವರ್ಣನೀಯವಾದುದು. ಇದು ಸಂಜೀವಿನಿಯಂತೆ ಸಕಲ ರೋಗಕ್ಕೂ ಮದ್ದಾಗಿರುತ್ತದೆ: ಮುದ್ದಾಗಿರುತ್ತದೆ. ಜೇನುಸವರಿದ ಕಹಿ ಗುಳಿಗೆಯಂತೆ ಅಂತರ್ಯದಲ್ಲಿ ಅಪಾರ ಕೆಲಸ ಮಾಡುತ್ತದೆ. ಶ್ರೀಗಳವರ ಉಪ್ಪಿನಕಾಯಿ ಚಪ್ಪರಿಸಿದವರು ಪಾವನರಾಗಿದ್ದಾರೆ, ಅಂದರೆ ಈ ಉಪಕಥೆಯಲ್ಲಿ- ಗುರು ಭಕ್ತಿ, ಗುರು ಸೇವೆ, ಶರಣರಿಗೆ ಸಹಾಯ ಸಹಕಾರ. ದಾನ ಧರ್ಮದಿಂದಾಗುವ ಫಲ, ಮಹಾತ್ಮರ ದರ್ಶನಲಾಭ- ಹೀಗೆ ನೂರಾರು ರೀತಿಯ ನೀತಿಯ ತ್ತ್ತತ್ತ್ವಗಳನ್ನು ಉಣಿಸಿ ಕೇಳ ಬಂದವರ ಭಾವನೆಗಳನ್ನೇ ಬದಲು ಮಾಡುವ ಮಹಾಶಕ್ತಿ ಕೇಂದ್ರವಾಗಿದ್ದಾರೆ. ಇದಕ್ಕೆ ಪ್ರತ್ಯಕ್ಷ ಸಾಕ್ಷಿ ಎಂದರೆ ಶ್ರೀಗಳವರು ಮೊದಲಬಾರಿ ಚಳ್ಳಕೆರೆಗೆ ಬಂದಾಗ ತಮ್ಮ ಶ್ರೀಮುಖದಿಂದ ಓತಪ್ರೋತವಾದ ಪ್ರವಚನ ಕಾವೇರಿಯನ್ನು ಹರಿಸಿ ಕೇಳುಗರ ಹೃತ್ ಭೂಮಿಯನ್ನು ನೆನೆಯುವಂತೆ ಮಾಡಿ ಸಂಪೂರ್ಣ ಹದ ಮಾಡಿದ್ದರು. ಒಂದು ದಿನ ಪ್ರವಚನ ಪ್ರಸಾದ ಬಡಿಸುವಾಗ ದಾನದ ಮಹತ್ವದ ಬಗ್ಗೆ ಹೇಳುತ್ತ ಸೊಗಸಾದ ಸರ್ವರ ಮನಮಲಿನತೆಯು ಕಳೆದು ಮಲ್ಲಿಗೆಯಂತೆ ಅರಳಿ ಬೆಳಗುವಂತಹ ಉಪಕತೆಯ ಉಪ್ಪಿನಕಾಯಿಯನ್ನು ನೀಡಲು ಚಪ್ಪರಿಸಿದ ಹಲವರಲ್ಲಿ ಓರ್ವ ಅಜ್ಜಿಯು ಭಾವುಕಳಾಗಿ ಭಕ್ತಿ ಪರವಶಳಾಗಿ ತನ್ನ ಕೊರಳಿನಲ್ಲಿದ್ದ ಅತಿ ಬೆಲೆಯುಳ್ಳ ಚಿನ್ನದ ಸರವನ್ನು ಬಸವ ಮಂಟಪದ ಬೆಳವಣಿಗೆಗಾಗಿ ಉದಾರ ಮನದಿಂದ ದಾನ ಮಾಡಿ ಕೃತಾರ್ಥರಾದುದನ್ನು ಕಣ್ಣಾರೆ ಕಂಡಿರುವೆನು. ಇದೇ ಶ್ರೀಗಳವರ ಪ್ರವಚನ ಪರಿಣಾಮ ಶಿಲೆಯನ್ನು ಕಲೆಮಾಡುವುದು, ಕೊರಡನ್ನು ಕೊನರಿಸುವುದು, ಬರಡನ್ನು ಹಯನ ಮಾಡುವುದು. ಇಂಥ ಘಟನೆಗಳು ಅಗಣಿತ. ಪ್ರವಚನ ಪ್ರಭಾವದಿಂದ ಪ್ರಭಾವಿತರಾದ ಜನ ಯಥಾಶಕ್ತಿ ಕಾಣಿಕೆಯನ್ನು ಅರ್ಪಿಸಿ ಕೃತಾರ್ಥರಾಗುವರು.

ಶ್ರೀಗಳವರ ಪ್ರವಚನದ ವಿಶೇಷವೆಂದರೆ– ಬೂವಾಬಾಜಿಯಲ್ಲ, ಅಂತೆಕಂತೆಗಳ ಸಂತೆಯಲ್ಲ, ಪುರಾಣ ಇತಿಹಾಸಗಳ ಕಲ್ಪನೆಯ ಕಟ್ಟು ಕಥೆಯಲ್ಲ. ಇವತದೆಲ್ಲ ವೈಜ್ಞಾನಿಕ ಸಿದ್ಧಶುದ್ಧವಾದ ಭಾಷೆ. ವಿಚಾರ ಹೇಳುವಾಗ ಕೇಳುವವರಿಗೆ ಸವಾಲು ಎಸೆದು ವಿಚಾರದ ಹಿರಿಮೆಯನ್ನು ಎತ್ತಿ ಹಿಡಿಯುತ್ತಾರೆ. ಚರ್ಚೆಯ ಅಖಾಡಕ್ಕೆ ಬರಲು ಆಹ್ವಾನಿಸುತ್ತಾರೆ ಇದೇ ಧೀರಯೋಗಿಯ ದಿಟ್ಟತನ. ಇವರ ಹೇಳಿಕೆಯಲ್ಲಿ ಸಂದೇಹ ಸಂಶಯ, ಅನುಮಾನಗಳಿಗೆ ಆಸ್ಪದವಿಲ್ಲ, ಸರ್ವವೂ ಪ್ರತ್ಯಕ್ಷ ಕಥನ. ಶ್ರೀಗಳವರ ಪರೇಂಗಿತ ಜ್ಞಾನ ಅತಿ ಅದ್ಭುತವಾದುದು. ಅಂದರೆ ಶ್ರೋತೃಗಳು ವಿಷಯ ಸವೆ

ಯುತ್ತ ಈ ವಿಚಾರ ಹೇಳಿದ್ದರೆ ಚೆನ್ನಾಗಿತ್ತು ಅಂತ ತಮ್ಮ ಮನದಲ್ಲಿ ಅಂದುಕೊಂಡರೆ ಆ ಕ್ಷಣದಲ್ಲಿಯೇ ಆ ಸಂಶಯ ನಿವಾರಣೆಗೆ ಸೂಕ್ತವಾದ ವಿಚಾರ ಧಾರೆ ಶ್ರೀಗಳವರ ಶ್ರೀ ಮುಖದಿಂದ ಉಕ್ಕಿಬರುತ್ತದೆ. ಅಂದರೆ ಶ್ರೀಗಳವರಿಗೆ ಪ್ರತಿಯೊಬ್ಬರ ಮುಖದಲ್ಲಿಯ ಭಾವ ಟಿ. ವಿ. ಯಲ್ಲಿ ಕಾಣುವ ಚಿತ್ರದಂತೆ ಕಂಡು ಬರುತ್ತಿರಬಹುದು. ಇಲ್ಲ ಇವರ X ರೇ ಕಿರಣಯುಕ್ತವಾದ ಅಕ್ಷಿನೋಟದಿಂದ ಸರ್ವರ ಅಂತರ್ಯದ ಭಾವ ತಿಳಿಯುವುದೋ ಏನೋ ಹೇಳಲಸದಳವಾದುದಾಗಿದೆ. ಇದು ನನ್ನ ಸ್ವಂತ ಅನುಭವದ ಮಾತಾಗಿದೆ. ಶ್ರೀಗಳವರು ತಮ್ಮ ಪ್ರವಚನದಲ್ಲಿ ಪರಿಪೂರ್ಣ ಪ್ರಪಂಚದರ್ಶನವನ್ನೇ ಮಾಡಿಸುವ ಮಹಾಶಕ್ತಿಯನ್ನು ಪಡೆದಿರುವ ಇವರು ಕನ್ನಡ ನಾಡಿನ ಮೂಲೆಮೂಲೆಗಳಲ್ಲಿ ಸಂಚರಿಸಿ ತಮ್ಮ ವೀರ ವಾಣಿಯಿಂದ ಧರ್ಮ, ಸಂಸ್ಕೃತಿ, ನೀತಿ, ಶೀಲಗಳನ್ನು ಆಚರಣೆಯಿಂದ ತೋರಿಸಿ ಮಾನವರಿಗೆ ಮಾದರಿಯಾಗಿದ್ದಾರೆ. ಈತನಕ ನಾನು ಕಂಡ ಶ್ರೀಗಳವರ ಧೀಶಕ್ತಿಯ ಬಗ್ಗೆ ಹೇಳಿದೆನು. ಇನ್ನೂ ನನಗೆ ಅವರಲ್ಲಿ ತೋಚಿದ ಅಂತಶ್ಶಕ್ತಿಯ ಬಗ್ಗೆ ಕೆಲವು ನಿದರ್ಶನಗಳ ಪರಿಚಯ ಮಾಡಿಕೊಡಲು ಪ್ರಯತ್ನಿಸುವೆನು.

ಸತತವಾದ ಸಾಧನೆಯಿಂದ ಮಾನವನು ಸರ್ವಸ್ವವನ್ನೂ ಸಾಧಿಸಿ ಸಿದ್ಧಪುರುಷನಾಗಬಲ್ಲ ಎಂಬುದಕ್ಕೆ ಶ್ರೀಗಳವರೇ ಪ್ರತ್ಯಕ್ಷ ಸಾಕ್ಷಿಯಾಗಿರುವರು.

ಪ್ರಾರಂಭದಲ್ಲಿ ಒಂದು ಶಾಲೆಯಲ್ಲಿ ಬೋಧಕರಾಗಿ ಸೇರಿದರು. ಆದರೆ ಈ ಮಹಾಮೂರ್ತಿಗೆ ನಾಲ್ಕುಗೋಡೆಯೊಳಗಣ ಆವರಣ ಹಿಡಿಸದಾಯಿತು. ಕೆಲವೇ ಮಕ್ಕಳಿಗೆ ಬೋಧಿಸಲು ಹಿಡಿಸದಾಯಿತು. ಗರಿಬಲಿತ ಗರುಡಪಕ್ಷಿಯು [illegible] ಎಲ್ಲೆ ಕಟ್ಟು ಇಲ್ಲದ ಆಕಾಶದಲ್ಲಿ ಸಂಚರಿಸುವಂತೆ ಶ್ರೀಗಳವರು ಭಾವಿಯಿಂದ ಹೊರಬಂದು ಸಾಗರವನ್ನು ಸೇರಿದರು, ಜನ ಸಮುದಾಯದ ಸಮಾಜ ಸಾಗರವನ್ನು. ಗೂಡು ಬಿಟ್ಟು ಹೊರಗೆ ಹಾರಿದ ಈ ಬೃಹತ್ಮೂರ್ತಿಯು ಸಂಸಾರ ಸಂಬಂಧ ಸಂಕೋಲೆಯನ್ನು ಮುರಿದು, ವಿಶ್ವಬಂಧುವಾಗಿ, ತ್ಯಾಗದ ಸಾಕಾರ ಮೂರ್ತಿಯಾಗಿ, ಪರಿವ್ರಾಜಕನಾಗಿ, ತ್ಯಾಗದ ಚಿಹ್ನೆ ಕಾವಿಯನ್ನು ಧರಿಸಿ ವೈರಾಗ್ಯದ ಮೂರ್ತಿಯಾಗಿ ಜಗದ ಜಂಗಮನಾಗಿ ಪ್ರವಚನವೇ ಪ್ರಾಣವಾಗಿ, ಜ್ಞಾನ ಧರ್ಮೋಪದೇಶವೇ ಉಸಿರಾಗಿ ಜನತೆಯ ಮಾನವತ್ವದ ಮಾರ್ಗ ಜ್ಯೋತಿಯಾಗಿ, ಜನಾನುರಾಗಿಗಳಾಗಿ, ಧರ್ಮ ಪ್ರಚಾರದ ಪೀಠಗಳನ್ನು ಜನತೆಯ ಸಹಾಯ ಸಹಕಾರದಿಂದ ಸ್ಥಾಪಿಸಿ, ಜನತೆಯಲ್ಲಿ ಧರ್ಮ ಜಾಗೃತಿಗೊಳಿಸಿದ ಧೀರಯೋಗಿಗಳು.

ಚಿನ್ಮೂಲಾದ್ರಿಯ ಚಿನ್ನದಗಣಿಯ ಅದಿರನ್ನು ತಮ್ಮ ಅಂತಃಚಕ್ಷುವಿನಿಂದ ಪರಿಶೋಧಿಸಿ ಅಪರಂಜಿಯನ್ನು ಮಾಡಿ ವಿಶ್ವದಲ್ಲಿಯೇ ಪ್ರಪ್ರಥಮ ಮಹಿಳಾಜಗದ್ಗುರು ಪೀಠವನ್ನು ಸ್ಥಾಪಿಸಿ ಚಿನ್ಮೂಲಾದ್ರಿಯ ಚಿತ್ಕಳೆಯಿಂದಾದ ಕು॥ ರತ್ನಮ್ಮನನ್ನು ಜಗದ್ಗುರು ಮಾತೆ ಮಹಾದೇವಿಯನ್ನಾಗಿ ಮೆರೆಸಿದ ಮಹಾಶಿಲ್ಪಿಯುವರು. ಏನೇ ಆದರೂ ಹೆದರದೆ ತಮ್ಮ ಕಾರ್ಯದಲ್ಲಿ ಜಯಪ್ರದರಾದ ಜಗದೇಕ ವೀರಯೋಗಿಗಳು.

Digitalized by e-Sahithya Documentation Forum
Sponsored by Sarayu Foundation Trust

ಧಾರವಾಡದ- ಜಗನ್ಮಾತಾ ಅಕ್ಕಮಹಾದೇವಿ ಮಹಿಳಾ ಜಗದ್ಗುರು ಪೀಠ, ಕುಂಬಳಗೋಡಿನ ಬಸವ ಗಂಗೋತ್ರಿ, ಕೂಡಲ ಸಂಗಮದ ಬಸವ ಧರ್ಮ ಪೀಠ, ಬೆಂಗಳೂರಿನ ವಿಶ್ವಕಲ್ಯಾಣ ಮಿಷನ್, ಧರ್ಮ ನೀತಿಗಳ ಪ್ರಚಾರ ಮುಖ ಪತ್ರಿಕೆ ಮಾಸಿಕ- ಕಲ್ಯಾಣ ಕಿರಣ, ಅಪಾರವಾದ ಧರ್ಮ ಸಾಹಿತ್ಯದ ಆಗರವಾದ- ಸುಯಿಧಾನ ಸುಗ್ರಂಥ ಮಾಲೆ. ಹೀಗೆ ಒಂದೇ ಎರಡೇ ಹಲವು ಹತ್ತಾರು ಸಂಸ್ಥೆಗಳ ಸಂಸ್ಥಾಪಕ- ಸಂಚಾಲಕ- ಕರ್ತೃಗಳಾಗಿರುವರು ಈ ಮಹಾಸಾಧಕ, ಮಹಾಜಗದ್ಗುರುಗಳು.

ತಮ್ಮ ಕರಕಮಲ ಸಂಜಾತೆ ಜಗದ್ಗುರು ಮಾತೆ ಮಹಾದೇವಿಯವರಿಗೆ ತಮ್ಮ ಸಾಧನೆಯ ತಪಸ್ಸಿನ ಅಂತಶ್ಶಕ್ತಿಯನ್ನು, ರಾಮಕೃಷ್ಣ ಪರಮಹಂಸರು-ವಿವೇಕಾನಂದರಿಗೆ ಧಾರೆಯೆರೆದಂತೆ, ತಾವೂ ಜಗತ್ತಿನ ಹಿತಕ್ಕಾಗಿ ಧಾರೆಯೆರೆದು- ಉತ್ಸವ ಮೂರ್ತಿಯನ್ನಾಗಿ ಮೆರೆಸುತ್ತ ತಾವು ಮೂಲ ಕ್ಷೇತ್ರದಲ್ಲಿ ನಿಂತು- ಜೋಗದ ವಿದ್ಯುತ್ ಕೇಂದ್ರದಂತೆ ಮಾತೆ ಮಹಾದೇವಿಯವರಿಗೆ ಸರ್ವಶಕ್ತಿ ಚೇತನದಾತರಾಗಿ ಅವರ ಮುಖೇನ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯೂ ಬಸವ ಧರ್ಮದ ಪರಿಮಳವು ಹರಡುವಂತೆ, ಧರ್ಮ ಪ್ರಕಾಶ ಬೆಳಗುವಂತೆ ಮಾಡಿದ ಜ್ಞಾನ ಯೋಗಿಗಳು. ಪರುಷ ಮುಟ್ಟಿದ ಕಬ್ಬಿಣ ಚಿನ್ನವಾಗುತ್ತದೆ, ಆದರೆ ಪರುಷವಾಗಲಾರದು, ಆದರೆ ಶ್ರೀ ಗುರುವು ಸ್ಪರ್ಶಿಸಿದ, ಕರುಣಿಸಿದ ಶಿಷ್ಯ-ಶಿಷ್ಯಳು ಸಾಕ್ಷಾತ್ ಗುರುವೇ ಆಗುತ್ತಾರೆ ಎಂಬ ಮಾತು ಪ್ರತ್ಯಕ್ಷವಾಗಿ ನಮ್ಮೆದುರು ಇದ್ದಾರೆ ಜಗದ್ಗುರು ಮಾತೆ ಮಹಾದೇವಿಯವರು.

ಧರ್ಮ ಪ್ರಚಾರಕ್ಕಾಗಿ ಮಾನತ್ವದ ಜಾಗೃತಿಗಾಗಿ ಪ್ರಚಾರಕರನ್ನು ಸಿದ್ಧಗೊಳಿಸಲು ತರಬೇತಿ ಕಮ್ಮಟಗಳನ್ನು ಪ್ರಾರಂಭಿಸಿ ಸಮಾಜದಲ್ಲಿ ನವಚೈತನ್ಯವನ್ನು ತುಂಬುತ್ತ ಕಾಲಕಾಲಕ್ಕೆ ಬರುವ ಶರಣರ ಜಯಂತಿಗಳು ಶರಣರ ಮಹಾಸಮ್ಮೇಳನಗಳು, ಇಂದಿನ ಪ್ರಚಾರ ಮಾಧ್ಯಮವಾದ ಸಿನಿಮಾ ಮೂಲಕ ಬಸವ ತತ್ತ್ವ ಪ್ರಚಾರ ಹೀಗೆ ಒಂದಲ್ಲ ಎರಡಲ್ಲ ಹಲವು ಹತ್ತಾರು ಕಾರ್ಯಕಮ್ಮಟಗಳನ್ನು ನಡೆಸುತ್ತಿರುವ ಮಹಾಕ್ರಾಂತಿ ಯೋಗಿವರ್ಯರಿವರು.

ಶ್ರೀಗಳವರ ಸರಳತೆಯ ಬಗ್ಗೆ ಒಂದು ಮಾತು ಹೇಳದಿರಲಾರೆನು. ಇವರಿಗೆ ಕಿರೀಟವನ್ನು ಧರಿಸಿ ಪಲ್ಲಕ್ಕಿಯಲ್ಲಿ ಮೆರೆಯುವ, ಸಿಂಹಾಸನಾರೂಢರಾಗಿ ಛತ್ರಿಚಾಮರಗಳನ್ನು ಹಿಡಿಸಿಕೊಳ್ಳುವ ಆಸೆ ಆಮಿಶಗಳಿಲ್ಲ. ಇವರ ಜೀವನ ಬಲು ಸರಳ ಚೊಕ್ಕ ಬೆಳ್ಳಿಯಂತೆ. ಇವರ ಆಡಂಬರದ ವೇಷಭೂಷಣವೆಂದರೆ ಕಿರೀಟವನ್ನು ಮೀರಿಸುವ ದೇಹರಕ್ಷಿಸುವ ಸುಲಕ್ಷಣವಾದ ಪೇಟ ತಲೆಯಲ್ಲಿ, ಶಿವನಕಂದ ಬಸವನ ಪ್ರತೀಕ ಭಸಿತ ಹಣೆಯಲ್ಲಿ, ಕೊರಳಲ್ಲಿ ರುದ್ರಾಕ್ಷಿ-ಕಾವಿಯ ಕಸೆಯಂಗಿ ಪಂಚೆ ಮುಗಿಯಿತು. ಇವರ ಊಟೋಪಚಾರ ಅಂದರೆ ಖಾಸ_ಆಡುಗೆಯಲ್ಲ ಎಲ್ಲ ಶರಣರಿಗೆ ಬಡಿಸುವ ಪ್ರಸಾದವೇ ಇವರಿಗೂ ಪ್ರಸಾದ- ಬಡವರ ಭೋಜನ. ವೇಷಭೂಷಣಗಳಲ್ಲಿ_ ಶರಣರ ಸಂಗ

(113 ನೇ ಪುಟಕ್ಕೆ ಮುಂದುವರಿಯುವುದು)

ಕಾಯಕಯೋಗಿ ಸತ್ಯವಾದಿ
ಇಂದಿನ ಯುಗದಿ ನಿನ್ನಂಥವರಿಲ್ಲ
ಧರೆಗೆ ತಂದಿದ್ದೆ ಕೈಲಾಸವನ್ನು
ಧರೆಯನೆ ಮಾಡಿದ್ದೆ ಲಿಂಗವನ್ನು ॥೩॥ ನೋಡು ಬಾ॥

ಕೂಡಲ ಸಂಗಮ ಹೇಗಾಗಿದೆ ನೋಡು
ಕಲ್ಯಾಣ ಪಟ್ಟಣ ಏನಾಗಿದೆ ಹೇಳು
ಅನುಭವ ಮಂಟಪ ಎಲ್ಲಿದೆ ತೋರು
ಯಾರಲಿ ಗೋಳು ತೋಡಲಿ ನಾನು ॥೪॥ ನೋಡು ಬಾ॥

ಮಹಾದೇವಿಯಕ್ಕನ ಅಣ್ಣ ಬಸವಣ್ಣ
ಅಲ್ಲಮ ಪ್ರಭುವಿನ ಪ್ರಾಣ ಬಸವರಸ

ಚನ್ನ ಬಸವನ ಗುರು ಬಸವರಾಜ
ಕೂಡಲ ಸಂಗನ ಶಿಶು ಬಸವೇಶಾ ॥೫॥ ನೋಡು ಬಾ॥

ಹೀಗೆ ಕೂಡಲ ಸಂಗಮ-ಅನುಭವ ಮಂಟಪಗಳು ಕೇವಲ ಊಹೆಯ ವಸ್ತುಗಳಾಗುವ ಸ್ಥಿತಿಯಲ್ಲಿರುವಾಗ ಕೂಡಲ ಸಂಗಮ ಕ್ಷೇತ್ರದಲ್ಲಿ ಇಂದು ಮತ್ತೊಮ್ಮೆ ಅನುಭವ ಮಂಟಪ, ಶರಣರ ಮೂರ್ತಿಗಳು, ಮಹಾಮನೆ, ಶರಣ ಮೇಳ, ವಿಚಾರಗೋಷ್ಠಿಗಳು ನಡೆಯುತ್ತಿರುವುದನ್ನು ನೆನೆಸಿದರೆ ೧೨ನೇ ಶತಮಾನ ಪುನರಾವರ್ತನೆಯಾಗುತ್ತಿದೆ ಎಂದು ಸಂತೋಷವಾಗುತ್ತದೆ. ೮೦೦ ವರ್ಷಗಳಿಂದ ಗುಪ್ತಗಾಮಿನಿಯಂತಿದ್ದ ಈ ವೈಭವ ಇಂದು ಕಾರಂಜಿಯಂತೆ ಪುಟಿ ಪುಟಿದು ದೇಶದಾದ್ಯಂತ ವಿಜೃಂಭಿಸುತ್ತಿರುವುದನ್ನು ನೋಡಿದರೆ ಅಪೂರ್ವ ಸಂದರ್ಭದ ಅನುಭವವಾಗುತ್ತಿದೆ.

ಈ ಎಲ್ಲ ದಿವ್ಯ ಸಾಧನೆಗೆ ಅಪ್ಪಾಜಿಯವರು-ಮಾತಾಜಿಯವರು ಕಾರಣರು. ಇಂದಿನವರು ಇದನ್ನು ಅರಿಯದಿದ್ದರೂ ಮುಂದಿನ ಪೀಳಿಗೆಯಂತೂ ಇವರನ್ನು "ದ್ವಿತೀಯ ಬಸವಣ್ಣ" "ದ್ವಿತೀಯ ಮಹಾದೇವಿಯಕ್ಕ" ಎಂದು ತಿಳಿಯುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದು ನಮ್ಮ ಸಮಾಜಕ್ಕೆ ಹೆಮ್ಮೆಯ ವಿಷಯ.

ಮಂಗ ತನ್ನ ಮರಿಯನ್ನು ತಾನು ಹಿಡಿಯುವುದಿಲ್ಲ, ಮಂಗನ ಮರಿಯೇ ಗಟ್ಟಿಯಾಗಿ ಹಿಡಿಯುತ್ತದೆ. ಆದರೆ ಬೆಕ್ಕಿನ ಮರಿಗೆ ಯಾವ ಚಿಂತೆಯೂ ಇಲ್ಲ. ಬೆಕ್ಕು ಮರಿಯನ್ನು ತನ್ನ ಬಾಯಲ್ಲಿ ಹಿಡಿದುಕೊಂಡು ತಾನೇ ರಕ್ಷಿಸುತ್ತದೆ. ಮರಿಯು ತನ್ನ ಸರ್ವಸ್ವವನ್ನು ತಾಯಿಗೆ ಬಿಟ್ಟಿರುತ್ತದೆ. ಅದರಂತೆ ಸೃಷ್ಟಿ ಕರ್ತನಾದ ಪರಮಾತ್ಮನೇ. ಈ ಮಾಯೆಯೆಂಬ ದಾಟಲಸಾಧ್ಯವಾದ ಕೆಸರಿನ ಮಧ್ಯದಲ್ಲಿ ಬಿದ್ದು ಬಳಲಿದವರಾಗಿಯೂ ದುಃಖಿತರಾಗಿಯೂ, ಜ್ಞಾನವಿಲ್ಲದವರಾಗಿಯೂ ಇರುವ ನಮ್ಮನ್ನು ಬೆಕ್ಕು ತನ್ನ ಮರಿಯನ್ನು ರಕ್ಷಿಸುವಂತೆ ರಕ್ಷಿಸು ಎಂದು ಬೇಡಿಕೊಳ್ಳುತ್ತೇನೆ.

ಪೂಜ್ಯ ಅಪ್ಪಾಜಿ ಮತ್ತು ಮಾತಾಜಿಯವರು ಹಿಡಿದ ಎಲ್ಲ ಘನ ಕಾರ್ಯಗಳು ನಿರ್ವಿಘ್ನವಾಗಿ ನಡೆದು ನಮ್ಮ ಸಮಾಜ ಹಾಗೂ ಕಲ್ಯಾಣ ರಾಜ್ಯ ಸ್ಥಾಪನೆಗೆ ಆ ಪರಮಾತ್ಮನು ಸರ್ವವಿಧದ ಶಕ್ತಿ ಆಯುರಾರೋಗ್ಯ ಭಾಗ್ಯವನ್ನು ಅವರಿಗೆ ಕರುಣಿಸಲಿ ಎಂದು ಎಲ್ಲ ಶರಣ ಬಂಧುಗಳ ಪರವಾಗಿ ಸಂಗಮ ನಾಥನಲ್ಲಿ ಬೇಡಿಕೊಳ್ಳುತ್ತೇನೆ.

Digitalized by e-Sahithya Documentation Forum
Sponsored by Sarayu Foundation Trust

ಜಂಗಮತ್ವಕ್ಕೆ ಜೀವಕೊಟ್ಟ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು

—ಡಿ. ಎಸ್. ವಿಜಯಕುಮಾರ್
ಶಿವಮೊಗ್ಗ

ಅಂದು ಧರ್ಮಗುರು ಬಸವಣ್ಣನವರು ನುಡಿದಿದ್ದರು, "ಸತ್ಯವೆಂಬುದು ಕೂರಲಗು, ಈ ಕೂರಲಗನ್ನೇ ತಳೆದುಕೊಂಡು ಗೆದ್ದರು ನೋಡಾ ನಿಮ್ಮ ಸದ್ಭಕ್ತರು" ಎಂದು. ಇದರ ಮರ್ಮವು ಮೊದಲು ನನಗರ್ಥವಾಗಲಿಲ್ಲ. 'ಸತ್ಯ'ವನ್ನು ಬಸವಣ್ಣನವರು ಹೀಗೇಕೆ ಕರೆದರು ? ಹಾಗಾದರೆ ಸತ್ಯವನ್ನು ಏಕೆ ನುಡಿಯಬೇಕು ? 'ಸತ್ಯ' ಎಂದರೇನು ? ಎಂಬೆಲ್ಲಾ ಪ್ರಶ್ನೆಗಳು ಆಗ ಮನದಲ್ಲಿ ಸುಳಿಯುತ್ತಿದ್ದವು.

ಆದರೆ ಇಂದು ಪೂಜ್ಯ ಗುರೂಜಿಯವರ ಬದುಕನ್ನು ಅವಲೋಕನ ಮಾಡಿದಾಗ ಬಸವಣ್ಣನವರ ನುಡಿ ಎಷ್ಟು ಅರ್ಥ ಪೂರ್ಣ ಎನಿಸಿತು. ಹಾಗೇ ಚಿಂತಿಸಿದಾಗ ಅಂದು ಶರಣರು "ಸತ್ಯದ ಪ್ರತಿಪಾದನೆ"ಗೆ ಪಟ್ಟ ಶ್ರಮದ ಬಗ್ಗೆ ಅರಿವಾಯಿತು.

'ಸತ್ಯ' ಎಂದರೆ ಈ ಜಗತ್ತಿನಲ್ಲಿ ಯಾವಾಗಲೂ ಇರುವಂಥಹುದು. ಅಂದರೆ ದೇವ ನಿರ್ಮಿತವಾದದ್ದು ಸತ್ಯ. ಮಾನವ ಕಲ್ಪನೆಯೇ ಮಿಥ್ಯ. ಹೀಗೆ ದೇವ ನಿರ್ಮಿತವಾದ ಈ ಜಗತ್ತಿನಲ್ಲಿ ಮಾನವನು ಕಲ್ಪನೆ ಮಾಡಿಕೊಂಡಿದ್ದನ್ನೆಲ್ಲಾ ದೇವ ನಿರ್ಮಿತವೆಂದು ಹೇಳಿ, ಇಡೀ ಮಾನವ ಕುಲಕ್ಕೇ ಮೌಢ್ಯತೆಯನ್ನು ತಂದೊಡ್ಡಿದ್ದನು. ಇಂತಹ ಮೌಢ್ಯತೆಯನ್ನು ತೊಡೆದು ಮಾನವನನ್ನು ಜ್ಞಾನದೆಡೆಗೆ ತಿರುಗಿಸಿ ಇರುವ "ಸತ್ಯ"ವನ್ನು ಜನತೆಯ ಮುಂದಿಟ್ಟರು ಗುರುಬಸವಣ್ಣನವರು. ಉದಾಹರಣೆಗೆ, ಸ್ತ್ರೀ–ಅಬಲೆ, ಮಾಯೆ, ಶೂದ್ರಳು, ಅವಳು ದೇವತ್ವಕ್ಕೆ ಅರ್ಹಳಲ್ಲ, ಧರ್ಮ ಸಂಸ್ಕಾರಕ್ಕೆ ಯೋಗ್ಯಳಲ್ಲ, ಎಂಬ ಮಾನವ ಕಲ್ಪನೆ (ಪುರೋಹಿತ ವರ್ಗದ ಕಲ್ಪನೆ) ಯನ್ನು ತೊಡೆದು ಆಕೆ ಅಬಲೆಯಲ್ಲ–ಸಬಲಳು, ಮಾಯೆಯಲ್ಲ – ಮಹಾದೇವಿ, ಆಕೆ ಪುರುಷನಿಗೆ ಸಮಾನಳು, ಧರ್ಮ ಸಂಸ್ಕಾರಕ್ಕೆ ಯೋಗ್ಯಳು ಎಂಬ 'ಸತ್ಯ'ದ ಪ್ರತಿಪಾದನೆ ಮಾಡಿದಾಗ ಪುರೋಹಿತ ಶಾಹಿಗಳಿಂದ ತೀವ್ರ ತೊಂದರೆ ಅನುಭವಿಸಬೇಕಾಯಿತು.

"ದೇವನೊಬ್ಬ ನಾಮ ಹಲವು" ಎಂದು ಸಾರಿ ಇರುವ ಒಬ್ಬನೇ ದೇವನನ್ನು ಪೂಜಿಸುವ ಮಾರ್ಗ ತೋರುವ ನುಡಿಗಳಿಗೂ ಸಹ ಬಹುದೇವತೋಪಾಸಕ ಪುರೋಹಿತರಿಂದ ತೀವ್ರ ಪ್ರತಿಭಟನೆ ಎದುರಿಸಬೇಕಾಯಿತು.

ಮಾನವರಲ್ಲಿ ಭೇದ ಮಾಡಿ 4 ವರ್ಣಗಳೆಂದು ವಿಂಗಡಿಸಿ, 'ಜಾತಿಗಳು ದೇವ ನಿರ್ಮಿತ' ಎಂದು ಹೇಳುತ್ತಾ, ಎಲ್ಲರನ್ನು ಕಡೆಗಣಿಸಿದ್ದ ಪುರೋಹಿತ ವರ್ಗವನ್ನು ಧಿಕ್ಕರಿಸಿ, "ಜಾತಿಗಳು ಮಾನವ ಕಲ್ಪಿತ, ದೇವ ನಿರ್ಮಿತವಲ್ಲ" ಎಂದು ಸಾಕ್ಷಿ, ಆಧಾರಗಳಿಂದ ಶ್ರುತ ಪಡಿಸಿ ಶರಣರು ಸತ್ಯವನ್ನು ಎತ್ತಿ ಹಿಡಿದಾಗ, ಸ್ವಾರ್ಥಿಗಳಿಂದ ತೀವ್ರ ಪ್ರತಿಭಟನೆ ಎದುರಿಸಬೇಕಾಯಿತು. ಸಾವಿರಾರು ಶರಣರ ವಧೆಗೆ ಈ ಸತ್ಯ ಪ್ರತಿಪಾದನೆ ಕಾರಣವಾಯಿತು.

ಮೂಢ ಸಂಪ್ರದಾಯದಲ್ಲಿ ಬಿದ್ದು ತೊಳಲಾಡುತ್ತಿದ್ದ ಜನತೆಯನ್ನು ಎಚ್ಚರಿಸಿ ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ ಎಂದು ಸಾರಿದ ಶರಣರು ಸಂಪ್ರದಾಯವಾದಿಗಳ ಕ್ರೂರ ದೃಷ್ಟಿ ಎದುರಿಸಬೇಕಾಯಿತು.

ಹೀಗೆ ಸತ್ಯದ ಪ್ರತಿಪಾದನೆ ಎಂದರೆ ಶಿರದ ಮೇಲೆ ತೂಗುವ ಕತ್ತಿಯಂತೆ, ಕೊರಳಿಗೆ ಹಾಕಿದ ಹಗ್ಗದ ಕುಣಿಕೆಯಂತೆ, ಆದರೇನು ? ಶರಣರು ಇದಕ್ಕೆ ಅಂಜುವವರೆ ?

"ನ್ಯಾಯ ನಿಷ್ಠುರ, ದಾಕ್ಷಿಣ್ಯಪರನು ನಾನಲ್ಲ., ಲೋಕ ವಿರೋಧಿ ಶರಣ ಆರಿಗೂ ಅಂಜುವವನಲ್ಲ"—ಎಂಬ ಗುರುಬಸವಣ್ಣನವರ ವಾಣಿಯಂತೆ, ನಿಜ ಶರಣರು ಅಂಜುವವರಲ್ಲ, ಬದಲಿಗೆ ಇನ್ನೂ ಬರಲಿ ಎಂದು ಸವಾಲು ಹಾಕಿ ಟೊಂಕ ಕಟ್ಟಿ ನಿಲ್ಲುವವರು.

ಅಂಥಾ ಶರಣರ ಪರಂಪರೆಯಲ್ಲಿ ಬಂದ ಪೂಜ್ಯ ಲಿಂಗಾನಂದ ಸ್ವಾಮೀಜಿಯವರು ಇಂದು ಈ ಜಗತ್ತಿಗೆ ಬಂದ ಉದ್ದೇಶವೇ "ಸತ್ಯದ ಪ್ರತಿಪಾದನೆಗೆ" ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ತಮ್ಮ ಬದುಕಿನುದ್ದಕ್ಕೂ ಒಂದಲ್ಲಾ ಒಂದು ರೀತಿಯ ಕ್ರಾಂತಿಯನ್ನು ಮಾಡುತ್ತಲೇ ಬರುತ್ತಿರುವ ಪೂಜ್ಯರೂ ಸಹ ವಿಪರೀತ ಕಿರುಕುಳ, ಕಷ್ಟಗಳನ್ನು ಅನುಭವಿಸಿದರೂ "ಸತ್ಯವನ್ನು ಬಿಡದ ಛಲವಂತರು". ಅವರೇ ಒಂದು ಕಡೆ ಹೇಳಿಕೊಂಡಿದ್ದಾರೆ—

"ನಾನಾ ಬಗೆಯ ಜನರನ್ನು ಕಂಡು ಬಾಳಿನ ಸಿಹಿ–ಕಹಿಗಳನ್ನು ಅನುಭವಿಸಿದ್ದೇನೆ. ಅನೇಕ ಸದ್ಭಕ್ತರ ಸಹೃದಯತೆಯಿಂದ ಭಾವ ಪುಲಕಿತನಾಗಿದ್ದೇನೆ. ಅನೇಕ ಕಣ್ಣುಗಳ ಕಾಕ ದೃಷ್ಟಿಯಿಂದ ಕಳವಳಗೊಂಡಿದ್ದೇನೆ. ಆದರೂ ನಾನು ಕೈಗೊಂಡ ಧರ್ಮಪ್ರಚಾರ ಕಾರ್ಯವನ್ನು ಏಕಾಂಗಿಯಾಗಿ ಸಾಗಿಸಿಕೊಂಡು ಬಂದಿದ್ದೇನೆ". ಎಂದು.

ಗುರು ಬಸವಣ್ಣನವರು 12ನೇ ಶತಮಾನದಲ್ಲಿ ಮಾಡಿದ ಕ್ರಾಂತಿ, ಕೈಗೊಂಡ ಕಾರ್ಯಗಳು, ಅವರ ಸಂದೇಶಗಳು, ವೈಚಾರಿಕತೆ, ನೀತಿಗಳು, ಸಿದ್ಧಾಂತ, ದೇವರ ಸ್ವರೂಪ .. ಇವುಗಳನ್ನು ತಮ್ಮ ತೀವ್ರ ಅಧ್ಯಯನದಿಂದ, ಅನುಭವ ಮಂಥನದಿಂದ ಕಂಡ ಈ ಯುಗದ ಮೊದಲ ವ್ಯಕ್ತಿಯೆಂದರೆ ಪೂಜ್ಯ ಗುರೂಜಿಯವರು.

Digitalized by e-Sahithya Documentation Forum
Sponsored by Sarayu Foundation Trust

"ವಚನ ಸಾಹಿತ್ಯ ಬಸವ ಧರ್ಮದ ಜೀವಾಳ. ಬಸವ ಧರ್ಮವನ್ನು ಮತ್ತೆ ಎತ್ತಿ ಹಿಡಿಯಬೇಕು. ಇಂದು ಮತ್ತು ಮುಂದೆ ಈ ಧರ್ಮದಿಂದ ಮಾತ್ರ ವಿಶ್ವ ಕುಟುಂಬತ್ವ ಸಾಧ್ಯ, ಅಷ್ಟೇ ಅಲ್ಲದೆ, ವಿಶ್ವದ ವೈಚಾರಿಕ ಧರ್ಮ ಸಹ ದೇವನನ್ನು ಕಾಣುವ ಹಂಬಲವಿದ್ದವರಿಗೆ ಅತ್ಯಂತ ಸುಲಭ ಮಾರ್ಗ ತೋರುವ ಧರ್ಮ. ಇದು ನಶಿಸಿದರೆ ವಿಶ್ವದ ಅಧೋಗತಿ, ನಾಶ ಖಂಡಿತ"—ಎಂದು ಅರಿತ ಪೂಜ್ಯ ಗುರೂಜಿಯವರು ತಾವು ಅಧ್ಯಯನ ಮಾಡಿ ಜೀರ್ಣಿಸಿಕೊಂಡ ಅನುಭಾವದ ಸಿರಿಯನ್ನು ಜನರ ಮುಂದೆ ಇಡಲು ಪ್ರತಿಜ್ಞೆ ಮಾಡಿದರು.

"ಮರ್ತ್ಯದ ಮಣಿಹವ ಪೂರೈಸಲು ಶರಣರ ಅಮರ ವಚನಗಳನ್ನು ತಲೆಯ ಮೇಲಿಟ್ಟು ಹೊತ್ತುಕೊಂಡು ಜನಮನದಲ್ಲಿ ಬಿತ್ತರಿಸುವುದು ನಾನು ಕೈಗೊಂಡ ಒಂದು ಪವಿತ್ರ ಕಾಯಕ".

ಹೀಗೆ ಪ್ರತಿಜ್ಞೆ ಹೊತ್ತು ಬಸವ ಧರ್ಮವನ್ನು ಮತ್ತೆ ಪುನರುತ್ಥಾನಗೊಳಿಸಿದ ಕೀರ್ತಿ ಪೂಜ್ಯ ಲಿಂಗಾನಂದ ಸ್ವಾಮೀಜಿಯವರದು,

ಅದುವರೆಗೆ ಕೇವಲ ಕವಿಗಳಿಗೆ, ಕಾವ್ಯಮಯವಾಗಿ ಬರೆಯಲು, ಕವಿತ್ವದ ಬಗ್ಗೆ ಮಾತನಾಡಲು ವಸ್ತುವಾಗಿದ್ದ ವಚನ ಸಾಹಿತ್ಯ, ಲಿಂಗವಂತ ಧರ್ಮದ 'ತಾಯಿ' ಅರ್ಥಾತ್ ಧರ್ಮಶಾಸ್ತ್ರವಾದದ್ದು ಪೂಜ್ಯ ಲಿಂಗಾನಂದ ಸ್ವಾಮೀಜಿಯವರ ಸಾಹಸದಿಂದ ಎಂದರೆ ಅತಿಶಯೋಕ್ತಿಯಲ್ಲ.

ಇಂಥ ಅಮೂಲ್ಯವಾದ ವಚನ ಸಾಹಿತ್ಯದ ಸಾರವನ್ನು ಜನತೆಯಲ್ಲಿ ಬಿತ್ತಲು ಒಂದು ಮಾರ್ಗವನ್ನು ರೂಪಿಸಿದರು ಪೂಜ್ಯರು. ಕಾರಣ—ವಚನಗಳನ್ನು ಹೇಳಬಹುದು, ಅದರ ಅರ್ಥವನ್ನು ಬಿಡಿಸಬಹುದು. ಉತ್ಸಾಹದಿಂದ ಗಂಟೆಗಟ್ಟಲೆ ವಿಷಯ ನಿರೂಪಿಸಬಹುದು, ಆದರೆ ಅದನ್ನು ಕೇಳುವ ತಾಳ್ಮೆ ಬೇಕಲ್ಲ ಜನರಲ್ಲಿ? ಆದ್ದರಿಂದ ಪೂಜ್ಯರು ಜನರ ಮನೋಗುಣವನ್ನು ಚಿಂತಿಸಿ, ಕಥೆ, ನೇರ ಮಾತು, ತತ್ವಗಳು, ದೃಷ್ಟಾಂತ ಹೀಗೆ ಈ ಎಲ್ಲವನ್ನೂ ಒಳಗೊಂಡ 'ಪ್ರವಚನ'ವೆಂಬ ನೂತನ ವಿಧಾನವನ್ನು ಬಳಕೆಗೆ ತಂದು ಎಲ್ಲರನ್ನೂ ಆಕರ್ಷಿಸಿದರು.

ಇವರ ವ್ಯಕ್ತಿತ್ವ ಎಲ್ಲರನ್ನೂ ಸೆಳೆಯುವಂಥದ್ದು. ತಮ್ಮ ಎತ್ತರವಾದ ನಿಲುವು, ಜ್ಞಾನದ ಕಾಂತಿ ತುಂಬಿ ತುಳುಕುವ ಹಾಗು ಸದಾ ಮುಗುಳ್ನಗುತ್ತಿರುವ ಮುಖ, ಸದಾ ಕ್ರಾಂತಿಯನ್ನು ಮಾಡುವ ಉತ್ಸಾಹದ ದಿಟ್ಟತನದ ಭಾವ, ನೋಡುತ್ತಲೇ ತೋರುವುದು. ಪ್ರವಚನವನ್ನು ಹುಟ್ಟು ಹಾಕಿದ ಪೂಜ್ಯರು ತಮ್ಮ ಜ್ಞಾನಶಕ್ತಿ ಮತ್ತು ವಾಕ್ ಶಕ್ತಿಯಿಂದ ಚಿಕ್ಕವರಲ್ಲಿ ನೀತಿ ತುಂಬಿ, ಯುವಕ-ಯುವತಿಯರಲ್ಲಿ ಧರ್ಮದ ಬಿಸಿರಕ್ತ ತುಂಬಿ, ಮುಮುಕ್ಷುಗಳಿಗೆ ದೇವನ ಸ್ವರೂಪ ವಿವರಿಸಿ, ತತ್ವಜ್ಞಾನ ತುಂಬಿ ಅದನ್ನು ತಿಳಿಸಲು ದೃಷ್ಟಾಂತ ಹೇಳುತ್ತಾ. ವಯಸ್ಸಾದ ಅಜ್ಜ ಅಜ್ಜಿಯರಿಗೆ ಅಜ್ಜ–ಅಜ್ಜಿಯಂದಿರೇ ನೀವು ದೂರ ಕೂಡ್ರಿ...ನಿಮ್ದು ಎಲ್ಲಾ ಆಗ್ಲೇ ಮು

ಇನ್ನು ಯುವಕ್ರನ್ನ, ಮಕ್ಳನ್ನ ಮುಂದಕ್ಕೆ ಬಿಡ್ರಿ !" ಎಂದು ಹಾಸ್ಯಗೈಯುತ್ತ ಕ್ಷಣ ಮಾತ್ರದಲ್ಲಿ ತಮ್ಮ ನಿರರ್ಗಳ ಪ್ರವಚನವೆಂಬ ಮಂತ್ರದಂಡದಿಂದ ಎಲ್ಲರನ್ನೂ ಸಮ್ಮೋಹನಗೊಳಿಸಿ, 2-3 ಗಂಟೆಗಳವರೆಗೆ ಅವರು ಅತ್ತಿತ್ತ ಹರಿದಾಡದಂತೆ, ತದೇಕ ಚಿತ್ತರಾಗಿ ಕೇಳುವ ಹಾಗೆ ಮಾಡುವ ಗಾರುಡಿಗರು ಪೂಜ್ಯ ಗುರೂಜಿಯವರು.

ಆದ್ದರಿಂದಲೇ ಅವರನ್ನು ಜನ ಸಮೂಹ "ಪ್ರವಚನ ಪಿತಾಮಹ" ಎಂದು ಹೊಗಳಿ ಗೌರವಿಸಿದುದು. ಅವರ ಪ್ರವಚನವೆಂಬ "ಟ್ರೇನ್"ನಲ್ಲಿ ಕುಳಿತರೆ ಅದು Humanity ಯಿಂದ Divinity ಗೆ ಕರೆದೊಯ್ಯುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಪ್ರವಚನಕ್ಕೆ 'ಹೊಸ ಆಯಾಮ' ಕೊಟ್ಟವರು ಪೂಜ್ಯ ಗುರೂಜಿಯವರು.

ಅಂದು ಗುರು ಬಸವಣ್ಣನವರು ರೂಪಿಸಿದ ಜಂಗಮ ತತ್ವ ಇಂದು ಸಮಾಜದಲ್ಲಿ ಬಹುಪಾಲು ಮಠಾಧೀಶರಲ್ಲೂ ಕಾಣದುದು ದುರ್ದೈವ. ಧರ್ಮಗುರು ಬಸವಣ್ಣ ಕೊಟ್ಟ ತತ್ವವನ್ನು ಕಿಂಚಿತ್ತೂ ಅರ್ಥ ಮಾಡಿಕೊಳ್ಳದೇ ಊಟಕ್ಕೆ ಉಪ್ಪಿನಕಾಯಿ ತರಹ ತಮ್ಮ ಭಾಷಣದಲ್ಲಿ ವಚನಗಳನ್ನು ಉದಾಹರಿಸುವರೇ ವಿನಾ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಇಚ್ಛಿಸುವುದಿಲ್ಲವೆಂಬುದು ಸತ್ಯವಾದ ನುಡಿ. ಬಸವಾದಿ ಪ್ರಮಥರನ್ನೂ ವಚನ ಸಾಹಿತ್ಯವನ್ನೂ ಮೂಲೆ ಗುಂಪು ಮಾಡಿ. ತಮ್ಮ ಸ್ವಾರ್ಥಕ್ಕಾಗಿ ಜನತೆಯನ್ನು ಅತ್ತ ಕಡೆ ತಿರುಗಲು ಬಿಡದೇ. ತಮ್ಮ ಮಠ, ಆ ಮಠದ ಆಗು ಹೋಗು, ಅವರ ಅಭಿವೃದ್ಧಿ, ಜನರ ಕಾಣಿಕೆ, ಸ್ವಂತ ಪ್ರತಿಷ್ಠೆ, ಹೀಗೆ ಹಲವಾರು ಚಿಂತೆ ಮಾಡುತ್ತಾ "ಮಠ ಸಂಸಾರ" ಸಾಗಿಸುವ 'ಜಂಗಮರು' ಎನಿಸಿಕೊಂಡವರಿಗೆ. ಪೂಜ್ಯ ಗುರೂಜಿಯವರ ವಿದ್ವತ್ ಪೂರ್ಣ ಪ್ರವಚನ, ಜ್ಞಾನ, ಅವರ ಆದರ್ಶ ಬದುಕು, ಪರಿಪೂರ್ಣ ಜೀವನ, ಬಸವ ತತ್ವವನ್ನು ದಿಟ್ಟತನದಿಂದ ನೇರವಾದ ನುಡಿಗಳಿಂದ ಪ್ರಚಾರ ಮಾಡುವ ವಿಧಾನ, ಧರ್ಮ ಪ್ರಚಾರಕ್ಕಾಗಿ ತ್ಯಾಗ ಮಾಡುವ ಅವರ ಧೀಮಂತ ವ್ಯಕ್ತಿತ್ವ–ಒಂದು ಕೊಡಲಿ ಪೆಟ್ಟು. ಬಸವಣ್ಣನವರು ಬೋಧಿಸಿದ ಜಂಗಮ ತತ್ವವು ಅಂದಿನಿಂದ ಹಂತ ಹಂತವಾಗಿ ನಶಿಸುತ್ತಾ ಇಂದು ಪೂರ್ಣವಾಗಿ ನಶಿಸಿದಾಗ ಮತ್ತೆ ಅದನ್ನು ಪುನರುತ್ಥಾನಿಸಲಿಕ್ಕೋಸ್ಕರವೇ ಎಂಬಂತೆ ಬಂದವರು ಪೂಜ್ಯಗುರೂಜಿಯವರು ಎಂದರೆ ಅತಿಶಯೋಕ್ತಿಯಲ್ಲ.

ಪೂಜ್ಯ ಗುರೂಜಿಯವರ ಪ್ರಕಾರ ಜಂಗಮನೆಂದರೆ 'ಧರ್ಮ ಪ್ರಚಾರಕ', 'ತನ್ನನ್ನು ತಾನು ಅರಿತವನು ಜಂಗಮ', 'ಜಂಗಮ ಜ್ಞಾನ ದೇಗುಲ, ನಡೆಲಿಂಗ' ಜಂಗಮನ ಜೀವನ ತೆರೆದಿಟ್ಟ ಪುಸ್ತಕದಂತೆ. ಭಕ್ತರು ಅವನ ನುಡಿಗಿಂತ ಅವನ ನಡೆಯನ್ನು, ಆಚಾರವನ್ನೂ ಗ್ರಹಿಸಿ ತನ್ನನ್ನು ತಿದ್ದಿಕೊಳ್ಳುವಂತೆ ಇರಬೇಕು ಅವನ (ಜಂಗಮನ) ವ್ಯಕ್ತಿತ್ವ. ಏಕೆಂದರೆ ಜಂಗಮನ ಮೊದಲ ಲಕ್ಷಣವೇ ಸದಾಚಾರ. ಚೆನ್ನಬಸವಣ್ಣ ಹೇಳುವಂತೆ 'ತುರುಬಾಗಲಿ, ಜಡೆಯಾಗಲಿ, ಬೋಳಾಗಲಿ, ಅರಿವು ಆಚಾರವುಳ್ಳಡೆ ಆತನೇ ಜಂಗಮನು', ಅವರೇ ಮತ್ತೊಂದು ಕಡೆ ಹೇಳುತ್ತಾರೆ— ಜಟೆಕಟ್ಟಿ ಕಾವಿ ಧರಿಸಿದವನು ಜಂಗಮನೆ? ಮೈ ತುಂಬ ವಿಭೂತಿ ಧರಿಸಿದವನು

Digitalized by e-Sahithya Documentation Forum
Sponsored by Sarayu Foundation Trust

ರುದ್ರಾಕ್ಷಿ ಹಾಕಿದವನು ಜಂಗಮನೆ? ಅಲ್ಲ, "ಜಂಗಮನು ಸಾಕಾರದಲ್ಲಿ ಸನ್ಮತ, ನಿರಾಕಾರದಲ್ಲಿ ನಿರುತ, ಪರಮಾರ್ಥದಲ್ಲಿ ಪರಿಣಾಮಿಯು", ಎಂದು.

ಪೂಜ್ಯ ಗುರೂಜಿಯವರ ನಡೆ–ನುಡಿ, ಆಚಾರ-ವಿಚಾರಗಳನ್ನು ಗಮನಿಸಿದರೆ 'ನಿಜ ಜಂಗಮನ' ಸ್ವರೂಪದ ಅರಿವಾಗುವುದು. ಸದಾ ಜ್ಞಾನ ಗಂಗೆಯನ್ನು ಶಿರದಲ್ಲಿ ಹೊತ್ತು ನಿಂತಲ್ಲಿ ನಿಲ್ಲದೇ ಹರಿಯುವ ಸಂಚಾರ; ಮುಗ್ಧ ಜನರಲ್ಲಿರುವ ಕಲ್ಮಶವನ್ನು ಕಳೆಯುವ ವಿಧಾನ, ಅವರು ನೀಡುವ ಮಾರ್ಗದರ್ಶನ ಅಪೂರ್ವವಾದವು, ಅವರ ಸರಳ ಸಾತ್ವಿಕ ಬದುಕು, ನಡೆ, ಶರಣರು ತೋರಿದ 'ಜಂಗಮತ್ವ'ವನ್ನು ಮತ್ತೆ ಕಾಣುವ ದರ್ಪಣವಾಗಿದೆ. ಇಂದು ಸದಾಚಾರವನ್ನು ಜಂಗಮನು ಅಳವಡಿಸಿಕೊಂಡು ಹೇಗಿರಬೇಕು ಎಂಬುದನ್ನು ತಮ್ಮ ಜೀವನದಲ್ಲಿ ಪೂಜ್ಯರು ಆಚರಿಸಿ ತೋರುತ್ತಿದ್ದಾರೆ.

ಗುರುಬಸವಣ್ಣನವರು ಹೇಳುವಂತೆ,

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆಹತ್ತಿ ಉರಿದಡೆ ನಿಲಬಹುದೆ?
ಏರಿ ನೀರುಂಬೊಡೆ, ಬೇಲಿ ಹೊಲವ ಮೇವಡೆ, ನಾರಿ ತನ್ನ ಮನೆಯಲ್ಲಿ
ಕಳುವೊಡೆ ಇನ್ನಾರಿಗೆ ದೂರುವೆನಯ್ಯಾ ಕೂಡಲ ಸಂಗಮ ದೇವಾ?

ಎಂಬಂತೆ, ಧರ್ಮ ಪ್ರಚಾರಕ್ಕೆಂದೇ ಯೋಜಿಸಲ್ಪಟ್ಟ ಜಂಗಮರೇ ಜ್ಞಾನಿಯಾಗದಿದ್ದರೆ, ಡಂಭಾಚಾರಿಗಳಾಗಿದ್ದರೆ, ಬಹುದೇವತೋಪಾಸಕರಾಗಿದ್ದರೆ, ಜನರನ್ನು ಅಡ್ಡದಾರಿಗೆಳೆಯುತ್ತಿದ್ದರೆ, ತತ್ತ್ವಭ್ರಷ್ಟರಾಗಿದ್ದರೆ, ಯಾರನ್ನು ದೂರುವುದು?

ಇಂದು ಕೇವಲ ಕಾವೀ ಧರಿಸಿ, ಮುಗ್ಧ ಜನರಿಂದ ಪಾದ ತೊಳೆಸಿಕೊಳ್ಳುವ, ಜಾತಿಯಿಂದ ಶ್ರೇಷ್ಟರೆಂದು ಜಂಗಮರೆಂದು ಭಾವಿಸಿಕೊಂಡವರಿಗೆ ಪೂಜ್ಯ ಗುರೂಜಿಯವರು ಮಾರ್ಮಿಕವಾಗಿ ಹೇಳುತ್ತಿರುತ್ತಾರೆ— ಅರಿವೆ (ಕಾವಿ) ತೊಟ್ಟಾತ ಜಂಗಮನಲ್ಲ; ಅರಿವು ತೊಟ್ಟಾತ ಜಂಗಮ' ಎಂದು. "ಕಾವಿ ತ್ಯಾಗದ ಗುರುತು. ಈ ತ್ಯಾಗದ ಲಾಂಛನ ಹಾಕಿದ ಮಾತ್ರಕ್ಕೇ ವ್ಯಕ್ತಿ ತ್ಯಾಗಿಯಾಗನು. ಆದರೆ ತ್ಯಾಗಿ ಆದವನಿಗೆ ಈ ಲಾಂಛನ ಮೆರುಗು ಕೊಡುತ್ತದೆ, ಲಾಂಛನಕ್ಕೂ ಅರ್ಥ ಬರುತ್ತದೆ.' ಅವರ ಒಂದೊಂದು ನುಡಿಗಳೂ ಸತ್ಯದ ನುಡಿಗಳು, ಶ್ರೇಷ್ಠ ನುಡಿಗಳು ಅವರು ಹಾಸ್ಯವಾಗಿ ಪ್ರವಚನದಲ್ಲಿ ಹೇಳುತ್ತಿರುತ್ತಾರೆ—"ಮೊದಲು ಸ್ವಾಮಿಯಾಗಿ, ವಿರಕ್ತಿ ಹೊಂದಿ,– ಆನಂತರ ಕಾವಿ ಧರಿಸಿ." ಎಂದು.

ಕಾವಿ ಎಂದರೆ, ಸನ್ಯಾಸ ಎಂದರೆ ಮೂಗು ಮುರಿಯುತ್ತಿರುವ ಈ ಕಾಲದಲ್ಲಿ ಇಂದು ಪೂಜ್ಯ ಗುರೂಜಿಯವರು ಕಾವಿ ಧರಿಸಿದ್ದರಿಂದ, ಕಾವಿ ಬಟ್ಟೆಗೆ ಮತ್ತೆ ಬೆಲೆ ಬಂದಿದೆ. ಅದು ತ್ಯಾಗದ ಸಂಕೇತ ಎಂದೂ ಮತ್ತೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಅಷ್ಟೇ ಅಲ್ಲ ಅವರ ಜ್ಞಾನಯುತ ಪ್ರವಚನದಿಂದ, ಅವರ ವ್ಯಕ್ತಿತ್ವದಿಂದ ಇಂದು **'ಲಿಂಗವಂತ ಮಠಾಧೀಶರಿಗೂ ಬೆಲೆ ಬಂದಿದೆ'** ಎಂಬುದು ಸತ್ಯವಾದ ಮಾತು.

ಪೂಜ್ಯ ಗುರೂಜಿಯವರು ಹೇಳುವ ಜಂಗಮತ್ವ ಎಷ್ಟು ನಿಷ್ಕಳಂಕ ಎಂದರೆ, ಅವರು ಹೇಳುತ್ತಾರೆ.......

"ಜಂಗಮ ಲಾಂಛನವು ದೇಶದ ಸಾಂಸ್ಕೃತಿಕ ಪರಂಪರೆ, ತ್ಯಾಗದ ಸಂಕೇತ. ಮಠ, ಮಂದಿರಗಳು ಶ್ರದ್ಧಾ ಕೇಂದ್ರಗಳು. ಅವು ಧರ್ಮ-ಸಂಸ್ಕೃತಿಗಳ ರಕ್ಷಣೆಯ ಆಧಾರ ಸ್ಥಂಭಗಳಾಗಬೇಕೇ ವಿನಾ ಧರ್ಮ ಶ್ರದ್ಧೆಯನ್ನು ವಿಚ್ಛಿದ್ರಗೊಳಿಸುವ ಆಟಂಬಾಂಬುಗಳಲ್ಲ, ಇದನ್ನು ಜಂಗಮರು, ಇದು ತಮ್ಮ ಹೊಣೆ ಎಂಬುದನ್ನು ಅರಿಯಬೇಕು".

ಒಟ್ಟಿನಲ್ಲಿ ಬಸವ ಧರ್ಮಕ್ಕೆ ತಮ್ಮನ್ನು ಮುಡುಪಿಟ್ಟ ಮಹಾನ್ ತ್ಯಾಗ ಜೀವಿ ಪೂಜ್ಯ ಗುರೂಜಿಯವರು, ದೇಹದ ಗುಣಗಳನ್ನು ಅಳಿದು ದೈವೀ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂಬುದು ಅವರ ಜೀವನದಿಂದ ಕಲಿಯಬೇಕಾದ ಪಾಠ. ಭವರೋಗಿ ಶಿವಯೋಗಿಯಾಗಬೇಕಾದರೆ ಮೊದಲು ದೇಹದ ವ್ಯಾಮೋಹವನ್ನು ದೂರ ಮಾಡಬೇಕು.. ಇದು ಶರಣರ ನುಡಿ, ಪೂಜ್ಯರ ನಡೆ.

ಪೂಜ್ಯ ಗುರೂಜಿಯವರು ನುಡಿವಂತೆ, 'ಸದಾಕಾಲ ದೇವನ, ಗುರುವಿನ ವಿಷಯದಲ್ಲಿ ಶ್ರದ್ಧೆ, ಭಕ್ತಿ ತುಂಬಿ, ಆತ್ಮ ಬಲ ಪಡೆದುಕೊಂಡು ತಮ್ಮ ಬದುಕನ್ನು ದೈವೀಮಯ ಮಾಡಿ, ಆಗ ಹೊರ ಹೊಮ್ಮುವ ಅನುಭಾವದಿಂದ ಜನರನ್ನು ತಿದ್ದುವ ಕಾರ್ಯ ಮಾಡುವವನು ಜಂಗಮ. ತನ್ನ ಚಿಂತನ ಶಕ್ತಿಯನ್ನು ವೃದ್ಧಿ ಗೊಳಿಸಿ, ನಿರಾಕಾರದ ಚಿಂತನೆಯತ್ತ ಸಾಗಿ ಅರಿವು ಗಳಿಸಿ ಕೊಂಡಾತ ಜಂಗಮ' ಅಷ್ಟೇ ಅಲ್ಲದೆ "ಆಚಾರದಲ್ಲಿ ನಿಷ್ಠೆ, ವಿಚಾರದಲ್ಲಿ ಪಟುತ್ವವಿದ್ದರೂ, ಆಧ್ಯಾತ್ಮ ಜೀವನದಲ್ಲಿ ಪರಿಣಾಮ, ಸಂತೃಪ್ತಿ–ಇವು ಇಲ್ಲದಿದ್ದರೆ ಅವನು ಜಂಗಮನಲ್ಲ." ಎಂದು ಘೋಷಿಸಿ. ಆಧ್ಯಾತ್ಮದಲ್ಲಿ ಇವುಗಳನ್ನು ಶೃಂಗರಿಸಿಕೊಂಡವ ಜಂಗಮ ಎಂಬುದನ್ನು ತೋರಿಸಿಕೊಟ್ಟರು.

ಶರಣರ ವಚನಗಳಲ್ಲಿ ಬರುವಂತೆ ಧರ್ಮದ ತತ್ವಗಳನ್ನು ಬೋಧಿಸಲು ಮತ್ತು ಅದರಂತೆ ಆಚರಿಸಲು ತನ್ನ ಪ್ರಾಣವನ್ನೇ ಒತ್ತೆ ಇಡುವಾತ 'ಜಂಗಮ'ನು. ಪೂಜ್ಯ ಗುರೂಜಿಯವರು ನಿರ್ಭೀತ ಪ್ರವಚನಕಾರರು. ಧರ್ಮ ತತ್ವದಲ್ಲಿ ಅವರಲ್ಲಿರುವ ಶ್ರದ್ಧೆ, ನಿಷ್ಠೆ, ಆತ್ಮ ಸ್ಥೈರ್ಯ ಅಪೂರ್ವವಾದುದು. ಇಂದು ಬಹಳಷ್ಟು ಮಠಾಧೀಶರು ಬಸವ ಧರ್ಮದಲ್ಲಿರುವ ಅತಿ ಮುಖ್ಯ ವಿಷಯಗಳಾದ ಏಕದೇವೋಪಾಸನೆ, ಲಿಂಗವಂತ ಸಂಪ್ರದಾಯ, ಅತಿವರ್ಣಾಶ್ರಮ, ಸಮಾನತೆ, ಇಂಥವುಗಳನ್ನು ಮರೆಮಾಡಿ ಮಾತನಾಡುವರು. ಈ ಬಗ್ಗೆ ಮಾತನಾಡಿದರೆ ಎಲ್ಲರಿಂದ ಮಾನ್ಯತೆ, ಕೀರ್ತಿ ಸಿಗದು ಎಂಬುದು ಒಂದು ಅಭಿಪ್ರಾಯವಾದರೆ, ಅವರಲ್ಲಿರುವ ಅಂಜುಬುರುಕುತನ ಎರಡನೆಯದು. ಇನ್ನು ಕೆಲವರದು ಒಂದು ರೀತಿಯ ಜಾಣತನ. ಲಿಂಗವಂತರು ಕರೆದರೆ ಅಲ್ಲಿ ಬಸವ ತತ್ವ, ಮತ್ತೊಂದು ಧರ್ಮದವರು, ಅಥವಾ

Digitalized by e-Sahithya Documentation Forum
Sponsored by Sarayu Foundation Trust

ಇನ್ನಾವುದೇ ಇತರೆ ಸಂಘಗಳು ಕರೆದರೆ ಅಲ್ಲಿ, ಅವರು ಅಂಟಿಕೊಂಡಿರುವ ತತ್ವಕ್ಕೆ ಪುಷ್ಟಿ ಕೊಡುವರು. ಒಟ್ಟಿನಲ್ಲಿ ಮಾತಿಗೊಂದು ವೇದಿಕೆ ಸಿಕ್ಕರೆ ಸಾಕು ಮತ್ತು ಕೀರ್ತಿ ಬರಬೇಕು. ಇದು ಅವರ ಪಾಲನೆ.

ಆದರೆ ಪೂಜ್ಯರದು ದಿಟ್ಟ ನಿಲುವು, ಸತ್ಯದ ಮಾತು, ಎಂತಹ ಪ್ರಸಂಗ ಬಂದರೂ ತತ್ವ ಬಿಡುವವರಲ್ಲ, ಅಥವಾ ಕೀರ್ತಿಗಾಗಿ ಹಣಕ್ಕಾಗಿ ತಮ್ಮ ವ್ಯಕ್ತಿತ್ವ ಹಾಗೂ ಬಸವ ಧರ್ಮವನ್ನು ಮಾರುವವರಲ್ಲ. ಅವರ ನೇರ ನುಡಿಗಳು ಯಾವಾಗಲೂ ಶೋಷಣೆ, ಸತ್ತ ಸಂಪ್ರದಾಯ, ಬಹುದೇವೋಪಾಸನೆ ವಿರುದ್ಧ. ಅವರ ತೀಕ್ಷ್ಣ ನುಡಿ ತತ್ವನಿಷ್ಠೆ ಎಷ್ಟೆಂದರೆ.. ಅವರೆದುರು ಯಾರಾದರೂ ಭಾಷಣ ಕಾರರು ಭಾಷಣ ಮಾಡುವಾಗ ತತ್ವಕ್ಕೆ ವಿರುದ್ಧವಾಗಿ, ಧರ್ಮ ವಿರುದ್ಧವಾಗಿ ಮಾತ ನಾಡಿದರೆ ಅವರನ್ನು ಅಲ್ಲೇ ಖಂಡಿಸಿ, ಸರಿಯಾದ ತತ್ವವನ್ನು ಹೇಳುವರು. "ಅವರು ಮತ್ತೆ ನಮ್ಮ ಕೈಗೆ ಸಿಗುವವರಲ್ಲ ಹೀಗೆ ಸ್ಟೇಜಿನ ಮೇಲೇ ಹೇಳಿದರೆ ಮತ್ತೆ ಅವರು ತಪ್ಪು ಮಾಡುವುದಿಲ್ಲ" ಉಪದೇಶ ಮಾಡುವಾಗ ಕೆಲವೊಮ್ಮೆ ಮಂತ್ರ ವೈದ್ಯರಿದ್ದಂತೆ ಮತ್ತೆ ಕೆಲವೊಮ್ಮೆ ಶಸ್ತ್ರವೈದ್ಯರಿದ್ದಂತೆ...ಇನ್ನು ಅವರ ಕಾಯಕವಂತೂ ಜನರ ಅಜ್ಞಾನ ತುಂಬಿದ ಮನವನ್ನು, ಮನದ ಮಲಿನತೆಯನ್ನೂ ಪ್ರವಚನವೆಂಬ ನೀರಿನಿಂದ ಶುಭ್ರ ಮಾಡುವ ಮಡಿವಾಳನ ಕಾಯಕದಂತೆ. "ಕೂಡಲ ಸಂಗನ ಶರಣ ರಾಜ ತೇಜ ದಲ್ಲಿಪ್ಪನಾಗಿ ಆರಿಗೂ ಅಂಜನು"—ಎಂಬ ಗುರು ಬಸವಣ್ಣನವರ ವಾಣಿಯಂತೆ, ತಾವು ಮಾಡಬೇಕೆಂದು ಹಮ್ಮಿಕೊಂಡ 'ಜಂಗಮದ' ಕಾರ್ಯಗಳನ್ನು ಎಂದೂ ಇತರರಿಗೆ ಅಂಜಿ ಬಿಟ್ಟವರಲ್ಲ. ಇದಕ್ಕೆ "ಮಹಿಳಾ ಜಗದ್ಗುರು ಪೀಠ" ಸ್ಥಾಪನೆ, ಹಾಗೂ ಪ್ರತಿ ವರ್ಷದ ಬೃಹತ್ ಶರಣ ಮೇಳಗಳು ನಿದರ್ಶನಗಳು.

ಶಿವಯೋಗಿ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ "ಗುಣವ ನೋಡದೇ ಹೊಗಳುವ ಜಂಗಮವು ಬ್ರಹ್ಮನ ಸಂತತಿ, ಕಾಡಿ ಬೇಡುವ ಜಂಗಮವು ನಾರಾಯಣ ಸಂತತಿ,ವ್ಯಾಪಾರಿಕ ಜಂಗಮವು ಈಶ್ವರನ ಸಂತತಿ" ಎಂಬ ವ್ಯಂಗ್ಯ ನುಡಿಯು ಇಂದಿನ ಬಹುತೇಕ ಜಂಗಮರಿಗೆ ಬುದ್ಧಿ ಹೇಳುತ್ತದೆ.

ಅನೇಕರು ಭಕ್ತರನ್ನು ಹೊಗಳಿ ಹಣ ಕೇಳುವುದು, ಕೊಡದಿದ್ದರೆ ಕಾಡುವುದು ಹಾಗೂ ಕೊಡದಿದ್ದರೆ ಬೆದರಿಕೆಹಾಕಿಯಾದರೂ ಹಣ ವಸೂಲಿ ಮಾಡುವುದನ್ನು ನಡೆಸಿರುತ್ತಾರೆ. ಆದರೆ ಪೂಜ್ಯ ಗುರೂಜಿಯವರ ನಿಲುವೇ ಬೇರೆ. ಅವರ ನಿಲುವು ಇಂದು-ನಿನ್ನೆಯದಲ್ಲ, 12ನೇ ಶತಮಾನದ ಜಂಗಮನ ನಿಲುವು "ಚಿತ್ತದಲ್ಲಿ ನಿರಪೇಕ್ಷೆ ಇದು ಜಂಗಮನ ನಿಲುವು—ಗುರೂಜಿಯವರ ನಿಲುವು". ಹಣಕ್ಕಾಗಿ ಯಾರನ್ನೂ ಹೊಗಳದೆ, ಕಾಡದೇ, ಬೇಡದೆ, ಬಲತ್ಕಾರವಿಲ್ಲದೆ—ಜನರಲ್ಲಿ ಭಕ್ತಿ ತುಂಬಿ, ಜ್ಞಾನ ತುಂಬಿ, ಅನುಭಾವ ಹೊಮ್ಮಿಸಿ. ಹೃದಯ ಅರಳಿಸಿ, ಅವರು ಕೊಟ್ಟರೆ ಕಾಣಿಕೆಯನ್ನು ಧರ್ಮ ಕಾರ್ಯಕ್ಕೆ ಕೊಂಡು, ಕೊಡದಿದ್ದರೆ, ಅಲ್ಲಿ ಹತ್ತೇ ಜನರಿದ್ದರೂ ಸರಿಯೇ

ತಮ್ಮ ಪ್ರವಚನ ಕಾಯಕವನ್ನು ಪೂರೈಸಿ, ತಮ್ಮ ಜಂಗಮತ್ವವನ್ನು ಉಳಿಸಿ, ಬೆಳೆಸಿ, ಬೇರೆಯವರಿಗೆ ಜಂಗಮ ತತ್ವದ ಮಾರ್ಗದರ್ಶಿಗಳಾಗಿದ್ದಾರೆ ಪೂಜ್ಯ ಗುರೂಜಿಯವರು.

ಪೂಜ್ಯ ಗುರೂಜಿಯವರು ಮಹಾನ್ ಕಾಯಕ ಯೋಗಿಗಳು

"ಕಾಯಕ ಮಾಡದ ಯಾವ ವ್ಯಕ್ತಿಗೂ ಉಣ್ಣುವ ಹಕ್ಕಿಲ್ಲ" ಎಂಬ ಗುರುಬಸವಣ್ಣ ನವರ ವಾಣಿಯನ್ನು ಪ್ರತಿಪಾದಿಸಿ, ಪರಿಪಾಲಿಸಿ ತೋರಿದವರು ಪೂಜ್ಯ ಗುರೂಜಿ ಯವರು. ಲಕ್ಷ ಲಕ್ಷ ಜನತೆಗೆ ಉಪಯೋಗಕರವಾದ "ಪ್ರವಚನ" ಎಂಬ ಮಹಾನ್ ಕಾಯಕವನ್ನು ಕೈಗೊಂಡ ಪೂಜ್ಯರು ತಮ್ಮ ಜೀವನವನ್ನೇ ಈ ಜಂಗಮ ಕಾಯಕಕ್ಕಾಗಿ ಮುಡಿಪಿಟ್ಟ ತ್ಯಾಗಿಗಳು. ಬಸವ ಧರ್ಮವನ್ನು ಪುನರ್ರೂಪಿಸಲು ಅವರು ಪಡುತ್ತಿರುವ ಶ್ರಮ ಕೇವಲ ಮಾತಿಗೆ, ಕೃತಿಗೆ ನಿಲುಕದು. ಮೊದಲು ಏಕಾಂಗಿಯಾಗಿ ಬಸವ ಧರ್ಮಕ್ಕಾಗಿ ದುಡಿದ ಅವರು ಛಲವಾದಿಗಳು. ಬಸವಣ್ಣನವರ ನುಡಿಯಂತೆ— "ಮಣ್ಣೆತ್ತಾದರೇನು ? ತನ್ನೆತ್ತೇ ಗೆಲ್ಲಬೇಕು" ಎಂಬ ಛಲ ಅವರದು. ತಮ್ಮ ಪೂರ್ವದಲ್ಲಿ ಯಾವ ಸಂಪತ್ತನ್ನೂ, ಯಾವ ಮಠದ ಆಸ್ತಿಯನ್ನೂ ಹೊಂದದ ಅವರು ಮಾಡಿದ ಧರ್ಮಕಾರ್ಯಗಳಂತೂ ಅಪಾರ. ಪರಮ ಪೂಜ್ಯ ಮಾತಾಜಿಯವರಂಥ ಜ್ಞಾನವಂತ ಶಿಷ್ಯರನ್ನು ಪಡೆದು, ಪ್ರವಚನವೆಂಬ ಕಾಯಕ ಮಾಡಿ ದುಡಿದು ಕಟ್ಟಿದರು ಬಸವ ಧರ್ಮವನ್ನು.

ಅವರು ಮಾಡಿದ ಕಾರ್ಯಗಳನ್ನು ಎಣಿಸಹೋದರೆ ಅಪಾರ. ಧರ್ಮ ಪ್ರಚಾರಕ್ಕಾಗಿ ಸುಮಾರು 80ಕ್ಕೂ ಮಿಕ್ಕಿ ಪುಸ್ತಕ ಪ್ರಕಟಣೆ. ಬೆಂಗಳೂರಿನಲ್ಲಿ ಬಸವ ಮಂಟಪ, ಬಸವ ಗಂಗೋತ್ರಿ ನಿರ್ಮಿಸಿ, ಅಲ್ಲಿ ಧರ್ಮದ ತರಬೇತಿಯನ್ನು ಭಕ್ತರಿಗೆ ಕೊಡುತ್ತಾ, ಅವರಿಂದ ಮತ್ತೆ ಪ್ರಚಾರ ಮಾಡಿಸಿ ಧರ್ಮದ ಉನ್ನತಿಗೆ ಕಾರಣರಾಗಿ ದ್ದಾರೆ, ಧರ್ಮಗುರು ಬಸವಣ್ಣನವರ ಐಕ್ಯ ಸ್ಥಳವನ್ನು "ಧರ್ಮ ಕ್ಷೇತ್ರ" ವನ್ನಾಗಿ ಪರಿವರ್ತಿಸಿ, ಕೇಂದ್ರ ಸ್ಥಾನ ಮಾಡಿ ಜನರಿಗೆ ಮಾರ್ಗದರ್ಶನವಿತ್ತಿದ್ದಾರೆ. ಪೂಜ್ಯ ಮಾತಾಜಿಯವರನ್ನು 'ಜಗದ್ಗುರು ಪೀಠ'ಕ್ಕೆ ಏರಿಸಿ ಧರ್ಮದ ತತ್ವವನ್ನು 'ಸ್ತ್ರೀಯು ಜ್ಞಾನ ಸಂಸ್ಕಾರದಿಂದ ಜಗದ್ಗುರು ಆಗಬಲ್ಲಳು' ಎಂದು ಆಚರಿಸಿ ತೋರಿಸಿಕೊಟ್ಟರು. ಸತತವಾಗಿ ಸುಮಾರು 25 ವರ್ಷಗಳಿಂದ ಚಳಿ. ಮಳೆ. ಗಾಳಿ, ಬಿಸಿಲೆನ್ನದೆ, ಹೆಚ್ಚೂ ಕಡಿಮೆ ಒಂದು ದಿನವೂ ಬಿಡದೇ ಜನಕ್ಕೆ ಬೋಧನೆ ನೀಡಿದ ಧೀಮಂತ ವ್ಯಕ್ತಿತ್ವ ಅವರದು. ಅಷ್ಟೇ ಅಲ್ಲದೇ ಶಿಷ್ಯರನ್ನು ತಯಾರು ಮಾಡಿ, ಅವರಿಂದಲೂ ಕರ್ನಾಟಕ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಹೀಗೆ ರಾಷ್ಟ್ರಾದ್ಯಂತ ಧರ್ಮ ಪ್ರಚಾರ ಮಾಡಿಸಿ, ಬಸವ ಧರ್ಮದ ಪುನರುತ್ಥಾನಕ್ಕೆ ಆಧಾರ ಸ್ಥಂಭವಾಗಿದ್ದಾರೆ. ಇಷ್ಟಲ್ಲದೆ ರಾಜ್ಯಾದ್ಯಂತ ರಾಷ್ಟ್ರೀಯ ಬಸವ ದಳಗಳನ್ನು ಹುಟ್ಟುಹಾಕಿ, ಅವುಗಳ ಮೂಲಕ ಪ್ರಾರ್ಥನೆ, ಪ್ರವಚನ, ಧರ್ಮ ಪ್ರಚಾರ, ದೀನ ದಲಿತರಿಗೆ ಸಹಾಯ, ಇವುಗಳು ನಡೆಯುವಂತೆ ಮಾಡಿ 'ಜಂಗಮದ' ಸೇವೆ ಗೈಯ್ದಿದ್ದಾರೆ.

Digitalized by e-Sahithya Documentation Forum
Sponsored by Sarayu Foundation Trust

ತಮ್ಮ ಬಳಿಗೆ ಬರುವ ಮುಮುಕ್ಷುಗಳಿಗೆ, ಜ್ಞಾನ ದಾಸೋಹ ನೀಡಿ, ಬರುವ ಅನಾಥರಿಗೆ, ಆಶ್ರಯ ರಹಿತರಿಗೆ ಆಶ್ರಯದಾತರಾಗಿ, ಎಲ್ಲರನ್ನೂ ತಮ್ಮ ಮಕ್ಕಳಂತೆ ಸಲಹುವ **ಮಾತೃ ಹೃದಯಿಗಳು ಪೂಜ್ಯ ಗುರೂಜಿಯವರು.**

ಪೂಜ್ಯ ಗುರೂಜಿಯವರು ಶ್ರೇಷ್ಠ ಸಮಾಜ ಸುಧಾರಕರು. ಗುರುಬಸವಣ್ಣನವರು ಅಂದು ರೂಪಿಸಿದ 'ಜಾತ್ಯತೀತ ಸಮಾಜ'ವನ್ನು ಮತ್ತೆ ಕಟ್ಟಲು ಅವರ ಅವಿರಳ ಪ್ರಯತ್ನ ಸಾಗಿದೆ. ಪೂಜ್ಯರು ಯಾರಲ್ಲೂ ಜಾತಿಯನ್ನು ಅರಸದೇ ಜ್ಞಾನ ಜ್ಯೋತಿಯನ್ನು ಹಚ್ಚುವವರು. ತಮ್ಮ ಸುಜ್ಞಾನ ಪ್ರವಚನದಿಂದ ಸಮಗ್ರ **ಹಿಂದೂ ತತ್ತ್ವ ಬೋಧಿಸಿ ಜಾತಿಯನ್ನು ಮರೆಸಿದ** ಧೀಮಂತರು, ಅವರು ಸಮಾಜದ ಬಗೆಗಿನ ಕಳಕಳಿಯಿಂದ ಹೇಳುತ್ತಾರೆ "ಶತ ಶತ ಮಾನಗಳಿಂದಲೂ ಬಂದ ಜಾತೀಯತೆ, ಅಸ್ಪೃಶ್ಯತೆ, ಮೂಢನಂಬಿಕೆ, ಯಜ್ಞ ಯಾಗಾದಿಗಳ, ಗತ ಸತ್ಯವನ್ನು ಅರಿಯದೇ ಇಂದಿಗೂ ಜೋಪಾನ ಮಾಡಬೇಕೆಂಬ ಕಪಿಮುಷ್ಟಿಯ ಜನ, ತಮಗರಿವಿಲ್ಲದೆಯೇ ಹಲವಾರು ಜನರನ್ನು, ದೀನ ದಲಿತರನ್ನೂ, ವಿಚಾರ ವಾದಿಗಳನ್ನು ಹೊರಗಟ್ಟುತ್ತಿದ್ದಾರೆ. ಹಿಂದೂ ಪರಂಪರೆಯ ಜ್ಞಾನ ಮಾರ್ಗದಿಂದ ಆಕರ್ಷಿತರಾಗಿ ಬರುವ ಜನರು ಶುಷ್ಕ ಕರ್ಮಕಾಂಡದಿಂದ ಬೇಸತ್ತು ಬರದಿದ್ದರೆ, ಅಥವಾ ಇದ್ದವರೂ ಹೊರಹೋದರೆ ಇದಿರಾಗುವ ವಿಪತ್ತಿಗೆ ಕಾರಣರಾರು ?"— ಸಮಗ್ರ ಹಿಂದೂತ್ವವನ್ನು ರಕ್ಷಿಸುವ ಅವರ ಈ ನುಡಿಗಳನ್ನು ಚಿಂತಿಸಿದರೆ, ಭಾರತಕ್ಕೆ ಅಂಟಿರುವ ಈ ಜಾತೀಯತೆಯ ಗೊಂದಲಮಯ ವಾತಾವರಣ ದೂರವಾಗದೆ ? ಇಂದಿನ ಎಲ್ಲಾ ಧರ್ಮದ ಧರ್ಮಗುರುಗಳು, ಮಠಾಧೀಶರೂ ಚಿಂತಿಸಬೇಕಾದ ವಿಷಯವಿದು.

ಪೂಜ್ಯರು ಸಮಾಜ ತಿದ್ದುವ ದೆಸೆಯಲ್ಲಿ ಜನರಲ್ಲಿ ನೀತಿ, ಅಹಿಂಸೆ ಬೋಧಿಸಿ, ಮದ್ಯ-ಮಾಂಸಾಹಾರಗಳಿಂದ ದೂರವಿರುವಂತೆ, ಅದರಿಂದ ಆಗುವ ದುಷ್ಪರಿಣಾಮಗಳನ್ನು ಮನ ಮುಟ್ಟುವಂತೆ ಹೇಳಿ, ಒಳ್ಳೆಯ ನಡೆ-ನುಡಿ ಕಲಿಸುತ್ತಿರುವ ಮಹಾಂತರು ಪೂಜ್ಯರು ಸಾಮಾಜಿಕ ಕಳಕಳಿಯಿಂದ ಜಂಗಮರಿಗೆ ಹಾಗೂ ಇತರರಿಗೆ ಹೇಳುವುದೇನೆಂದರೆ "ಪ್ರವಚನ, ಬೋಧೆ, ಜನಸೇವೆ-ಧರ್ಮಜಾಗೃತಿ ಇವುಗಳನ್ನು ಮುಖ್ಯ ಕಾಯಕವಾಗಿ ಮಾಡಿಕೊಳ್ಳುವ ಜನಬೇಕು. ಈ ಕಾಯಕಗಳು ಕೇವಲ ಪ್ರವೃತ್ತಿಯಾಗದೇ ವೃತ್ತಿಯಾಗಬೇಕು. ಅಂಥ ವೃತ್ತಿವಿಡಿದವರೇ ಜಂಗಮರು. ಅಂಥ ಸಮರ್ಪಣೆ, ತ್ಯಾಗವಂತ ಜಂಗಮರಿಂದ ಸಮಾಜಕ್ಕೆ ಅಂಟಿದ ಜಾಡ್ಯ ಬಿಟ್ಟು ಹೋಗುವುದು". "ಜಂಗಮನು ತನ್ನ ಮೋಕ್ಷಾಕಾಂಕ್ಷೆಯನ್ನು ಬದಿಗೊತ್ತಿದರೂ ಚಿಂತೆಯಿಲ್ಲ, ಜಗತ್ತಿನ ಕಲ್ಯಾಣದ ಚಿಂತೆ ಆತನಿಗೆ ಇರಬೇಕು." ಮತ್ತೊಂದು ಕಡೆ ಅವರೇ ಹೇಳುತ್ತಾರೆ "ಧರ್ಮ ಬೋಧನೆಯ ಕಾಯಕವು ನಿಸ್ವಾರ್ಥ ಜೀವನದ ಕುರುಹು, ತನ್ನ ನಿಸ್ವಾರ್ಥತೆಯಿಂದ ಧರ್ಮ ಬೋಧಿಸಿ ಜಗತ್ತನ್ನು ಉದ್ಧರಿಸ

ಬೇಕಾದ್ದು ಜಂಗಮನ ಕಾಯಕ"—ಈ ನುಡಿಗಳೇ ಗುರೂಜಿಯವರ ವ್ಯಕ್ತಿತ್ವವನ್ನು ತಿಳಿಸುತ್ತವೆ.

ಇಂಥ ಭವ್ಯ ವ್ಯಕ್ತಿತ್ವವುಳ್ಳ ಗುರೂಜಿಯವರಿಗೆ ಜನತೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು. ಜನರೇನೋ ಕಾಣಿಕೆ ಕೊಡಬಹುದು ಆದರೆ ಪೂಜ್ಯರ ಪಾಲಿಗೆ ಅದು ಪ್ರವಚನ ಕಾಯಕದಿಂದ "ದುಡಿದ ಹಣವೇ" ವಿನಾ ಜನರಿಂದ ಬಂದ 'ದಾನ' ವಾಗದು. ಜನತೆಯೂ ಸಹ ಅವರು ಕೇಳಿದ ಪ್ರವಚನಕ್ಕೆ ಪ್ರತಿಫಲವಾಗಿ ಕೊಡುವ ಹಣವಾಗುವುದೇ ವಿನಾ 'ಕಾಣಿಕೆ' ಎಂದೂ ಆಗದು. ತತ್ವಕ್ಕಾಗಿ ತಮ್ಮ ಜೀವನವನ್ನೇ ಮುಡುಪಿಟ್ಟ ಪೂಜ್ಯರನ್ನು ಹಣದಿಂದ ಒಲಿಸಲು ಸಾಧ್ಯವೆ? ಅವರಿಗೆ ಲಕ್ಷ ಹಣ ಕೊಟ್ಟವರ ಬಗ್ಗೆ ಲಕ್ಷ್ಯವಿಲ್ಲ, ಆದರೆ ಸಾಧಕರ ಬಗ್ಗೆ, ಮುಮುಕ್ಷುಗಳ ಬಗ್ಗೆ ''Missionary Zeal'' ಉಳ್ಳವರ ಬಗ್ಗೆ ಬಹಳ ಲಕ್ಷ್ಯ ತುಂಬು ಅಭಿಮಾನ; ಬಸವ ಗುರುವಿನ ದೃಷ್ಟಿಯಲ್ಲಿ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಅಲ್ಲವೆ?

ಇಷ್ಟೆಲ್ಲಾ ಕಾರ್ಯಗೈದ ಪೂಜ್ಯರು ಎಂದೂ ಹೊಗಳಿಕೆಗೆ ಬಾಗದವರು. ಅವರು ಎಂದೂ ಕೀರ್ತಿಗಾಗಿ ಹಂಬಲಿಸಿದವರಲ್ಲ. ಆದರೆ ಕೀರ್ತಿ ಎಂಬುದೇ ಅವರ ಬೆನ್ನು ಹತ್ತಿದೆ. ಮನದಲ್ಲಿ ಯಾವ ಆಸೆ ಆಕಾಂಕ್ಷೆಯನ್ನೇ ಇಡದ ಅವರು "ಅಹಂಕಾರವನ್ನೆ ಮರೆದು, ದೇಹ ಗುಣಗಳನ್ನು ಜರಿದು, ಇಹಪರವೇ ತಾನೆಂದರಿದ" ಮಹಾಯೋಗಿಗಳು. ಇಷ್ಟೆಲ್ಲ ಕಾರ್ಯ ಮಾಡಿದ ಅವರು ಎಳ್ಳಷ್ಟೂ ಅಹಂಕಾರ ಪಡದೆ, ನಿರಹಂಕಾರಿಗಳಾಗಿ ಇರುವವರು. ಅವರ ನಿರಹಂಕಾರಕ್ಕೆ ಒಂದು ಉದಾಹರಣೆ ಎಂದರೆ— ಸಾಮಾನ್ಯವಾಗಿ ಶಿಷ್ಯರು ಗುರುಗಳ ಆದರ್ಶ ಜೀವನ, ಮಾರ್ಗದರ್ಶನದ ಬಗ್ಗೆ ಗ್ರಂಥಗಳನ್ನು ಬರೆಯುತ್ತಾರೆ. ಆದರೆ ಪೂಜ್ಯ ಗುರೂಜಿಯವರು ತಮ್ಮ ಅಭಿಮಾನದ ಶಿಷ್ಯೆ ಪೂಜ್ಯ ಮಾತಾಜಿಯವರ ಬಗ್ಗೆಯೇ ಗ್ರಂಥ ಬರೆದಿರುವುದು, ಅವರ ನಿಷ್ಕಳಂಕ ಭಾವ, ಹಾಗು ಅವರು ಜ್ಞಾನಿಗಳಿಗೆ ಕೊಡುವ ಪ್ರೋತ್ಸಾಹವನ್ನು ನಿರೂಪಿಸುತ್ತದೆ. 'ಗುರು' ಆದವರ ಆದರ್ಶ; ನಿಸ್ವಾರ್ಥ ನಿಲುವು ಹೇಗಿರಬೇಕು ಎಂಬುದು ಇದರಿಂದ ಗೊತ್ತಾಗುತ್ತದೆ.

ಇಂದಿನ ಕಲಿಯುಗದಲ್ಲಿ ಧರ್ಮವನ್ನು ಬಿತ್ತುವುದೇ ಕಷ್ಟ. ಅಂತಹದ್ದರಲ್ಲಿ ಬಿತ್ತಿ, ಬೆಳೆದ ಅನುಪಮ ಸಾಹಸಿಗಳು ಗುರೂಜಿಯವರು. ಇಂದು ಅವರ ಬಹುಮುಖ ವ್ಯಕ್ತಿತ್ವ, ಔದಾರ್ಯ, ತ್ಯಾಗ, ಔನ್ನತ್ಯಗಳಿಂದಲೇ, ಬಸವ ಧರ್ಮದ ಏಳ್ಗೆಯಾಗಿರುವುದು, ಬಸವ ಯುಗಕ್ಕೆ ನಾಂದಿ ಹಾಡಿರುವುದು. ಈ ಮಹಾಪುರುಷರು **ಇಂದು ಲಿಂಗವಂತ ಧರ್ಮದ ಜೀವಾಳ** ಎನ್ನುವುದರಲ್ಲಿ ಸಂಶಯವಿಲ್ಲ.

Digitalized by e-Sahithya Documentation Forum
Sponsored by Sarayu Foundation Trust

ಸಾಮಾನ್ಯವಾಗಿ ಎಲ್ಲರೂ ತಿಳಿ ನೀ, ತಿಳಿ ನೀ, ಎಂದು ಬೇರೆಯವರಿಗೆ ಬೋಧಿಸುತ್ತಾರೆ. ಆದರೆ ಮಹಾತ್ಮರು, ತ್ಯಾಗಿಗಳು ತಮ್ಮ ಜೀವನದಲ್ಲೇ ಆಚರಿಸಿ ತೋರುತ್ತಾರೆ, ಬಸವಾದಿ ಪ್ರಮಥರು, ಪೂಜ್ಯ ಗಾಂಧೀಜಿ, ಪೂಜ್ಯ ಗುರೂಜಿಯವರು ಇಂಥವರ ಸಾಲಿಗೆ ಸೇರಿದವರು.

ಗುರೂಜಿಯವರನ್ನು ನೋಡಿದಾಗ, ಅವರ ದಿವ್ಯ ಬದುಕನ್ನು ಅವಲೋಕನ ಮಾಡಿದಾಗ ಉರಿಲಿಂಗದೇವರ ವಚನ ನೆನಪಿಗೆ ಬರುತ್ತದೆ.

ಲೋಕದಂತೆ ಬಾರರು, ಲೋಕದಂತೆ ಇರರು,
ಲೋಕದಂತೆ ಹೋಗರು ನೋಡಾ,....ಪುಣ್ಯದಂತೆ ಬಪ್ಪರು,
ಜ್ಞಾನದಂತೆ ಇಪ್ಪರು, ಮುಕ್ತಿಯಂತೆ ಹೋಹರು ನೋಡಯ್ಯಾ,
ನಿಮ್ಮ ಶರಣರು ಉಪಮಾತೀತರಾಗಿ ಉಪಮಿಸಬಾರದು.

ಶರಣರ, ಮಹಾತ್ಮರ ಹಾಗೂ ಗುರೂಜಿಯವರ ಬದುಕು, ಲೋಕದ ಜನರ ಬದುಕಿನಂತಲ್ಲ. ಅವರ ನಡೆ-ನುಡಿ ಭಿನ್ನರೀತಿಯದು. ಅವರು ನುಡಿದುದೇ 'ವಚನ', ಅವರ ನಡೆಯೇ 'ಮಾರ್ಗದರ್ಶನ'. ಅವರ ಬದುಕು ಇಂದಿನವರಿಗೆ, ಮುಂದಿನವರಿಗೆ 'ದಾರಿ ದೀಪ'. 'ಬಸವ' ಎಂಬ ಮೂರಕ್ಷರ ಕಲಿಸಿ, ಬಸವ ಧರ್ಮವನ್ನು ನಮ್ಮ ಹೃದಯಕ್ಕೆ ತಟ್ಟುವಂತೆ ಮಾಡಿ, ನಮ್ಮೆಲ್ಲರ ಬಾಳನ್ನು ಬೆಳಗಿಸಿದ ದಿವ್ಯ ಜ್ಯೋತಿ ಪೂಜ್ಯ ಲಿಂಗಾನಂದ ಸ್ವಾಮೀಜಿಯವರಿಗೆ, ವಿಶ್ವಗುರು ಬಸವಣ್ಣನವರು, ಅತಿ ಹೆಚ್ಚಿನ ಆರೋಗ್ಯ ಆಯುಷ್ಯ ದಯಪಾಲಿಸಲಿ ಎಂಬುದೇ ನನ್ನ ಅವಿರಳ ಧ್ಯಾನ.

—ಡಿ. ಎಸ್. ವಿಜಯಕುಮಾರ್
ರಾಷ್ಟ್ರೀಯ ಬಸವ ದಳ, ಶಿವಮೊಗ್ಗ

ಪೂಜ್ಯ ಗುರೂಜಿ ಕುರಿತು

ಬಸವ ತತ್ತ್ವ ಬೋಧಿಸಲು ಜನ್ಮ ತಳೆದು ಬಂದಿರಿ
ಬಸವ ತಂದೆ ಕರುಣೆ ಹೊಂದಿ ಬಾಳಲಿ ಮುಂಬರಿದಿರಿ ।
ನಿಶಿತಮತಿಯು ನೀವಾಗಿ ಕ್ರಾಂತಿಯೋಗಿಯಾದಿರಿ
ಶುಭಜೀವನ ಜ್ಯೋತಿಯಲಿ ಜಗದ ಭ್ರಾಂತಿ ಕಳೆದಿರಿ ॥
ಪ್ರವಚನದ ಪಟುವಾಗಿ ಜ್ಞಾನಸುಧೆಯ ಎರೆದಿರಿ
ಶಿವಬೆಳಗಿನ ಗುರುವಾಗಿ ಎಮ್ಮ ಧನ್ಯಗೈದಿರಿ ।
ನಿಮ್ಮ ಪರುಷ ಹಸ್ತವೆಮ್ಮ ಮಸ್ತಕವನು ಮುಟ್ಟಲು
ಜ್ಯೋತಿಮುಟ್ಟಿ ಜ್ಯೋತಿಯಾಗಿ ಬೆಳಗುವಂತೆ ಗೈದಿರಿ ॥

ಪ್ರವಚನ ಪಿತಾಮಹ-ನಾನು ಕಂಡಂತೆ

—ಡಾ॥ ಜಿ. ಆರ್. ತಮಗೊಂಡ
ಬಾಗಲಕೋಟೆ

ಬಸವಧರ್ಮದ ಉಗಮಸ್ಥಳ ಬಿಜಾಪುರ ಜಿಲ್ಲೆ. ಈ ಧರ್ಮದ ಬಹಳಷ್ಟು ವಚನಗಳು ಹಾಗು ಸಾಹಿತ್ಯ ಸಂಶೋಧನೆಯಾಗಿ, ಅರ್ಥೈಯಿಸುವಂತಾದುದು ಇದೇ ಜಿಲ್ಲೆಯ, 20ನೇ ಶತಮಾನದ ಶರಣ ದಿ: ಫ.ಗು. ಹಳಕಟ್ಟಿಯವರಿಂದ. ಗಾಂಧೀಜಿ ಶತಾಬ್ದಿ ಹಾಗೂ ಬಸವಣ್ಣನವರ ಅಷ್ಟಶತಮಾನೋತ್ಸವವನ್ನು (1968 ರಲ್ಲಿ) ರಾಜ್ಯ ಮಟ್ಟದಲ್ಲಿ ಕರ್ನಾಟಕ ಸರಕಾರ ಮೊಟ್ಟಮೊದಲಿಗೆ ರಾಜ್ಯಾದ್ಯಂತ ವೈಭವದಿಂದ ವ್ಯಾಪಕವಾಗಿ ಆಚರಿಸುವ ನೇತೃತ್ವ ವಹಿಸಿದವರಲ್ಲಿ ಪ್ರಮುಖರಾದ ದಿ: ಎಸ್.ಆರ್. ಕಂಠಿ ಹಾಗು ಶ್ರೀ ಬಿ.ಡಿ. ಜತ್ತಿಯವರು ವಿಜಾಪುರದವರು. ಬಸವ ತತ್ವ ಪ್ರಚಾರದ ಸಲುವಾಗಿ ತಲೆ ಎತ್ತಿದ ರಾಜ್ಯಮಟ್ಟದ ಬಸವ ಸಮಿತಿಯ ನೇತೃತ್ವ ವಹಿಸಿದ ಜತ್ತಿಯವರು ಬಿಜಾಪುರದವರು.

ವಚನಶಾಸ್ತ್ರ ಪಿತಾಮಹ ಫ.ಗು. ಹಳಕಟ್ಟಿಯವರು ಸ್ಥಾಪಿಸಿ ಕಟ್ಟಿದ ವಿದ್ಯಾ ಸಂಸ್ಥೆಯಾದ ಬಿಜಾಪುರದ ಶ್ರೀ ಸಿದ್ಧೇಶ್ವರ ಹಾಯಸ್ಕೂಲದ ವಿದ್ಯಾರ್ಥಿಯಾಗಿ, ನಂತರ ಅವರ ಕಾರ್ಯ ಮುಂದುವರಿಸಿ ಸಾಧನೆಯಿಂದಾಗಿ ಈಗ್ಗೆ ಪ್ರವಚನ ಪಿತಾಮಹ ರೆನಿಸಿದ — ಶ್ರೀ ಲಿಂಗಾನಂದ ಸ್ವಾಮಿಗಳು ಕೂಡ ಬಿಜಾಪುರ ಜಿಲ್ಲೆಯವರು. ಬಸವ ಧರ್ಮ ಪ್ರಚಾರ ಇತಿಹಾಸದ ಪುಟಗಳಲ್ಲಿ ಈ ಇಬ್ಬರು ಪಿತಾಮಹರು ಅಜರಾಮರರು. ಒಬ್ಬರು ಸೌಮ್ಯರು, ಎಲೆಮರೆಯ ಹೂವಾಗಿ ಕಾರ್ಯನಿರ್ವಹಿಸಿದರೆ — ಎರಡನೆಯವರು ಅದ್ಭುತ ವಾಗ್ವೈಖರಿಯಿಂದ ಬೆಳಗಿದವರು. ಇಬ್ಬರ ಸೇವೆಯಲ್ಲಿರುವ ಹೋಲಿಕೆ ನಿಜವಾಗಿ ಕೌತುಕ ಹಾಗೂ ಯೋಗಾಯೋಗವೆಂದೆನಿಸದಿರದು.

(ಅ) ಬಸವ ಧರ್ಮ ಪ್ರವಚನ ಪಿತಾಮಹರ ಪೂರ್ವಾಶ್ರಮ.

1948–49ರಲ್ಲಿ ಬಿಜಾಪುರ ಶ್ರೀ ಸಿದ್ಧೇಶ್ವರ ಹಾಯಸ್ಕೂಲು ಹೇರಲಗಿ ವ್ಯಾಯಾಮ ಶಾಲೆಯ ಮುಂಭಾಗದಲ್ಲಿ ದಿ: ಎಚ್.ಕೆ. ಲಗಳಿ ಗುರುಗಳ ಮಾರ್ಗ ದರ್ಶನದಲ್ಲಿ ಜರುಗಿದ "ಪುಟಿಂಗ್ ಶ್ಯಾಟ್" ಸ್ಪರ್ಧೆಯಲ್ಲಿ, ಅವರ ಸಹಪಾಠಿ ಶ್ರೀ ಕೆ. ಎಸ್. ಬೀಳಗಿ ಹಾಗು ಶ್ರೀ ಸಮಗೊಂಡರೊಡನೆ ಭಾಗವಹಿಸಿದ ಶ್ರೀ ಸಂಗಮೇಶ ಕಪ್ಪರದ ಎಂಬ ಹೆಸರಿನಲ್ಲಿ ಇವರನ್ನು ನಾನು ಮೊದಲಿಗೆ ನೋಡಿದ್ದುದು ಇನ್ನೂ ನನ್ನ ಜ್ಞಾಪಕದಲ್ಲಿದೆ. ಆಗ್ಗೆ ನಾನು ಅದೇ ಹಾಯಸ್ಕೂಲದಲ್ಲಿ ಇಂಗ್ಲೀಷ ಮೂರನೇ ಕ್ಲಾಸದಲ್ಲಿ ಓದುತ್ತಿರಬಹುದೆಂದು ತರ್ಕ.

Digitalized by e-Sahithya Documentation Forum
Sponsored by Sarayu Foundation Trust

ನಂತರ 1954–55 ರಲ್ಲಿ ನನ್ನ ಊರಾದ ಬಬಲೇಶ್ವರದ ಶ್ರೀ ಗುರು ಪಾದೇಶ್ವರ ಮಠದಲ್ಲಿ ಬಿಳಿ ಅಂಗಿ ಧರಿಸಿ ಬಸವಣ್ಣನವರ ವಚನಗಳನ್ನು — ಹುರುಪಿನಿಂದ, ಗಾಂಭೀರ್ಯದಿಂದ ಮಾಡುತ್ತಿದ್ದ ವಿಶ್ಲೇಷಣೆಯನ್ನು — ಖುದ್ದಾಗಿ ಒಂದೆರಡು ಸಾರಿ ಆಲಿಸಿದ್ದೇನೆ. ಮಠದ ಪೂಜ್ಯ ಶ್ರೀ ಶಾಂತವೀರ ಸ್ವಾಮಿಗಳನ್ನು ಮೊದಲು ಮಾಡಿಕೊಂಡು ಬಹಳಷ್ಟು ಜನತೆ ವಚನಗಳ ವಿಶ್ಲೇಷಣೆ, ಪಾಂಡಿತ್ಯಪೂರ್ಣ ಪ್ರತಿಪಾದನೆಯ ವೈಖರಿಯನ್ನು ಮೆಚ್ಚಿ ಪ್ರಶಂಸೆ ಮಾಡಿದ ಮಾತುಗಳನ್ನು ಕೇಳಿದ್ದೇನೆ.

ಇದಕ್ಕಿಂತ ಮೊದಲು 1951ರ ಸುಮಾರು ಇವರ ದೀಕ್ಷಾ ಗುರುಗಳಾದ ಪೂಜ್ಯ ಮಲ್ಲಿಕಾರ್ಜುನ ಸ್ವಾಮಿಗಳಿಂದ ಅನೇ ಮಠದಲ್ಲಿ ತಿಂಗಳಾನುಗಟ್ಟಲೇ ಪ್ರವಚನ ನಡೆದಿದ್ದನ್ನು ಜನ ಮರೆಯುವಷ್ಟು, ಇವರ, ಇವರ ವಚನ ವಿಶ್ಲೇಷಣೆ ಮೆಚ್ಚಿ ಪ್ರಭಾವಿತರಾದಂತೆ ಅನಿಸಹತ್ತಿತು. ಪೂಜ್ಯ ಮಲ್ಲಿಕಾರ್ಜುನ ಸ್ವಾಮಿಗಳ ಪ್ರವಚನದಲ್ಲಿ ಬಸವಧರ್ಮಕ್ಕಿಂತ ವೇದಾಂತಕ್ಕೆ ಪ್ರಾಧಾನ್ಯತೆ ಇದ್ದುದು ಇದಕ್ಕೆ ಕಾರಣವಾಗಿರಬಹುದು.

ನಂತರ 1969 ರಲ್ಲಿ ನಾನು ಕಲಘಟಗಿಯಲ್ಲಿ ವೈದ್ಯಾಧಿಕಾರಿಯಾಗಿದ್ದಾಗ್ಗೆ ಗಾಂಧೀಜಿ ಶತಾಬ್ದಿ ಹಾಗು ಬಸವಣ್ಣನವರ ಅಷ್ಟಶತಮಾನೋತ್ಸವ ಅಂಗವಾಗಿ, ಆಗ್ಗೆ ಅಲ್ಲಿ ಪ್ರಬೇಶನ ತಹಸೀಲ್ದಾರರಾಗಿದ್ದ ಶ್ರೀ ಬಿ.ವಿ. ಕಟ್ಟಿ (ಈಗ್ಗೆ ಡಿವಿಜಿನಲ್ ಕಮಿಶನರ ಬೆಳಗಾಂವ), ಇವರು ತತ್ವಜ್ಞಾನ ವಿದ್ಯಾರ್ಥಿನಿಯಾದ (ಈಗ ಪೂಜ್ಯ ಜಗದ್ಗುರು ಮಾತಾಜಿ) ಶ್ರೀ ಮಾತೆ ಮಹಾದೇವಿಯವರನ್ನು ಮುಖ್ಯ ಅತಿಥಿ ಭಾಷಣಕಾರರಲ್ಲೊಬ್ಬರನ್ನಾಗಿ ಆಹ್ವಾನಿಸಲು ನಾವು ಧಾರವಾಡಕ್ಕೆ ಹೋದಾಗ್ಗೆ ಲಾಯಬ್ರರಿಯಲ್ಲಿ ಓದುತ್ತಿದ್ದ ಅವರನ್ನು ಕಂಡು ಕಾರ್ಯಕ್ರಮಕ್ಕೆ ಒಪ್ಪಿಸಿದೆ. ನಂತರ ಸುಮಾರು 10,000 ಶ್ರೋತೃ ವರ್ಗ ಪೂಜ್ಯ ಮಾತೆ ಮಹಾದೇವಿಯವರು ಬಸವ ತತ್ವದ ಮಹತ್ವ ಕುರಿತು ನೀಡಿದ ವಚನಗಳ ಭಾಷಣ ಸಭಿಕರಿಂದ ಬಹಳಷ್ಟು ಶ್ಲಾಘನೆ ಪಡೆಯುವಂತಾಯಿತು. ಆಗಿನ ಕಾರ್ಯಕ್ರಮದಲ್ಲಿ ಪೂಜ್ಯ ಮಹಾಸ್ವಾಮಿಗಳು ಮೂರು ಸಾವಿರ ಮಠ, ಡಾ॥ ವಿ.ಜಿ. ಕುಲಕರ್ಣಿ, ಶ್ರೀ ಬಾಳಪ್ಪ ಹುಕ್ಕೇರಿ, ಡಾ॥ ಪದ್ಮಶ್ರೀ ಆರ್.ಬಿ. ಪಾಟೀಲ ಭಾಗವಹಿಸಿದ್ದ ಪ್ರಮುಖರುಗಳು. ಅದೇ ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದ ಡಾ॥ ಪಾಟೀಲರನ್ನು ಸತ್ಕರಿಸಲಾಯಿತು.

(ಬ) ವಿಶ್ವಧರ್ಮ ಮಿಶನ್ ರೂವಾರಿಯಾಗಿ ಕಂಡದ್ದು.

ನಂತರ 1981 ರಲ್ಲಿ ನಾನು ಬನಹಟ್ಟಿಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ಇವರ ಪರಮ ಶಿಷ್ಯರು ಹಾಗು ಈಗ ವಿಶ್ವಕಲ್ಯಾಣ ಮಿಶನ್, ಬಸವ ಧರ್ಮಪೀಠ ಟ್ರಸ್ಟ್ ಖಜಾಂಚಿಯವರೂ ಆದ ಪೂಜ್ಯ ಮಾತೆ ಗಂಗಾದೇವಿಯವರು ವಿಶ್ವಧರ್ಮ ಪ್ರವಚನ ಅತ್ಯಂತ ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾಗ್ಗೆ ಕೆಲವರು ಅತಿ

ಬುದ್ಧಿವಂತರೆನ್ನುವವರು ಬಹಳಷ್ಟು ಅಡತಡೆ ಮಾಡಿದ್ದಲ್ಲದೆ, **ಲಂಕೇಶ ಪತ್ರಿಕೆಯಲ್ಲಿ** — ಈ ಕಾರ್ಯಕ್ರಮದಲ್ಲಿ ಸಹಕಾರ ನೀಡುವವರಲ್ಲಿಬ್ಬರಾದ — ನಾನು ಹಾಗು ನ್ಯಾಯಾಧೀಶ ಶ್ರೀ ನಾಗರಾಳೆಯವರಿಗೆ ಅವಮಾನ ಮಾಡುವ ಲೇಖನ ಪ್ರಕಟಣೆಯಾದದ್ದನ್ನು ಪ್ರತಿಭಟಿಸಿ, ಜಮಖಂಡಿ ನ್ಯಾಯಾಲಯದಲ್ಲಿ ನನ್ನಿಂದ ಸಂಬಂಧಿಸಿದವರ ವಿರುದ್ಧ ಮಾನಹಾನಿ ಮೊಕದ್ದಮೆ ದಾಖಲಾಯಿತು. ನಂತರ ಸಂಪಾದಕ ಶ್ರೀ ಲಂಕೇಶರು 7 ವರ್ಷದ ನಂತರ ನ್ಯಾಯಾಲಯಕ್ಕೆ ಹಾಜರಾಗಿ ವಿಷಾದ ವ್ಯಕ್ತ ಮಾಡಿದ ನಂತರ ಮಾತ್ರ ದಾವೆ ಹಿಂತೆಗೆದುಕೊಂಡದ್ದು, **ಬಸವಧರ್ಮ ಮಿಶನ್ ಇತಿಹಾಸದಲ್ಲೊಂದು ಪುಟವಾಗಿ ಉಳಿಯುವಂತಾಯಿತೆಂದು ಹೇಳಬಹುದು — ಈ ಘಟನೆ ಟೀಕಾಕಾರರಿಗೆ ಸೂಕ್ತ ಉತ್ತರವೆಂಬಂತಾದುದರಿಂದಾಗಿ.**

1989 ರಲ್ಲಿ — **ನಾನು ಸವದತ್ತಿ ಸರಕಾರಿ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ್ಗೆ** ಪ್ರವಚನ ವ್ಯವಸ್ಥಾಪಕರಿಗೆ ಹಾಗು ಪೂಜ್ಯ ಶ್ರೀ ಲಿಂಗಾನಂದರಿಗೆ ಯೋಗ್ಯವೆನಿಸಿದ ಮನೆ ಸಿಗದಿದ್ದಾಗ್ಗೆ — ಅವರಿಗೆ ನಾನು ವಾಸವಾಗಿದ್ದ ಸರಕಾರಿ ನಿವಾಸದಲ್ಲಿ ಸೌಕರ್ಯ ನೀಡುವ ಸದವಕಾಶ ನನ್ನಿಂದ ಸಿಗುವಂತಾಗಿ, ಸದ್ಗುರುಗಳ ಪ್ರವಚನ ಆಲಿಸುವ, ಸಮಯಪ್ರಜ್ಞೆ, ಆತ್ಮವಿಶ್ವಾಸ, ನೈತಿಕ ಸ್ಥೈರ್ಯ ದೈಹಿಕ ಅನಾರೋಗ್ಯವಿದ್ದಾಗಲೂ (ಹೃದಯಾಘಾತ ಹಾಗು ಮಧುಮೇಹ) ದಣಿವರಿಯದ ಹುಮ್ಮಸ್ಸು, ಸಾಧನೆಯ ಕಳಕಳಿ, ಸಂಘಟನಾ ಚತುರತೆ, ವ್ಯಾವಹಾರಿಕ ಬುದ್ಧಿಮತ್ತೆ ಹಾಗು ಬಸವಧರ್ಮ — ಬಸವಣ್ಣನವರ ಬಗ್ಗೆ ಅವರ ಅಭಿಮಾನ ಅರಿಯಲು ಸಹಾಯಕವಾಯಿತು. ಪ್ರವಚನ ಮಾಡುವಾಗ ಇವರಲ್ಲಿ ಹೊರ ಹೊಮ್ಮುವ ಹುಮ್ಮಸ್ಸು, ಪಾಂಡಿತ್ಯಪೂರ್ಣ ಪ್ರತಿಪಾದನೆ, ಅದರಲ್ಲಿಯೂ ಒಂದು ತಕ್ಕಡಿಯಲ್ಲಿ ಒಂದು ಕಡೆ ಬಸವಣ್ಣ — ಮತ್ತೊಂದು ಕಡೆ ಕಾರ್ಲಮಾರ್ಕ್ಸ — ಗಾಂಧೀಜಿ ಹಾಗು ಶ್ರೀ ಅರವಿಂದ ಎಂದು ದೃಢವಾಗಿ ಪ್ರತಿಪಾದಿಸುವ ವಾಗ್ವೈಖರಿ ಯಾರನ್ನಾದರೂ ಮೂಕರನ್ನಾಗಿ ಮಾಡುವಂತಿರುತ್ತಿತ್ತು. **ಹೃದಯಾಘಾತ, ಮಧುಮೇಹ, ಹಾಗು ರಕ್ತವತ್ತಡಗಳ ಗಂಡಾಂತರ ಮುನ್ಸೂಚನೆಗಳನ್ನು ಪೂಜ್ಯರು ತೀವ್ರ ಗಮನದಲ್ಲಿರಿಸಿಕೊಂಡು, ಪ್ರವಚನದಲ್ಲಿ ಆಗಾಗ್ಗೆ ಭಾವ ಪರವಶರಾಗಿ ಸಿಟ್ಟು, ಸಿಡಿಮಿಡಿಗೊಳ್ಳದಂತೆ ಹಾಗು ಒಳ್ಳೆಯ ವೈದ್ಯಕೀಯ ಚಿಕಿತ್ಸೆ ಸೌಲಭ್ಯ ಇದ್ದ ಊರುಗಳಲ್ಲಿ ಮಾತ್ರ ಪ್ರವಚನ ಮಾಡಲು ನಮ್ರವಾಗಿ ವಿನಂತಿಸುವ ಅವಕಾಶವನ್ನು ಪಡೆದೆ. ಬಸವಧರ್ಮ ಪೀಠದ ಯೋಜನೆಗಳು ಪೂರ್ಣ ಕ್ರಿಯಾರೂಪದಲ್ಲಿ ಬರುವಂತಾಗಲು ಇವರ ದೈಹಿಕ ಆರೋಗ್ಯವು ಅವಶ್ಯ — ಅನಿವಾರ್ಯ.**

ಪೂಜ್ಯ ಲಿಂಗಾನಂದ ಸ್ವಾಮೀಜಿ ಹಾಗು ಪೂಜ್ಯ ಮಾತೆ ಮಹಾದೇವಿಯವರ ಕಟು ವಿಮರ್ಶಕರೂ ಕೂಡ ಬಸವಧರ್ಮಕ್ಕೆ ಸಂಬಂಧಿಸಿದ ವಿಷಯಗಳ ಪ್ರತಿಪಾದನೆ

Digitalized by e-Sahithya Documentation Forum
Sponsored by Sarayu Foundation Trust

ಯಲ್ಲಿ ಇವರು ತೋರುವ ಪಾಂಡಿತ್ಯ ಹಾಗು ಶೈಲಿಯನ್ನು ಮೆಚ್ಚಿದ್ದಾರೆ. ಉದಾಹರಣಾರ್ಥವಾಗಿ ತೀರ ಇತ್ತೀಚೆಗೆ — ಡಾ॥ ಪಿ.ವ್ಹಿ. ನಾರಾಯಣರು ಬರೆದ "ವಚನ — ನಿರ್ವಚನ" ಕೃತಿಯಲ್ಲಿ ಲೇಖಕರು ಬಸವಾದಿ ಶರಣರ ಕೆಲ ಸಂಗತಿಗಳ ಬಗ್ಗೆ ವ್ಯಕ್ತಪಡಿಸಿದ ಬಾಲಿಶ ವಿಚಾರಗಳನ್ನು ಖಂಡಿಸಿ ಪೂಜ್ಯ ಮಾತಾಜಿಯವರು ನೀಡಿದ ಉತ್ತರವನ್ನು ವಿವರವಾಗಿ ಓದಿ ನನ್ನ ಮುಂದೆ ಶ್ರೀ ಪಾಟೀಲ ಪುಟ್ಟಪ್ಪ ಮೆಚ್ಚುಗೆ ಸೂಸಿದವರಲ್ಲಿ (ಸಂಪಾದಕರು, ಪ್ರಪಂಚ – ವಿಶ್ವವಾಣಿ) ಪ್ರಮುಖರೆನ್ನಬಹುದು.

ಬಸವಣ್ಣನವರ ತಪೋಭೂಮಿ ಕೂಡಲಸಂಗಮದಲ್ಲಿ ಇವರ ನೇತೃತ್ವದಲ್ಲಿ ಪ್ರತಿ ವರ್ಷ ಜನವರಿಯಲ್ಲಿ (13, 14, 15) ನಡೆಯುತ್ತಿರುವ "ಶರಣಮೇಳ" ಹಾಗು ಅಲ್ಲಿ ಭವ್ಯವಾಗಿ ತಲೆ ಎತ್ತುತ್ತಿರುವ "ಬಸವಧರ್ಮ ಪೀಠ" — ಈವರೆಗಿನ ಬಸವ ಧರ್ಮ ಪ್ರಚಾರ ಇತಿಹಾಸದ ಮಹತ್ವದ ಅಧ್ಯಾಯಗಳು ಹಾಗು ಮೈಲುಗಲ್ಲುಗಳಾಗಲಿವೆ, ಆಗಿವೆ ನಿಸ್ಸಂದೇಹವಾಗಿ.

"ಕಟ್ಟುಕತೆಗಳು ಪೂಜ್ಯ ಲಿಂಗಾನಂದರ ಬಗ್ಗೆ ಏನೇ ಹೇಳಲಿ, ಬಸವಧರ್ಮಕ್ಕೆ ಇವರೊಬ್ಬರು ಪ್ರಮುಖ ಸಂಸ್ಥೆ ಹಾಗು ಶಕ್ತಿ. ಬಸವಧರ್ಮ ತತ್ವಗಳ ಪರಿಣಾಮಕಾರಿ ಪ್ರತಿಪಾಲನೆ – ಹಾಗೂ ವ್ಯಾಪಕ ಪ್ರಚಾರ ಸಾಧನೆಯಲ್ಲಿ ಇವರಿಗೆ ಸರಿದೊರೆ ಯಾರೂ ಸಿಗಲಾರರು. ಇವರು "ಬಸವಧರ್ಮದ ಚಲಿಸುವ ಜ್ಞಾನ ದೇಗುಲ ಹಾಗು ಪ್ರವಚನ ಪಿತಾಮಹ ಎಂಬುದು ಸ್ಪಷ್ಟ ಸತ್ಯ."

ಈ "ಪ್ರವಚನ ಜ್ಞಾನ ದೇಗುಲ" ಸದಾ ಚಲಿಸುತ್ತ, ಜಗತ್ತಿಗೆ ಪಾತ್ರಷ್ಟು ಜ್ಞಾನದಾಸೋಹ ಮಾಡಲೆಂದು ಈ ಶುಭ ಸಂದರ್ಭದಲ್ಲಿ ದಯಾಘನ ಬಸವ ಜ್ಯೋತಿಯನ್ನು ಪ್ರಾರ್ಥಿಸುವೆ. ★

ಪೂಜ್ಯ ಗುರೂಜಿ ಕುರಿತು

ಜಾತಿವಾದ ಶುಷ್ಕಮಾರ್ಗ ಮೂಢರೂಢಿ ಜರಿದಿರಿ
ತತ್ತ್ವ ಕಹಳೆಯನೂದಿ ನೀವು ಜಾಗೃತಿಯಂ ಗೈದಿರಿ।
ಮದಗಜದೊಲು ಮುನ್ನುಗ್ಗಿ ಬಸವ ಮೈಮೆ ಬೀರ್ದಿರಿ
ನವ ಕ್ರಾಂತಿಯ ನಿರ್ಮಾಪಕರಿಂದು ತಾವು ಆದಿರಿ॥
ಸ್ತ್ರೀ ಕುಲಕೆ ಪೀಠವೊಂದು ರಚಿಸಿ ಸಮತೆ ಸಾರ್ದಿರಿ
ಬಸವ ಉಸಿರ ಪಸರಿಸುತ ಮರ್ತ್ಯಕೆ ಬೆಳಕಾದಿರಿ।
ಹರಿವ ನದಿಯು ನಿಮ್ಮ ಬಾಳು, ಉರಿವ ಬತ್ತಿ ನಿಮ್ಮ ತ್ಯಾಗ
ಮೊರೆವ ಶಂಖ ನಿಮ್ಮವಾಣಿ, ಸಚ್ಚಿದಾನಂದ ಖಣಿ॥

(96ನೇ ಪುಟದಿಂದ ಮುಂದುವರಿದಿದೆ)

ಸಮ್ಮೇಳನಗಳಲ್ಲಿ ಸರಳಾತಿಸರಳರು. ಒಂದೇ ಕುಟುಂಬದವರಂತೆ ಈ ವಿಶ್ವಕುಟುಂಬಿಯ ಬಾಂಧವ್ಯದ ವ್ಯವಹಾರ. ಶ್ರೀಗಳವರದು ಸರಳವಾದ ಜೀವನ ಉನ್ನತ, ವಿಶಾಲವಾದ ಚಿಂತನ.

ನನ್ನ ಮತಿಯ ಮಿತಿಯೊಳಗೆ ಅರಿವಿನ ಚೌಕಟ್ಟಿನಲ್ಲಿ- ಕ್ಯಾಮರದಲ್ಲಿ ಸೆರೆ ಹಿಡಿದ ಸಹಜ ಚಿತ್ರದಂತೆ, ನಾನು ಕಂಡ ಕೆಲವು ವಿಚಾರಗಳನ್ನು ಕನ್ನಡಿಯೊಳ್ ಕರಿಯನಡಗಿಸಿದಂತೆ, ಎಲ್ಲಾ ವಿವರಗಳನ್ನು ಯಥಾವತ್ತಾಗಿ ಕನ್ನಡಿಯನ್ನು ಹಿಡಿದಂತೆ ಸರ್ವಶರಣ ಶರಣೆಯರ ಮುಂದಿಟ್ಟಿರುವೆನು ಕಿರಿಯ ಲೇಖನದ ರೂಪವಾಗಿ. ಶ್ರೀಗಳವರ ಜೀವನ ತೆರೆದ ಪುಸ್ತಕದಂತೆ. ಇವರು ಅರವತ್ತು ವರ್ಷಗಳ ಸಾರ್ಥಕ ಜೀವನದ ಮಧುರ ಸ್ಮರಣೆಯ ಸಿಂಹಾವಲೋಕನದ ಈ ಮಹೋತ್ಸವದ ಸಂದರ್ಭದಲ್ಲಿ ನನ್ನ ಅರಿವಿನ ಕಿರು ಕಾಣಿಕೆಯಾಗಿ ಈ ಲೇಖನವನ್ನು ಅರ್ಪಿಸುತ್ತಿರುವೆನು.

ಭಕ್ತಿ ಸುಧಾಪ್ರೇಮಿ

೧೪-೮-೧೯೯೧

"ಬಸವ ಪಂಚಮಿ"

ಎಂ. ವೀರಭದ್ರಸ್ವಾಮಿ, ಚಳ್ಳಕೆರೆ

ಎಲ್ಲಾ ಪುರಾತನರ ಶ್ರೀ ಚರಣಕ್ಕೆ ಇಲ್ಲಿರ್ದೇ ಶರಣೆಂದರೆ ಸಾಲದೆ !
ಬಸವಾ, ಬಸವಪ್ಪಾ, ಬಸವಯ್ಯಾ ಶರಣೆಂದರೆ ಸಾಲದೆ !
ಎಲ್ಲರ ಹೃದಯದಲ್ಲಿ ಜ್ಯೋತಿಯಂತೆ ಬೆಳಗುತ್ತಿಪ್ಪ
ಮಹಾ ಮಹಿಮನಾಗಿ, ಎನಗಿದೇ ದಿವ್ಯ ಮಂತ್ರ.
ಬಸವ ಪ್ರಿಯ ಕೂಡಲ ಚೆನ್ನಸಂಗಯ್ಯನಲ್ಲಿ,
ಬಸವಾ, ಬಸವಾ, ಬಸವಾ ಶರಣೆಂದರೆ ಸಾಲದೆ !

ಕಲ್ಯಾಣ ಕಿರಣ ಓದುಗರೇ ಗಮನಿಸಿರಿ

ಕಲ್ಯಾಣ ಕಿರಣ ಪತ್ರಿಕೆಯು ಅಂಚೆಯಲ್ಲಿ ಬರುತ್ತಿದ್ದಂತೆಯೇ ನಿಮ್ಮ ಚಂದಾ ಸಂಖ್ಯೆ, ಆಜೀವ ಸದಸ್ಯತ್ವ ಸಂಖ್ಯೆ ಗುರುತು ಮಾಡಿ ಒಂದು ಕಡೆ ಬರೆದು ಇಟ್ಟುಕೊಳ್ಳಿರಿ. ಸಕಾಲದಲ್ಲಿ ಪತ್ರಿಕೆ ಕೈ ಸೇರದೆ ಇದ್ದಾಗ, ವಿಳಾಸ ತಿದ್ದುಪಡಿ, ಬದಲಾವಣೆ ಮಾಡುವಾಗ ನಿಮ್ಮ ಚಂದಾ ಸಂಖ್ಯೆಯನ್ನು ಬರೆಯಿರಿ. ದಿನ ದಿನಕ್ಕೆ ವೃದ್ಧಿಯಾಗುತ್ತಿರುವ ಚಂದಾದಾರರ ಪಟ್ಟಿಯಲ್ಲಿ ಕ್ರಮಸಂಖ್ಯೆಯಿಲ್ಲದೆ ಹುಡುಕುವುದು ಕಷ್ಟಸಾಧ್ಯವಾಗುತ್ತದೆ ಮತ್ತು ಕಾರ್ಯಕರ್ತರ ಸಮಯ ವ್ಯರ್ಥವಾಗುತ್ತದೆ ಎಂಬುದನ್ನು ಮನಗಾಣಿರಿ. ಪತ್ರವ್ಯವಹಾರ ಮಾಡುವಾಗ ಚಂದಾ ಸಂಖ್ಯೆಯೊಡನೆ ಪೂರ್ಣ ವಿಳಾಸವನ್ನೂ ಬರೆಯುವ ಅಭ್ಯಾಸ ಇಟ್ಟುಕೊಳ್ಳಿರಿ.

Digitalized by e-Sahithya Documentation Forum
Sponsored by Sarayu Foundation Trust

ಮಹಾಗುರುವಿಗೆ ನುಡಿಕಾಣಿಕೆ

1. ಅರವತ್ತು ತುಂಬಿದರೆ ಅರುಳು ಮರುಳೆಂಬುವರು
ಎರಡನ್ನು ಮೀರಿದಿರಿ ನೀವಿಂದು । ಅಪ್ಪಾಜಿ
ಅರಿವಿನಾನಂದದಲಿ ನಿಂದಿಹಿರಿ ॥

2. ಮರೆವಿನಲಿ ಮೈಮರೆತ ಮನುಜರ ಎಚ್ಚರಿಸಿ
ಅರಿವಿನ ಮಾರ್ಗವ ತೋರಿದಿರಿ । ಅಪ್ಪಾಜಿ
ಕುರುಹಿಂದ ಅರಿವೆಂದು ಹೇಳಿದಿರಿ ॥

3. ಲಿಂಗದ ಅರ್ಥವ ತಿಳಿಯದಂಥವರಿಗೆ
ಜಾತಿಯ ಕುರುಹಲ್ಲವೆಂದು ತಿಳಿಸಿ । ಅಪ್ಪಾಜಿ
ಜ್ಯೋತಿಯ ಕುರುಹೆಂದು ಅರುಹಿದಿರಿ ॥

4. ಎಲ್ಲರೂ ಬರುವಂತೆ ಎಲ್ಲರೂ ಇರುವಂತೆ
ಎಲ್ಲರೂ ಹೋಹಂತ ಬದುಕಲ್ಲ । ಅಪ್ಪಾಜಿ
ಬಲ್ಲಿದ ಬಸವನ ಪಥದವರು ನೀವು ॥

5. ಹೂವಿನ ಮೃದುಹೃದಯಿ ವಜ್ರದ ಕಟುಹೃದಯಿ
ನ್ಯಾಯ ನಿಷ್ಠುರಿ ನೀವು । ಪೂಜ್ಯ ಅಪ್ಪಾಜಿ
ನಮ್ಮೆಲ್ಲರ ಸಲಹುವ ಮಾತೃಹೃದಯಿ ॥

6. ಬಂಧು ಬಳಗವು ಬಂಧನಕ್ಕೆಳಸುವದು
ಭವದ ಬಾಧೆಯು ತೊಡೆಯದು । ಅಪ್ಪಾಜಿ
ಬಂಧನವ ಬಿಡಿಸುವ ಗುರು ನೀವು ॥

7. ಮರೆವಿನ ಕತ್ತಲಲಿ ಮೈಮರೆತು ಮಲಗಿದ್ದೆ
ಜ್ಞಾನ ರವಿಯಾಗಿ ಆಗಮಿಸಿ । ಅಪ್ಪಾಜಿ
ಅರಿವಿನ ಕಣ್ಣು ತೆರೆಸಿದಿರಿ ॥

8. ಗುರುವು ದೊರಕಿದರೆಂದು ಹರರೂಪ ತಾವಾಗಿ
ಬಸವ ತತ್ವ ಬೋಧಿಸುವ । ಅಪ್ಪಾಜಿ
ಶರಣರ ಘನತೆಯ ತಿಳಿಸಿದರು ॥

9. ನಮ್ಮ ಪುಣ್ಯವೇನ್ಹೇಳಲಿ ನಮ್ಮ ಭಾಗ್ಯವೇನ್ಹೇಳಲಿ
ನಮ್ಮಂಥ ಸುಖಿಗಳಿನ್ನಾರೀಜಗದಲ್ಲಿ । ಅಪ್ಪಾಜಿ
ನಿಮ್ಮಂಥ ಜ್ಞಾನನಿಧಿ ಗುರುವು ದೊರಕಿರಲು ॥

10. ಗುರಿಯಿರಿಸಿ ಮುಂದೆ ಗುರುವಾಗಿ ಹಿಂದೆ
ಶರಣರ ಮಾರ್ಗವ ತೋರಿದಿರಿ । ಅಪ್ಪಾಜಿ
ಬಸವ ಪಥದಲಿ ನಮ್ಮ ನಡೆಸುವಿರಿ ॥

11. ಏನು ಹೇಳಲಿ ನಿಮ್ಮ ಘನವಾದ ವ್ಯಕ್ತಿತ್ವ
ಹುಲುಮಾನವಳು ನಾನು । ಅಪ್ಪಾಜಿ
ಬಣ್ಣಿಸುವ ಜ್ಞಾನ ನನಗಿಲ್ಲ ॥

12. ಹೆಣ್ಣುಮಾಯೆಯೆಂಬ ದುರ್ಬಲತೆಯ ಜರಿದು
ದಿವ್ಯದೃಷ್ಟಿ ಇದ್ದರೆ । ಅಪ್ಪಾಜಿ
ಮಾತೆಯಾಗಿ ತೋರುವಳೆಂದಿರಿ ॥

13. ಬಂದಂಥ ನಿಂದೆಗಳ ಕುಂದದೆ ಎದುರಿಸಿ
ಮಾತಾಜಿಗಾಶ್ರಯವಿತ್ತಿರಿ । ಅಪ್ಪಾಜಿ
ದೀಕ್ಷೆಯಿತ್ತು ಮುಂದೆ ನಡೆಸಿದಿರಿ ॥

14. ಶರಣೆಯರ ಘನಕೇರಿಸಿದ ಬಸವಣ್ಣನವರಂತೆ
ಸ್ತ್ರೀ ಜಗದ್ಗುರು ಪೀಠ ಸ್ಥಾಪಿಸಿ । ಅಪ್ಪಾಜಿ
ಸ್ತ್ರೀ ಗುರುವ ಜಗಕೆ ನೀಡಿದಿರಿ ॥

15. ಜಗದಲ್ಲಿ ಗುರುವಾಗಿ ನಿಂದರು ಮಾತಾಜಿ
ದೇಶ ವಿದೇಶವ ಸುತ್ತಿ । ಅಪ್ಪಾಜಿ
ಧರ್ಮ ಪ್ರಚಾರವ ಮಾಡಿದರು ॥

16. ಮಾತಾಜಿಯಂಥವರ ಗುರುವಾಗಿ ಮಾಡಿದಿರಿ
ಬೆಳೆಸಿದರು ನಿಮ್ಮ ಘನತೆಯನು । ಅಪ್ಪಾಜಿ
ಅಮರಗೊಳಿಸಿದರು ನಿಮ್ಮ ಹೆಸರನ್ನು ॥

17. ದೀಕ್ಷೆಯ ಗುರುವೆನಗೆ ಮಾತಾಜಿಯಾದರು
ಶಿಕ್ಷಾ ಗುರು ನೀವೆನಗಾದಿರಿ । ಅಪ್ಪಾಜಿ
ಮೋಕ್ಷ ಗುರು ಬಸವಣ್ಣನೆಲ್ಲರಿಗು ॥

18. ಮನೆ ತೊರೆದು ಬಂದವರ ಮಕ್ಕಳಂತೆ ಸಲುಹಿ
ಆಶ್ರಯವಿತ್ತಿರಿ ಸರ್ವರಿಗೆ । ಅಪ್ಪಾಜಿ
ಮನೆಮರೆಸಿ ಶಿವನ ತೋರಿದಿರಿ ॥

19. ತಾಯ್ತಂದೆಯಾಗಿ ಮಮತೆಯ ಹರಿಸುತ್ತ
ವಾತ್ಸಲ್ಯ ಧಾರೆಯೆರೆದಿರಿ । ಅಪ್ಪಾಜಿ
ತಾಯ್ತಂದೆಗಳ ಮರೆಸಿದಿರಿ ॥

20. ಧುಮ್ಮಿಕ್ಕಿ ಹರಿಯುವ ಜಲಪಾತ ನಿಮ್ಮ ಜ್ಞಾನ
ಕಿರು ಸರಸಿಯಂತೆ ನನ ಮತಿಯು । ಅಪ್ಪಾಜಿ
ಅರಿಯುವ ಶಕ್ತಿ ನನಗಿಲ್ಲವು ॥

Digitalized by e-Sahithya Documentation Forum
Sponsored by Sarayu Foundation Trust

21. ಕೈಮುಗಿದು ಶಿರಬಾಗಿ ಶರಣಾಗತಳಾಗುವೆ
ವಿನಯದಿಂದ ಬೇಡುವೆ । ಅಪ್ಪಾಜಿ
ಜ್ಞಾನವನ್ನರಿಯುವ ಶಕ್ತಿ ನೀಡೆಂದು ॥

22. ಸ್ಥಾನಮಾನವು ಬೇಡ ಕೀರ್ತಿ ವಾರ್ತೆಯು ಬೇಡ
ಸುತ್ತಿ-ಗೌರವಗಳು ಬೇಡ । ಅಪ್ಪಾಜಿ
ಜ್ಞಾನವಿಲ್ಲದ ಬದುಕು ಬೇಡೆನಗೆ ॥

23. ಬೇಕು ಬೇಡಗಳನ್ನಳಿದು ಬೇಡುವೆ ನಾನೀಗ
ಘನವಾದ ನಿಮ್ಮ ಜ್ಞಾನವನು । ಅಪ್ಪಾಜಿ
ಅಲ್ಪವಾದರೂ ಹರಿಸಿ ಉದ್ಧರಿಸಿರೆಂದು

24. ಬಂಜರು ಹೃದಯಗಳಲಿ ಭಕ್ತಿಯ ಬೆಳೆಸಿದಿರಿ
ಮುಕ್ತಿ ಮಾರ್ಗವ ತೋರಿದಿರಿ । ಅಪ್ಪಾಜಿ
ಬಸವನ ಭಕ್ತರಾಗಿಸಿದಿರಿ ॥

25. ಹಲವು ದೇವರೆಂದು ಅರಿಯದೆ ತಿರುಗುತ್ತ
ವ್ಯರ್ಥ ಜೀವನವ ಕಳೆಯುವವರಿಗೆ । ಅಪ್ಪಾಜಿ
ದೇವನೊಬ್ಬನೆಂದು ಉಸುರಿದಿರಿ ॥

26. ಬಸವಣ್ಣನ ತತ್ತ್ವ ಹಸನಾಗಿ ಬೋಧಿಸುತ
ಮರೆಸುವಿರಿ ಮನದ ತಾಪವ । ಅಪ್ಪಾಜಿ
ಇರಿಸುವಿರಿ ಆನಂದ ಶರಧಿಯಲಿ ॥

27. ತತ್ತ್ವಜ್ಞಾನಿಯಾಗಿ ಸುಜ್ಞಾನ ನೀಡುತ
ಅಜ್ಞಾನ ತಿಮಿರವ ತೊಡೆದಿರಿ । ಅಪ್ಪಾಜಿ
ಸುಜ್ಞಾನ ಪಥಕೆ ಹಚ್ಚಿದಿರಿ ॥

28. ಜ್ಞಾನವ ಬೋದಿಸುವ ಗುರುವನ್ನು ಅರಸುತ್ತ
ಬಳಲುತ್ತ ತಿರುಗಿದೆ ಬಹುದಿನ । ಅಪ್ಪಾಜಿ
ಗುರುವಾಗಿ ದೊರಕಿದಿರಿ ನಮಗಿಂದು ॥

29. ಹಸನಾಯ್ತು ನನ ಬಾಳು ಹುಸಿ ಸಂಸಾರವ ತೊರೆದು
ನಿಜದ ನೆಲೆಯ ತೋರಿದಿರಿ । ಅಪ್ಪಾಜಿ
ನಿತ್ಯದಾನಂದದಲಿ ನಿಲಿಸಿದಿರಿ ॥

30. ಅವರಿವರು ಯಾರೇನು ಎಲ್ಲರೂ ಒಂದೆಂದು
ವಿಶ್ವಧರ್ಮವ ಬೋಧಿಸುವಿರಿ । ಅಪ್ಪಾಜಿ
ವಿಶ್ವಭ್ರಾತೃತ್ವವ ಬೆಳೆಸುವಿರಿ ॥

31. ಅಳಿಮನವ ಅಳಿಸಿದಿರಿ ಘನಮನವ ಬೆಳೆಸಿದಿರಿ
ಮಹಾಮನದಲ್ಲಿ ನಿಂದು । ಅಪ್ಪಾಜಿ
ಮಹಾಮನೆಯ ಮಕ್ಕಳಾಗಿಸಿದಿರಿ ।

32. ಭೇದ ಭಾವವ ಅಳಿಸಿ ಶಾಂತಿ ಸಮತೆಯ ಬೆಳೆಸಿ
ಕ್ಷುಲ್ಲಕತನಗಳ ಬಿಡಿಸಿದಿರಿ । ಅಪ್ಪಾಜಿ
ಸ್ನೇಹ-ಪ್ರೇಮಗಳ ಕಲಿಸಿದಿರಿ ॥

33. ಕ್ರಾಂತಿಯ ಗುರುವಾಗಿ ಶಾಂತಿಯ ಮರವಾಗಿ
ಸಮತೆಯ ಕಹಳೆಯ ಮೊಳಗುವಿರಿ । ಅಪ್ಪಾಜಿ
ವಿಶ್ವಕಲ್ಯಾಣಕೆ ಶ್ರಮಿಸುವಿರಿ ॥

34. ಅಕ್ಕಮಹಾದೇವಿಯ ಅಕ್ಕರೆಯ ಮಗನಾಗಿ
ಬಸವಣ್ಣನ ಕಾರುಣ್ಯದ ಶಿಶುವಾಗಿ । ಅಪ್ಪಾಜಿ
ನಮ್ಮೆಲ್ಲರ ವಾತ್ಸಲ್ಯ ಪಿತರು ನೀವು ॥

35. ದಲಿತ ಪ್ರೀತರು ನೀವು ನೊಂದವರ ಕಲ್ಪತರು
ಸ್ತ್ರೀ ಕುಲೋದ್ಧಾರಕರು ನೀವು । ಶ್ರೀ ಅಪ್ಪಾಜಿ
ಸಂಸ್ಥೆಗಳ ನಿರ್ಮಾಪಕರು ನೀವು ॥

36. ಕ್ರಾಂತಿವೀರರು ನೀವು ಶಾಂತಿದೂತರು ನೀವು
ಭೋಗತ್ಯಾಜ್ಯರು ನೀವು । ಗುರು ಅಪ್ಪಾಜಿ
ಕಾಯಕಯೋಗಿ ಮಹಾದಾಸೋಹಿ ನೀವು ॥

37. ಜಾತಿ ಭೇದವ ಜರಿದು ಮೂಢರೂಢಿಯ ತೊಡೆದು
ಸಂಪ್ರದಾಯದ ಬೇರ ಕಿತ್ತೆಸೆದು । ಅಪ್ಪಾಜಿ
ನಿಜ ತತ್ತ್ವದಾಬೀಜ ಬಿತ್ತಿದಿರಿ ॥

38. ಎಡರು ತೊಡರನು ಜಯಿಸಿ ಕೀರ್ತಿವಾರ್ತೆಯ ಸರಿಸಿ
ಸ್ತುತಿ-ನಿಂದೆಗಳನು ಲಕ್ಷಿಸದೆ । ಅಪ್ಪಾಜಿ
ಬಸವ ರಕ್ಷೆಯ ಹೊತ್ತು ನಡೆದಿರಿ ॥

39. ಪ್ರವಚನದ ಪಟುವಾಗಿ ಅರಿವಿನ ಗುರುವಾಗಿ
ಧರ್ಮ ಬೋಧೆಯ ನಿತ್ಯ ಮಾಡುವಿರಿ । ಅಪ್ಪಾಜಿ
ಶ್ರವಣಾನಂದದಿ ಎಲ್ಲರನಿರಿಸುವಿರಿ ॥

40. ಬಿಸಿಲಿರಲಿ ಚಳಿಯಿರಲಿ ಗುಡುಗಿರಲಿ ಮಳೆಬರಲಿ
ಅಡೆತಡೆಗಳನೆಲ್ಲ ಎದುರಿಸಿ । ಅಪ್ಪಾಜಿ
ಬೋಧೆಯ ಕಾಯಕ ಮಾಡುವಿರಿ ॥

41. ಮನವಿಟ್ಟು ಮರುಗಿದಿರಿ ಜಗವೆಲ್ಲ ನನದೆಂದು
ನಾನದರ ಸೇವಕ ನೆನ್ನುತಲಿ । ಅಪ್ಪಾಜಿ
ಲೋಕಹಿತಕೆ ದುಡಿದು ಸವೆದಿರಿ ॥

Digitalized by e-Sahithya Documentation Forum
Sponsored by Sarayu Foundation Trust

42. ದೇಶವಿದೇಶದಿ ತತ್ತ್ವವ ತಿಳಿಸಿದಿರಿ
ಬಸವಣ್ಣ ವಿಶ್ವಗುರುವೆಂದು ಸಾರಿ । ಅಪ್ಪಾಜಿ
ಭಾರತದ ಕೀರ್ತಿ ಮೊಳಗಿದಿರಿ ॥

43. ರಾಷ್ಟ್ರವು ಉಳಿದರೆ ಧರ್ಮದ ಉಳಿವೆಂದು
ದೇಶದ ಮಹತಿಯ ತೋರುವಿರಿ । ಅಪ್ಪಾಜಿ
ರಾಷ್ಟ್ರಪ್ರೇಮವನು ತುಂಬುವಿರಿ ॥

44. ಕನ್ನಡದ ಚೆನ್ನುಡಿಯು ಕಿಲಕಿಲನೆ ಹರಿಯುವುದು
ನಿಮ್ಮ ನಾಲಿಗೆಯ ಮೇಲಿಂದ । ಅಪ್ಪಾಜಿ
ಕನ್ನಡಕೆ ಕಳಶವಿಟ್ಟವರು ನೀವು ॥

45. ನೊಂದು ಬೆಂದವರನ್ನು, ನಂಬಿ ಬಂದವರನ್ನು
ಸಂತೈಸಿ ಸಾಂತ್ವನ ನೀಡುವಂಥ । ಅಪ್ಪಾಜಿ
ನಿಮ್ಮ ವೈಶಾಲ್ಯತೆ ಬೆಳೆಯಲೆಮಗೆ ॥

46. ಸಾಧಕರು ಬರಲವ್ವ ಸಂಖ್ಯೆಯಿಲ್ಲದ ತೆರದಿ
ಅಧ್ಯಾತ್ಮ ಪರಿಮಳ ಹರಡಲಿ । ಅಪ್ಪಾಜಿ
ಎಂದು ಹಾರೈಸುವದು ನಿಮ್ಮ ಮನವು ॥

47. ಹರಪೂಜೆ ಗುರುಸೇವೆ ನಿತ್ಯ ಜಂಗಮಸೇವೆ
ಸತ್ಯ ಶರಣರ ಪಾದಸೇವೆಯು । ಅಪ್ಪಾಜಿ
ಅನವರತವೂ ಸಾಗಲಿ ನನ್ನಿಂದ

48. ಹತ್ತಲಿದ್ದವರನ್ನು ಸುತ್ತಲಿದ್ದವರನ್ನು
ನೋಯಿಸದೆ ನಲಿಸುವಂತಹ । ಅಪ್ಪಾಜಿ
ಘನವಾದ ಗುಣಗಳು ಉದಿಸಲೆನಗೆ ॥

49. ಹಿರಿತನ ಒಡೆತನ ಕಡೆತನಕ ಬೇಡೆನಗೆ
ಕಿರಿತನದಲ್ಲಿದ್ದು ಸತತವೂ । ಅಪ್ಪಾಜಿ
ಸೇವೆಗೈಯುವ ಭಾವ ಉಳಿಯಲೆನಗೆ ॥

50. ಮೃದು ನುಡಿಯ ಆಡುತ್ತ ಪರರ ನೋಯಿಸದಂಥ
ಹೆರವರ ಕಷ್ಟವನ್ನರಿವಂಥ । ಅಪ್ಪಾಜಿ
ಮೃದುವಾದ ಹೃದಯವು ಇರಲೆನಗೆ ॥

51. ಹಗಲಿರುಳೆನ್ನದೆ ಹಸಿವು ತೃಷೆ ಎಣಿಸದೆ
ಕಾದಿರಲಿ ಎನಗೆ ಪರಸೇವೆ । ಅಪ್ಪಾಜಿ
ತನುಮುಟ್ಟಿ ಮಾಡುವ ಮನವಿರಲಿ ॥

52. ಧರ್ಮವನು ಕೊಟ್ಟ ಗುರು ಬಸವಣ್ಣನೆಂದು
ವಚನವೇ ಧರ್ಮ ಸಂಹಿತೆಯೆಂದು । ಅಪ್ಪಾಜಿ
ಧರ್ಮದ ಮೂಲವ ತಿಳಿಸಿದಿರಿ ॥

53. ಕೂಡಲ ಸಂಗಮವು ಧರ್ಮಕ್ಷೇತ್ರವೆಂದು
ಬಸವ ಧರ್ಮೀಯರಿಗರುಹಿದಿರಿ । ಅಪ್ಪಾಜಿ
ನೆಲೆನಿಂತು ಕಲ್ಯಾಣಗೊಳಿಸಿದಿರಿ ॥

54. ಬಸವ ಧರ್ಮದ ಪೀಠ ರಚಿಸಿದಿರಿ ಇಂದು
ಬಸವ ಮಹಾಮನೆಯ ಕಟ್ಟಿದಿರಿ । ಅಪ್ಪಾಜಿ
ಕೂಡಲ ಸಂಗಮ ಕ್ಷೇತ್ರದಲಿ ॥

55. ವರ್ಷಕೊಮ್ಮೆಯಾದರು ಸೇರಲಿ ಶರಣರು
ಧರ್ಮ ಚಿಂತನಗೋಷ್ಠಿ ನಡೆಸುದಕೆ । ಅಪ್ಪಾಜಿ
ಶರಣ ಮೇಳವನು ರೂಪಿಸುತ ॥

56. ನಾಡು ನಾಡಿನ ಜನರು ಹಾಡುತ ಬರುವರು
ಪಾದಯಾತ್ರೆಯ ಮಾಡುತಲಿ । ಅಪ್ಪಾಜಿ
ಗುರು ಬಸವ ಮಂತ್ರ ಸ್ಮರಿಸುತಲಿ ॥

57. ಕೂಡಲ ಸಂಗಮದಿ ಕೂಡಿದರು ಶರಣರು
ಅನುಭವ ಮಂಟಪವ ನೆನಪಿಸುತ । ಅಪ್ಪಾಜಿ
ಬಸವ ಯುಗತೋರ್ದವರು ನೀವೆಂದು ॥

58. ಶರಣ ಮೇಳವು ನಡೆದು ಹರುಷಗೊಂಡರು ಜನರು
ನೆನೆಸುವರು ನಿಮ್ಮ ಹೆಸರನ್ನು । ಅಪ್ಪಾಜಿ
ಬಸವ ಧರ್ಮವ ಉಳಿಸಿದರು ಎಂದು ॥

59. ಬಸವ ಧರ್ಮೀಯರಿಗೆ ತತ್ತ್ವಾನುಯಾಯಿಗಳಿಗೆ
ತವರು ಮನೆಯಾಯ್ತು ಸಂಗಮವು । ಅಪ್ಪಾಜಿ
ಚಿಂತನ ಮಂಥನ ಮಾಡುದಕೆ ॥

60. ಅರವತ್ತು ವರುಷದ ಜನ್ಮದಿನ ಆಚರಿಸಿ
ಅರಿತಂತೆ ಬರೆದಿರುವ ನುಡಿಕಾಣಿಕೆ । ಅಪ್ಪಾಜಿ
ಸಲ್ಲಿಸುವೆ, ಸ್ವೀಕರಿಸಿ ಹರಸಿರಿಂದು ॥

61. ಸಾಗಲಿ ನಿಮ್ಮ ಸೇವೆ ನೂರಾರು ವರುಷವ ಮೀರಿ
ವರ್ಧಿಸಲಿ ಆಯುಷ್ಯ ಆರೋಗ್ಯ । ಅಪ್ಪಾಜಿ
ಮನಮುಟ್ಟಿ ಬೇಡುವೆ ಬಸವಣ್ಣಗೆ ॥

—**ಸೋದರಿ ಅಕ್ಕಮಹಾದೇವಿ,** (ಕುಂದಗೋಳ)
ಬಸವ ಮಹಾಮನೆ, ಕೂಡಲ ಸಂಗಮ.

Digitalized by e-Sahithya Documentation Forum
Sponsored by Sarayu Foundation Trust

VESTA

Water Heater

The right choice for your bathroom.



Unique Cleaning Arrangement

Which is easy and effective

The New *VESTA*

Automatic water Heaters

........a new verse for your bathroom

"Strong water Heaters" are available in 25, 35, 50, 70 and 100 litres capacities and different attractive colours for vertical and horizontal mounting to suit every budget and every requirement.

Water Heaters available in 25, 35, 50, 70 and 100 liters capacity

Manufactured by :

Venkatesh Steel Industries

No. D-501, Industrial Estate,

HUBLI-30 (Karnataka) Phone : 51824

"ತ್ಯಾಗದಿಂದಲೇ ಧರ್ಮದ ಉಳಿವು"

ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ಕರೆ

"ಧರ್ಮ-ನೀತಿ-ರಾಷ್ಟ್ರೀಯ ಮನೋಭಾವ ಮುಂತಾಗಿ ಉಳಿಯಬೇಕೆಂದಾದರೆ ತ್ಯಾಗ-ಬಲಿದಾನಗಳಿಂದ ಮಾತ್ರ ಸಾಧ್ಯ. " ಹೀಗೆಂದು ನುಡಿದವರು ತಮಗೆ ನೀಡಿದ ಅಭಿನಂದನೆಗೆ ಉತ್ತರ ಕೊಟ್ಟ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮಿಗಳು. ಭಾರತ ದೇಶ ತನ್ನದೇ ಆದ ಸಾಂಸ್ಕೃತಿಕ-ಧಾರ್ಮಿಕ ಪರಂಪರೆಯನ್ನು ಮತ್ತು ಉದಾತ್ತ ಮೌಲ್ಯಗಳನ್ನು ಹೊಂದಿರುವಂಥದು. ಆದರೆ ಇಂದು ಏನಾಗುತ್ತಿದೆ, ರಾಷ್ಟ್ರಪ್ರೇಮ ನಶಿಸುತ್ತ ಪ್ರತ್ಯೇಕತಾವಾದ ಬೆಳೆಯುತ್ತಿದೆ. ಧಾರ್ಮಿಕ ಮನೋಭಾವ ನಶಿಸಿ ಮತಾಂಧತೆ ತಲೆ ಎತ್ತುತ್ತಿದೆ. ಭ್ರಷ್ಟಾಚಾರ, ಅಸತ್ಯ, ಸ್ವೇಚ್ಛಾಚಾರಗಳು ನಗ್ನನೃತ್ಯ ಮಾಡುತ್ತಿವೆ. ಭಾರತ ದೇಶದ ಭವಿಷ್ಯವೇನು ಎಂಬ ಬಗ್ಗೆಯೇ ಆತಂಕ ಮಾತ್ರವಲ್ಲ ಮನುಷ್ಯ ಸಮಾಜ ತಳೆಯುತ್ತಿರುವ ಪಾಶವಿಕ ಪ್ರವೃತ್ತಿ ನೋಡಿದರೆ ಮಾನವ ಸಮಾಜದ ಭವಿಷ್ಯವೇನು ಎಂದು ವಿಚಾರ ಮಾಡುವವರಲ್ಲಿ ಆತಂಕವು ಉಂಟಾಗದೇ ಇರದು. ಇಂಥ ವಾತಾವರಣದಲ್ಲಿ ತ್ಯಾಗ-ಕಳಕಳಿ-ಬಲಿದಾನಗಳಿಂದ ಮಾತ್ರ ಉತ್ತಮ ಮೌಲ್ಯಗಳನ್ನು ಪ್ರತಿಷ್ಠಾಪಿಸಲು ಸಾಧ್ಯ ಆ ತ್ಯಾಗಕ್ಕೆ ಇಂದು ಜನರು ಸಿದ್ಧರಾಗಬೇಕು." ಎಂದು ಕರೆ ನೀಡಿದರು.

ಅಪೂರ್ವವಾಗ್ಮಿ, ಕ್ರಾಂತಿಕಾರಿ ಧರ್ಮ ಪ್ರಸಾರಕ, ವಿಶ್ವಕಲ್ಯಾಣ ಮಿಷನ್, ಸಂಸ್ಥಾಪಕ ಅಧ್ಯಕ್ಷ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರಿಗೆ ಧಾರವಾಡದ ರಾಷ್ಟ್ರೀಯ ಬಸವ ದಳದವರು ದಿ. 8ರಂದು ಭಾನುವಾರ ಕಲಾಭವನದಲ್ಲಿ ಏರ್ಪಡಿಸಿದ್ದ ಅಭಿನಂದನವನ್ನು ಸ್ವೀಕರಿಸಿ ಸ್ವಾಮೀಜಿಯವರು ಮಾತನಾಡುತ್ತಿದ್ದರು. "ಇಂದು ಜಗತ್ತಿಗೆ ಧರ್ಮವು ಅತ್ಯಗತ್ಯವಾಗಿದೆ. ಧರ್ಮವೆಂದರೆ ಜಾತೀಯತೆ, ಮತಾಂಧತೆ, ಮೂಢನಂಬಿಕೆ ಎಂಬ ತಪ್ಪು ಕಲ್ಪನೆಯಿಂದಾಗಿ ಜನರು ಧರ್ಮವೇ ಬೇಡವೆಂಬ ತಪ್ಪು ಭಾವನೆ ತಳೆಯುತ್ತಿದ್ದಾರೆ. ಆದರೆ ಧರ್ಮದ ಸ್ವರೂಪ ಹೀಗಿಲ್ಲ. ಅದು ತನ್ನ ಪರಿಶುದ್ಧ ರೂಪದಲ್ಲಿ ಸಂಜೀವಿನಿಯಾಗಿದೆ. ಆದ್ದರಿಂದಲೇ ಜಾತಿವರ್ಣವರ್ಗ ರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಧರ್ಮದ ತಳಹದಿಯ ಮೇಲೆ ಹನ್ನೆರಡನೆಯ ಶತಮಾನದಲ್ಲಿ ಸಮಾಜ ಸುಧಾರಕ ಬಸವಣ್ಣನವರು ಕಟ್ಟಿ ತೋರಿಸಿದರು. ನೆಗಡಿ ಬಂದಾಗ ಮೂಗನ್ನು ನಾವು ಕತ್ತರಿಸಬೇಕಾಗಿಲ್ಲ, ನೆಗಡಿಗೆ ಔಷದಿ ತೆಗೆದುಕೊಳ್ಳಬೇಕು. ಹಾಗೆಯೇ ಧರ್ಮದಲ್ಲಿ ನುಸುಳುವ ಮತಾಂಧತೆ, ಜಾತೀಯತೆ, ವಿಧಿವಾದ ಮುಂತಾದುವನ್ನು ತೆಗೆದುಹಾಕಿ ನಿಜವಾದ ಧರ್ಮವನ್ನು ಇಂದು ಪ್ರಚಾರಗೊಳಿಸಬೇಕು." ಎಂದು ಸಮಾಜಕ್ಕೆ ಕರೆನೀಡಿದರು. ತಮಗೆ ನೀಡಿದ ಅಭಿನಂದನೆಗೆ ಕೃತಜ್ಞತೆ ಸಲ್ಲಿಸಿದ ಸ್ವಾಮೀಜಿ: "ನನ್ನ ಜೀವನದ ಧ್ಯೇಯವೇ ಧರ್ಮ-ನೀತಿ-ರಾಷ್ಟ್ರೀಯತೆಗಳನ್ನು ಉದ್ದೀಪಿಸುವ ಬಸವ

Digitalized by e-Sahithya Documentation Forum
Sponsored by Sarayu Foundation Trust

ತತ್ತ್ವದ ಪ್ರಚಾರ, ಇದು ನನ್ನ ಉಸಿರು. ನಾನು ಮಾಡಿದ ಪವಿತ್ರ ಸೇವೆಯನ್ನು ಗುರುತಿಸಿ ನೀವುಗಳು ಅಭಿನಂದಿಸಿದ್ದೀರಿ. ಇದನ್ನು ಕೃತಜ್ಞತೆಯಿಂದ ಸ್ವೀಕರಿಸಿ, ನೀವು ನನ್ನ ಮೇಲೆ ಇನ್ನೂ ಹೆಚ್ಚಿನ ಜವಾಬ್ದಾರಿ ವಹಿಸುತ್ತಿದ್ದೀರಿ, ಎಂದು ಭಾವಿಸಿ, ನಮ್ಮ ಧರ್ಮ-ಸಮಾಜ-ದೇಶಗಳಿಗೆ ದೇವರ ಸಾಕ್ಷಿಯಾಗಿ ಕೀರ್ತಿಯನ್ನು ತರುವಂತೆ ನಾನು ಬಾಳುವ ವಚನ ನೀಡುತ್ತೇನೆ." ಎಂದು ಪೂಜ್ಯ ಸ್ವಾಮೀಜಿ ಮಾತನಾಡಿದರು.

ಅಭಿನಂದನ ಕಾರ್ಯಕ್ರಮವನ್ನು ಧಾರವಾಡದ ಪ್ರಮುಖರಾದ ಜಿ. ಜಿ. ದೊಡ್ಡವಾಡರವರು ದೀಪ ಬೆಳಗಿಸಿ ಉದ್ಘಾಟನೆ ಮಾಡಿದರು. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಜಂಗಮ ಜ್ಯೋತಿಯಾಗಿ ಮಹಾನ್ ಕಾರ್ಯವನ್ನು ಮಾಡಿದ್ದಾರೆ. ನಾಡಿನುದ್ದಕ್ಕೂ ಸಂಚರಿಸಿ ಧರ್ಮ ಪ್ರಚಾರ ಮಾಡಿದ್ದಾರೆ. ಬಸವ ತತ್ತ್ವದ ಮಹತ್ವವನ್ನು ಜನಮನದಲ್ಲಿ ಬಿತ್ತಿ ಬೆಳೆದಿದ್ದಾರೆ. ಅವರು ಧರ್ಮ-ಸಾಹಿತ್ಯ ಪ್ರಚಾರಗಳ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಅತ್ಯದ್ಭುತ."ಎಂದು ದೊಡ್ಡವಾಡರವರು ಮಾತನಾಡಿದರು. ಪುಷ್ಪವೃಷ್ಟಿಯಲ್ಲಿ ಭಾಗವಹಿಸಿ ಶ್ರೀಗಳನ್ನು ಸತ್ಕರಿಸಿದರು.

ರಾಜ್ಯೋತ್ಸವ ಪ್ರಶಸ್ತಿ ವಿಜೇತ ಡಾ॥ ನಿತಿನ ಚಂದ್ರ ಹತ್ತಿಕಾಳರವರು ಹಿಂದು ಯಾರು? ಎಂಬ 2ಧ್ವನಿ ಸುರುಳಿಗಳನ್ನು ಬಿಡುಗಡೆ ಮಾಡಿ ಮಾತಾಡಿದರು. "ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ತಮ್ಮ ಧರ್ಮ ಬೋಧೆಯಿಂದ ಅಸಂಖ್ಯಾತ ಜನರಲ್ಲಿ ಧರ್ಮ-ನೀತಿಗಳ ಜಾಗೃತಿ ಮಾಡಿದ್ದಾರೆ. ನಾನು ಪೂಜ್ಯರ ಭಾಷಣಗಳನ್ನು ವಿದ್ಯಾರ್ಥಿ ಜೀವನದಲ್ಲಿ ಕೇಳಿ ಸ್ಫೂರ್ತಿಗೊಂಡಿದ್ದೇನೆ. ನನ್ನಂತಹ ಅನೇಕರು ಶ್ರೀಗಳ ಭಾಷಣ-ಸಾಹಿತ್ಯದಿಂದ ಪ್ರೇರಣೆಗೊಂಡು ಉದಾತ್ತ ಚಿಂತನೆ ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು. ಸಾಹಿತ್ಯ, ಪ್ರವಚನ, ಧ್ವನಿ ಸುರುಳಿ, ಪ್ರಾರ್ಥನಾ ಸಭೆ, ವೀಡಿಯೋ ಕೆಸೆಟ್ಟು ಹೀಗೆ ವೈವಿಧ್ಯಮಯ ಸಾಧನಗಳನ್ನು ಬಳಸಿಕೊಂಡು ಪೂಜ್ಯ ಸ್ವಾಮೀಜಿ ಧರ್ಮ ಪ್ರಚಾರವನ್ನು ಮಾಡುತ್ತಿರುವುದು ಅಭಿನಂದನೀಯ ಮತ್ತು ಅನುಕರಣೀಯ" ಎಂದು ಡಾ॥ ನಿತಿನ ಚಂದ್ರ ಹತ್ತೀಕಾಳರವರು ಮಾತ ನಾಡಿದರು.

ಪ್ರೊ. ವ್ಹಿ.ಜಿ. ಮಾರೀಹಾಳರವರು ಉಪನ್ಯಾಸ ಮಾಡಿದರು. ಸಮಾಜ-ಧರ್ಮಗಳ ಕ್ಷೇತ್ರದಲ್ಲಿ ಸೇವೆ ಮಾಡಿದ ಅನೇಕ ಗಣ್ಯರನ್ನು ಸತ್ಕರಿಸಲಾಯಿತು. ಶ್ರೀ ಗುರು ಪುತ್ರಪ್ಪ ದೊಡ್ಡವಾಡ, ಪ್ರೊ. ವ್ಹಿ. ಜಿ. ಮಾರೀಹಾಳ, ಡಾ॥ ನಿತಿನ ಚಂದ್ರ ಹತ್ತೀಕಾಳ, ಯೋಗಿ ಸಿದ್ಧಣ್ಣ ಕಲಾದಗಿ, ಡಾ॥ ಎಸ್. ಆರ್. ರಾಮನಗೌಡರು, ಎಂ. ಜಿ. ಅಗಡಿ ವಕೀಲರು, ಶಿವಣ್ಣ ಶಿವಲಿಂಗಪ್ಪ ಹರಿಹರ, ಮುನಿಸಿಪಲ್ ಕೌನ್ಸಿಲರ್ ವಿಜಯಾ ಎಸ್. ಲಿಂಬಣ್ಣದೇವರಮಠ, ಶಂಕರಪ್ಪ ಕರಡಿಗುಡ್ಡ, ಚನ್ನಬಸಯ್ಯ ಬಣಕಾರ, ಎಲ್ಲೂಬಾಯಿ ಕೋಂಬಳಿ, ಗಂಗಮ್ಮ ಎಸ್. ಹೆಚ್. ಪಾಟೀಲ, ಜ್ಯೋತಿಪ್ಪ ಶಾಸ್ತ್ರ ವಿದ್ವಾಂಸ ಚನ್ನವೀರ ಶಾಸ್ತ್ರಿ ಸಾಲಿ ಮಠ, ಗುರು ಬಸವ ಮಂಟಪದ ಶರಣೆ. ಸಂಗಮ್ಮ ಕರವೀರ

ಸೆಟ್ಟರ ಅವರುಗಳನ್ನು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರು ಶಾಲು ಹೊದ್ದಿಸಿ, ಬಸವಣ್ಣನವರ ಲೋಹಫಲಕಗಳನ್ನು ಕೊಟ್ಟು ಸತ್ಕರಿಸಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಅಧ್ಯಕ್ಷೀಯ ಭಾಷಣ ಮಾಡಿ "ಪೂಜ್ಯ ಸ್ವಾಮೀಜಿಯವರು ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟು ಸಮಾನತೆಯನ್ನು ಎತ್ತಿಹಿಡಿದರು. ಗುರು ಬಸವಣ್ಣನವರು ಸ್ತ್ರೀ ಸಮಾನತೆಯನ್ನು ಬೋಧೆ ಮಾಡಿದರು. ಅದೇ ಸಂವಿಧಾನದ ಆಧಾರ ಹಿಡಿದು, ಪೂಜ್ಯ ಶ್ರೀಗಳು ಸ್ತ್ರೀ ಜಗದ್ಗುರು ಪೀಠವನ್ನು ಸಂಸ್ಥಾಪಿಸಿ ಮಹಿಳೆಯರ ಸಮಾನತೆಯನ್ನು ಎತ್ತಿಹಿಡಿದರು. ಇಂದು ಪ್ರವಚನ ಪಿತಾಮಹರಾಗಿ, ಅನೇಕ ಧರ್ಮಬೋಧಕರುಗಳನ್ನು ತರಬೇತಿಗೊಳಿಸಿದ್ದಾರೆ. ತ್ಯಾಗಜೀವಿಗಳಿಗೆ ಪ್ರೇರಣೆ ನೀಡಿದ್ದಾರೆ. ಆದ್ದರಿಂದ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಕಡಿಮೆಯೆ" ಎಂದು ನುಡಿದರು.

ಗುರುಪಾದಪ್ಪ ಬೆಟಗೇರಿಯವರು ಸ್ವಾಗತಿಸಿದರು, ಪರಿಚಯಿಸಿ ಕೊಟ್ಟರು, ಗಿರಿಜಮ್ಮ ಮತ್ತು ಸಂಗಡಿಗರು ಅಭಿನಂದನ ಗೀತೆಗಳನ್ನು ಹಾಡಿದರು, ಸಂಗನಗೌಡ ಖಾನಗೌಡರು ಶಾಲು ಹೊದ್ದಿಸಿ ಸತ್ಕರಿಸಿದರು ಗಣ್ಯರಿಗೆ ಮಾಲಾರ್ಪಣೆ ಮಾಡಿದರು. ಸುಬ್ಬಣ್ಣನವರು ಶರಣು ಸಮರ್ಪಣೆ ಮಾಡಿದರು. ಮಂಗಲ ಗೀತೆಯೊಡನೆ ಕಾರ್ಯಕ್ರಮ ಮುಕ್ತಾಯವಾಯಿತು. ಅಭಿನಂದನ ಸಮಾರಂಭಕ್ಕೆ ಕಿಕ್ಕಿರಿದು ನೆರೆದ ಅಭಿಮಾನಿಗಳು ಹೆಚ್ಚಿನ ಶೋಭೆ ತಂದರು.

—ಕಲ್ಯಾಣಪ್ಪ ಪರಮಾದಿ
ಬಸವ ಚೈತನ್ಯ, ಹುಬ್ಬಳ್ಳಿ



Thus Told Sri Siddarameswara

Basava's form is the object of
meditation.
Praise of him, the source of
knowledge.
To chant 'Basava' is in itself
devotion
O! Kapila Siddha Mallikarjuna

Digitalized by e-Sahithya Documentation Forum
Sponsored by Sarayu Foundation Trust

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವ ತತ್ತ್ವ ಪರೀಕ್ಷೆಗಳು

ಬಸವ ತತ್ತ್ವ ಪರಿಷತ್ ಆಶ್ರಯದಲ್ಲಿ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಅವರ ನಿರ್ದೇಶನದಲ್ಲಿ· ಬೆಂಗಳೂರಿನ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯದ ಬಸವ ತತ್ತ್ವ ಪ್ರವೇಶ, ಬಸವ ತತ್ತ್ವ ಪರಿಚಯ, ಬಸವ ತತ್ತ್ವ ಪ್ರವೀಣ ಪರೀಕ್ಷೆಗಳು, 1992 ನೇ ಇಸ್ವಿ ಆಗಸ್ಟ್ ತಿಂಗಳಲ್ಲಿ ನಡೆಯಲಿದ್ದು ಪರೀಕ್ಷೆಗೆ ಕಟ್ಟಬಯಸುವವರು ಹಾಗೂ ತಮ್ಮ ಊರುಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ತೆರೆಯ ಬಯಸುವವರು ಒಂದು ರೂಪಾಯಿ ಅಂಚೆ ಚೀಟಿಯಿಟ್ಟು ಕೂಡಲೇ ವ್ಯವಹರಿಸಿರಿ.

ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ
ಹುಬ್ಬಳ್ಳಿ

ಬಸವ ಚೈತನ್ಯ', ನಂ. 16, ಶ್ರೀ ಬಸವನಗರ,
ಮುರ್ಡೇಶ್ವರ ಸಿರಾಮಿಕ್ಸ್ ಹಿಂಭಾಗ,
ಹೆಗ್ಗೇರಿ ಹತ್ತಿರ, ಹುಬ್ಬಳ್ಳಿ–580024.

—ಶರಣೆ ಶೋಭಾದೇವಿ ಪರಮಾದಿ
ನಿರ್ದೇಶಕರು



ಅಪ್ಪುವನಪ್ಪಿದ ವಾರಿಕಲ್ಲಿನಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ ?
ಅನಲವನಪ್ಪಿದ ಕರ್ಪುರದಂತೆ ಕೂಡಲ ಚನ್ನಸಂಗಯ್ಯ,
ನಿಮ್ಮ ಶರಣ ಬಸವಣ್ಣನ ನಿಲುವು

—ಚೆನ್ನ ಬಸವಣ್ಣ

With best compliments from :

Sri M. Kantilal Jain
Proprietor

M/s. Amar Jyothi Paper Co.

125/9/1 - Balaji Complex, Sultanpet
BANGALORE - 560 053
Phone : Off. 77253, Resi. 75631

Whole Salers : The Mysore Paper Mills Ltd.
The Mandya National Paper Mills Ltd.
The West Coast Paper Mills Ltd.
Hindustan Paper Corporation Ltd
Straw Products Ltd., Seshasayee Paper & Board Ltd., Ballapur Paper Mills Ltd.

OOO

Specialists of : Wedding Cards, Invitation Crads
Forieign Art Papers, Snow White Ivory Board
Plastic Sheets, Diomond Onion Skins
Laminated Papers and Boards

Manufacturers of : All kinds of Quality Envelops
Flat Files, Index Files, Amarjyothi Col.
Duplicating, White Duplicating and
Other, Stationary Articles

Digitalized by e-Sahithya Documentation Forum
Sponsored by Sarayu Foundation Trust

with best compliments from :

M/s. D. M. M. Type Foundry

J-35, R. K. Puram, S. C. Road
BANGALORE-560 009
(Opp: Sudarshan Lodge, Near Sangam Theatre)

Prop. : D. M. RAVIKUMAR

Phones : Off. **77008** – Resi. **644589**

LETTER PRESS :

Printing Machinary, Types, Lead, Spaces, Quards Inks, Cases, Stand, Gallies, Brass Rules, Ruling Machines and Materials, Blocks etc.

OFFSET :

Offset Machines, Chemicals, Suckers, Spares, Springs, Graphic Equipments, Inks, Positives, Negatives, Colour Scanning etc.

WE UNDERTAKE :

- Paper cutting machine blade regrinding
- Surface grinding
- Offset plates grining (p/s) (m/f)
- Offset plate exposing (p/s) m/f)
- Positive Negatives
- Block Making
- D. T. P, personal computer soft ware, Lazer printing, Tracing paper, paper master and computer Stationary.

ಹೃತ್ಪೂರ್ವಕ ಶುಭ ಹಾರೈಕೆಗಳೊಡನೆ

Ashwini RECORDING COMPANY

ಅಶ್ವಿನಿ-ಧ್ವನಿ ಸುರುಳಿಗಳ ತಯಾರಕರು ಮತ್ತು ವಿತರಕರು
ನಂ. 11, ಮೊದಲನೆಯ ಅಡ್ಡರಸ್ತೆ
ಗಾಂಧೀನಗರ – ಬೆಂಗಳೂರು - 560 009

o:—:o

Ashwini Recording Company

No. 11, Ist Cross, Gandhinagar
BANGALORE-560 009
Producers and Marketers of Ashwini Live Casettes



THUS SPAKE BASAVA

Devotion springs from Grace
And Grace from Devotion ;
As from a sprout the seed
And seed from the sprout

Digitalized by e-Sahithya Documentation Forum
Sponsored by Sarayu Foundation Trust

With best compliments from :

M/s. POPULAR TYRES

Specialist in :

Truck, Van and Auto
Scooter Tyres, Guaranteed
Tyre Retreaders, Repairers and
Dealers in New Tyres and Tubes

Vikram Mansion, No. 89, Corner,
80ftMain Road, 2nd Block, 34th Cross,
Next to Raja Rajeswari Kalyana Mantap
Rajajinagar. BANGALORE-560 010

– THUS SPAKE LINGANANDAJI –

Affection for a child is abstract
where as a kiss is concrete
Compassion is abstract, where as
rendering of help and service is concrete
Bhakti is abstract where as
worship of God is concrete

with best compliments from :

ಪ್ರಗತಿ ಸ್ಟುಡಿಯೋ - ಕಲರ್ ಲ್ಯಾಬ್

ನಂ. 232, 6ನೇ ಅಡ್ಡರಸ್ತೆ, ಗಾಂಧಿನಗರ
ಬೆಂಗಳೂರು - 560 009 – ದೂರವಾಣಿ : 260385

STEP IN
FOR
QUALITY COLOUR PRINTING



Quality is never an accident
It is always the result of intelligent effort
- John Ruskin

Pragathi Studio & Colour Lab

No. 232, 6th Cross, Gandhinagar
BANGALORE-560 009

★ THUS SPAKE BASAVA ★

There is destruction for physical temple
No destruction for that of knowledge

Digitalized by e-Sahithya Documentation Forum
Sponsored by Sarayu Foundation Trust

With best compliments from :

M/s. Patel Timber Mart

Dealers in : TEAK, HONNE, MATHI, NANDI & ALL KINDS OF ROUND LOGS & CUT SIZES

No. 389, 3rd Phase, West of Chord Road
Manjunathanagar – Rajajinagar
BANGALORE-560 010, Phone : 352845

and

PATEL SAW MILL

(TIMBER MERCHANTS & SAW MILL OWNERS)
No. 25, 3rd Phase, J. P. Nagar
Sarakki Industrial Layout, Bannergatta Road
BANGALORE - 560 076 – Phone : p. p. 352845

Thus Spake Basava

This mortal world is but the maker's mint ;
Those who are succesful here,
are succesful also there :
And those who are not succesful here
are neither succesful there.
oh, Lord Kudala Sangama

WITH BEST COMPLIMENTS FROM :

M/s. D. M. Nagaraj Type Foundry

J-35, R. K. Puram, S. C. Road
(Opposite Sudarshan Lodge
Near Sangam Theatre)
Bangalore-560 009 – Phone : 74966
Prop. : D. M. NAGARAJ

Mfr. : Quality printing types and Block Makers

Dealers in : Printing Materials, Accessories and Printing Machinaries

Stockists for : D. M. M. Printing Inks
Sintex Rubber Roller,
Polyurothine Rollers and
Bombay Adhesive Paste

Sayings of great men...

Man gets and forgets
But god gives and forgives
-Carlyle

Digitalized by e-Sahithya Documentation Forum
Sponsored by Sarayu Foundation Trust

WITH BEST COMPLIMENTS FROM :

Beekay Impressions

Manufacturers of AUDIO and VIDEO stickers
No. 49, G. K. Temple Street
Balepet Cross – Bangalore-560053
Phone : **261207, 73020**

ಬಸವ ವಾಣಿ
ನಂಬರು ನಚ್ಚರು ಬರಿದೆ ಕರೆವರು
ನಂಬಲರಿಯರೀ ಲೋಕದ ಮನುಜರು
ನಂಬಿ ಕರೆದರೆ ಓ ಎನ್ನನೆ ಶಿವನು

ಐದನೆಯ ಶರಣಮೇಳಕ್ಕೆ ಹಾರ್ದಿಕ ಶುಭಾಶಯಗಳು

ಮೆ॥ ಯಾವಗಲ್ ಏಜನ್ಸೀಸ್

ಔಷಧಿಗಳ ವಿತರಕರು
ಕರ್ನಾಟಕ ಚೇಂಬರ್ ಬಿಲ್ಡಿಂಗ್, ಜಯಚಾಮರಾಜ ನಗರ
ಹುಬ್ಬಳ್ಳಿ - 580 020 – ದೂರವಾಣಿ : 64028

ಸರ್ವಜ್ಞ ವಾಣಿ :
ಆದಿ ಗುರುರಾಯನು ಭೇದಿಸಿ ಲಿಂಗವ ಕೊಟ್ಟ
ಮೂದೇವರೊಡೆಯ ಮೂಜಗದ ಕರ್ತನು
ಆದಿ ಗುರು ಬಸವ ಸರ್ವಜ್ಞ ॥

M/s. Yavagal Agencies

Pharmaceutical Distributors
Karnataka Chamber Building
Jayachamaraj Nagar – HUBLI-580 020
Phone : 64028

With best compliments from :
Fifth Sharana Mela
From :

M/s Bangar Glass & Plywoods

Dealers in :

Novapan, Hibond, Duratuff, Plywoods, Block Boards, Flush Doors, Hard Boards, Laminated sheets, Water storage tanks and all kinds of Glasses Mirrors. ....

No. 26, 11 Main, Manjunathanagar,
I Phase, West of Chord Road, I Stage,
Bangalore-560010 Phone : **359638**

K. N. Basavaraj B. E.
Managing partners.

ಬಸವ ಧರ್ಮದ ಮಹಾಜಗದ್ಗುರು ಪೀಠಕ್ಕೆ ಅಭಿವಂದನೆಗಳು

ಮೆ॥ ತೆಗ್ಗಿನಮನಿ ಟ್ರೇಡಿಂಗ್ ಕಂಪೆನಿ

ನ್ಯೂ ಕಾಟನ್ ಮಾರ್ಕೆಟ್ – ಹುಬ್ಬಳ್ಳಿ - 580 029
ದೂರವಾಣಿ : ಆಫೀಸ್-52421, ಮನೆ-66984

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು । ಧರೆಯುವಗೆ
ವಶವಾಗದಿಹುದೇ ಸರ್ವಜ್ಞ ॥
-ಸರ್ವಜ್ಞ ವಾಣಿ

M/s. Tegginmani Trading Co.

New Cotton Market, HUBLI-29

Digitalized by e-Sahithya Documentation Forum
Sponsored by Sarayu Foundation Trust

With best compliments from :

M/s Akshata Enterprises

STOCKISTS FOR

Asian, British, Garware, Snowcem, Surfacem, Cement Paints, Non-Levy cement, Stoneware, Sanitaryware and Building Materials

22/1, COEN ROAD, HUBLI-580020 (Karnataka)

Phone { Shop : 65366
Res : 72147

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ

- ಶರಣ ಪದ್ಧತಿಗನುಸಾರವಾಗಿ ವಿವಾಹ ನೆರವೇರಿಸಲು.
- ಗೃಹ ಪ್ರವೇಶ, ಅಂಗಡಿಗಳ ವಾರ್ಷಿಕೋತ್ಸವ ಮುಂತಾದವುಗಳಂದು ಶ್ರೀ ಬಸವೇಶ್ವರ ಪೂಜಾವ್ರತ ಮಾಡಲು.
- ಲಿಂಗಧಾರಣೆ, ಲಿಂಗದೀಕ್ಷೆ, ಮಂತ್ರದೀಕ್ಷೆ ಪಡೆದುಕೊಳ್ಳಲು.
- ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಇಷ್ಟಲಿಂಗ ಪೂಜೆ ಮಾಡಲು.
- ವಿಶ್ವಕಲ್ಯಾಣ ಮಿಷನ್‌ದವರ ಧಾರ್ಮಿಕ ಪುಸ್ತಕ, ಕೆಸೆಟ್ಟು ವಿಭೂತಿ-ಮುಂತಾಗಿ ಕೊಳ್ಳಲು ನಾವು ನಿಮಗೆ ಸೂಕ್ತ ವ್ಯವಸ್ಥೆ ಮಾಡುತ್ತೇವೆ.

ಸಂಪರ್ಕಿಸಿರಿ : **ಶರಣ ಕಲ್ಯಾಣಪ್ಪ ಪರವಾದಿ,** ಕಾರ್ಯಾಧ್ಯಕ್ಷ
ರಾಷ್ಟ್ರೀಯ ಬಸವ ದಳ, ಹುಬ್ಬಳ್ಳಿ ಘಟಕ

ವಿಳಾಸ : 'ಬಸವ ಚೈತನ್ಯ' ನಂ. 16, ಶ್ರೀ ಬಸವನಗರ
ಮುರ್ಡೇಶ್ವರ ಸಿರಾಮಿಕ್ಸ್ ಹಿಂಭಾಗ, ಹೆಗ್ಗೇರಿ ಹತ್ತಿರ
ಹುಬ್ಬಳ್ಳಿ-580 024

ಹಾರ್ದಿಕ ಶುಭಾಶಯಗಳು

ದಿ. ನವಕಲ್ಯಾಣ ಕೋ-ಆಪರೇಟಿವ್ ಬ್ಯಾಂಕ್ ಲಿ.

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಕಟ್ಟಡ
ಎರಡನೆಯ ಮಹಡಿ, ಹಳೇ ಮೊಸರಿನ ಪೇಟೆ (ದುರ್ಗದಬೈಲ)
ಹುಬ್ಬಳ್ಳಿ-580 028 – ದೂರವಾಣಿ : 64485

ಅಡಿಟ್ ವರ್ಗ 'ಎ'

* ನಾವು ವ್ಯಾಪಾರ ಉದ್ದಿಮೆ, ಸಣ್ಣಕೈಗಾರಿಕೆಗಳಿಗೆ, ಸ್ವಂತ ಉದ್ಯೋಗಿಗಳಿಗೆ, ಮಶಿನರಿ ಹಾಗೂ ವಾಹನ ಖರೀದಿಗೆ, ಕಟ್ಟಡ ಕಟ್ಟಿಸಲು ಆರ್ಥಿಕ ನೆರವು ನೀಡುತ್ತೇವೆ. ದುರ್ಬಲ ಹಾಗೂ ಹಿಂದುಳಿದ ವರ್ಗದವರಿಗೆ ಚಿಕ್ಕ ವ್ಯಾಪಾರಕ್ಕೆ ಆರ್ಥಿಕ ಸಹಾಯ ಒದಗಿಸುತ್ತೇವೆ.
* ನಮ್ಮ ಬ್ಯಾಂಕ ವಿಮಾ ರಕ್ಷಿತ ಬ್ಯಾಂಕು, ನಿಮ್ಮ ಹಣ ನಮ್ಮಲ್ಲಿ ಸುರಕ್ಷಿತ.
* ನಾವು ನಿಮ್ಮ ಠೇವಣಿಗಳ ಮೇಲೆ ವಾಣಿಜ್ಯ ಬ್ಯಾಂಕುಗಳಿಗಿಂತ ಶೇ.1 ರವರೆಗೆ ಹೆಚ್ಚು ಬಡ್ಡಿ ನೀಡುತ್ತೇವೆ.
* ನಮ್ಮಲ್ಲಿ ದೇಶದ ಯಾವುದೇ ಭಾಗಕ್ಕೂ ಡಿಮಾಂಡ್ ಡ್ರಾಫ್ಟ್ ಕೊಡುವ ಅನುಕೂಲತೆ ಇದೆ.
* ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳಿಗಾಗಿ ನಮ್ಮ ಬ್ಯಾಂಕಿಗೆ ಭೇಟಿ ಕೊಡಿರಿ.

ತಮಗೆ ಸದಾ ಸುಸ್ವಾಗತ

ಬಿ. ಎಸ್. ಲಿಗಾಡಿ — ಮ್ಯಾನೇಜರ್
ಜಿ. ಕೆ. ಚಟ್ನಿ — ವಾ. ಛೇರಮನ್,
ವಿ. ಆಯ. ಅಳಗುಂಡಗಿ — ಛೇರಮನ್

…: ಹಾಗೂ ಡೈರೆಕ್ಟರರ ಮಂಡಳಿ :…

ಎಂ. ಎಂ. ಸಾದರಹಳ್ಳಿ, ಶಂಭು. ವೀ ಕರವೀರಶೆಟ್ಟರು,
ಬಿ. ಬಿ. ಕಿನ್ನಾಳ, ಸಿ. ಎಂ. ಈಜಿಗೇರಿ,
ಎಸ್. ವ್ಹಿ. ಮರೇವಾಡ, ಎಲ್. ಜಿ. ಹರಿವಾಣ.
ಶ್ರೀಮತಿ. ಪಿ. ಜಿ. ಯಾದವಾಡ

Digitalized by e-Sahithya Documentation Forum
Sponsored by Sarayu Foundation Trust

ಸ್ಮರಣೆ :

ದಿ|| ಶ್ರೀ ಎಂ. ಸಿ. ರಾಜ್

ಮಂಗಳೂರು

ಜನನ : 27-9-1920 ಮರಣ : 19-10-1990



In memory of

Late Sri M. C. RAJ

Mangalore

Who died on 19-10-1990

Leaving good behind him.

ಇವರಿಂದ :

ಶ್ರೀಮತಿ. ಹೇಮ

"ಸ್ಮರಣೆ", ನಂ. 13, ಎಲ್. ಐ. ಜಿ.
ಅಗ್ರಹಾರ ದಾಸರಹಳ್ಳಿ, ಎರಡನೆಯ ಹಂತ,
ಬಸವೇಶ್ವರ ನಗರ, ಬೆಂಗಳೂರು-560079

ಮಾರ್ಟಿನ್ ಲೂಥರ್ ಮತ್ತು ಪೂಜ್ಯ ಲಿಂಗಾನಂದರು

—ಚಾಣೂರು ಚನ್ನಪ್ಪ
ಚಿಕ್ಕಮಗಳೂರು

15ನೇ ಶತಮಾನದಲ್ಲಿ, ಯೂರೋಪಿನಲ್ಲಿ ಜ್ಞಾನ ಪುನರುಜ್ಜೀವನವಾಯಿತು. ಇದರಿಂದ ಮಾನವರು ಚಿಂತನ ಶೀಲರಾದರು, ಜ್ಞಾನಿಗಳಾದರು. ಇದರ ಫಲವಾಗಿ ವಿವಿಧ ಕ್ಷೇತ್ರಗಳಲ್ಲಿ ಬದಲಾವಣೆ ತಂದರು. ಎಲ್ಲಾ ಕ್ಷೇತ್ರಗಳು ಶುದ್ಧೀಕರಿಸಲ್ಪಟ್ಟವು. ಧಾರ್ಮಿಕ ಕ್ಷೇತ್ರವಂತೂ ಹದಗೆಟ್ಟು ಹೋಗಿತ್ತು. ಧರ್ಮಗುರುಗಳು, ಚರ್ಚ್‌ಗಳು ಮಾಡಬೇಕಾಗಿದ್ದ ಕೆಲಸಗಳನ್ನು ಮಾಡುತ್ತಿರಲಿಲ್ಲ. ಲೌಕಿಕಾಸಕ್ತರಾದ ಪಾದ್ರಿಗಳು ಧರ್ಮ ಪ್ರಚಾರವನ್ನು ಬಿಟ್ಟು ಲೌಕಿಕರು ಬದುಕುತ್ತಿದ್ದ ಹಾಗೆ, ತಮ್ಮ ಕುಟುಂಬ, ತಮ್ಮ ಆಸ್ತಿ ಪಾಸ್ತಿ ಕಡೆ ಹೆಚ್ಚು ಗಮನ ಕೊಟ್ಟಿದ್ದರು. ಬೈಬಲ್ ಏನು ಹೇಳುತ್ತದೆ, ಧರ್ಮಗುರು ಬೋಧಿಸಿದುದು ಏನೆಂದು ಧರ್ಮಕಾರ್ಯಕ್ಕಾಗಿ ಮೀಸಲಿದ್ದ ಜನಗಳು ಮತ್ತು ಸಂಸ್ಥೆಗಳು ಪಾಲಿಸುತ್ತಿರಲಿಲ್ಲ. ಇದನ್ನು ಅರಿತ ಜನಗಳು ಧರ್ಮ ಕ್ಷೇತ್ರವನ್ನು ಶುದ್ಧೀಕರಿಸಲು ಒಂದು ಆಂದೋಳನವನ್ನು ಪ್ರಾರಂಭಿಸಿದರು. ಇದರ ನಾಯಕತ್ವವನ್ನು ಮಾರ್ಟಿನ್‌ಲೂಥರ್ ವಹಿಸಿದನು, ಇದರ ಫಲವಾಗಿ ಕ್ರೈಸ್ತ ಧರ್ಮದಲ್ಲಿ ಆಕ್ಷೇಪಕರು ಅಂದರೆ ಪ್ರಾಟೆಸ್ಟೆಂಟರು ಮತ್ತು ಕ್ಯಾಥೋಲಿಕರು ಎಂದು ಇಬ್ಭಾಗವಾಯಿತು. ಕ್ರೈಸ್ತ ಧರ್ಮ ಶುದ್ಧೀಕರಣಗೊಂಡಿದ್ದು ಮಾರ್ಟಿನ್ ಲೂಥರ್ ರಿಂದ.

ನಮ್ಮ ಧರ್ಮದ ಮಾರ್ಟಿನ್ ಲೂಥರ್

ಯೂರೋಪಿನಲ್ಲಿ 15ನೇ ಶತಮಾನದಲ್ಲಿ ಧಾರ್ಮಿಕ ಕ್ಷೇತ್ರಕ್ಕೆ ಆಗಿದ್ದ ಸ್ಥಿತಿ ಕರ್ನಾಟಕದಲ್ಲಿ 20ನೇ ಶತಮಾನದಲ್ಲಿ ವಿಶ್ವಗುರು, ಮಹಾಮಾನವತಾವಾದಿ ಬಸವಣ್ಣನವರು ಸ್ಥಾಪಿಸಿದ್ದ ಲಿಂಗವಂತಧರ್ಮಕ್ಕೆ ಆಗಿತ್ತೆಂದರೆ ಉತ್ಪ್ರೇಕ್ಷೆಯಾಗದು. ಸಮಾಜವು ಲಿಂಗವಂತ ಧರ್ಮದ ವಚನ ಸಾಹಿತ್ಯ ಏನು ಹೇಳುತ್ತದೆ ಅದನ್ನೆಲ್ಲಾ ಬಿಟ್ಟು, ಕ್ರಮೇಣವಾಗಿ ಹಳಿ ತಪ್ಪುತ್ತ ಅದು ತನ್ನ ಹೀನಸ್ಥಿತಿಯ ಅತ್ಯಂತ ಕೆಳ ಸ್ತರವನ್ನು ಮುಟ್ಟಿರುವುದು ಸರ್ವವಿದಿತ. ಧರ್ಮಕ್ಕಾಗಿ ಮೀಸಲಿದ್ದ ಮಠಾಧೀಶರು ಮಾಡಬೇಕಾಗಿದ್ದ ಕೆಲಸವನ್ನು ಮಾಡದೆ ಬಿಟ್ಟದ್ದೇ ಈ ಸ್ಥಿತಿಗೆ ಕಾರಣ. ದೇವರ ಮತ್ತು ವಿಶ್ವಗುರು ಬಸವಣ್ಣನವರ ಇಚ್ಛೆಯೋ ಎಂಬಂತೆ ಇಲ್ಲಿಗೆ 6 ದಶಕಗಳ ಹಿಂದೆ ಲಿಂಗವಂತ ಧರ್ಮದ ಶುದ್ಧೀಕರಣಕ್ಕಾಗೇ ಕರ್ತನ ಆಜ್ಞೆಯನ್ನು ಹೊತ್ತು ಬಂದಂತೆ ನಮ್ಮ ಪರಮ ಪೂಜ್ಯರಾದ ಜಗದ್ಗುರು ಶ್ರೀ ಲಿಂಗಾನಂದ ಸ್ವಾಮೀಜಿಯವರ ಆಗಮನವಾಯಿತು, ಈ ಮರ್ತ್ಯಲೋಕಕ್ಕೆ. ಇದನ್ನು ಶುದ್ಧೀಕರಿಸಲೋಸುಗ

Digitalized by e-Sahithya Documentation Forum
Sponsored by Sarayu Foundation Trust

ಪ್ರವಚನವೆಂಬ ಖಡ್ಗ ಹಿಡಿದು ಬಸವ ತತ್ತ್ವಕ್ಕೆ ವಿರೋಧವಾದ ವಿಚಾರಗಳನ್ನು ಪರಿಹರಿಸುತ್ತ ತಮ್ಮ ಅಗಾಧವಾದ ಜ್ಞಾನ ಭಂಡಾರವನ್ನು ನಾಡಿನಾದ್ಯಂತ, ನಗರಗಳಲ್ಲಿ ಪಟ್ಟಣಗಳಲ್ಲಿ ಹಂಚಿದವರು ಪೂಜ್ಯ ಗುರುಗಳು. ಅಲ್ಲದೆ ತರಬೇತಿ ಹೊಂದಿದ ಶಿಷ್ಯರನ್ನು ಕಳಿಸಿ ಹಳ್ಳಿ ಹಳ್ಳಿಗೂ ಪ್ರಚಾರ ಮಾಡುತ್ತಾ ಸಾಗಿಬಂದಿರುವುದು ನಾಡಿನ ಭಾಗ್ಯವೆಂದೇ ತಿಳಿಯಬೇಕು. ಅದಕ್ಕಾಗಿ ಪೂಜ್ಯರನ್ನು ಲಿಂಗವಂತ ಧರ್ಮದ ಮತ್ತು ನಮ್ಮ ನಾಡಿನ ಮಾರ್ಟಿನ್‌ಲೂಥರ್ ಎಂದು ಕರೆದರೆ ಸಮಂಜಸವೆನಿಸುತ್ತದೆ. ಮಠ ಪೀಠಾಧೀಶರುಗಳು ಹಲವು ಶತಮಾನಗಳಿಂದ ಸಾಧಿಸದೇ ಇದ್ದುದನ್ನು ಕೆಲವೇ ದಶಕಗಳಲ್ಲಿ ಸಾಧಿಸಿ ತೋರಿಸಿದ್ದಾರೆ. ಅಧ್ಯಾತ್ಮದ ಜ್ಞಾನಕ್ಕೆ ಹಂಬಲಿಸುತ್ತಿದ್ದ ಲಕ್ಷಾಂತರ ಜನಗಳ ಜ್ಞಾನದಾಹವನ್ನು ತಮ್ಮ ಜ್ಞಾನಧಾರೆಯಿಂದ ತಣಿಸಿದ್ದಾರೆ.

ಧಾರ್ಮಿಕ ಕ್ಷೇತ್ರಕ್ಕೆ ಪೂಜ್ಯರ ಆಗಮನವಿಲ್ಲದಿದ್ದರೆ ?

ಲೌಕಿಕ ವಿದ್ಯೆಯ ಫಲವಾಗಿ ಪದವಿ ನೌಕರಿ ಆಸ್ತಿ ಪಾಸ್ತಿ ಇದ್ದರೂ ಒಂದು ಬಗೆಯ ಕೊರತೆಯ ಜೀವನ ನಡೆಸುತ್ತಾ ಇದ್ದ ನನಗೆ ಪೂಜ್ಯ ಅಪ್ಪಾಜಿಯವರ ಪರಿಚಯ, ಅವರ ಸಂಸ್ಥೆಯ ಸಂಪರ್ಕವು ಒಂದು ನಿಧಿ ದೊರೆತಂತೆಯೇ ಸರಿ. ಪ್ರಸಿದ್ಧ ಧರ್ಮಗಳಿಗೆ ಇದ್ದಂತೆ ಧರ್ಮಗುರು, ಧರ್ಮಗ್ರಂಥ, ಧರ್ಮಕ್ಷೇತ್ರ, ಧರ್ಮಲಾಂಛನ, ಇವುಗಳ ತಿಳುವಳಿಕೆ ಉಂಟಾಗಿದ್ದು ಪೂ. ಅಪ್ಪಾಜಿಯವರ ಪರಿಚಯದಿಂದ ಮಾತ್ರ. ಇದಕ್ಕಿಂತ ಮುಂಚೆ ಕೆಲವು ಕಾವಿ ಲಾಂಛನ ತೊಟ್ಟ ಧರ್ಮದ ಗುರುಗಳನ್ನು ಸಂದರ್ಶಿಸಿದ್ದರೂ ಸಿಕ್ಕದ ಜ್ಞಾನ ನನಗೆ ಪೂಜ್ಯರಿಂದ ದೊರಕಿತು. ಪೂ. ಅಪ್ಪಾಜಿ ನನಗೆ ದೊರೆಯದೇ ಇದ್ದಿದ್ದರೆ ಈ ಪ್ರಾಪಂಚಿಕರ ಸಂಪರ್ಕದಿಂದ ನಾನೊಬ್ಬ ಅನೀತಿವಂತನೋ ಭ್ರಷ್ಟನೋ ವಿಲಾಸಿಯೋ, ಸಮಾಜ ದ್ರೋಹಿಯೋ ಆಗಬಹುದಿತ್ತೇನೊ ! ನನ್ನಂತೆ ಲಕ್ಷಾಂತರ ಜನರನ್ನು ಉತ್ತಮರನ್ನಾಗಿಸಿದ ಕೀರ್ತಿ ನಮ್ಮ ಪೂ. ಅಪ್ಪಾಜಿಯವರಿಗೆ ಸಲ್ಲುತ್ತದೆ. ಧರ್ಮಪ್ರಚಾರಕ್ಕೆ ವಿನೂತನವಾದ ಪ್ರವಚನವನ್ನೇ ಮಾಧ್ಯಮವಾಗಿ ಇಷ್ಟು ಸಾಧನೆ ಮಾಡುವುದು ಕೇವಲ ನಮ್ಮ ನಾಡಿನಲ್ಲೆ ಏಕೆ ಜಗತ್ತಿನಲ್ಲೇ ಸಿಗಲಾರದ ಸಂಗತಿ. ಇದು ಬಹುಶಃ ಗಿನ್ನೀಸ್ ದಾಖಲೆಯಾಗುವುದರಲ್ಲಿ ಏನೂ ಸಂಶಯವಿಲ್ಲ. ಪೂಜ್ಯ ಅಪ್ಪಾಜಿಯವರು ಈ ಧಾರ್ಮಿಕ ಕ್ಷೇತ್ರಕ್ಕೆ ಬಾರದೇ ಇದ್ದಿದ್ದರೆ ಲಿಂಗವಂತ ಧರ್ಮದಲ್ಲಿ ಒಂದು ಕೊರತೆ ಅಂದರೆ ನಿರ್ವಾತ ಉಂಟಾಗಿದ್ದುದು ತುಂಬುತ್ತಿತ್ತೋ ಇಲ್ಲವೊ ? ಲಿಂಗವಂತ ಸಮಾಜ, ಬಸವ ತತ್ತ್ವಾನುಯಾಯಿಗಳು ನೆಲೆ ಇಲ್ಲದವರಾಗಿರುತ್ತಿದ್ದರೆಂಬುದು ಕಟುಸತ್ಯ. . ಇದೀಗ ಬಸವ ಮಹಾಮನೆ ಭವ್ಯಗೊಂಡಿದೆ, ದಿವ್ಯಗೊಂಡಿದೆ.

ಕೂಡಲ ಸಂಗಮದ ಶರಣರ ಮೂರ್ತಿಗಳು ಸಾರುವ ಸಂದೇಶ

[ಮಹಾಮನೆ ಮಹಾಮಠದ ಆವರಣದಲ್ಲಿ ಇರುವ ಮೂರ್ತಿಗಳನ್ನು ನೋಡಿದಾಗ ಬಂದ ಭಾವ]

ಬಾಗಿಲಲ್ಲೇ,
ಕೈ ಜೋಡಿಸಿ ನಿಂತ ಶರಣ-ಶರಣೆಯರ ಸ್ವಾಗತ.
ಮೆಟ್ಟಲೇರಿ ಹೋಗುತ್ತಿದ್ದಂತೆ
ಅಭಯ ಹಸ್ತದ ವಿಶ್ವ ಗುರು ಬಸವಣ್ಣ,
ಪಾಪಿ ಪಾಮರರೂ ಭರವಸೆಯ ಆಶೀರ್ವಾದ ಪಡೆದು ಧನ್ಯ.
ಎಡಕ್ಕೆ ತಿರುಗುತ್ತಿದ್ದಂತೆ,
ಬನ್ನಿ, ಭಸ್ಮಧರಿಸಿ ಶುದ್ಧಿ ಮಾಡುವೆನೆಂಬ
ಹಡಪದ ಅಪ್ಪಣ್ಣ ನವರ ಕರೆ.
ಶಿವಯೋಗದೊಡನೆ ಮೇಳೈಸಿದ ಸಂಗೀತ ಸುಧೆಯನ್ನು ನೀಡುವಂತೆ ಕಾಣುವ
ನಿಜಗುಣ ಶಿವಯೋಗಿ ಗಳು.
ಹೆಜ್ಜೆ ಇಟ್ಟರೆ ಮುಂದೆ,
ಏನು ಬರೆದರೂ ಅದು ವ್ಯರ್ಥ, ಬರೆ ಗುರು, ಕರ್ತನ ಬಗ್ಗೆ ಎಂದು ಲೇಖನಿ
ಹಿಡಿದು ಕುಳಿತಿರುವ ಪಾಲ್ಕುರಿಕೆ ಸೋಮನಾಥ.
ತಮ್ಮ ಜೀವನವನ್ನು ಧರ್ಮಗುರುವಿಗಾಗಿ ತ್ಯಾಗಮಾಡಿ
ಅಮರರಾಗಿರುವ ಹರಳಯ್ಯ-ಕಲ್ಯಾಣಮ್ಮ ನವರು.
ಅಲ್ಲೇ,
ಸ್ಥಿರತೆಯಿಂದ ಶಿವಯೋಗದಲ್ಲಿ ನಿರತನಾಗೆಂದು ಮನದಟ್ಟು
ಮಾಡುವ ಶಿವಯೋಗಿ, ತೋಂಟದ ಸಿದ್ಧಲಿಂಗೇಶ್ವರರು.
ಮುಂದೆ ಅಡಿ ಇಡೆ
ಕೆಚ್ಚೆದೆಯ ಮಡಿವಾಳ ಮಾಚಿದೇವರ ನಿಲುವು,
ಅದರಿಂದ ನಮ್ಮ ಮನವೂ ಮಡಿಯಾಗುವುದು.
ಶಿವಯೋಗದ ಔನ್ನತ್ಯವನ್ನು ಸಾರುತ್ತ ಸ್ಥಿರವಾಗಿ ಕುಳಿತಿರುವ
ಶಿವಯೋಗಿ ಸಿದ್ಧರಾಮೇಶ್ವರರು.
ಸಮೀಪದಲ್ಲಿ,
ಯತ್ನಿಸಿದರೆ, ಮಾನವ ಅತ್ಯುನ್ನತ ಸಿದ್ಧಿಯನ್ನು ಸಾಧಿಸಬಹುದೆಂಬ
ನಂಬಿಕೆ ಹುಟ್ಟಿಸುವ ಅಲ್ಲಮ ಪ್ರಭುಗಳು.
ಹಾಗೇ ಮುಂದೆ ಸಾಗಿ ಕೆಳಗಿಳಿದರೆ,
ಶಿವಯೋಗ ಮಂಟಪ ಪ್ರಶಾಂತಿಯಾಲಯ
ಎದುರಿಗೆ ಮಂಟಪದಲ್ಲಿಹ ಬಸವ ಮೂರ್ತಿ.

Digitalized by e-Sahithya Documentation Forum
Sponsored by Sarayu Foundation Trust

ಹೊಳೆಯುವ ಕಂಗಳಿಂದ ಕರುಣೆಯ ಹರಿಸುವ,
ಸಮ್ಮೋಹಗೊಳಿಸಿ. ಮನವ ಚೇತನಿಸುವ
ಮಂತ್ರ ಪುರುಷ ಬಸವಣ್ಣನ ದಿವ್ಯರೂಪು.
ಸುತ್ತಿ ಬಲಕ್ಕೆ ಬಂದರೆ,
ಹೆಣ್ಣೂ ಸಹ ಅಧ್ಯಾತ್ಮದ ಉನ್ನತಿ ಸಾಧಿಸಬಲ್ಲಳೆಂಬ
ಸಂದೇಶವನ್ನು ಸಾರುತ್ತಿರುವ **ಮಹಾದೇವಿಯಕ್ಕ.**
ಪಕ್ಕದಲ್ಲಿ,
ವಯಸ್ಸು ಕಿರಿದಾದರೇನು ಹಿರಿದನ್ನು ಸಾಧಿಸಿ ತೋರಿಸಿದ
ಚಿನ್ಮಯ ಜ್ಞಾನಿ **ಚನ್ನಬಸವಣ್ಣ,**
ಖಡ್ಗ ಹಿಡಿದು ರಕ್ಷಿಸಿದ ಪರುಷ ಸದೃಶವಾದ
ವಚನ ಸಾಹಿತ್ಯದ ಪರಿಚಯವಿದೆಯೇ ? ಎಂದು
ಪ್ರಶ್ನಿಸುವಂತೆ ತೋರುವ ವೀರಮಾತೆ ಅಕ್ಕ **ನಾಗಲಾಂಬಿಕೆ,**
ಅಧ್ಯಾತ್ಮದ ಆತ್ಮೋನ್ನತ ಸಾಧನೆಯ, ಲಿಂಗ ನಿರೀಕ್ಷಣೆ
ಯಲ್ಲಿ ಕುಳಿತಿರುವ **ನೀಲಾಂಬಿಕಾದೇವಿ.**
ಪ್ರಸಾದವೆಂದರೇನು ಎಂದು ಪ್ರಶ್ನಿಸುವಂತೆ ಕಾಣುವ
ಪ್ರಸಾದದ ಮಹತ್ವ ಸಾರುತ್ತಾ ನಿಂತಿರುವ
ಮಹಾ ಪ್ರಸಾದಿ ಡೋಹರ ಕಕ್ಕಯ್ಯ.
ಕಾಯದ ಸೌಂದರ್ಯ ಕೇವಲ ಲೌಕಿಕ್ಕಲ್ಲ, ಪ್ರಸಾದ
ಕಾಯುವ ಕೆಡಿಸದೆ ಅಧ್ಯಾತ್ಮ ಸಾಧನೆಯ
ಉನ್ನತಿ ಸಾಧಿಸು ಎಂದು ಹೇಳುವ
ಮಹಾಯೋಗಿ ಮನ್ಮಥಸ್ವಾಮಿ.
ಸನಿಹದಲ್ಲೆ,
ನಿಮಗೆ ಮುಕ್ತಿ ಬೇಕೇ ನಂಬಿ ನಮ ಅಪ್ಪ
ಬಸವಣ್ಣನನ್ನು ಎಂದು ಹೇಳುವ
ಬಸವ ಚೇತನ **ಷಣ್ಮುಖ ಶಿವಯೋಗಿಗಳು.**
ನಿಜಮಾರ್ಗ ಹಿಡಿಯಲು ಅತ್ತಿತ್ತ ಹುಡುಕ ಬೇಡ
ಹಿಡಿ ಬಸವ ಪಥ ಎಂದು ಸಾರುವ
ಕ್ರಾಂತಿಕವಿ ಸರ್ವಜ್ಞಮೂರ್ತಿ

ಗುರು ಸ್ತುತಿ

—ಶ್ರೀ ಎ. ಡಿ. ಚನ್ನಬಸಪ್ಪ

೧. ದೇವರೆಂದು ಬಂದೆ ದಿವ್ಯಗುರುವನು ಕಂಡೆ
ಮಮತೆಯ ಹೃದಯಕೆ ಮರುಳಾದೆ । ಅಪ್ಪಾಜಿ
ನಿಮ್ಮಿಂದ ಧರ್ಮದ ಮೂಲ ದಯೆ ಕಂಡೆ.

೨. ಮಾತಾಜಿ ನಮ್ಮವ್ವ ಜಗಕೆಲ್ಲ ಹೆತ್ತವ್ವ
ಮನುಕುಲಕೆ ಮಹಾದೇವನ ವರಸತಿ । ಅಪ್ಪಾಜಿ
ನಿಮ್ಮೀ ಮಮತೆಯ ವಾತ್ಸಲ್ಯಕೆ ಶರಣಾದೆ.

೩. ಬಸವಣ್ಣ ಬದುಕಿದೆನು । ಶಿವ ನಮಗೆ ದೊರಕಿಹನು
ಭವಮಾಲೆ ಕಳೆಯ ಬಂದಿಹರು । ಅಪ್ಪಾಜಿ
ನಿಮ್ಮಿಂದ ನಿಜದರಿವು ಹೊಂದಿ ಬಾಳುವೆನು ॥

೪. ಎಲೆ ನನ್ನ ಬಸವಣ್ಣ । ಪಡೆದುಂಡೆ ನಾನಿಲ್ಲಿ
ಪ್ರವಚನಾಮೃತವ ಸವಿದುಂಡೆ । ಅಪ್ಪಾಜಿ
ನಿಮ್ಮಿಂದ ಹೊಸಬಾಳ ಪಥವ ನಾ ಪಡೆದೆ ॥

೫. ನಮ್ಮಪ್ಪ ಬಸವಣ್ಣ । ನಮ್ಮವ್ವ ವಚನಮ್ಮ
ಚನ್ನಣ್ಣ ನಮ್ಮಣ್ಣ, ಅಕ್ಕ ಮಹಾದೇವಿ । ಅಪ್ಪಾಜಿ
ನಿಮ್ಮಿಂದ ಶರಣ ಸಂಸ್ಕೃತಿಯ ಪಡೆದಿಹೆವು ॥

೬. ಅಲ್ಲಮ ಮಹಾಪ್ರಭು ಮೆಲ್ಲಗೆ ತಿಳಿಸಯ್ಯಾ
ಸೊಲ್ಲು ಸೊಲ್ಲಿಗೆ ಗುರುಮಹಿಮೆ ಉಸಿರಯ್ಯ । ಅಪ್ಪಾಜಿ
ನಿಮ್ಮಿಂದ ಬಸವ ಒಲಿದೆಮಗೆ ಹರಸಲಿ ॥

೭. ಭಲೆಲೇ ವೀರಶರಣ ಬಸವ ಕ್ರಾಂತಿಗೆನ್ನ ಮರಣ
ಬಲಿಯಾಗಲಿ ನನ ಹರಣ ಅಪ್ಪಾಜಿ
ನಿಮ್ಮಿಂದ ತ್ಯಾಗ ಒಡಮೂಡಿ ನಮ್ಮ ನಡೆಸಲಿ ॥

೮. ಬಸವ ಕ್ರಾಂತಿ ಖಡ್ಗ ಶಿವನ ಶಾಂತ್ರಿ ಮಂತ್ರ
ಶರಣರ ಕಲ್ಯಾಣ ನನ ತಂತ್ರ ಅಪ್ಪಾಜಿ
ನಿಮ್ಮಿಂದ ಜಗಕ್ಕೆಲ್ಲಾ ಉದ್ಧಾರ ತತ್ತ್ವ ದೊರಕಿತು.

೯. ಜಾಣ ಜಾಣೆಯರೆಲ್ಲಾ ಜೋರಾಗಿ ಬನ್ನಿರಿ
ಜಾತಿಗೋಡೆಯ ಒಡೆದು ನಡೆಯಿರಿ । ಅಪ್ಪಾಜಿ
ನಿಮ್ಮಿಂದ ಜಾತಿ ಜಾಡ್ಯವ ಮೆಟ್ಟಿನಿಂದೆವು ॥

Digitalized by e-Sahithya Documentation Forum
Sponsored by Sarayu Foundation Trust

೧೦. ಒಂದೆ ದೇಶದ ನಾವು ಹಲವು ಧರ್ಮದವರು
ದೇವರೊಬ್ಬನ ಮಕ್ಕಳು ಅಪ್ಪಾಜಿ
ನಿಮ್ಮಿಂದ ದೇಶ ಸೇವೆಯ ಪಾಠ ಕಲಿಯುವೆವು.

೧೧. ದೇವರೆ ದಯಮಾಡು । ಧೈರ್ಯವ ದೊರಕಿಸು.
ದೊರೆ ಬಸವರಾಜನಿಗೆ ಶರಣೆನಿಸು । ಅಪ್ಪಾಜಿ
ನಿಮ್ಮಿಂದ ಎಲ್ಲರೊಡನೆ ಸಹಬಾಳ್ವೆ ಪಡೆದಿಹೆವು ॥

೧೨. ತನು ಮನಧನದಲ್ಲಿ ಆಸೆ ಇಲ್ಲದೆ ಇರಿಸು
ಉರಿಸು ಜ್ಞಾನದೀಪ । ಅಪ್ಪಾಜಿ ನಿಮ್ಮಿಂದ
ಮೋಹದ ಹಂಗನ್ನು ತೊರೆದಿಹೆವು.

೧೩. ನೀತಿ ಕಲಿಸು ಗುರುವೆ ಧರ್ಮ ಭರಿಸು ತಂದೆ
ಗುರು ತಂದೆಯಾಗಿ ದಯಮಾಡು । ಅಪ್ಪಾಜಿ
ನಿಮ್ಮಿಂದ ಆತ್ಮವಂತರಾಗಿ ಬಾಳುವೆವು.

೧೪. ವಿಶ್ವಕಲ್ಯಾಣವ ಹರಸಿ ದೇವಗೀತೆಯ ಪಠಿಸಿ
ದೇವರಿಗೊಲಿದ ಶರಣರ ಸಂಗದಲಿ ನನ್ನಿರಿಸು ಅಪ್ಪಾಜಿ
ನಿಮ್ಮಿಂದ ದೇವರೊಲುಮೆ ಹೊಂದಿ ಹಾಡುವೆವು ॥

೧೫. ನಾನೊಂದೆ ಕೀಳಾಗಿ । ಎಲ್ಲರೂ ಮೇಲಾಗಿ
ಭಕ್ತ ನಾನಾಗಿ ದೇವರು ನೀವಾಗಿ ಅಪ್ಪಾಜಿ
ನಿಮ್ಮಿಂದ ಭೃತ್ಯಾಚಾರವರಿತು ಸೇವೆಗನುವಾಗಿ ॥

೧೬. ಸಮಯ ಸಾಗಿವೆ ಬೇಗ ಮನವ ಮಾಡುವೆನೀಗ
ಜೀವನವ ಧರ್ಮದಿ ಪೋಷಿಸುವೆ ಅಪ್ಪಾಜಿ
ನಿಮ್ಮಿಂದ ಮಾನವನ ಪರಮ ಗುರಿ ಸಿದ್ಧಿಸಲಿ ॥

೧೭. ಸವೆಯುವೆವು ಕಡೆತನಕ ದೇವ ಸಿಗುವ ತನಕ
ಸೇವಾದೀಕ್ಷೆಯಲಿ ಗುರುವಿಗೆ ಸೈ ಅನಿಸಿ ಅಪ್ಪಾಜಿ
ನಿಮ್ಮಿಂದ ಹೊಸ ಉತ್ಸಾಹದಿ ಮುಂದೆ ನಡೆಯುವೆವು ॥

೧೮. ಬರುವೆಯಾ ಬಸವಣ್ಣ ಬರುವಾಗ ತಾರಣ್ಣಾ ।
ಕಲ್ಯಾಣ ಗುಣನಿಧಿ ಮಂಗಲವತಾರಣ್ಣ । ಅಪ್ಪಾಜಿ
ನಿಮ್ಮಿಂದ ಬಸವಣ್ಣ ನೀಡಿದರು ವರವನ್ನು

೧೯. ಧೀಮಂತ ಗುರುವಯ್ಯಾ ಕರುಣೆಯ ಕಣ್ಣಯ್ಯಾ
ಬಸವಣ್ಣನಂಥ ಹೃದಯವು । ಅಪ್ಪಾಜಿ
ನಿಮ್ಮಿಂದ ದೇವರಲಿ ಉಳಿದು ಆತ್ಮವ ಕಂಡೇವು ॥

೨೦. ದಣಿವಿಲ್ಲ ಅಣ್ಣಯ್ಯಾ ಕಡೆತನಕ ಕರೆದೊಯ್ಯೊ
ಬಸವ ಗುರು, ದೇವನ ಕಾಣುವೆವು ಅಪ್ಪಾಜಿ
ನಿಮ್ಮಿಂದ ಸಂಸಾರ ಸಾಗರವ ದಾಟುವೆವು ॥

೨೧. ಹೆಣ್ಣ ತೋರಿ ಮಾಯೆ ಮಣ್ಣ ಎರಚಿತಲ್ಲ
ಹೊನ್ನ ಹುಚ್ಚಿನ ಕಿಚ್ಚಿಕ್ಕಿತು ಅಪ್ಪಾಜಿ
ನಿಮ್ಮಿಂದ ಬಿಟ್ಟು ಹೋಗಲಿ ನಮ್ಮೆಲ್ಲ ದುರ್ಗುಣವು ॥

೨೨. ಮಾತಾಡಿಸು ಗುರುವೆ ಜ್ಯೋತಿ ತೋರಿಸು ತಂದೆ
ಜಗಜ್ಯೋತಿ ಬಸವೇಶ್ವರನ ಕಂದ ಅಪ್ಪಾಜಿ
ನಿಮ್ಮಿಂದ ಬೆಳಕಿನಲಿ ಬದುಕಿ ಸುಖವ ಹೊಂದುವೆವು.

೨೩. ಭೇದ ಭಾವ ಬೇಡ ಬಂಧುಗಳು ನಾವಯ್ಯಾ
ಚೆಂದದಲ್ಲಿ ಒಂದಾಗಿ ಬಾಳುವೆವು । ಅಪ್ಪಾಜಿ
ನಿಮ್ಮಿಂದ ಧರ್ಮದ ಬೆಳಕಿನಲಿ ಬೆಳೆಯುವೆವು ॥

೨೪. ಅತ್ತ ಹರಿದ ಮನವು ಇತ್ತ ಬಂದಿತು ಮತ್ತೆ
ಬಸವ ಗುರು ಮಹಾಮನೆಯ ಸುತ್ತಿತು । ಅಪ್ಪಾಜಿ
ನಿಮ್ಮಿಂದ ತನ್ನ ತಾನರಿವ ಮಂತ್ರ ಸಿಕ್ಕಿತು ॥

೨೫. ಹೆಂಡತಿಯು ನಾನಯ್ಯಾ ಗಂಡನು ನೀನಯ್ಯಾ
ಜಗದ ಗಂಡರ ಗಂಡ ಎಲೆದೇವ । ಅಪ್ಪಾಜಿ
ಅವರಿಂದ ಅವಿನಾಭಾವ ಸಂಬಂಧ ಕಂಡೇವು ॥

೨೬. ಮುಂದೆ ಅಡಿ ಇಡುತಿರು ಹಿಂದಕ್ಕೆ ಬರದಿರು
ಗುರುವನ್ನು ಅರಿತರೆ ಆತ್ಮಾನಂದ ದೊರಕುವದು । ಅಪ್ಪಾಜಿ
ನಿಮ್ಮಿಂದ ಸುಲಭವಾಗಲಿ ನಮಗೆ ಸರಿದಾರಿ ॥

೨೭. ಬೆಳಕು ಬೆಳಗೀತಲ್ಲ ಬಸವ ಬೆಳಕು ಬೆಳಗಿತು
ಬಕುತಿಯ ಬೆಡಗೇರಿ ಭಕ್ತಿ ಮೂಡಿತಲ್ಲ । ಅಪ್ಪಾಜಿ
ನಿಮ್ಮಿಂದ ದೇವರಿರುವ ಜಾಡು ತಿಳಿಯಿತಲ್ಲ. ॥

೨೮. ಸಂಗಡಿಗ ನೀನಯ್ಯಾ ಸಂಗಡ ಬಾರಯ್ಯಾ
ಪುಣ್ಯವೇ ಪರಮಾತ್ಮನ ತೋರಯ್ಯಾ । ಅಪ್ಪಾಜಿ
ನಿಮ್ಮಿಂದ ಪಾಪ ಕಳೆದು ಪುಣ್ಯಉಳಿಯಿತು. ॥

೨೯. ಪದ್ಯ ಪದುಮಗಳು ಅರಳಿದ ಭಾವದ ಸರಸಿ
ಗದ್ಯವು ಗುರುಮಹತಿಯ ವಿಶ್ರಾಂತಿ ತಾಣ । ಅಪ್ಪಾಜಿ
ನಿಮ್ಮಿಂದ ಆನಂದ ನಾ ಕಂಡುಳಿದೆ ॥

Digitalized by e-Sahithya Documentation Forum
Sponsored by Sarayu Foundation Trust

೩೦. ಭಕ್ತಿ ಕಲಿಸು ಬಸವ ಯುಕ್ತಿ ಇರಿಸು ಬಸವ
ಜ್ಞಾನ ಕ್ರಿಯೆಗಳು ಬಳಿ ತಾ ಬಸವ । ಅಪ್ಪಾಜಿ
ನಿಮ್ಮಿಂದ ಬಸವ ಮಂತ್ರವ ಜಪಿಸಿ ಸೇವೆ ಸಲಿಸುವೆ ॥

೩೧. ಹಾಡನ್ನು ಹಾಡಯ್ಯಾ ದೇವರ ಒಲಿಸಯ್ಯಾ
ಹಗಲಿರುಳು ಅವನ ಧ್ಯಾನ ಮಾಡುವದು । ಅಪ್ಪಾಜಿ
ನಿಮ್ಮಿಂದ ಜಾಗ್ರತೆಯ ಮನವನ್ನ ಪಡೆದಿಹೆವು ॥

೩೨. ಮಡಿವಂತ ನಾನಲ್ಲ ಮುದುಡ ಬೇಡ ಅಯ್ಯಾ
ಮರುಳು ನಾನಯ್ಯಾ ಬಸವಣ್ಣಗೆ । ಅಪ್ಪಾಜಿ
ನಿಮ್ಮಿಂದ ಅಪ್ಪುವೆವು ಒಪ್ಪಿ ಬಸವ ತತ್ತ್ವ ॥

೩೩. ಶಿವ ಇರದ ಎಡೆಯಿಲ್ಲ ಗುರು ಮಾತು ಸುಳ್ಳಲ್ಲ
ನಿರಾಸೆ ಪಡಬೇಡ ಪೊರೆವದು ಗುರು ಕೃಪೆ। ಅಪ್ಪಾಜಿ
ನಿಮ್ಮಿಂದ ಆಶಾವಾದವ ಉಂಡು ಬದುಕಿದೆವು.

೩೪. ಎಲೆ ಗುರುವೆ ನನ ಹಸಿರೆ। ಶಿವನೆ ನನ್ನ ಉಸಿರು
ಶರಣರ ಸಹವಾಸ ನನ ಧರ್ಮ । ಅಪ್ಪಾಜಿ
ನಿಮ್ಮಿಂದ ಬಾಳು ಹಸನಾಗಿ ಶಿವನೆಡೆಗೆ ಹರಿಯಲಿ ॥

೩೫. ಸದ್ದು ಮಾಡಲು ಬೇಡ ಪೆದ್ದ ಸುಮ್ಮನಿರೋ
ಇದ್ದು ಸುಖಿಸಯ್ಯಾ ಶಿವ ಕೊಟ್ಟುದ । ಅಪ್ಪಾಜಿ
ನಿಮ್ಮಿಂದ ಸರಳತೆಯ ಸಿಹಿಪಾಠ ನಮಗಿಹುದು.

೩೬. ಬರಲಿರುವ ಕಷ್ಟಗಳು ದೇವರ ತರುತಾವೆ
ಬಸವನು ನನಗೆ ಕರುಣೆ ಕೊಡುತಾನೆ । ಅಪ್ಪಾಜಿ
ನಿಮ್ಮಿಂದ ಮರಣ ಮುರಿದು ಬಿದ್ದೀತು ॥

೩೭. ತಾನಾರು ಎಂದರಿತು ಪರರ ಅರಿತು ಮಾತಾಡು
ಶಿವಶಿವ ಸರ್ವರಿಗೂ ಶಾಂತಿ ದೊರಕಲಿ । ಅಪ್ಪಾಜಿ
ನಿಮ್ಮಿಂದ ಶಿವನಿರುವ ನಮ್ಮ ಬಳಿಯಲ್ಲಿ ॥

೩೮. ಉಂಟಯ್ಯಾ ಆನಂದ ಬೇರೆ ಹರಟೆ ಬೇಡ
ಹರ ಬಕುತಿ ಗುರುಸೇವೆ ಬೇಕೆಮಗೆ ! ಅಪ್ಪಾಜಿ
ನಿಮ್ಮಿಂದ ವರಗುರು ಬಸವನ ನೆನೆದೇವು ॥

೩೯. ಬಸವಣ್ಣ ನನ ಹರಸು ಭಕ್ತಿಯು ನೆಲೆಗೊಳಿಸು
ಮನವು ಮಹಾದೇವನಾಗಲು ಸಹಕರಿಸು । ಅಪ್ಪಾಜಿ
ನಿಮ್ಮಂಥ ನಿರ್ಮಲ ಬುದ್ಧಿ ನಮಗಿರಲಿ ॥

೪೦. ಮನವ ದೈವೀಕರಿಸು ಸೇರಲಿಕೆ ಶರಣರನು
ತ್ರಾಣವು ಇರಲಿ ಸೇವೆಗೆ ಋಣತೀರಲಿ । ಅಪ್ಪಾಜಿ
ನಿಮ್ಮಿಂದ ಪ್ರಾಣವು ಶಿವನಡಿಗೆ ಅರ್ಪಿತವು ॥

೪೧. ಗೊತ್ತಿಲ್ಲ ಶಿವನೆ ಹರಸಯ್ಯಾ ನಿನ್ನೊಲುಮೆ
ಕಡು ಮೂರ್ಖತನವು ತುಂಬಿರುವದು । ಅಪ್ಪಾಜಿ
ನಿಮ್ಮಿಂದ ಬುದ್ಧಿವಂತರಾಗುವೆವು ಕರುಣೆಸಿರಿ.

೪೨. ಕಡುಬಡವರ ಕಾಪಾಡು ಮೊದಲು ನೀನವರ ನೋಡು
ಪರಮಾತ್ಮ ಮುಂದಾಗಿ ಅವರ ಮುನ್ನಡೆಸು । ಅಪ್ಪಾಜಿ
ನಿಮ್ಮಿಂದ ಜ್ಞಾನನಿಧಿ ನಮ್ಮ ಸೇರಲಿ.

೪೩. ಹರಸು ಕರುಣೆಯಿಂದ ಒರೆಸು ಕಣ್ಣೀರನ್ನು
ದೀನ ದಲಿತರೆಡೆಗೆ ಒಲುಮೆಯ ಕಣ್ಣರಿಸು । ಅಪ್ಪಾಜಿ
ನಿಮ್ಮಿಂದ ಮನದ ದಾರಿದ್ರ್ಯ ಕಳೆಯಲಿ.

೪೪. ಸಂಶಯವು ಬೇಕಿಲ್ಲ ಕಳಂಕ ಹೊರಲಾರೆ
ಬಸವ ಗುರುವನ್ನು ಧ್ಯಾನಿಸುವೆ । ಅಪ್ಪಾಜಿ
ನಿಮ್ಮಿಂದ ಸಂಶಯ ಕಳೆದು ಉಳಿಯುವೆ.

೪೫. ನೆನೆಸದೆ ಬಯಸದೆ ಕರೆಯದೆ ಬರುವದೆ ?
ಗುರುಕರುಣೆ ಏನಿಲ್ಲದವಗೆ ಒಲಿಯುವದೆ ? ಅಪ್ಪಾಜಿ
ನಿಮ್ಮಿಂದ ನೆನೆಯುತ್ತ ಇಹೆವು ಬಸವಣ್ಣನ.

೪೬. ನಾನು ಬಳಲಲಾರೆ ಬೇಗುದಿ ಪಡಲಾರೆ
ಬಳಿ ಬಂದುದ ಸ್ವೀಕರಿಸಿ ಸೈರಿಸುವೆ । ಅಪ್ಪಾಜಿ
ಬರಲಿರುವದನು ಹೊರುವ ಸಾಮರ್ಥ್ಯವಿರಲಿ.

೪೭. ಧೈರ್ಯಗೆಡುವುದೇ ಇಲ್ಲ ಕಂಡವರಿಗೆ ಮರಳು ನಾನಲ್ಲ
ಗುರು ಕೃಪೆಗೆ ಮರಳು ಮಗ ನಾನಾಗಿ । ಅಪ್ಪಾಜಿ
ನಿಮ್ಮಿಂದ ಮರುಕದ ನೆಲೆಯಲಿ ಮನಗೆಲ್ಲುವೆ.

೪೮. ನಲಿಯಯ್ಯಾ ನನ್ನಲಿ ಒಲಿಮೆ ದೋರು ಶಿವನೆ
ಕುಣಿದಾಡು ಮನವೆ ಬಸವಣ್ಣನ ನೆನೆದು । ಅಪ್ಪಾಜಿ
ನಿಮ್ಮಿಂದ ಕರುಣೆ ಹೊಂದುವೆವು.

೪೯. ಸಾಮರ್ಥ್ಯಕ್ಕೆ ಮೀರಿರುವೆ । ಅಳವಿಗೆ ನಿಲುಕದಿರುವೆ
ಎಂತೋ ಏನೋ ಅಂತೂ ನೀನೆಗತಿಯಯ್ಯ । ಅಪ್ಪಾಜಿ
ನಿಮ್ಮಿಂದ ಸಾಂತ್ವನವ ಮದ್ದು ದೊರೆಯಲಿ.

-ಎ. ಡಿ. ಚನ್ನಬಸಪ್ಪ
ಸದಾ ಸಂಚಾರಿ

Digitalized by e-Sahithya Documentation Forum
Sponsored by Sarayu Foundation Trust

With best compliments from :

M/s. Nandi Enterprises
389-A, 19th Main Road, I Block
Rajajinagar – BANGALORE-560 010

and

M/s. Nandi Book Depot
No. 9, M. I. G, 2nd Stage, Near Havanur Circle
Basaveswara Nagar • BANGALORE-560 079

Dealers in :
SCHOOL, COLLEGE BOOKS & STATIONERY


ಹಾರ್ದಿಕ ಶುಭಾಶಯಗಳೊಡನೆ

ಶ್ರೀ ವೆಂಕಟೇಶ್ವರ ಲಿಥೋ ಮತ್ತು ಪ್ರಿಂಟಿಂಗ್ ಪ್ರೆಸ್
ನಂ. 54, 5ನೆಯ ಮೇಯಿನ್ ರೋಡ್
ಗಾಂಧಿನಗರ ○ ಬೆಂಗಳೂರು-560 009
ದೂರವಾಣಿ : 266490 ಪಿ.ಪಿ. – ಮನೆ 568133
ಮಾಲೀಕರು : ಎಂ. ರಾಮಚಂದ್ರಯ್ಯ

- ನಾವು ವಾಲ್‌ಪೋಸ್ಟರು, ಆಹ್ವಾನಪತ್ರಿಕೆ ಮುಂತಾಗಿ ಮುದ್ರಿಸಿ ಕೊಡುತ್ತೇವೆ.
- ಚುನಾವಣೆ-ಜಾತ್ರೆ-ಸಮ್ಮೇಳನ-ಚಲನಚಿತ್ರ, ಮುಂತಾದವುಗಳ ಪ್ರಚಾರಕ್ಕಾಗಿ ಬಹು ಬಣ್ಣಗಳಲ್ಲಿ ಭಿತ್ತಿಪತ್ರ (ವಾಲ್ ಪೋಸ್ಟರ್) ಗಳನ್ನು ಮುದ್ರಿಸಿಕೊಡುತ್ತೇವೆ.

ಮರೆಯದೇ ಸಂದರ್ಶಿಸಿರಿ

With Best Compliments From :



M/s. EKORAM & COMPANY
8-2, V. I. S. L. House, Ground Floor
J. C. Road – BANGALORE-560 002
Phone : Off : 234606, 224915, Res. 603754
Grams : ARBEL

Authorised Dealers for :

Kirloskar Products	:	Oil Engines, Electrical AC & DC Motors, Alternators, Starters, Trans formers, Monoblock, Deepwelljet Pumps, Frictionless Foot Valve, Gate Valve, Non return Valve.
N G E F	:	Motors & Monoblock Pumps.
M E I	:	Starters & Breakers.
Portable Generators of	:	Birla Yamaha, Powerman Honda Sriram Honda make
K S B	:	Submersible Pumpsets
Shantha	:	Tilting wet grinders
Gear Box	:	Radicon, Elecon, Shanthi make.

Digitalized by e-Sahithya Documentation Forum
Sponsored by Sarayu Foundation Trust

WITH BEST COMPLIMENTS FROM :

M/s. Best Automobiles

Dealers in : CAR & TEMPO SPARE PARTS

H. O. : No. 46, 1 Cross, Journalist Colony
BANGALORE-560 002, Phone : 226966

BRANCHES :

No. 42-1, 9th Main Road, West of Chord Road
Rajajinagar, Opposite Power House
BANGALORE-560 010

AND

No. 10-52-A7, Bye-Pass Road
HOSUR-635 109 – Tamilnadu

★ ★

'Sincerity and Simplicity produce the best kind of dignity.'

—Victor Huge

WITH BEST COMPLIMENTS FROM :

M/s. Majee Jana Electronics
AND
M/s. Majee Jana Novelties

260, S. C. Road, Ramakrishna Lodge Building
Near Kapali Cinema, BANGALORE-560 009
Phone : **265877**

DEALERS IN :

* All types of **Two-in-Ones** and **Decks**, Phillips, Bush, BPL-Sanyo, Sonodyne, Videocon, Solidair Salora, Paman.
* Walkmans, Car Stereos, TKR, Phillips, Bush Sanyo Type, Sony Type Aiwa Type, Pioneer Type
* Audio and Video Casettes, Calculators, Hotshot Kodak Croma Cameras.

With best compliments from :

M/s. Ratna Glass Works

No. 641-5, III Block, 12th Main, Sahakari Road
Rajaji Nagar, BANGALORE-560 010

Kindly Visit for :

All types of photo Framing, Mirrors, Glass Etching, Photo Lamination
We are taking orders, Bulk and Retail

Prop : SRI P. A. NATARAJ

Digitalized by e-Sahithya Documentation Forum
Sponsored by Sarayu Foundation Trust

(8ನೇ ಪುಟದಿಂದ ಮುಂದುವರಿದಿದೆ)

ಗಿರುವ ಕ್ರೈಸ್ತ, ಮುಸ್ಲೀಂ, ಬೌದ್ಧರು ಇದೇರೀತಿ ಖಚಿತ ಮಾರ್ಗದಲ್ಲಿ ಹೊರಟು ಏಸುಕ್ರಿಸ್ತ-ಬೈಬಲ್, ಮೊಹಮ್ಮದ್-ಕುರಾನ್, ಬುದ್ಧ-ತ್ರಿಪೀಟಕಗಳ ಹಳಿಯ ಮೇಲೆ ಸಮಾಜವನ್ನು ತೆಗೆದುಕೊಂಡು ಹೋಗುತ್ತಿರುವುದನ್ನು ಕಾಣುತ್ತೇವಷ್ಟೆ.

ಲಿಂಗವಂತ ಸಮಾಜಕ್ಕೆ ಸೂತ್ರಗಳು ಇಲ್ಲದ ಕೊರತೆಯನ್ನು ಗುರುತಿಸಿ ಮೊದಲ ಶರಣ ಮೇಳದಲ್ಲೇ ಆರು ಸೂತ್ರಗಳನ್ನು ಕ್ರೋಢಿಕರಿಸಲಾಗಿದೆ. ಇವುಗಳ ಪ್ರಚಾರ ಅನುಷ್ಠಾನವೇ ಈ ಧರ್ಮ ಪೀಠದ ಗುರಿ.

1. ಗುರು ಬಸವಣ್ಣನವರೇ ಧರ್ಮಗುರು :

ಆಯತದಲ್ಲಿ ಪೂರ್ವಾಚಾರಿಯು ಕಂಡೆ
ಸ್ವಾಯತದಲ್ಲಿ ಪೂರ್ವಾಚಾರಿಯು ಕಂಡೆ
ಸನ್ನಿಹಿತದಲ್ಲಿ ಪೂರ್ವಾಚಾರಿಯು ಕಂಡೆ
ಗುಹೇಶ್ವರ ಲಿಂಗದಲ್ಲಿ **ಪೂರ್ವಾಚಾರಿ ಸಂಗನ ಬಸವಣ್ಣನ**
ಶ್ರೀ ಪಾದಕೆ ನಮೋ ನಮೋ ಎಂಬೆನು.

ಎಂದು ಶ್ರೀ ಅಲ್ಲಮಪ್ರಭುದೇವರು ಹೇಳುವಂತೆ ಆಯತ, ಸ್ವಾಯತ, ಸನ್ನಿಹಿತ ತತ್ತ್ವಗಳನ್ನು ಕಲಿಸಿದ ಗುರು ಸಂಗನ ಬಸವಣ್ಣನವರು.

ಇವರು 'ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರ' ಎಂದಿದ್ದಾರೆ ಪ್ರಭುದೇವರು.

ಇವರೇ ಇಷ್ಟಲಿಂಗವನ್ನು ಕೊಟ್ಟವರು, ಲಿಂಗವಂತ ಧರ್ಮದ ಆದ್ಯರು. ಆದ್ದರಿಂದ ಅವರಿಗೆ ಮೊದಲಿನ ಸ್ಥಾನ ಸಲ್ಲಬೇಕಾದುದು ಸೂಕ್ತ ಎಂಬುದೇ ಶರಣರ ಆಣತಿ.

ಗುರುವಾದಡೂ ಬಸವಣ್ಣನಿಲ್ಲದೆ ಗುರುವಿಲ್ಲ
ಲಿಂಗವಾದಡೂ ಬಸವಣ್ಣನಿಲ್ಲದೆ ಲಿಂಗವಿಲ್ಲ
ಜಂಗಮವಾದಡೂ ಬಸವಣ್ಣನಿಲ್ಲದೆ ಜಂಗಮವಿಲ್ಲ
ಪ್ರಸಾದವಾದಡೂ ಬಸವಣ್ಣನಿಲ್ಲದೆ ಪ್ರಸಾದವಿಲ್ಲ
ಅನುಭವವಾದಡೂ ಬಸವಣ್ಣನಿಲ್ಲದೆ ನುಡಿಯಲಾಗದು
ಇಂತು ಸಂಗಿಸುವಲ್ಲಿ, ನಿಜ ಸಂಗಿಸುವಲ್ಲಿ
ಸುಸಂಗಿಸುವಲ್ಲಿ ಮಹಾಸಂಗಿಸುವಲ್ಲಿ
ಪ್ರಸಾದ ಸಂಗಿಸುವಲ್ಲಿ, ಕಲಿದೇವಾ,
ನಿಮ್ಮ ಶರಣ ಬಸವಣ್ಣನ ನಿಲುವು.

ಆದ್ದರಿಂದ ಎಲ್ಲ ಕೆಲಸ ಕಾರ್ಯಗಳಲ್ಲೂ ಬಸವ ಸ್ಮರಣೆ ಬೇಕೇ ಬೇಕು. ಪ್ರಥಮ ಪೂಜೆ ಆದಿ ಗಣನಾಥ ಬಸವಣ್ಣನವರಿಗೇ ಸಲ್ಲುವುದು.

2. ವಚನ ಸಾಹಿತ್ಯವೇ ಧರ್ಮಶಾಸ್ತ್ರ :

ವಿಶ್ವಗುರು ಬಸವಣ್ಣನವರೇ ಆದಿ ಪ್ರಮಥರಾಗಿ, ಅವರ ಸಮಕಾಲೀನ ಶರಣರು ಕೊಟ್ಟ ವಚನ ಸಾಹಿತ್ಯವೇ ಲಿಂಗಾಯತ ಧರ್ಮದ ಧರ್ಮ ಸಂಹಿತೆ.

ಹಾಲತೊರೆಗೆ ಬೆಲ್ಲದಂತಹ ಕೆಸರು.
ಸಕ್ಕರೆಯಂತಹ ಮಳಲು, ತವರಾಜದಂತಹ ನೊರೆತೆರೆಗಳು
ಇಂತಪ್ಪ ಆದ್ಯರ ವಚನವಿರಲು ಬೇರೆ ಭಾವಿಯ ತೋಡಿ
ಉಪ್ಪನೀರ ಸವಿದಂತಾಯಿತ್ತಯ್ಯ ಎನ್ನ ಯುಕ್ತಿ
ನಿಮ್ಮ ವಚನಂಗಳ ಕೇಳದೆ, ಅನ್ಯ ಪುರಾಣಂಗಳ ಕೇಳಿ
ಕೆಟ್ಟೆನಯ್ಯ ಕೂಡಲ ಸಂಗಮ ದೇವಾ.

ಎಂಬ ವಚನದಲ್ಲಿ ಹೇಳಿರುವಂತೆ ಅನ್ಯ ಪುರಾಣಂಗಳ ಕೇಳಿ ಮೂಢನಂಬಿಕೆಗಳನ್ನು ಬೆಳೆಸಿಕೊಳ್ಳದೆ ವಚನ ಸಾಹಿತ್ಯವನ್ನು ಓದಿ ನಿಜಧರ್ಮವನ್ನು ಪಾಲಿಸಬೇಕು.

ನಮ್ಮ ಅನೇಕ ಮಠಾಧೀಶರು ಸಂಸ್ಕೃತ ಕಲಿತು, ವೇದಾಧ್ಯಯನ ಮಾಡಿಬರಲು ತಮ್ಮ ಮರಿಗಳನ್ನು ಅರ್ಥಾತ್ ಉತ್ತರಾಧಿಕಾರಿಗಳನ್ನು ಕಾಶಿಗೆ ಕಳಿಸುವರು. ಅಥವಾ ಇಲ್ಲೇ ಸಂಸ್ಕೃತ ಓದಿಸುವರು. ಲಿಂಗವಂತ ಧರ್ಮ ಹುಟ್ಟಿದ್ದು ಕನ್ನಡ ಭಾಷೆಯಲ್ಲಿ, ನಮ್ಮದು ಕನ್ನಡದ ಧರ್ಮ; ಇದರ ಧರ್ಮ ಶಾಸ್ತ್ರವಾದ ವಚನ ಸಾಹಿತ್ಯ ಇರುವುದು ಕನ್ನಡದಲ್ಲಿ. ಇದನ್ನು ಓದಿ ಬೋಧಿಸಬೇಕಾದ್ದು ಧರ್ಮಗುರುಗಳ ಕರ್ತವ್ಯ.

ವೈದಿಕ ಧರ್ಮದ ಧರ್ಮಭಾಷೆ ಸಂಸ್ಕೃತ
ಬೌದ್ಧ ಧರ್ಮದ ಧರ್ಮಭಾಷೆ ಪಾಲಿ
ಜೈನ ಧರ್ಮದ ಧರ್ಮಭಾಷೆ ಅರ್ಧಮಾಗಧಿ
ಇಸ್ಲಾಂ ಧರ್ಮದ ಧರ್ಮಭಾಷೆ ಅರಾಬಿಕ್
ಲಿಂಗಾಯತ ಧರ್ಮದ ಧರ್ಮಭಾಷೆ ಕನ್ನಡ

ಈ ಧರ್ಮದ ಬೋಧಕರು, ನೇತಾರರಿಗೆ ಕನ್ನಡ ಭಾಷೆಯ ಪರಿಣತಿ, ವಚನ ಸಾಹಿತ್ಯದ ಅಧ್ಯಯನ ಬೇಕೇ ವಿನಾ, ಬೇರೆ ಯಾವ ಶಾಸ್ತ್ರದ್ದಲ್ಲ. ಅಧ್ಯಯನ ದೃಷ್ಟಿಯಿಂದ ವೇದ-ಉಪನಿಷತ್ತು-ಆಗಮ-ಕುರಾನ್ ಎಲ್ಲ ಓದೋಣ. ಆದರೆ ಮೊದಲು ತನ್ನ ಧರ್ಮವನ್ನು ತಿಳಿಯಬೇಕು, ತಿಳಿಸಬೇಕು.

ನಮ್ಮ ಮಠಾಧಿಪತಿಗಳು ಕಾಶಿಗೆ ಹೋಗಿ, ಓದಿ ಬಂದು ಮಠಗಳ ಅಧಿಪತ್ಯ ವಹಿಸಿಕೊಳ್ಳುವುದು ಹೇಗೆಂದರೆ ಇಂಜಿನಿಯರಿಂಗ್ ಓದಿ ಬಂದು ವೈದ್ಯಕೀಯ ವೃತ್ತಿ ಆರಂಭಿಸಿದಂತಾಗುವುದು. ಈ ಹುಚ್ಚು ಹವ್ಯಾಸ ಬಿಟ್ಟು ವಚನ ವಾಙ್ಮಯ ಓದುವುದನ್ನು- ಬೋಧಿಸುವುದನ್ನು ಬೆಳೆಸಿಕೊಳ್ಳಬೇಕು.

Digitalized by e-Sahithya Documentation Forum
Sponsored by Sarayu Foundation Trust

3. ಇಷ್ಟಲಿಂಗವೇ ಧರ್ಮ ಲಾಂಛನ :

ಲಿಂಗಾಯತ ಧರ್ಮದ ಜೀವಾಳ ಇಷ್ಟಲಿಂಗ. ಇದರಿಂದಲೇ ಒಬ್ಬ ವ್ಯಕ್ತಿಗೆ ಈ ಧರ್ಮದ ಅನುಯಾಯಿತ್ವ ದೊರೆಯುವುದು. ಹಣವಿದ್ದವ ಹಣವಂತ, ಗುಣವಿದ್ದವ ಗುಣವಂತ, ಶೀಲವಿದ್ದವ ಶೀಲವಂತ, ವಿದ್ಯೆ ಇದ್ದವ ವಿದ್ಯಾವಂತ, ಲಿಂಗವಿದ್ದವ ಲಿಂಗವಂತ.

ಲಿಂಗಪೂಜೆ ಬಹಳ ಪುರಾತನವಿದ್ದರೂ, ಸ್ಥಾವರ ಲಿಂಗದ ಅರ್ಥ ಸಂಕೇತವೇ ಬೇರೆ; ಇಷ್ಟಲಿಂಗದ ಅರ್ಥ, ಸಂಕೇತವೇ ಬೇರೆ. ಸ್ಥಾವರ ಲಿಂಗವು ಐತಿಹಾಸಿಕ (ಪೌರಾಣಿಕ) ಶಿವನ ಕುರುಹಾದರೆ ಇಷ್ಟಲಿಂಗವು ಪರಮಾತ್ಮನ ಕುರುಹು. ನಾಮ ರೂಪಕ್ರಿಯೆಗಳಿಲ್ಲದ ದೇವನನ್ನು ಮನುಷ್ಯಾಕಾರದಲ್ಲಿ, ಪ್ರಾಣಿ-ಪಶು-ಪಕ್ಷಿಗಳ ಆಕಾರದಲ್ಲಿ ಸಾಕಾರಗೊಳಿಸುವುದು ತಪ್ಪೆಂದು ಗುರು ಬಸವಣ್ಣನವರು ಕರ್ತನ ಕಾರ್ಯವಾದ ವಿಶ್ವದಾಕಾರದಲ್ಲಿ ಸಾಕಾರಗೊಳಿಸಿದ್ದಾರೆ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ.
ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೇ
ಕೂಡಲ ಸಂಗಮ ದೇವಯ್ಯಾ,
ನೀವೆನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ.

ಎಂದು ಧರ್ಮಪಿತ ಬಸವಣ್ಣನವರು ಹೇಳುವಂತೆ, ಇಷ್ಟಲಿಂಗವು ದೇವರ ಕುರುಹು. ಇಂಥ ದೇವನನ್ನು ನಾವು ಇಷ್ಟಲಿಂಗ ಪೂಜೆಯಲ್ಲಿ ಸ್ಮರಿಸಿ ಕೊಂಡಾಡಬೇಕೇ ವಿನಾ ರುದ್ರನನ್ನು ಅಲ್ಲ. ಇಷ್ಟಲಿಂಗಕ್ಕೆ ರುದ್ರಾಭಿಷೇಕ ಮಾಡುವುದು, ಸ್ಥಾವರ ಲಿಂಗದ ಮಂತ್ರಗಳನ್ನು ಹೇಳುವುದು ಎಂದರೆ ತಾಯಿಯ ಪಾದಪೂಜೆ ಮಾಡಬೇಕು ಎಂದು ತಾಯಿಯ ಪಾದ ಹಿಡಿದುಕೊಂಡು ಹೆಂಡತಿಯ ವರ್ಣನೆ ಮಾಡಿದಂತೆ ಆಗುವುದು. ಬಸವಾದಿ ಪ್ರಮಥರು ಇಷ್ಟಲಿಂಗದ ಮೂಲಕ ಯಾವ ಕ್ರಾಂತಿಯನ್ನು ಮಾಡಿದರೋ ಅದಕ್ಕೆ ವಿರುದ್ಧವಾಗಿ ನಡೆದರೆ ಹೇಗೆ ? ಉಪಾಸ್ಯ ವಸ್ತುಗಳನ್ನು ನಾವು 6 ರೀತಿಯಲ್ಲಿ ವರ್ಗೀಕರಿಸಬಹುದು. ಪೌರಾಣಿಕ ದೇವತೆಗಳ ಪೂಜೆ, ಪಂಚಭೂತಗಳ ಪೂಜೆ, ಪ್ರಾಣಿಪೂಜೆ, ಪಿತೃಪೂಜೆ, ವಿಭೂತಿಪೂಜೆ ಮತ್ತು ದೇವಪೂಜೆ ಎಂಬುದಾಗಿ. ಅದರಲ್ಲಿ ಇಷ್ಟಲಿಂಗ ಪೂಜೆ, ಅತ್ಯಂತ ಶ್ರೇಷ್ಟವಾದ ದೇವಪೂಜೆ.

ಇಷ್ಟಲಿಂಗವು ಜಾತಿಸೂಚಕವೆಂದು, ಜಾತಿ ಲಾಂಛನವೆಂದು ತಪ್ಪು ತಿಳಿದು, ಕಟ್ಟಿಕೊಳ್ಳದೆ ಇರುವ, ಪೂಜಿಸದಿರುವ ಭೂಪರೂ ಇದ್ದಾರೆ. ಇದು ಜಾತಿ ಲಾಂಛನವೆಂದು ನೀವು ಯಾರೇ ಆಗಲಿ ಸಿದ್ಧಪಡಿಸಿದುದೇ ಆದರೆ ನಾನೂ ಬಿಟ್ಟುಬಿಡಲು ಸಿದ್ಧ. ಮಾನವ ಮಾನವರಲ್ಲಿ ಜಾತಿ ಭೇದ ಮಾಡಬಾರದು; ಧರ್ಮ ಸಂಸ್ಕಾರ ಎಲ್ಲರ

ಸೊತ್ತು ಎಂಬುದನ್ನು ಸಾರುವ ಸಮಾನತೆಯ ಕುರುಹು ಇಷ್ಟಲಿಂಗ. ಇದು ವಿಶ್ವ ಚೈತನ್ಯದ ಕುರುಹು, ಆತ್ಮಜ್ಯೋತಿಯ ಕುರುಹು. ಮಧ್ಯವರ್ತಿಯಾದ ಪೂಜಾರಿಯ ಶೋಷಣೆಯಿಂದ ಪಾರುಮಾಡುವ ದಿವ್ಯ ಸಾಧನ.

ನಾನು 1976 ರಲ್ಲಿ ಇಂಗ್ಲೆಂಡಿಗೆ ಹೋಗುವಾಗ ವಿಮಾನದಲ್ಲಿ ಓರ್ವ ಸಿಖ್ ಧರ್ಮಾನುಯಾಯಿ ಸಿಕ್ಕ. ಉಭಯತರೂ ನಮ್ಮ ನಮ್ಮ ಧರ್ಮಗಳ ಬಗ್ಗೆ ಚರ್ಚಿಸಿದೆವು. ನೀವು ಏಕೆ ಗಡ್ಡ-ಶಿಖೆ ಬಿಡುವಿರಿ? ಎಂದು ಕೇಳಿದೆ. ಆತ ಹೇಳಿದ "ದುನಿಯಾಕೊ ಮಾಲುಮ್ ಹೋನಾ ಚಾಯಿಯೇ, ಹಮ್ ಸಿಖ್ ಲೋಗ್ ಹೈ." ಪುರುಷರ ಕುರುಹಾದ ಗಡ್ಡವನ್ನು ಗುರುಗೋವಿಂದ ಸಿಂಗರು ಧರ್ಮಲಾಂಛನವನ್ನಾಗಿ ಮಾಡಿದರು. ಅದನ್ನು ಅಷ್ಟು ನಿಷ್ಠೆಯಿಂದ ಅವರು ಪಾಲಿಸುತ್ತಾರೆ. ಈ ಲಿಂಗವಂತರು, ದೇವರ ಕುರುಹಾದ ಇಷ್ಟಲಿಂಗವನ್ನು ಅಭಿಮಾನ ಶೂನ್ಯರಾಗಿ ಬಿಟ್ಟು ಓಡಾಡುತ್ತಾರೆ ಎಂದರೆ ಎಷ್ಟು ನಾಚಿಕೆಗೇಡಲ್ಲವೆ?

4. ಕೂಡಲ ಸಂಗಮವೇ ಧರ್ಮಕ್ಷೇತ್ರ :

ಕೂಡಲ ಸಂಗಮವು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ. ಈ ಧರ್ಮದ ಅನೇಕ ಶರಣರು, ಶಿವಯೋಗಿಗಳು ಐಕ್ಯರಾಗಿರುವವು ಧರ್ಮದ ಕ್ಷೇತ್ರಗಳಾದರೆ, ಕೂಡಲ ಸಂಗಮವು ಧರ್ಮಕ್ಷೇತ್ರ, ಧರ್ಮಗುರುವು ಐಕ್ಯರಾಗಿರುವ ಕಾರಣ. ಆದ್ದರಿಂದ ಪ್ರತಿಯೊಬ್ಬ ಲಿಂಗವಂತನ ಮತ್ತು ಬಸವ ತತ್ವಾನುಯಾಯಿಯ ಕರ್ತವ್ಯ—ಪ್ರತಿವರ್ಷಕ್ಕೊಮ್ಮೆ ಶರಣ ಮೇಳಕ್ಕೆ ಬರುವುದು. ಮುಸ್ಲೀಮ್ ಧರ್ಮಾನುಯಾಯಿಗೆ ಮೆಕ್ಕಾದಂತೆ, ಕ್ರೈಸ್ತರಿಗೆ ಜೆರೂಸಲೇಮಿನಂತೆ, ಬೌದ್ಧರಿಗೆ ಗಯೆ ಇದ್ದಂತೆ, ಸಿಖ್ಖರಿಗೆ ಅಮೃತಸರವಿದ್ದಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ಪವಿತ್ರ ಕ್ಷೇತ್ರ ಕೂಡಲ ಸಂಗಮ.

5. ಧರ್ಮಧ್ವಜ-ಷಟ್ಕೋನ ಬಸವ ಧ್ವಜ :

ಆರು ಕೋನಗಳನ್ನುಳ್ಳ, ಮಧ್ಯದಲ್ಲಿ ಓಂಕಾರವನ್ನುಳ್ಳ, ಆರು ಕೋನಗಳಲ್ಲಿ ಶ್ರೀಗುರುಬಸವ ಎಂಬ ಅಕ್ಷರಗಳುಳ್ಳ ಷಟ್ಕೋನ ಬಸವ ಧ್ವಜವೇ ಲಿಂಗಾಯತ ಧರ್ಮ ಧ್ವಜ.

6. ಧರ್ಮದ ಧ್ಯೇಯ-ಕಲ್ಯಾಣರಾಜ್ಯ ನಿರ್ಮಾಣ :

ಮರ್ತ್ಯಲೋಕವು ಕರ್ತಾರನ ಕಮ್ಮಟ; ಶಿವನ ಲೀಲಾರಂಗ. ಇದನ್ನು ಮಿಥ್ಯವೆಂದು, ಮಾಯೆಯೆಂದು ಭಾವಿಸದೆ ಕರ್ತಾರನ ಕಮ್ಮಟ ಎಂದು ಗೌರವಿಸಿ, ಇದರ ಮೇಲೆಯೇ, ಕಲ್ಯಾಣ ರಾಜ್ಯ (ದೈವೀರಾಜ್ಯ)ವನ್ನು ನಿರ್ಮಾಣ ಮಾಡುವುದೇ ಶರಣನ ಗುರಿ. ಶರಣನು ಆದರ್ಶ ದೈವೀರಾಜ್ಯದ ಪ್ರಜೆ.

ಈ ಷಟ್ ಸೂತ್ರಗಳ ಪ್ರಚಾರ, ಅನುಷ್ಠಾನ, ಸಮಾಜ ಸಂಘಟನೆಯೇ ಬಸವ ಧರ್ಮ ಪೀಠದ ಗುರಿ. ಯಾವುದಾದರೂ ಒಂದು ಗುಂಪನ್ನು ಕಟ್ಟಲು ಹಗ್ಗವು ಹೇಗೆ

Digitalized by e-Sahithya Documentation Forum
Sponsored by Sarayu Foundation Trust

ಸಹಾಯಕವಾಗುವುದೋ ಹಾಗೆ ಈ ಸೂತ್ರಗಳು ಧರ್ಮದ ಅನುಯಾಯಿಗಳನ್ನು ಕಟ್ಟುವ ಸಾಧನಗಳು.

ಧರ್ಮ ಪೀಠದ ರಚನೆ ಕೂಡ ಅಷ್ಟೇ ಸಾಂಕೇತಿಕವಾಗಿದೆ ನೋಡಿರಿ. ಲಿಂಗವಂತ ಧರ್ಮವು ಸೇಶ್ವರವಾದಿ ಧರ್ಮವು. ಅಂದರೆ ಈ ಜಗತ್ತನ್ನು ನಿರ್ಮಾಣ ಮಾಡಿದ ಕರ್ತನೊಬ್ಬನಿದ್ದಾನೆ ಎಂದು ಹೇಳುತ್ತದೆ. ಇಸ್ಲಾಂ ಧರ್ಮದಂತೆ ದೇವರಿಗೆ ಪರಮೋಚ್ಛ ಸ್ಥಾನವನ್ನು ಕೊಟ್ಟ ಭಾರತೀಯ ಧರ್ಮವಿದು. ದೇವರನ್ನು ಓಂಕಾರ ಸ್ವರೂಪಿ ಎಂದು ತಿಳಿಯಲಾಗುತ್ತದೆ. ಅದಕ್ಕಾಗಿಯೇ ಪೀಠದಲ್ಲಿ ಅತ್ಯಂತ ಮೇಲೆ ಓಂಕಾರವಿದೆ. ಓಂಕಾರವು ಅ-ಉ-ಮ ಎಂಬ ಮೂರು ಮೂಲಾಕ್ಷರಗಳಿಂದ ಆಗಿದೆ.

ಅ	ಉ	ಮ
ಜ್ಞಾನ ಶಕ್ತಿ	ಇಚ್ಛಾಶಕ್ತಿ	ಕ್ರಿಯಾ ಶಕ್ತಿ
ಸೃಷ್ಟಿ	ಸ್ಥಿತಿ	ಲಯ
ಸತ್	ಚಿತ್	ಆನಂದ

ಓಂಕಾರದ ಕೆಳಗೆ ವಿಶ್ವಗುರು ಬಸವಣ್ಣನವರ ಭಾವಚಿತ್ರವಿದೆ. ಪರಮಾತ್ಮನ ಪ್ರತಿನಿಧಿಯಾಗಿ, ಅವನ ಸಂಕಲ್ಪ ಪೂರೈಕೆಗಾಗಿಯೇ ಬಸವಣ್ಣನವರು ಬಂದು, ನಮಗೆ ದಾರಿ ತೋರಿದ್ದಾರೆ. ವಿಶ್ವಗುರು ಬಸವಣ್ಣನವರ ಭಾವಚಿತ್ರದ ಬಲಕ್ಕೆ ನಾನು ಈಗಾಗಲೇ ವಿವರಿಸಿರುವ ಷಟ್ ಸೂತ್ರಗಳಿವೆ, ಎಡಕ್ಕೆ ಶರಣರ ಪರಂಪರೆಯ ಸೂಚಕವಾಗಿ ಶೂನ್ಯ ಪೀಠಾಧೀಶ ಅಲ್ಲಮ ಪ್ರಭು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕ ಮಹಾದೇವಿ, ವೀರಶರಣ ಮಡಿವಾಳ ಮಾಚಿದೇವರ ಚಿತ್ರಗಳಿವೆ.

ಧರ್ಮದಲ್ಲಿ ಗುರು ಬಸವಣ್ಣನವರ ಸ್ಥಾನ

ಜಗತ್ತಿನ ಯಾವ ಧರ್ಮದವರೂ ತೋರದ ಉದಾಸೀನವನ್ನು ಲಿಂಗವಂತ ಧರ್ಮೀಯರು ತಮ್ಮ ಧರ್ಮದ ಆದ್ಯರನ್ನು ಗುರುತಿಸಿ, ಗೌರವಿಸುವಲ್ಲಿ ತೋರುತ್ತಿದ್ದಾರೆ. ಜನ ಸಾಮಾನ್ಯರಲ್ಲಿ ಆ ಭಾವವಿಲ್ಲ. ಅವರು ಇಂದಿಗೂ ಆ ಭಯಭಕ್ತಿ ಉಳಿಸಿಕೊಂಡಿದ್ದಾರೆ. ಧಾರ್ಮಿಕ ನೇತಾರರು ಮತ್ತು ಸಮಾಜದ ಮುಂದಾಳುಗಳು ಎನಿಸಿಕೊಳ್ಳುವವರಲ್ಲಿ ಈ ಔದಾಸೀನ್ಯ ಬಹಳವಿದೆ. ಕ್ರೈಸ್ತರು ಕ್ರಿಸ್ತನನ್ನು, ಇಸ್ಲಾಮೀಯರು ಮಹಮದ್ ಪೈಗಂಬರರನ್ನು, ಬೌದ್ಧರು ಬುದ್ಧನನ್ನು ಗೌರವಿಸುವುದನ್ನೂ ನೋಡಿ ತಿಳಿಯಬೇಕು.

ವಿಶ್ವಗುರು ಬಸವಣ್ಣವನರ ವ್ಯಕ್ತಿತ್ವ-ಸಾಧನೆ-ಸಂದೇಶ ಅಪೂರ್ವ. ಇದನ್ನು ಎಲ್ಲರೂ ಒಪ್ಪುತ್ತಾರೆ. ಇಂಥವರನ್ನು ಧರ್ಮಗುರುವನ್ನಾಗಿ ಪಡೆಯುವುದೇ ನಮ್ಮ ಭಾಗ್ಯ. ಪೂಜ್ಯ ಮಾತಾಜಿಯವರು ಬರೆದ 'ವಿಶ್ವವಿಭೂತಿ ಬಸವಣ್ಣ' ಎಂಬ ಪುಸ್ತಕ ಓದಿರಿ. 63 ಗುಣಗಳನ್ನು ಆ ಮಹಾಗುರುವಿನಲ್ಲಿ ಗುರುತಿಸಿ, ಬರೆದಿದ್ದಾರೆ. ಅಷ್ಟು ಗುಣ ವಿಶೇಷವಿರುವ ಅಥವಾ ಇವನ್ನು ಮೀರಿಸುವ ಮತ್ತಾರಾದರೂ ಇರುವರೇ ನೀವೇ

ತಿಳಿದು ಸಿದ್ಧಪಡಿಸಿ. ಸರಿ, ನಾವೂ ಸಹ ನಿಮ್ಮೊಡನೆ ಅವರ ಪ್ರಚಾರ ಮಾಡುತ್ತೇವೆ. ಇದನ್ನು ದುರಾಭಿಮಾನದಿಂದ ಹೇಳುತ್ತಿಲ್ಲ, ಸತ್ಯವನ್ನರಿತ ಸದಭಿಮಾನದಿಂದ ಹೇಳುತ್ತೇವೆ.

ನೀವು ಪೂಜಿಸುವ, ಆರಾಧಿಸುವ ವ್ಯಕ್ತಿಗಳಿಗೆ ಲೈಫ್, ಎಫರ್ಟ್, ಅಟೇನ್‌ಮೆಂಟ್, ಮತ್ತು ಮೆಸೇಜ್; ಜೀವನ, ಸಾಧನೆ, ಸಿದ್ಧಿ, ಸಂದೇಶ ಇವೆಯೇ ವಿಚಾರಿಸಿರಿ. ವ್ಯಕ್ತಿಗೆ ಜೀವನವೇ ಇರದಿದ್ದರೆ ಅಂದರೆ ಐತಿಹಾಸಿಕತೆ ಇರದಿದ್ದರೆ ಅದು ಪೌರಾಣಿಕ ದೇವತೆ. ಆ ವ್ಯಕ್ತಿ ಉತ್ತಮ ಸಾಧಕನಾಗಿರಬೇಕು. ಸಾಧನೆಯ ಪ್ರತಿಫಲವಾದ ಸಿದ್ಧಿ ಇರಬೇಕು. ಜಗತ್ತಿಗೆ ಏನಾದರೂ ಸಂದೇಶ ಕೊಟ್ಟಿರಬೇಕು. ಈ ದೃಷ್ಟಿಯಿಂದ ಗುರು ಬಸವಣ್ಣನವರದು ಅಸಾಮಾನ್ಯ ವ್ಯಕ್ತಿತ್ವ. ಜೀವನವು ಅತ್ಯಂತ ಆದರ್ಶಮಯ ದಿವ್ಯ ಜೀವನ, ಸಾಧನೆಯು ಉತ್ಕಟವಾದುದು, ಪಡೆದ ಸಿದ್ಧಿ ಅಮೂಲ್ಯ, ಕೊಟ್ಟ ಸಂದೇಶ ಅಮೋಘ. ಇಂಥ ಗುರುವನ್ನು ಮರೆತು; ಅಥವಾ ಹತ್ತರೊಳಗೆ ಹನ್ನೊಂದು ಎಂಬಂತೆ ಭಾವಿಸಿ, ಕಂಡ ಕಂಡವರನ್ನು ಆರಾಧಿಸುವುದು ಸರಿಯಲ್ಲ. ನಮ್ಮ ಅಪ್ಪ ಮಿಸ್ಟರ್ ವರ್ಲ್ಡ್ (ವಿಶ್ವ ಸುಂದರ)- ಬಸವಣ್ಣ; ನಮ್ಮ ತಾಯಿ ಮಿಸ್ ಯೂನಿವರ್ಸ್ (ವಿಶ್ವ ಸುಂದರಿ) ವಚನ ವಾಙ್ಮಯ. ಇಂಥ ತಾಯಿತಂದೆಯರ ಮಕ್ಕಳು ಎಂಬ ಬಗ್ಗೆ ನಮಗೆ ಎಷ್ಟು ಅಭಿಮಾನ ಇರಬೇಕಲ್ಲವೆ ?

ಗುರು ಬಸವಣ್ಣನವರು ಕೊಟ್ಟ ಇಷ್ಟಲಿಂಗ ಧರಿಸಿ, ಬಸವಣ್ಣನವರೇ ಆದಿ ಪ್ರಮಥರಾಗಿ- ಅವರ ಸಮಕಾಲೀನ ಶರಣರು ಕೊಟ್ಟ ವಚನ ಸಾಹಿತ್ಯವನ್ನು ಭಾಷಣಗಳಲ್ಲಿ ಬಳಸಿಕೊಳ್ಳುತ್ತ, ಆದರೂ ಅವರನ್ನು ಧರ್ಮದ ಆದ್ಯರೆಂದು ಗುರುತಿಸಿ, ಗೌರವಿಸದೆ ಇರುವವರು ಒಂದು ರೀತಿ ವಂಚಕರು. ಏಕೆಂದರೆ ಇವರ ಸ್ವಭಾವ ಹೇಗೆಂದರೆ ಅಪ್ಪನು ಕೊಟ್ಟ ಆಸ್ತಿಬೇಕು ಆದರೆ (ಅಪ್ಪನನ್ನು ಪೋಷಿಸುವುದಿರಲಿ) ಅಪ್ಪ ಎಂದು ಅನ್ನಲೂ ತಯಾರಿಲ್ಲ— ಐತಿಹಾಸಿಕತೆ, ನೆಲೆ, ಸಂದೇಶ ಇಲ್ಲದವರನ್ನು ಹಾಡಿ ಹರಸುತ್ತಾರೆ.

ಬಸವ ಗುರು ಪೂಜೆ

ಇನ್ನು ಕೆಲವು ಜನರು ಗುರುಬಸವಣ್ಣನವರ ತತ್ತ್ವದಲ್ಲಿ ಶ್ರದ್ಧೆ-ನಿಷ್ಠೆ ಹೊಂದಿರುವರಾದರೂ ಬಸವಣ್ಣನವರ ಪೂಜೆ ಮಾಡಬಾರದು ಎಂದು ಪ್ರತಿಪಾದಿಸುತ್ತಾರೆ. ಇದು ಏಕದೇವೋಪಾಸನೆಗೆ ಚ್ಯುತಿ ತರುತ್ತದೆ ಎನ್ನುತ್ತಾರೆ. ನಾವೂ ಮೊದಲು ಇದೇ ರೀತಿ ಪ್ರತಿಪಾದಿಸುತ್ತಿದ್ದೆವಾದರೂ, ನಂತರ ವಿವಿದ ಧರ್ಮದವರು ಸಮಾಜವನ್ನು ಕಟ್ಟಿರುವ ತರೀಖಾ (ವಿಧಾನ) ತಿಳಿದು ಒಂದು ತಿದ್ದುಪಡಿ ತಂದೆವು. "ನಮ್ಮ ಧರ್ಮದಲ್ಲಿ ಗುರು-ಲಿಂಗ-ಜಂಗಮ ಮೂರು ಪೂಜ್ಯ ವಸ್ತುಗಳು : ಈ ಸ್ಥಾನದಲ್ಲಿ ಬೌದ್ಧರು, ಬುದ್ಧ-ಧರ್ಮ-ಸಂಘ ಇಟ್ಟಂತೆ ; ಕ್ರೈಸ್ತರು, ಏಸು-ದೇವರು-ಪವಿತ್ರಾತ್ಮರನ್ನಿಟ್ಟಂತೆ ನಾವು ಬಸವಣ್ಣ-ಲಿಂಗ-ಜಂಗಮ ಇಡಬೇಕು. ಈ ಮೂರೂ ಪೂಜೆಗೆ ಅರ್ಹ ಎಂಬುದು

Digitalized by e-Sahithya Documentation Forum
Sponsored by Sarayu Foundation Trust

ಆದಿ ಶರಣರ ಆದೇಶ." ಗುರು-ಲಿಂಗ-ಜಂಗಮದಲ್ಲಿ ಗುರುಸ್ಥಾನದಲ್ಲಿ ಬಸವಣ್ಣ, ದೀಕ್ಷಾ ಗುರುವು ಜಂಗಮದ ಅಡಿಯಲ್ಲಿ ಸೇರಿಸಲ್ಪಟ್ಟರೆ ಅನೇಕ ಸಮಸ್ಯೆಗಳು ಪರಿಹಾರ ಗೊಳ್ಳುವವು ಎಂದು ನಿರ್ಣಯಿಸಿ, ಅಂದಿನಿಂದ ಅದರಂತೆ ಬಸವ ಗುರುಪೂಜೆಯನ್ನು ಬಳಕೆಗೆ ತರಲಾಯಿತು. ಇದು ನಿರೀಕ್ಷಿತ ಫಲವನ್ನೇ ಕೊಟ್ಟಿದೆ.

ಶಿಲೆಯು ಸೃಷ್ಟಿಯಲ್ಲಿರುತ್ತದೆ. ಆದರೆ ಶಿಲ್ಪವನ್ನು ಕಟೆದ ಶಿಲ್ಪಿಯನ್ನು ಗೌರವಿಸುತ್ತೇವೆ. ಬಂಗಾರವು ಭೂಮಿಯಲ್ಲಿ ದೊರೆಯುತ್ತದೆ, ದೇವರಿಂದ ಸೃಷ್ಟಿಯಾಗಿ, ಆದರೆ ಸುಂದರ ಆಭರಣ ಮಾಡುವ ಅಕ್ಕಸಾಲಿಯನ್ನು ನಾವು ಶ್ಲಾಘಿಸುತ್ತೇವೆ: ಭಿತ್ತಿಯ ಮೇಲೆ ಚಿತ್ರ ಬಿಡಿಸಿದ ಕಲಾವಿದನಿಗೆ ಪ್ರಶಸ್ತಿ ಕೊಡುತ್ತೇವೆ. ಹಾಗೆಯೇ ದೇವರು ನಮಗೆ ಬದುಕು ಕೊಟ್ಟ; ಧರ್ಮಗುರು ಬಸವಣ್ಣ ಬದುಕಲು ಕಲಿಸಿದರು. ದೇವರು ನರರನ್ನು ಸೃಷ್ಟಿಮಾಡಿದರೆ ಧರ್ಮಗುರುವು ನರರನ್ನು ಶರಣರನ್ನಾಗಿ ಮಾಡಿದರು. ಸೃಷ್ಟಿಯನ್ನು ಕೊಟ್ಟ ದೇವರಿಗೆ ಕೃತಜ್ಞತೆ ಸಲ್ಲಿಸಲೋಸುಗ ನಾವು ನಿತ್ಯವೂ ಪೂಜೆಯನ್ನು ಮಾಡುತ್ತೇವಷ್ಟೆ. ಹಾಗೆ ಸೃಷ್ಟಿಯನ್ನು ಉಪಯೋಗಿಸಿಕೊಂಡು ಹೇಗೆ ಬಾಳನ್ನು ಸಾರ್ಥಕ ಮಾಡಿಕೊಂಡು ಬಾಳಬೇಕು ಎಂಬುದನ್ನು ಕಲಿಸಿದ ಬಸವ ಗುರುವನ್ನೂ ನಿತ್ಯವೂ ಪೂಜಿಸಬೇಕು. "ದಯವೇ ಧರ್ಮದ ಮೂಲ" ಎಂಬುದನ್ನು ದೇವರು ಹೇಳಿಕೊಟ್ಟನೆ? ಕಾಯಕವೇ ಕೈಲಾಸ ಎಂಬುದನ್ನು ದೇವರು ಕಲಿಸಿದನೆ? ಮೃದು ವಚನವೇ ಸಕಲ ಜಪಂಗಳು ಎಂದು ದೇವರು ಬೋಧಿಸಿದನೆ? ಆದ್ದರಿಂದ ಸೃಷ್ಟಿಕರ್ತ ದೇವರು, ಧರ್ಮಕರ್ತ ಬಸವಣ್ಣ ಉಭಯತರೂ ನಮಗೆ ಪೂಜನೀಯರು.

ಇಸ್ಲಾಂಧರ್ಮ ಏಕದೇವೋಪಾಸನೆಗೆ ಬಹಳ ಮಹತ್ವಕೊಡುತ್ತದೆ. ಕ್ರೈಸ್ತ-ಬೌದ್ಧ-ಜೈನ ಧರ್ಮಗಳು ಗುರುವಿನ ಉಪಾಸನೆಗೆ ಮಹತ್ವಕೊಡುತ್ತವೆ. ಆದಿ ಶರಣರ ಮಾತಿನಲ್ಲಿ ದೇವರು–ಗುರು ಉಭಯತರಿಗೂ ಗಣನೀಯ ಸ್ಥಾನವಿದೆ. ದೇವರು ಒಬ್ಬನೇ ಎಂದು ನಂಬಿ, ಇಷ್ಟಲಿಂಗ ರೂಪದಲ್ಲಿ ಆರಾಧಿಸಿದರೆ, ಗುರು ಬಸವಣ್ಣನವರೇ ಲಿಂಗಾಯತ ಧರ್ಮದ ಆದ್ಯರೆಂದು ನಂಬಿ ಅವರ ಭಾವಚಿತ್ರವನ್ನು ಪೂಜಿಸಬೇಕು. ಏಕದೇವೋಪಾಸನೆ-ಏಕಗುರೋಪಾಸನೆ ಎಂಬ ಎರಡೂ ಸೂತ್ರಗಳನ್ನು ಬಳಸಿಕೊಂಡು ಈ ಸಮಾಜವನ್ನು ಕಟ್ಟಬೇಕು.

ದೇವಪೂಜೆ-ಗುರುಪೂಜೆ ಮೂರು ಕರಣಗಳಿಂದಲೂ ನಡೆಯಬೇಕು. ಕೆಲವು ಬಸವ ನಿಷ್ಠರು ಹೇಳುವುದುಂಟು. "ನಮ್ಮಲ್ಲಿ ಸಾಮೂಹಿಕ ಪ್ರಾರ್ಥನೆ(Mass-prayer) ಇಲ್ಲ. ಲಿಂಗಪೂಜೆ ಅಷ್ಟೇ ಇದೆ. ಬಸವ ಗುರು ಸ್ತೋತ್ರ ಮಾಡಬಹುದು; ಪೂಜೆ ಬೇಡ." ಇದಕ್ಕೆ ಉತ್ತರ ಹೀಗಿದೆ. ಆರಾಧನೆಯು ಮೂರುಕರಣಗಳಿಂದ ಆಗಬೇಕು. ತನು-ವಚನ-ಮನಗಳೇ ತ್ರಿಕರಣಗಳು. ತನುವಿನಿಂದ ಮಾಡುವುದೇ ಅರ್ಚನೆ, ಮಾತಿನಿಂದ ಮಾಡುವುದೇ ಪ್ರಾರ್ಥನೆ, ಮನಸ್ಸಿನಿಂದ ಮಾಡುವುದೇ ಧ್ಯಾನ. ಈ ಮೂರೂ ಕರಣಗಳಿಂದ ದೇವರು ಮತ್ತು ಗುರುವನ್ನು ಆರಾಧಿಸಬೇಕು. 3 ಪ್ರಶ್ನೆಗಳು ಸೇರಿ

100 ಅಂಕಗಳಿದ್ದರೆ ಒಂದೊಂದಕ್ಕೆ 33 ಅಂಕ ತಾನೇ? ಯಾವ ಒಂದು ಕ್ರಿಯೆಯನ್ನು ನಾವು ಬಿಟ್ಟರೂ ಆಗ 33 ಅಂಕ ಕಡಿಮೆಯಾಗುತ್ತವೆ. ಒಬ್ಬ ವಾತ್ಸಲ್ಯಮಯಿ ತಾಯಿ ಇರುತ್ತಾಳೆಂದು ಇಟ್ಟುಕೊಳ್ಳಿ. ಅವಳು ತನ್ನ ಮಗುವಿನ ಆರೈಕೆಯನ್ನು ಕೈಯಿಂದ ಮಾಡುತ್ತಾಳೆ, ಮಾತಿನಿಂದ ಲಲ್ಲೆಗರೆಯುತ್ತಾಳೆ, ಮನಸ್ಸಿನಿಂದ ಹಿತವನ್ನು ಬಯಸುತ್ತಾಳೆ. ಹಾಗೆಯೇ ಒಬ್ಬ ಪತಿವ್ರತೆಯಾದ ಗೃಹಿಣಿ ಇರುತ್ತಾಳೆ. ಆಕೆ ಮನಮುಟ್ಟಿ ಉಪಚಾರ ಮಾಡುತ್ತಾಳೆ. ಆರೋಗ್ಯ ನೋಡಿಕೊಳ್ಳುತ್ತಾಳೆ; ಹೊತ್ತಿಗೊತ್ತಿಗೆ ಅಡಿಗೆ ಮಾಡಿಕೊಡುತ್ತಾಳೆ. ಇಷ್ಟೇ ಆಯಿತೆ? ಉತ್ತಮ ಮಾತುಗಳಿಂದ ಉಪಚರಿಸಿ ಉಣ್ಣಿಸುತ್ತಾಳೆ; ನೊಂದಾಗ ಸಂತೈಸುತ್ತಾಳೆ. ಮನಸ್ಸಿನಿಂದ ಸದಾ ಲೇಸನ್ನು ಕ್ಷೇಮವನ್ನು ಬಯಸುತ್ತಾಳೆ. ಅದೇ ರೀತಿ ಭಕ್ತನು ಸಹ ದೇವರನ್ನು-ಧರ್ಮಗುರುವನ್ನು ಮೈ-ಮಾತು–ಮನಗಳಿಂದ ಅರ್ಚಿಸಬೇಕು–ಪ್ರಾರ್ಥಿಸಬೇಕು–ಧ್ಯಾನಿಸಬೇಕು.

ಈ ಪೀಠದ ಎರಡೂ ಪಕ್ಕಗಳಲ್ಲಿ ಸಮವಸ್ತ್ರಧಾರಿಗಳಾದ ಇಬ್ಬರು ಶರಣರನ್ನು ನಿಲ್ಲಿಸಲಾಗಿದೆ. ಇವರು ಬಿಳಿಯ ವಸ್ತ್ರಗಳನ್ನು ಧರಿಸಿ, ಮೇಲೊಂದು ಅಡ್ಡಪಟ್ಟಿ ಹಾಕಿದ್ದಾರೆ. ಒಬ್ಬರ ಅಡ್ಡಪಟ್ಟಿಯ ಮೇಲೆ **ಗಣಾಚಾರ ದಳ** ಎಂದಿದೆ. ಇನ್ನೊಬ್ಬರ ಅಡ್ಡಪಟ್ಟಿಯ ಮೇಲೆ **ಭೃತ್ಯಾಚಾರ ದಳ** ಎಂದಿದೆ. ಇವೆರಡೂ ಲಿಂಗಾಯತ ಧರ್ಮದ ಅತಿಮುಖ್ಯ ತತ್ತ್ವಗಳು. ಸಮಷ್ಟಿಯ ಶುದ್ಧಿಗಾಗಿ ಗಣಾಚಾರ, ಸಮಷ್ಟಿಯ ಸೇವೆಗಾಗಿ ಭೃತ್ಯಾಚಾರ.

ಎಡದ ಕೈಯಲ್ಲಿ ಹಾಲ ಬಟ್ಟಲು
ಬಲದ ಕೈಯಲ್ಲಿ ಓಜಗಟ್ಟಿಗೆ
ಯಾವಾಗ ಬಂದಾನೋ ನಮ್ಮಯ್ಯ ತಂದೆ
ಬಡಿದು ಹಾಲ ಕುಡಿಸುವ ತಂದೆ.

ಎಂದು ಧರ್ಮಪಿತರು ಹೇಳುವರು. ಹಾಲಿನ ಬಟ್ಟಲು ಭೃತ್ಯಾಚಾರದ ಸಂಕೇತವಾದರೆ ಓಜಗಟ್ಟಿಗೆ ಗಣಾಚಾರದ ಸಂಕೇತ. ವೀರತನವಿಲ್ಲದ ವಿನಯ ಹೇಡಿತನ, ವಿನಯವಿಲ್ಲದ ವೀರತ್ವ ಕ್ರೂರತನ. ಆದ್ದರಿಂದ ವೀರತ್ವ-ವಿನಯಗಳೆರಡೂ ಬೇಕು. ಗಣಾಚಾರವೆಂದರೆ ಧೈರ್ಯ-ಕ್ರೌರ್ಯವಲ್ಲ ; ಪ್ರತೀಕಾರವಲ್ಲ-ಪ್ರತಿಭಟನೆ. ಭೃತ್ಯಾಚಾರವೆಂದರೆ ದೌರ್ಬಲ್ಯವಲ್ಲ, ಕಿಂಕರತ್ವ. ಗಣಾಚಾರಿ - ಭೃತ್ಯಾಚಾರಿಗಳಿಬ್ಬರೂ ಭಕ್ತಿ-ಜ್ಞಾನ-ಕ್ರಿಯೆ ಎಂಬ ಮೂರು ತುದಿಗಳುಳ್ಳ ತ್ರಿಶೂಲವನ್ನು ಹಿಡಿದಿದ್ದಾರೆ.

ನಾವು ಸಂಪ್ರದಾಯ ವಿರೋಧಿಗಳು ಎಂದು ಕೆಲವರು ಆರೋಪಿಸುವುದುಂಟು. ಇದು ಅರ್ಧ ಸತ್ಯ. ಸತ್ಯವು ಆಚರಣೆಗೆ ಬಂದು, ಕೆಲವು ಕಾಲ ಗತಿಸಿದ ಬಳಿಕ ಅದು ಸಂಪ್ರದಾಯವಾಗಿ ಮಾರ್ಪಾಡಾಗುವುದು ಸಂಪ್ರದಾಯದಲ್ಲಿ ಒಳ್ಳೆಯದೂ ಇರುತ್ತೆ, ಕೆಟ್ಟದ್ದೂ ಇರುತ್ತದೆ. ಒಳ್ಳೆಯದಕ್ಕೆ ಸತ್ ಸಂಪ್ರದಾಯ ಎಂದರೆ, ಕೆಟ್ಟದ್ದನ್ನು ಸತ್ತ ಸಂಪ್ರದಾಯ ಎನ್ನಬಹುದು. ಸತ್ತ ಸಂಪ್ರದಾಯದಲ್ಲಿ ವಿಕೃತ ಸಂಪ್ರದಾಯ

Digitalized by e-Sahithya Documentation Forum
Sponsored by Sarayu Foundation Trust

ವಿರುದ್ಧ ಸಂಪ್ರದಾಯ, ಶಿಥಿಲ ಸಂಪ್ರದಾಯ ಎಂದೆಲ್ಲ ಗುರುತಿಸಬಹುದು. ಅರ್ಥ ರಹಿತವಾದ ಸತ್ತ ಸಂಪ್ರದಾಯವನ್ನು ನಾವು ವಿರೋಧಿಸುತ್ತೇವೆಯೇ ಹೊರತು, ಸತ್ಯ ಸಹಿತವಾದ ಸತ್ ಸಂಪ್ರದಾಯವನ್ನಲ್ಲ. ಅದರ ಉಳುವಿಗಾಗಿ, ಏಳ್ಗೆಗಾಗಿ ತಾನೇ ಈ ಹೋರಾಟ, ಈ ಪೀಠ ಸ್ಥಾಪನೆ.

ಬಸವ ಯುಗ ಪುನರುತ್ಥಾನಗೊಳ್ಳಲು ಕಾರಣರಾದ 20ನೆಯ ಶತಮಾನದ ಮತ್ತೊಬ್ಬ ಶರಣ. ಲಿಂ॥ ಫ. ಗು. ಹಳಕಟ್ಟಿಯವರು. ಇಂಥದೊಂದು ಸಂಪದ್ ಭರಿತ ಪರಂಪರೆಯ 'ಶರಣ ಸಂತತಿ' ಎಂದು ತಿಳಿದು ನಾವಿಂದು ಹೆಮ್ಮೆಪಡಲು ಮುಖ್ಯವಾಗಿ ಶರಣ. ಹಳಕಟ್ಟಿಯವರು ವಚನ ವಾಙ್ಮಯವನ್ನು ಬೆಳಕಿಗೆ ತಂದುದೇ ಆಗಿದೆ. ಅವರು ಪ್ರಕಟಿಸಿ, ಮುಂದೆ ವಿಶ್ವವಿದ್ಯಾಲಯಗಳು ಹೆಚ್ಚಿನ ಪ್ರಮಾಣದಲ್ಲಿ ಪ್ರಕಾಶಿಸಿದ ವಚನ ವಾಙ್ಮಯವನ್ನು ಮನೆಮನೆಗೂ ಮುಟ್ಟಿಸಿ ಜನರ ಮನದಲ್ಲಿ ಬಿತ್ತಿದ ಶ್ರೇಯಸ್ಸು ವಿಶ್ವಕಲ್ಯಾಣ ಮಿಷನ್ನದು. ಇನ್ನೂ ವ್ಯಾಪಕವಾಗಿ ಈ ಧರ್ಮ ಪೀಠವು ವಿವಿಧ ಭಾಷೆಗಳಲ್ಲೂ ಪ್ರಕಟಿಸಿ, ಪ್ರಚಾರ ಮಾಡುವ ಅಭಿಲಾಷೆ ಹೊಂದಿದೆ.

ಇಂದು ನೀವುಗಳೆಲ್ಲ ಅತ್ಯಂತ ಜವಾಬ್ದಾರಿಯಿಂದ ಕಾರ್ಯೋನ್ಮುಖರಾಗಬೇಕು.

1. ಮೊಟ್ಟಮೊದಲು ಅಭಿಮಾನ ತಳೆದು ಎಂತಹ ಉತ್ತಮ ಪರಂಪರೆಯ ಅನುಯಾಯಿಗಳು ನಾವು ಎಂದು ಇದನ್ನು ನಿಷ್ಠೆಯಿಂದ ಅಧ್ಯಯನ ಮಾಡಿರಿ. ಅಭಿಮಾನ ಬಹಳ ಮುಖ್ಯ. ಒಂದು ದೀಪ ಉರಿಯ ಬೇಕಾದರೆ ಗಾಳಿಬೇಕು. ದುರಭಿಮಾನದ ಬಿರುಗಾಳಿ ಬೀಸಿದರೂ ಧರ್ಮದ ದೀಪ ಆರಿಹೋಗುವುದು ; ನಿರಭಿಮಾನದ ನಿರ್ವಾತವಿದ್ದರೂ ಧರ್ಮದ ದೀಪ ಆರಿಹೋಗುವುದು. ಸ್ವಾಭಿಮಾನದ ಸುಳಿಗಾಳಿ ಇದ್ದರೆ ಮಾತ್ರ ಅದು ಬದುಕುವುದು.
2. ಇಂತಹ ಧರ್ಮ-ಸಾಹಿತ್ಯವನ್ನು ತನು-ಮನ-ಧನ ಸಮರ್ಪಿಸಿ ಪ್ರಚಾರ ಮಾಡಿರಿ. ಕುಳಿತಲ್ಲಿ-ನಿಂತಲ್ಲಿ ಕಾಡು ಹರಟೆ ಬೇಡ, ನೀವು ತಿಳಿದುಕೊಂಡ ವಿಚಾರಗಳನ್ನೂ ವಚನಗಳನ್ನೂ ಇನ್ನಿತರರಿಗೂ ಹೇಳಿರಿ. ಆದಿ ಶರಣರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ರಕ್ಷಿಸಿ, ಉಳಿಸಿಕೊಟ್ಟು ಹೋದ ವಚನ ಸಾಹಿತ್ಯವನ್ನು ನೀವೆಲ್ಲರೂ ನಿಮ್ಮ ನಿಮ್ಮ ಶಕ್ತ್ಯಾನುಸಾರ ಪ್ರಚಾರ ಮಾಡಿರಿ.
3. ಗುರು ಬಸವಣ್ಣನವರು ಈ ಧರ್ಮವನ್ನು ಸ್ಥಾಪಿಸಿದ ಉದ್ದೇಶ ಧರ್ಮ ವಂಚಿತರಾದ ಜನರಿಗೆ ದೇವರು, ಧರ್ಮ, ಸಂಸ್ಕಾರ, ಪೂಜಾವಕಾಶ ಸಿಗಬೇಕೆಂದು. ಪುನಃ ನೀವು, ಹೊಸದಾಗಿ ಆಧ್ಯಾತ್ಮಿಕ ತೃಷೆಯಿಂದ ಬರುವವರನ್ನು ಕರೆದುಕೊಳ್ಳದೆ ಸಂಕುಚಿತವಾದಿಗಳಾಗಬೇಡಿ. ಬರುವವರನ್ನು ಸ್ವಾಗತಿಸಿ, ಬಂದವರನ್ನು ಸಮಾನಭಾವದಿಂದ ಆದರಿಸಿ, ಎಲ್ಲರನ್ನೂ ಧರ್ಮವಂತರನ್ನಾಗಿ ಮಾಡುವ ಕಳಕಳಿ ಇರಲಿ, ನಾವು ಒಂದು ಹಣ್ಣನ್ನು ನಿಮಗೆ ಪ್ರಸಾದವಾಗಿ ಕೊಟ್ಟಾಗ, ಹೇಗೆ ಸುತ್ತಲಿದ್ದವರಿಗೆ ಇಷ್ಟಿಷ್ಟು ಪ್ರಸಾದ ಎಂದು ಕೊಟ್ಟು ತಿನ್ನುವಿರೋ, ಹಾಗೆ 'ಬಸವ ಪ್ರಸಾದ'ವಾಗಿ ಬಂದಿರುವ ಈ ಧರ್ಮವನ್ನೂ ಇನ್ನಿತರರೊಡನೆ ಹಂಚಿ ತಿನ್ನಿ.

4. ಇಂದು ಬಸವ ತತ್ತ್ವವು ಜಗತ್ತಿಗೇ ಬೇಕಾಗಿದೆ. ಸಮತಾವಾದಿ ಸಿದ್ಧಾಂತವನ್ನು ಮಾರ್ಕ್ಸ್‌ವಾದ ಬೋಧೆ ಮಾಡಿದರೂ ಅದು ನಾಸ್ತಿಕವಾದ ಅಥವಾ ಭೌತಿಕವಾದದ (Materialism) ತಳಹದಿಯ ಮೇಲೆ ಇರುವ ಕಾರಣ ದಮನೀಯ ಸೋಲನ್ನು ಕಂಡಿತು, ಕಮ್ಯುನಿಸಮ್ ನೆಲ ಕಚ್ಚಿತು. ಆದರೆ ಧರ್ಮ-ದೇವರ ನಂಬಿಕೆಯ ಮೇಲೆ ನಿಂತಿರುವ ಬಸವಾಯಿಸಮ್‌ಗೆ ಸುಂದರ ಭವಿಷ್ಯವಿದೆ. ಪಾರ್ಥೇನಿಯಮ್ ಬೆಳೆಯಲು ಯಾವ ಪರಿಶ್ರಮವೂ ಬೇಕಾಗಿಲ್ಲ. ತೆಂಗಿನ ಗಿಡ, ಮಾವಿನ ಗಿಡ ಬೆಳೆಸಬೇಕಾದರೆ ಪರಿಶ್ರಮ ಪಡಬೇಕು. ಸದಾಚಾರ-ಸುವಿಚಾರ ಸಂಪನ್ನವಾದ ಬಸವ ಧರ್ಮವನ್ನು ಬೆಳಸಬೇಕಾದರೆ ನಿಮ್ಮ ಪರಿಶ್ರಮ ಆಗತ್ಯ.
5. ಒಂದು ನಂದಿಗೆ ಅಥವಾ ಧೇನುವಿಗೆ 4 ಕಾಲುಗಳು, ನಾಲ್ಕು ಪಾದಗಳ ಮೇಲೆ ಅದು ನಿಲ್ಲುತ್ತದೆ, ನಡೆಯುತ್ತದೆ, ಓಡುತ್ತದೆ. ಹಾಗೆಯೇ ಧರ್ಮ ವೃಷಭನಿಗೆ ನಾಲ್ಕು ಕಾಲುಗಳು, 1. ಶ್ರದ್ಧೆ; 2. ನಿಷ್ಠೆ, 3. ದಾಸೋಹ, 4. ತ್ಯಾಗ. ಒಂದು ಕಾಲುಹೋದಾಗ ಅದು ಓಡಲಾರದು, ಕುಂಟುತ್ತ ನಡೆಯುವುದು. ಎರಡು ಹೋದರೆ ಯಾವ ಚಟುವಟಿಕೆಯೂ ಇರದು. ದೇವರಲ್ಲಿ ಶ್ರದ್ಧೆ, ಧರ್ಮಾಚರಣೆಯಲ್ಲಿ ನಿಷ್ಠೆ, ಮಾನವೀಯತೆ-ಕರ್ತವ್ಯ ಪ್ರಜ್ಞೆಯಿಂದ ದಾಸೋಹ, ಧರ್ಮದ ಉಳಿವು, ಬೆಳವಿಗಾಗಿ ತ್ಯಾಗ. ಈ ಸೂತ್ರಗಳನ್ನು ಅರಗಿಸಿಕೊಳ್ಳಿರಿ. ಮಠಾಧಿಕಾರಿಗಳು, ಧರ್ಮಗುರುಗಳೇ ಧರ್ಮವನ್ನು ಉಳಿಸಬೇಕು ಪ್ರಚಾರ ಮಾಡಬೇಕು ಎಂಬ ಭ್ರಾಂತಿ ಬಿಡಿ. ಧರ್ಮ ಬೇಕಾಗಿರುವುದು ನಿಮಗೆ, ಎಲ್ಲರಿಗೆ ಅಂದಾಗ ಎಲ್ಲರೂ ಅದಕ್ಕಾಗಿ ಶ್ರಮಿಸಿರಿ.

ಒಬ್ಬ ವೈದ್ಯನು ಬಹಳ ಉತ್ತಮ ಗುಣ ಉಳ್ಳವನೂ, ರೋಗಿಗಳನ್ನು ಆದರಿಸಿ ಚಿಕಿತ್ಸೆ ಮಾಡುವವನೂ ಇರುವನು ಎಂದುಕೊಳ್ಳಿ. ಅವನ ಬಳಿ ಇರುವ ಔಷಧಿ ಚೆನ್ನಾಗಿಲ್ಲ. ಇನ್ನೊಬ್ಬ ವೈದ್ಯನ ಬಳಿ ಉತ್ತಮ ಔಷಧಿ ಇದೆ. ಆದರೆ ಅವನಿಗೆ ಚಿಕಿತ್ಸೆಯ ಕಲೆ ಇಲ್ಲ. ಮತ್ತೊಬ್ಬ ವೈದ್ಯನ ಬಳಿ ಔಷದಿಯೂ ಚೆನ್ನಾಗಿದೆ; ಅವನಿಗೆ ಚಿಕಿತ್ಸೆಯ ಕಲೆಯೂ ಇದೆ. ರೋಗಿಯ ಮೇಲೆ ಆದರವೂ ಇದೆ. ಅಂಥ ವೈದ್ಯನಂತೆ ವಿಶ್ವಗುರು ಬಸವಣ್ಣನವರು.

ಶ್ರೀ ಗಾಂಧೀಜಿಯವರಿಗೆ ಹಿಂದೂ ಸಮಾಜದ ರೋಗಿಯಲ್ಲಿರುವ ಅಸ್ಪೃಶ್ಯತೆ ಬಗ್ಗೆ ಕಳಕಳಿಯಿತ್ತು; ಅದನ್ನು ನಿವಾರಿಸುವ ಧ್ಯೇಯವಿತ್ತು, ಹಿಂದೂ ಸಮಾಜದ ಬಗ್ಗೆ ಆದರವೂ ಇತ್ತು. ಆದರೆ ಅವರ ಬಳಿ ಲಭ್ಯವಿದ್ದ ಔಷಧಿ–ವರ್ಣಾಶ್ರಮ ಸಮಾಜ ವ್ಯವಸ್ಥೆಯಲ್ಲಿನ ನಂಬಿಕೆ. ಹೀಗಾಗಿ ಅವರು ಪೂರ್ಣವಾಗಿ ಯಶಸ್ವಿಯಾಗಲಿಲ್ಲ.

Digitalized by e-Sahithya Documentation Forum
Sponsored by Sarayu Foundation Trust

ಶ್ರೀ ಡಾ॥ ಅಂಬೇಡ್ಕರರ ವಿಚಾರಧಾರೆ ಸತ್ಯದ ಪ್ರತಿರೂಪವಾಗಿತ್ತು. ಜಾತಿ ಪದ್ಧತಿಯನ್ನು ವೃತ್ತಿ ವಿಭಜನೆ ಎಂದು ಗಾಂಧೀಜಿ ಅಂದುದನ್ನು ಪ್ರತಿಭಟಿಸಿ, ಇಲ್ಲ ಅದು ವೃತ್ತಿಗಾರರ ವಿಭಜನೆ ಎಂದು ಸತ್ಯವನ್ನೇ ನುಡಿದರು. ಆದರೆ ಅವರಿಗೆ ಹಿಂದು ಸಮಾಜದ ರೋಗಿಯ ಬಗ್ಗೆ ತೀವ್ರ ಜಿಗುಪ್ಸೆ ಇತ್ತು. ರೋಗ ನಿವಾರಣೆಯ ಚಿಕಿತ್ಸೆಯ ಕಲೆ ಇರಲಿಲ್ಲ. ಬಸವಣ್ಣನವರದು ಹಾಗಲ್ಲ. ಮೂಗಿಗೆ ನೆಗಡಿ ಬಂದಾಗ ಮೂಗನ್ನೇ ಕತ್ತರಿಸಬಾರದು. ನೆಗಡಿ ವಾಸಿ ಮಾಡಬೇಕು ಎಂಬುದು ಇವರ ಸಿದ್ಧಾಂತ. ಓಡುವ ಕುದರೆ ಮುಗ್ಗರಿಸಿದರೆ ಆದರ ಕಾಲನ್ನು ಕಡಿಯಬಾರದು, ಅದು ಚೇತರಿಸಿ ಕೊಂಡು ಓಡಲು ಅವಕಾಶ ಮಾಡಿಕೊಡಬೇಕು ಎಂಬುದು ಇವರ ಚಿಂತನಧಾರೆ. ಹಿಂದೂ ಸಮಾಜದ ಕುದುರೆ ಮುಗ್ಗರಿಸಿತ್ತು ನಿಜ; ಅದನ್ನು ತೊರೆಯದೆ ಒಳಗೇ ಇದ್ದು ಕೊಂಡು ಅದರ ಲೋಪದೋಷಗಳ ನಿವಾರಣೆಗೆ ಯತ್ನಿಸಿದರು. ಇಂದು ಅದನ್ನು ಅರ್ಥಮಾಡಿಕೊಳ್ಳದಿರುವ ಕೆಲವು ಮತಾಂಧರು ಮುಂದಾದರೂ ಅರ್ಥ ಮಾಡಿಕೊಂಡೇ ತೀರುವರು. ಈ ಅರ್ಥಮಾಡಿಸುವ ನಿಷ್ಠಾವಂತ ಪ್ರಯತ್ನವನ್ನು ನಾವಿಂದು ಮಾಡ ಬೇಕಾಗಿದೆ.

ಬಸವ ಧರ್ಮವು ಅತ್ಯಂತ ಪ್ರಗತಿಪರವಾದ ಧರ್ಮ. ಇದು ಕೇವಲ ಯಾಂತ್ರಿಕ ಶುಷ್ಕಾಚರಣೆ (Rituals) ಗೆ ಮಹತ್ವಕೊಡದೆ ಆಂತರಿಕ ಪ್ರಗತಿ, ವಿಕಾಸದತ್ತ ಗಮನಕೊಟ್ಟ ಅಧ್ಯಾತ್ಮವಾದ (Spiritualism) ವನ್ನು ಬೋಧಿಸುತ್ತದೆ. ಇದು ತಾನು ಪ್ರತಿಪಾದಿಸುವ ಮೌಲ್ಯಗಳಿಂದಾಗಿ ವಿಶ್ವಧರ್ಮ.

1. ಅಲ್ಲಿ ಇಲ್ಲಿ ಎಲ್ಲ ಕಡೆ, ಆಗ-ಈಗ ಎಲ್ಲ ಕಾಲದಲ್ಲಿ, ಅವರು ಇವರು ಎಲ್ಲರೂ ಒಪ್ಪುವ ನಿತ್ಯವಾದ ಸತ್ಯವಾದ ತತ್ತ್ವಗಳನ್ನು ಬೋಧೆ ಮಾಡುವ ಕಾರಣ ಇದು ವಿಶ್ವಧರ್ಮ. ಕೇವಲ ತಾತ್ಕಾಲಿಕವಾದ ಸತ್ಯವನ್ನು ಮೌಲ್ಯಗಳನ್ನು ಬೋಧಿ ಸದೆ ಎಲ್ಲ ಕಾಲಕ್ಕೂ ಅನ್ವಯವಾಗುವ ತ್ರಿಕಾಲಿಕ, ಸಾರ್ವಕಾಲಿಕ ಸತ್ಯವನ್ನು ಬೋಧಿಸುವ ಕಾರಣ ಇದು ವಿಶ್ವಧರ್ಮ.
2. ಎಲ್ಲರಿಗೂ ಧರ್ಮಸಂಸ್ಕಾರವನ್ನು ಕೊಡುವ, ಎಲ್ಲರನ್ನೂ ಉದ್ಧರಿಸುವ ಕಳಕಳಿ ಯುಳ್ಳ ಕಾರಣ ಇದು ವಿಶ್ವಧರ್ಮ.
3. ವಿಶ್ವದಾಕಾರದಲ್ಲಿ ಸೃಷ್ಟಿಕರ್ತನನ್ನು ಪೂಜಿಸಿ, ಮಾನವರೆಲ್ಲರನ್ನೂ ದೇವನ ಮಕ್ಕಳೆಂದು ಭಾವಿಸಿ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಕಾರಣ ಇದು ವಿಶ್ವಧರ್ಮ. ವ್ಯಕ್ತಿ ಕಲ್ಯಾಣ, ಸಮಾಜ ಕಲ್ಯಾಣ, ರಾಷ್ಟ್ರಕಲ್ಯಾಣ, ವಿಶ್ವ ಕಲ್ಯಾಣವನ್ನು ಇದು ಬೋಧಿಸುತ್ತದೆ.
4. ವಿಶ್ವಕುಟುಂಬತ್ವವನ್ನು ಬೋಧಿಸುವ ಕಾರಣ ಇದು ವಿಶ್ವಧರ್ಮ. ಹೆತ್ತ ತಾಯಿತಂದೆಯರನ್ನು ಗೌರವಿಸಿ, ಸಹೋದರ-ಸಹೋದರಿಯರನ್ನೆಲ್ಲ ಆದರಿಸುವವ ಗೃಹಕುಟುಂಬಿ, ರಾಷ್ಟ್ರವನ್ನೇ ತಾಯಿಯೆಂದು ಗೌರವಿಸಿ, ಇದರ ಎಲ್ಲ ಪ್ರಜೆಗಳನ್ನೂ ಸಮವಾಗಿ ಕಾಣುವವ ರಾಷ್ಟ್ರಕುಟುಂಬಿ, ದೇವರನ್ನೇ ತಂದೆ ಎಂದು ಭಾವಿಸಿ,

ಎಲ್ಲ ಮಾನವರನ್ನು ಸಹೋದರ ಭಾವನೆಯಿಂದ ಕಾಣುವವನೇ ವಿಶ್ವಕುಟುಂಬಿ, ಇದೇ ಶರಣನ ಲಕ್ಷಣ.

ಬಸವ ಧರ್ಮದ ಮಹಾಜಗದ್ಗುರು ಪೀಠದ ಆರೋಹಣ ಮಾಡಿ, ನಾವು ಕೊಟ್ಟಿರುವ ಸಂದೇಶ, ಪೂಜ್ಯ ಮಾತಾಜಿಯವರು ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದ ಧ್ಯೇಯೋದ್ದೇಶ. ಈ ಧರ್ಮಪೀಠದ ನೀಲನಕ್ಷೆ (Blue print) ಯಂತೆ ಎಂದು ಭಾವಿಸಬೇಕು. ಮುಂದಿನವರು ಇದೇ ನೀಲನಕ್ಷೆ ಹಿಡಿದೇ ಕಾರ್ಯ ಮಾಡಬೇಕು.

ಬಸವ ಧರ್ಮ ಪೀಠದ ಸ್ಥಾಪನೆ ನಮಗೆ ಅತೀವ ಸಂತೋಷ ತಂದಿದೆ. ಕಾರಣ ಅಧಿಕಾರ ಹೊಂದುವ ಅವಕಾಶ ಸಿಕ್ಕಿತೆಂದು ಅಲ್ಲ : ಪೂಜ್ಯ ಗುರು ಬಸವಣ್ಣನವರ ಸಂಕಲ್ಪವನ್ನು ಈಡೇರಿಸುವ ಒಂದು ಸದವಕಾಶ ದೊರೆಯಿತು ಎಂದು. ಸಕಲ ಜೀವಾ ವಳಿಗೆ ಲೇಸನ್ನು ಬಯಸುವುದೇ ಬಸವ ಧರ್ಮದ ಗುರಿಯಾದ ಕಾರಣ, ಈ ಧರ್ಮ ಪೀಠವು ಮಾನವ ಕುಲದ ಹಿತವನ್ನು ಬಯಸಲಿ, ಲಿಂಗವಂತ ಸಮಾಜವನ್ನು ಸೂಕ್ತ ವಾಗಿ ಮುನ್ನಡೆಸುವಂತಾಗಲೀ, ನಮ್ಮ ಮುಂದಿನವರೂ ಬಸವ ತತ್ತ್ವದ ಪಥದಲ್ಲಿ ಪ್ರಾಮಾಣಿಕವಾಗಿ ನಡೆದು ನಾವು ಇಟ್ಟಿರುವ ಕನಸನ್ನು ನನಸು ಮಾಡಲಿ ಎಂಬ ಹಾರೈ ಕೆಯೊಡನೆ ನಮ್ಮ ಆಶೀರ್ವಚನವನ್ನು ಪೂರ್ಣಗೊಳಿಸುವೆವು. ★

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಸಾಮಾನ್ಯವಾಗಿ ಆಜೀವ ಸದಸ್ಯರು–ಚಂದಾದಾರರು ಆಗುವರೆಂಬ ಭರವಸೆ ಮೇಲೆ 1001 ರೂ ಮೇಲೆ ದೇಣಿಗೆ ಕೊಟ್ಟವರಿಗೆ ಗೌರವ ಪ್ರತಿ ಕಲ್ಯಾಣ ಕಿರಣ ನಾವು ಕಳಿಸುತ್ತೇವೆ. ಆಗ ಇವರು ಮೊದಲೇ ಒಮ್ಮೆ ದೇಣಿಗೆ ಕೊಟ್ಟವರಾಗಿದ್ದರೆ, ಎರಡು ಪ್ರತಿ ಬರುವ ಸಂಭವ ಇರುವುದು.

ಮತ್ತು ಪ್ರವಚನ ಕಾಲದಲ್ಲಿ ಆಜೀವ ಸದಸ್ಯರೂ ಆಗಿರುವ ಸಾಧ್ಯತೆ ಇರುವುದು. ವಿಪರೀತ ಬೆಳೆದಿರುವ ಸಂಖ್ಯೆಯಲ್ಲಿ ಈಗ ಹುಡುಕುವುದು ಕಷ್ಟದ ಕೆಲಸ. ಆದರಿಂದ ಎರಡು–ಮೂರು ಬರುತ್ತಿದ್ದರೆ ತಡಮಾಡದೆ. ಪತ್ರ ಬರೆದು ನಿಮ್ಮ ಕ್ರಮ ಸಂಖ್ಯೆ ತಿಳಿಸಿ, ಒಂದೇ ಪ್ರತಿ ಕಳಿಸುವಂತೆ ಇನ್ನುಳಿದಿದ್ದನ್ನು ಕಳಿಸದಂತೆ ಸೂಚನೆ ನೀಡಿರಿ.

ಸೋದರಿ ಕಸ್ತೂರಿ, ಕಲ್ಯಾಣ ಕಿರಣ ಕಾರ್ಯಾಲಯ,
ಬಸವ ಗಂಗೋತ್ರಿ, ಕುಂಬಳಗೋಡು–560074. ಬೆಂಗಳೂರು
ಗ್ರಾಮಾಂತರ ಜಿಲ್ಲೆ- ಇಲ್ಲಿಗೆ ಪತ್ರ ಬರೆಯಿರಿ.

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.

Digitalized by e-Sahithya Documentation Forum
Sponsored by Sarayu Foundation Trust

ಅಕ್ಟೋಬರ್ ತಿಂಗಳಿನಿಂದ ಈವರೆಗೆ ವಿವಿಧ ಯೋಜನೆಗಳಿಗೆ ಧನ ಸಹಾಯ ಮಾಡಿದ ದಾಸೋಹಿಗಳು

(ಸೆಪ್ಟಂಬರ್ ಸಂಚಿಕೆಯಿಂದ ಮುಂದುವರಿದುದು)

ಬಸವ ಧರ್ಮಪೀಠ ಕಟ್ಟಡ ನಿಧಿಗೆ,

ಶರಣರುಗಳಾದ :

1.	ಲಕ್ಷ್ಮಿ ಮತ್ತು ಜೆ. ರಾಜು, ಸಕಲಟ್ಟಿ, ತಮಿಳುನಾಡು. (ಪ್ರಭುದೇವ ಅನುಭವ ಮಂಟಪಕ್ಕೆ)	ಒಂದು ಲಕ್ಷ
2.	ಚಂದ್ರಶೇಖರಪ್ಪ ವೀರಪ್ಪ ಕರವೀರಶೆಟ್ಟರು, ಹುಬ್ಬಳ್ಳಿ (ಒಂದು ಕೋಣೆಗೆ)	40,000-00
3.	ಗಿರಿಜಮ್ಮ ಮತ್ತು ಸುಬ್ಬಣ್ಣ ಮೈಸೂರು, ಧಾರವಾಡ (ಒಂದು ಕೋಣೆಗೆ)	40,000-00
4.	ಗಂಗಮ್ಮನವರು ತಂದೆ ಉಳುವೆಪ್ಪ ಯಲಿವಾಳ. ಹಿರೇಹೊನ್ನೀಹಳ್ಳಿ, ಕಲಘಟಗಿ ತಾಲ್ಲೋಕು (ಒಂದು ಕೋಣೆಗೆ)	40,000-00
5.	ಕೆ. ಆರ್. ಸೋಮಶೇಖರ್, ಬೆಂಗಳೂರು (ಒಂದು ಕೋಣೆಗೆ)	40,000-00
6.	ಶಾರದಾಂಬಾ ಮತ್ತು ಎಂ.ಟಿ. ವಿಶ್ವಮೂರ್ತಿ, ಬೆಂಗಳೂರು	20,000-00
7.	ಬಸವ ಸಮಿತಿ, ಹುಡಗಿ, ಜಿಲ್ಲ-ಬೀದರ	20,000-00
8.	ಪಾರ್ವತಮ್ಮ ಮಲ್ಲಿಕಾರ್ಜುನಪ್ಪ, ಮೈಸೂರು	20,000-00
9.	ಪಂಚಲಿಂಗಪ್ಪ ಯಕಲಾಸಪುರ, ಹುಬ್ಬಳ್ಳಿ	11111-00

5000 ರೂಗಳನ್ನು ಕಟ್ಟಡ ನಿಧಿಗೆ ಸಲ್ಲಿಸಿದವರು

ಶರಣರುಗಳಾದ :

1. ಡಾ॥ ವಿ. ಲಕ್ಷ್ಮೀದೇವಿ, ಬೆಂಗಳೂರು.
2. ಭಾರತಿ ಕೆಂಪಯ್ಯ, ಬೆಂಗಳೂರು.
3. ಲೀಲಾವತಿ ಹೆಚ್. ಎಂ. ಶಿವರುದ್ರೇಗೌಡರು, ಬೆಂಗಳೂರು.
4. ಜಿ. ವಿ. ಪ್ರಸಾದರಾವ್, ಜಾಲಹಳ್ಳಿ ಕ್ಯಾಂಪ್.
5. ಎಸ್. ಷಡಕ್ಷರಿ, ಬೆಂಗಳೂರು.
6. ಬಿ. ಶಿವಶಂಕರನ್, ಕೊಯಮತ್ತೂರು.
7. ರೇವತಿ ಮತ್ತು ಷಣ್ಮುಗಮ್, ಕೊಯಮತ್ತೂರು.

8.	ಎ. ಆಯ್. ಎಂ. ಎಸ್,	ಹುಬ್ಬಳ್ಳಿ.	
9.	ಬಸವಣ್ಣೆಪ್ಪ ವೀರಭದ್ರಪ್ಪ ಸಂಬರಗಿ, ಹುಬ್ಬಳ್ಳಿ.		
10.	ಚಂದ್ರಶೇಖರಗೌಡರು ಮರಿಗೌಡರು ಪಾಟೀಲ, ಹುಬ್ಬಳ್ಳಿ.		
11.	ವೀರಭದ್ರಪ್ಪ ವಿರೂಪಾಕ್ಷಪ್ಪ ಚಿಂದಿ, ಹುಬ್ಬಳ್ಳಿ.		
12.	ಶಾ ಥಾಮಜಿ. ಜಾಧವಜಿ ಛಡ್ಡಾ, ಹುಬ್ಬಳ್ಳಿ.		
13.	ಮಲ್ಲಿಕಾರ್ಜುನಪ್ಪ, ಚಳ್ಳಕೆರೆ		2000-00
14.	ಎಸ್. ಎಸ್. ಕುರವತ್ತಿ, ಹುಬ್ಬಳ್ಳಿ		2001-00
15.	ಎಸ್. ಬಿ. ಹಿರೇಮಠ, ಹುಬ್ಬಳ್ಳಿ		2000-00
16.	ಶಂಕರ್ ಭರವಶಾಜಿ ಕಲಾಲ, ಹುಬ್ಬಳ್ಳಿ		2001.00
17.	ರಾವ್ ಮತ್ತು ಕಂ, ಹುಬ್ಬಳ್ಳಿ		1500-00
18.	ರಾವ್ಸ್ ಸಿರಾಮಿಕ್ಸ್, ಹುಬ್ಬಳ್ಳಿ		1500-00
19.	ವಿರುಪಣ್ಣ ತಂದೆ ಭೀಮಣ್ಣ, ಹೆಗ್ಗಡದಿನ್ನಿ		1001-00
20.	ಎಸ್. ಎಸ್. ಕವಿಶೆಟ್ಟಿ, ಹುಬ್ಬಳ್ಳಿ		500-00
21.	ಆರ್. ಎನ್. ಸ್ಯಾನಿಟರಿ,	ಹುಬ್ಬಳ್ಳಿ	500-00
22.	ಡಾ॥ ಎಂ. ಎಂ. ಜೋಶಿ,	"	500-00
23.	ಬಸವರಾಜು ಈರಪ್ಪ ದವಾಖಾನೆ,	"	501-00
24.	ಬಸವಣ್ಣೆಪ್ಪ ಅಡಿವೆಪ್ಪ ಸಕ್ಕರಿ,	"	501-00
25.	ಅಮೃತಗೌಡ ಫಕೀರ್‌ಗೌಡ ಪಾಟೀಲ,	"	501-00
26.	ಚನ್ನಯ್ಯ ಬಸಯ್ಯ ಘಂಟಿ,	"	501-00
27.	ಶಂಭು ಕೋತಂಬರಿ,	"	501-00
28.	ರಾಜಶೇಖರ ಸಿದ್ಧಪ್ಪ ನಂದಿ.	"	501-00
29.	ಡಾ॥ ಶಂಭುಲಿಂಗಪ್ಪ ಪರ್ವತಪ್ಪ ಬಣಗಾರ,	ಹುಬ್ಬಳ್ಳಿ	501-00
30.	ಸಿ. ಜಿ. ಮತ್ತೀಕೊಪ್ಪ,	"	501-00
31.	ಗುರುಬಾಯಿ ಶಿವನಗೌಡ ಬಿರಾದಾರ ಪಾಟೀಲ,	"	501-00
32.	ಶಿವಪ್ಪನವರು ಬಸಪ್ಪ ಕಡೇಮನಿ,	"	501-00
33.	ಬಸಪ್ಪ ನಿಂಗಪ್ಪ ಹುಡೇದ,	"	501-00
34.	ನಾಗಪ್ಪ ಮಲ್ಲಪ್ಪ ಹಕ್ಕಳೇರಿ.	"	501-00
35.	ಮಹಾಲಿಂಗಪ್ಪ ಚನ್ನಪ್ಪ ಕುದರಿ	"	501-00
36.	ಎಂ. ಎಫ್. ಮುಲ್ಕಿಗೌಡರ,	"	501-00
37.	ಜಯಶ್ರೀ ಶಿವಪುರ, ಹೊಂಬರಡಿ	"	1001.00
38.	ಡಾ॥ ನಿತೀನ ಚಂದ್ರು ಹತ್ತಿಕಾಳ, ಧಾರವಾಡ		

Digitalized by e-Sahithya Documentation Forum
Sponsored by Sarayu Foundation Trust

ದಾಸೋಹ ನಿಧಿಗೆ 1111 ರೂ ಸಲ್ಲಿಸಿದವರು

ಕ್ರಮಸಂಖ್ಯೆ. ಹೆಸರು—ಊರು

ಶರಣರುಗಳಾದ :

863; ದಾಕ್ಷಾಯಣಮ್ಮ, ಶಿವಮೊಗ್ಗ.
864. ಶಿವಪುತ್ರಪ್ಪ ಬಸವಂತಪ್ಪ ನೇಗೂರು, ಧಾರವಾಡ.
865. ವಿಶಾಲಾಕ್ಷಮ್ಮ ವಿರೂಪಾಕ್ಷಪ್ಪ, ಚಿತ್ರದುರ್ಗ.
866. ಎಸ್. ಸಾಕಮ್ಮ ಗುರುಸಿದ್ಧಪ್ಪ, ಚಿತ್ರದುರ್ಗ.
867. ಶಾಂತವೀರಮ್ಮ ಸಾಹುಕಾರ ತಿಪ್ಪೇರುದ್ರಪ್ಪ, ಚಿತ್ರದುರ್ಗ.
868. ಸುಲೋಚನಮ್ಮ ಜಿ. ಬಿ. ಮಲ್ಲಯ್ಯನವರು, ಗುಯಿಲಾಳು.
869. ಬಸವಣ್ಣೆಪ್ಪ ಗುರಪ್ಪ ಪಾಟೀಲ, ಕೋನ ಮೇಲಕುಂದಾ
870. ಎಸ್. ಪಿ. ಗಂಗಾಧರಪ್ಪ, ತಿಪಟೂರು.
871. ಮಲ್ಲಿಕಾರ್ಜುನ ಪಾಟೀಲ, ಬೀದರ.
872. ರತ್ನಾಬಾಯಿ ಮಲಕಾಜಪ್ಪ ಆಲಕಟ್ಟಿ, ನಾರಾಯಣಪುರ
873. ಬಸವಂತಪ್ಪ ಶಿವಕುಮಾರ್ ಕಪ್ಪೀಕೆರೆ, ಉದಗೀರ
874. ಚಂದ್ರಮ್ಮ ಶ್ರೀಕಂಠಯ್ಯ, ಬೆಂಗಳೂರು
875. ನೀಲಮ್ಮ ಸಂಗಪ್ಪ ತಗಾರೆ, ಬೀದರ
876. ಸುಶೀಲಾಬಾಯಿ ಭೀಮಾಶಂಕರ್ ನಿಂಬೆಣ್ಣೆ, ಬೀದರ
877. ಗಿರಿಜಮ್ಮ ಮತ್ತು ಎಂ. ತಿಪ್ಪೇಸ್ವಾಮಿ, ಜಾಜೂರು
878. ಜಯಮ್ಮ ಎಂ. ಎಸ್. ರುದ್ರಪ್ಪ, ಮೈಸೂರು
879. ಫಕೀರವ್ವ ಅಂಗಡಿ, ಭದ್ರಾಪುರ
880. ಗುಪ್ತ ಕಾಣಿಕೆ, ಮೈಸೂರು
881. ಅಪ್ಪಣ್ಣ ಶಿವಪ್ಪ ಐಹೊಳಿ, ಮುಳವಾಡ
882. ಬಸವರಾಜ ಮಾ ಪಾಟೀಲ, ಅಲ್ಲೂರ
883. ಬಸಪ್ಪ ಬೆಳ್ಳಿಕೆರೆ ಮನ್ನಳ್ಳಿ, ಬೀದರ
884. ದಾಕ್ಷಾಯಿಣಿ ಚನ್ನವೀರಯ್ಯ ಹಿರೇಮಠ, ಬೆಂಗಳೂರು
885. ಆಂಧ್ರ ಪ್ರದೇಶದ ರಂಗಾರೆಡ್ಡಿ ಜಿಲ್ಲೆಯ ತಾಂಡೂರಿನಿಂದ ಒಂದು ಡಿ.ಡಿ. ಶರಣ ಮೇಳದ ಸಮಯದಲ್ಲಿ ಬಂದಿತ್ತು. ಆದರೆ ಅದರ ಜೊತೆ ಪತ್ರ ವಿಳಾಸ ಏನೂ ಇರಲಿಲ್ಲ. ಆ ದಾನಿಗಳು ಪತ್ರ ಬರೆದು ತಿಳಿಸಬೇಕು.
886. ಬಸಪ್ಪ ಹನುಮಂತಪ್ಪ ಬಸವನಗೌಡರ, ರಾಣೆಬೆನ್ನೂರು
887. ಗಂಗಮ್ಮ ಮತ್ತು ಸಿದ್ಧರಾಮಪ್ಪ ಬುಳ್ಳಾ, ಬಾಗಲಕೋಟೆ
888. ವೀರಣ್ಣ ಕೆ. ದಾಟನಾಳ, ಹುಬ್ಬಳ್ಳಿ

889. ಶಿವಲಿಂಗಪ್ಪ ಚನ್ನಬಸಪ್ಪ ಯಕಲಾಸಪುರ, ಹುಬ್ಬಳ್ಳಿ

(ಅನೇಕರು ದಾಸೋಹದ ದಿನಾಂಕವನ್ನೇ ಕೊಟ್ಟಿರುವುದಿಲ್ಲ. ಆದ್ದರಿಂದ ಯಾವುದಾದರೂ ದಿನಾಂಕವನ್ನು ಸೂಚಿಸಬೇಕು. ಇಲ್ಲವೇ ನಮಗೆ ಅನುಕೂಲವಾದ ದಿನವನ್ನು ಆಯ್ಕೆ ಮಾಡಲು ತಿಳಿಸಬೇಕು.) [ಮುಂದುವರಿಯುವುದು]

ವಿ.ಸೂ. ಅನೇಕ ಶರಣರು ದಾಸೋಹಕ್ಕೆಂದು ಕಾಣಿಕೆ ಸಲ್ಲಿಸಿದ್ದಾರೆ. ಸ್ಥಳಾಭಾವದಿಂದ ಅವರುಗಳ ಹೆಸರನ್ನು ಪ್ರಕಟಿಸಿಲ್ಲ. ಮುಂದಿನ ಸಂಚಿಕೆಗೆ ಹಾಕುತ್ತೇವೆ.

ಧರ್ಮಗ್ರಂಥ ನಿಧಿಗೆ 1001 ರೂಪಾಯಿ ಸಲ್ಲಿಸಿದವರು

ಶರಣರುಗಳಾದ :

ಕ್ರ. ಸಂಖ್ಯೆ ಹೆಸರು-ಊರು

400 ಶಾರದಾ ಹಾವನೂರು, ರಾಣೇಬೆನ್ನೂರು
401 ಎಸ್. ಬಿ. ಹರಿಹರ ಮಾಸ್ತರು, ರಾಣೇಬೆನ್ನೂರು
402 ಬಿ. ಬಸವಣ್ಣ, ತಿಪಟೂರು.
403 ಗೊಗ್ಗಾ ಮಹಾದೇವಮ್ಮ. ಹೊಸಪೇಟೆ
404 ದೇವೀರಮ್ಮ ಚಂದ್ರಶೇಖರಪ್ಪ, ಬಿ. ಆರ್. ಪ್ರಾಜೆಕ್ಟ್
405 ಟಿ. ಎಂ. ಮಂಜುನಾಥ, ತಿಪಟೂರು.
406 ಹೆಚ್. ಎಸ್. ಚನ್ನಬಸವಣ್ಣ, ಬೆಂಗಳೂರು
407 ಪುಟ್ಟಹೊನ್ನಮ್ಮ ಬೆಂಗಳೂರು
408 ಮಲ್ಲಿನಾಥ ಮಾಳಜಿ, ಬೆಂಗಳೂರು
409 ಟಿ. ಸಿ. ಉಮೇಶಕುಮಾರ್, ತಿಪಟೂರು
410 ಸಿದ್ಧಗಂಗಮ್ಮ ಕೆ. ಎಂ, ಶಿವಸ್ವಾಮಿ, ತಿಪಟೂರು
411 ಟಿ. ರುದ್ರಪ್ಪ ಗೋವಿನಪುರ, ತಿಪಟೂರು
412 ಆರ್. ಬಿ. ಪಾಟೀಲ ಹತ್ತರಗಿ, ತಿಪಟೂರು
413 ಮೂರುಸಾವಿರಪ್ಪ ಸಿದ್ಧಲಿಂಗಪ್ಪ ಅಂಬಲಿ, ತಿಪಟೂರು
414 ಸೋಮಶೇಖರ ಸವಣೂರು, ತಿಪಟೂರು
415 ಶ್ಯಾಮಲಾ ಗಿಲಗಂಚಿ, ತಿಪಟೂರು
416 ಎಸ್. ಬಿ. ತಿರ್ಲಾಪುರ, ತಿಪಟೂರು
417 ಆರ್. ಪಿ. ಹೊಸಮನಿ, ತಿಪಟೂರು [ಮುಂದುವರಿಯುವುದು]

ವಸ್ತುಗಳ ರೂಪದಲ್ಲಿ ದೇಣಿಗೆ

ಶರಣರುಗಳಾದ :

1 ಬೆಳ್ಳಿಯ ತಗಡಿಗೆ ರುದ್ರಾಕ್ಷಿ ಸುತ್ತಿಸಿ, ಷಟ್ ಲಾಂಛನ ಸಹಿತವಾಗಿ ರುದ್ರಾಕ್ಷಿ ಮುಕುಟ ಮಾಡಿಸಿಕೊಟ್ಟ ದಾನಿಗಳು
ಶರಣೆ ಶಕುಂತಲಾ ಮತ್ತು ಶರಣ ಪುಟ್ಟಸಿದ್ಧಪ್ಪ, ಬೆಂಗಳೂರು

Digitalized by e-Sahithya Documentation Forum
Sponsored by Sarayu Foundation Trust

2 ಶ್ರೀಕಂಠಕುಮಾರ್, ಬೆಂಗಳೂರು 10500 ರೂ ಬೆಲೆ ಬಾಳುವ ಸಾರಿನ ಕೊಳಗ.
3 ರಾಷ್ಟ್ರೀಯ ಬಸವದಳ, ವಿಜಯಪುರ 5000 ರೂ ಬೆಲೆ ಬಾಳುವ ಸಾರಿನ ಕೊಳಗ.
4 ಪಾರ್ವತಮ್ಮ, ಕೊತ್ತೇಗಾಲ 2000 ರೂ ಬೆಲೆ ಬಾಳುವ ಸಾರಿನ ಕೊಳಗ.
5 ವೀರಣ್ಣ ಕೆ. ದಾಟನಾಳ ಹುಬ್ಬಳ್ಳಿ ಇವರು ಸುಮಾರು 3-4 ಸಾವಿರ ರೂಪಾಯಿ ಬೆಲೆ ಬಾಳುವ ಕಾಣಿಕೆ ಪೆಟ್ಟಿಗೆ ಕೊಟ್ಟಿದ್ದಾರೆ.
6 ಲಿಂಗರಾಜ ಶಿವಪ್ಪ ಇಂಗಳಳ್ಳಿ, ಹುಬ್ಬಳ್ಳಿ ಇವರು ಸಹ ಅದೇ ಗಾತ್ರದ ಕಾಣಿಕೆ ಪೆಟ್ಟಿಗೆ ಕೊಟ್ಟಿದ್ದಾರೆ.
7 ಚಂದ್ರಶೇಖರಪ್ಪ ವೀರಪ್ಪ ಕರವೀರಶೆಟ್ಟರು, ಹುಬ್ಬಳ್ಳಿ 50 ರೂಪಾಯಿ ಬೆಲೆಯ 21 ತಟ್ಟೆ

8	ಶಿವಪ್ಪ ಗುರುಸಿದ್ಧಪ್ಪ ಉಮದಿ, ಹುಬ್ಬಳ್ಳಿ	10 ತಟ್ಟೆ
9	ನಾಗಪ್ಪ ಎಸ್. ತೆಂಗಿನಕಾಯಿ, ಹುಬ್ಬಳ್ಳಿ	20 ತಟ್ಟೆ
10	ವೀರನಗೌಡ ಎಸ್. ಪಾಟೀಲ, ಉಣಕಲ್	10 ತಟ್ಟೆ
11	ಪಂಚಾಕ್ಷರಯ್ಯ ಮಹಾದೇವಯ್ಯ ಪಂಚಾಂಗಮಠ, ಹುಬ್ಬಳ್ಳಿ	25 ತಟ್ಟೆ
12	ಚನ್ನಪ್ಪ ಗುರುಸಿದ್ಧಪ್ಪ ಭೂಸನೂರು, ಹುಬ್ಬಳ್ಳಿ	20 ತಟ್ಟೆ
13	ನೀಲಮ್ಮ ಕಲ್ಲಿನಾಥ ಕೊಂಡಗುಳಿ, ನಾಗಶೆಟ್ಟಿಕೊಪ್ಪ	10 ತಟ್ಟೆ

ಶರಣ ಬಂಧುಗಳೇ,

ಶರಣ ಮೇಳದಲ್ಲಿ ಊಟಕ್ಕೆ ಕುರ್ಚಿ-ಟೇಬಲ್ ವ್ಯವಸ್ಥೆ ಮಾಡುವುದರಿಂದ, ತಟ್ಟೆಯ ವ್ಯವಸ್ಥೆಯನ್ನು ಮಾಡಿದರೆ ಪ್ರಸಾದ ವಿತರಣೆ ಬೇಗನೇ ಆಗುವುದು. ಎಂಬ ಸಲಹೆಯನ್ನು (ಅಕ್ಟೋಬರ್ 27 ರಂದು ಪೂಜ್ಯ ಅಪ್ಪಾಜಿಯವರ ಅಭಿನಂದನ ಸಮಾರಂಭಕ್ಕೆ ಮಾಡಿದ್ದು ಕಂಡು) ಭದ್ರಾವತಿಯ ಶರಣ ಹೆಚ್.ಎಸ್. ಬಸವರಾಜು ಮತ್ತು ಶರಣ ಡಿ. ಎಸ್. ವಿಜಯಕುಮಾರ್ ಸೂಚಿಸಿದರು. ದಾನಿಗಳಿಂದ ದೇಣಿಗೆಯಾಗಿ ಬಂದರೆ ಚೆನ್ನಾಗಿರುವುದು ಎಂದು ಹುಬ್ಬಳ್ಳಿಯಲ್ಲಿ ತಿಳಿಸಿದಾಗ ಮೇಲೆ ತಿಳಿಸಿದವರು ಮತ್ತು ಇನ್ನಿತರರು ತಟ್ಟೆಗಳನ್ನು ಕೊಟ್ಟರು. ಕೆಲವರು 2, 5 ಹೀಗೆಲ್ಲ ಕೊಟ್ಟಿದ್ದಾರೆ. ಶರಣ ಮೇಳಕ್ಕೆ 2000 ತಟ್ಟೆ ಬಾಡಿಗೆಗೆ ತಗೊಳ್ಳಲಾಗಿತ್ತು ಇದು ಯಶಸ್ವಿಯಾಯಿತು. ಎಲೆಯ ಖರೀದಿಗೆ ಖರ್ಚು ಮಾಡುವ ಸಾವಿರಾರು ರೂಪಾಯಿ ಮಿಕ್ಕಿತು. ಆದ್ದರಿಂದ ಒಂದು ಯೋಜನೆ ರೂಪಿಸಲಾಗಿದೆ. ಮುಂದಿನ ಶರಣ ಮೇಳದ ಒಳಗೆ ಕನಿಷ್ಠ 2000 ತಟ್ಟೆ ಸಂಗ್ರಹಿಸುವುದು.

1 ಸ್ಟೀಲ್ ತಟ್ಟೆಯೇ ಇರಬೇಕು.
2 ಕನಿಷ್ಠ 10, 12, ಇಂಚು ಇರಬೇಕು.

ಇದಕ್ಕಿಂತ ಸಣ್ಣ ಅಳತೆ ಬೇಡ. ತಮ್ಮ ತಮ್ಮ ಶಕ್ತ್ಯಾನುಸಾರ ದಾನಿಗಳು ತಟ್ಟೆಗಳನ್ನು ಕೊಡಿಸಬಹುದು. ಶಿಬಿರಕ್ಕೆ ಬರುವಾಗ ತಂದು ಸಲ್ಲಿಸಬಹುದು. ಶರಣ ಮೇಳಕ್ಕೆ ಶರಣ ಮೇಳಕ್ಕೆ ಬರುವಾಗ ತಂದ, ಅಲ್ಲೇ ಕೊಟ್ಟು ಹೋಗಬಹುದು. ತಟ್ಟೆಯ ಹಿಂದೆ "ಬಸವ ಧರ್ಮ ಪೀಠ, ಕೂಡಲ ಸಂಗಮ ದೇಣಿಗೆ ಕೊಟ್ಟವರು...." ಎಂದು ದಾನಿಗಳ ಹೆಸರು ಕೆತ್ತಿಸಬಹುದು.

ಹುಬ್ಬಳ್ಳಿಯಲ್ಲಿ ಕೊಟ್ಟ ತಟ್ಟೆಗಳು 12 ಇಂಚಿನ ಅತ್ಯುತ್ತಮ ದರ್ಜೆಯವು ಆಗಿದ್ದು, 50 ರೂ ಬೆಲೆ ಎಂದು ದಾನಿಗಳು ತಿಳಿಸಿದರು. ಇಲ್ಲವೇ ಒಂದು ತಟ್ಟೆಗೆ 50 ರೂ ದಂತೆ ಕಳಿಸಿಯೂ ಕೊಡಬಹುದು. ಆಗ ನಾವೇ ಇಲ್ಲಿ ಖರೀದಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕೆಲವು ಸೂಚನೆಗಳು

ಬಸವ ಧರ್ಮ ಪೀಠಕ್ಕೆ ದೇಣಿಗೆ ಸಲ್ಲಿಸುವ ಕೆಲವರು ಹುನಗುಂದ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಮತ್ತು ಬಿಜಾಪುರದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗೆ ಡಿ. ಡಿ. ತೆಗೆಸಿದ್ದಾರೆ. ಇದರಿಂದ ಬ್ಯಾಂಕ್ ಶುಲ್ಕವನ್ನು ಅವರು ಅಲ್ಲಿ ಕಟ್ಟುವರು, ಆ ಶಾಖೆಯಿಂದ ಸಂಗಮಕ್ಕೆ ವರ್ಗಾಯಿಸಲು ಸ್ಥಳೀಯ ಬ್ಯಾಂಕ್‌ನವರೂ ಕಡಿತ ಮಾಡುವರು. ಕೂಡಲ ಸಂಗಮದ ಸ್ಟೇಟ್ ಬ್ಯಾಂಕ್‌ದವರು ಇಂಗ್ಲೀಷಿನಲ್ಲಿ Koodala Sangama ಎಂದು ಕೊಟ್ಟಿರುವ ಕಾರಣ ಶಾಖೆಗಳ ಲಿಸ್ಟಿನಲ್ಲಿ Kudala Sangama ಎಂದು ನೋಡಿ, ಕೂಡಲ ಸಂಗಮದಲ್ಲಿ ಸ್ಟೇಟ್ ಬ್ಯಾಂಕ್ ಇಲ್ಲ ಎಂದು ಆ ಊರಿನ ಅಧಿಕಾರಿಗಳು ಹೇಳಿಬಿಡುವರು. ಸಮೀಪದ ಬ್ಯಾಂಕಿಗೆ ಕೊಡಿ ಎಂದು ಖಾತೆದಾರರು ಕೇಳಿದಾಗ ಹುನಗುಂದ, ಬಿಜಾಪುರ ಎಂದು ಹೇಳಿಬಿಡುವರು.

ನಾವೂ ಇಲ್ಲಿ Koodala ಎಂಬ ಸ್ಪೆಲ್ಲಿಂಗನ್ನು Kudala ಎಂದು ಮಾಡಲು ಅರ್ಜಿ ಕೊಟ್ಟಿದ್ದೇವೆ. ಆದರೆ ದೇಣಿಗೆ ಸಲ್ಲಿಸುವ ಭಕ್ತರು ಈ ಬಗ್ಗೆ ಲಕ್ಷ್ಯವಹಿಸಿ ಡಿ. ಡಿ. ತೆಗೆಸುವಾಗ ಬಸವ ಧರ್ಮ ಪೀಠ, ಕೂಡಲ ಸಂಗಮ ಎಂದು ತೆಗೆಸಬೇಕು. ಇಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ ಇದೆ.

ಬಾಗಲಕೋಟೆಯ ಕೆನರಾ ಬ್ಯಾಂಕ್ ಮತ್ತು ಬೆಂಗಳೂರು ಕೆನರಾ ಬ್ಯಾಂಕ್ ಗಳಲ್ಲಿಯೂ ಬಸವ ಧರ್ಮ ಪೀಠದ ಖಾತೆಗಳಿವೆ.

ಎಂ. ಟಿ. ಮಾಡುವವರಿಗೆ ವಿವರಗಳು.

1. Basava Dharma Peetha, C and I, 20, State Bank of India, **Koodala Sangama**, Tq- Hunagunda, Dt- Bijapura.
2. Basava Dharma Peetha, S. B. Account Canara Bank Main, Bagalkot, Dt- Bijapura.
3. Basava Dharma Peetha, S. B. Account, **12857**, Canara Bank, I Block, Rajajinagar, Bangalore-560010

Digitalized by e-Sahithya Documentation Forum
Sponsored by Sarayu Foundation Trust

ಕಟ್ಟಡ ನಿಧಿಗೆ ಧನ ಸಹಾಯ ಮಾಡಲು ಕೋರಿಕೆ

ಬಸವ ಧರ್ಮ ಪೀಠದ, ಮಹಾಮನೆ ಮಹಾಮಠದ ಆವರಣದಲ್ಲಿ ಅತಿಥಿ ಗೃಹದೊಡನೆ ಶಿವಯೋಗ (ಧ್ಯಾನ) ಮಂಟಪ ಅದರ ಮೇಲೆ ಅಲ್ಲಮಪ್ರಭು ಅನುಭವ ಮಂಟಪ, ಶರಣರ ಮಂಟಪಗಳ ಮತ್ತಷ್ಟು ಕೆಲಸ, ನೆಲದ ಕೆಲಸ ಎಲ್ಲ ಆಗಬೇಕಾಗಿದೆ. ದಾನಿಗಳು ಅವರ ಕೋಣೆಗಳಿಗಾಗಿ ಕೊಡುವರು. ಇನ್ನು ದಾಸೋಹನಿಧಿ, ಧರ್ಮ ಗ್ರಂಥ ನಿಧಿಗಳಿಗೆ ಪ್ರತ್ಯೇಕ ಉದ್ದೇಶವಿದೆ. ಕೋಣೆಗಳಿಗೆ ದಾನಿಗಳು ಕೊಡುವ ಹಣದ ಜೊತೆಗೆ ಬೇರೆ ಹಣವನ್ನು ಒದಗಿಸುವುದೇ ಕಠಿಣತಮ ಕೆಲಸವಾಗಿದೆ. ಹೀಗಾಗಿ ಮೇಲೆ ತಿಳಿಸಿರುವ ಮಂಟಪಗಳನ್ನು ಪೂರ್ತಿ ಮಾಡಲು ಅಪಾರ ಹಣ ಬೇಕಾಗಿದೆ. ಧ್ಯಾನ ಮಂಟಪಕ್ಕೆ ಈ ವರೆಗೂ ಬಂದಿರುವ ಹಣ ಗುಡಿಯಾತ್ತಂನ ಶರಣ ಲಿಂ॥ ಎಂ. ಎಸ್. ರುದ್ರಪ್ಪನವರದು ಒಂದು ಲಕ್ಷ, ಬೈಲಹೊಂಗಲದ ಶರಣ ಗದಿಗೆಪ್ಪ ದೇಶನೂರು ಅವರದು 50,000/- (ಐವತ್ತು ಸಾವಿರ) ಅಮೃತ ಶಿಲೆಯ ನೆಲಹಾಸುಹಾಕಿ ವಿದ್ಯುತ್ ವ್ಯವಸ್ಥೆ, ಬಣ್ಣ ಎಲ್ಲ ಮಾಡಲು ಇನ್ನೂ ಅಪಾರವಾದ ಹಣ(ಎರಡೂವರೆ ಲಕ್ಷ) ಬೇಕು.

ಆದ್ದರಿಂದ ದಾನಿಗಳು ಕಟ್ಟಡ ನಿಧಿಗೆ ಎಂದು 500 ರೂಗಳಿಂದ ಮೇಲೆ ಎಷ್ಟನ್ನಾದರೂ ಕೊಡಬಹುದು. ಮುಖ್ಯ ಬಸವ ಮಂಟಪದ ಕೆಲಸ ಆರಂಭಿಸಲಾಗುತ್ತಿದೆ. ಆದ್ದರಿಂದ ನೀವೂ ಕೊಟ್ಟು ಇನ್ನಿತರರಿಗೂ ಪ್ರೇರಣೆ ನೀಡಬೇಕೆಂದು ಕೋರುತ್ತೇವೆ.

—ಮಾತಾಜಿ

ಬಸವ ಜಯಂತಿ ಗ್ರಿಟಿಂಗ್ ಕಾರ್ಡ್ಸ್

ವಿಶ್ವಗುರು ಬಸವಣ್ಣನವರ ಜಯಂತಿಯು ಮೇ 5ನೇ ದಿನಾಂಕ ಒದಗಿ ಬಂದಿದೆ. ನಿಮ್ಮ ಬಂಧು-ಮಿತ್ರರಿಗೆ ಬಸವ ಜಯಂತಿಯ ಶುಭಹಾರೈಕೆ ನೀಡಲು, ಬಸವ ಜಯಂತಿ ಆಚರಿಸುವಂತೆ ನೆನಪು ಮಾಡಲು ಗ್ರೀಟಿಂಗ್ ಕಾರ್ಡ್ಸ್ ಕಳಿಸಿರಿ.

ಕವರ್ ಸಹಿತ ಒಂದು ಕಲರ್‌ದಲ್ಲಿ ಮುದ್ರಣವಾದುದಕ್ಕೆ	2-50 ರೂ
ಕವರ್ ಸಹಿತ ಆಫ್‌ಸೆಟ್ ಕಲರ್‌ದಲ್ಲಿ ಮುದ್ರಣವಾದುದಕ್ಕೆ	3-50 ರೂ

ಎಷ್ಟು ಪ್ರತಿ ಬೇಕೋ ಅಷ್ಟಕ್ಕೆ ಮತ್ತು ಅಂಚೆ ವೆಚ್ಚಕ್ಕೆಂದು ಹಣ ಕಳಿಸಿ ತರಿಸಿಕೊಳ್ಳಿರಿ.

ನಿಮ್ಮ ಪರವಾಗಿ ನಾವೇ ನಿಮ್ಮ ಬಂಧು ಮಿತ್ರರಿಗೆ ಕಳಿಸಬೇಕಾಗಿದ್ದರೆ ಕಾರ್ಡ್ಸ್ ಬೆಲೆ ಮತ್ತು ಅಂಚೆವೆಚ್ಚ ಸೇರಿಸಿ ಇಲ್ಲಿಗೆ ಹಣ ಕಳಿಸಿರಿ, ಕಳುಹಿಸಬೇಕಾದವರ ವಿಳಾಸ ಕಳಿಸಿರಿ. ಇಲ್ಲಿಂದ ನೇರವಾಗಿ ಕಳಿಸಲಾಗುವುದು.

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ.
2035, 2 ನೇ ಬ್ಲಾಕು, 20 ನೇ ಮೆಯಿನ್
ಕಾರ್ಡ್‌ರೋಡ್, ರಾಜಾಜಿನಗರ, ಬೆಂಗಳೂರು-560010

ಸೊಲ್ಲಾಪುರದಲ್ಲಿ ವಿಶ್ವಧರ್ಮ ಪ್ರವಚನ

ಶಿವಯೋಗಿ ಸಿದ್ಧರಾಮೇಶ್ವರರ ಐಕ್ಯಕ್ಷೇತ್ರ, ಮಹಾರಾಷ್ಟ್ರ ರಾಜ್ಯದ ಸುಪ್ರಸಿದ್ಧ ವ್ಯಾಪಾರಿ ಕೇಂದ್ರ, ಸೊನ್ನಲಾಪುರದಲ್ಲಿ ಅಪೂರ್ವವಾಗ್ಮಿಗಳು, ವಿಶ್ವ ಧರ್ಮ ಪ್ರಸಾರಕರೂ ಆದ ಬಸವ ಧರ್ಮ ಪೀಠದ ಪೀಠಾಧೀಶ

ಪೂಜ್ಯ ಶ್ರೀ ನಿರಂಜನ ಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ

ಅವರ ಪ್ರವಚನ ಕಾರ್ಯಕ್ರಮವು ಸೋಮವಾರ ದಿ. 20-1-1992 ರಿಂದ ಪ್ರಾರಂಭವಾಗಿದೆ. ದಿನದಿನಕ್ಕೂ ಅಸಂಖ್ಯಾತ ಶ್ರೋತೃಗಳನ್ನು ಆಕರ್ಷಿಸುತ್ತಿದ್ದು ಸೊಲ್ಲಾಪುರದ ಕನ್ನಡಿಗರಿಗೆ ಹರ್ಷಾತಿರೇಕವನ್ನು ಉಂಟುಮಾಡಿದೆ. ಪೂಜ್ಯ ಸ್ವಾಮೀಜಿಯವರ ವಿದ್ವತ್ ಪೂರ್ಣ ಪ್ರವಚನವು ಬಯಸದೆ ಬಂದ ಭಾಗ್ಯವಾಗಿ ಲಭ್ಯವಾಗಿದ್ದು, ನಗರದ ಜನತೆ ಅಧಿಕಧಿಕ ಸಂಖ್ಯೆಯಲ್ಲಿ ಸೇರಿ ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಪ್ರವಚನ ಸ್ಥಳ : ಗಾಂಧಿನಾಥ ರಂಗಜಿ ದಿಗಂಬರ ಜೈನ ಬೋರ್ಡಿಂಗ್ ಸ್ಕೂಲ್ ಮೈದಾನ, ಬಾಳಿ ವೇಸ್, ಸೊಲ್ಲಾಪುರ.

ಪ್ರತಿ ದಿವಸ ಸಂಜೆ 7-30 ರಿಂದ 9ರ ವರೆಗೆ ಪ್ರವಚನವು ನಡೆಯುತ್ತಿದೆ.

ಸೋಮವಾರ ದಿ. 16-3-1992 ರಂದು ಮಂಗಲಗೊಳ್ಳಲಿದೆ.

ಪೂಜ್ಯ ಶ್ರೀ ಮಾತಾಜಿಯವರ 47ನೆಯ ವರ್ಧಂತಿ

ಪ್ರಪ್ರಥಮ ಮಹಿಳಾ ಜಗದ್ಗುರುಗಳು, ಅಪೂರ್ವ ಧರ್ಮ ಪ್ರಸಾರಕರೂ ಆದ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಅವರು ಶುಕ್ರವಾರ ದಿ. 13-3-1992 ರಂದು 46 ವರ್ಷಗಳನ್ನು ಪೂರೈಸಿ, 47ಕ್ಕೆ ಪಾದಾರ್ಪಣ ಮಾಡುತ್ತಿರುವ ಸಂದರ್ಭದಲ್ಲಿ, ಪೂಜ್ಯ ಮಾತಾಜಿಯವರ ವರ್ಧಂತಿ ಉತ್ಸವವನ್ನು ಮಹಾರಾಷ್ಟ್ರದ ಜಿಲ್ಲಾ ಕೇಂದ್ರ ಸೊಲ್ಲಾಪುರದಲ್ಲಿ ಆಚರಿಸುವ ಉದ್ದೇಶ ಹೊಂದಿದ್ದೇವೆ.

ಬೆಳಿಗ್ಗೆ 10 ಗಂಟೆಗೆ ಪಾದಪೂಜೆ, ನುಡಿಕಾಣಿಕೆ ಸಮರ್ಪಣೆ
ಸಂಜೆ 7-30 ಕ್ಕೆ ಸಾರ್ವಜನಿಕವಾಗಿ ಅಭಿನಂದನೆ

ಸ್ಥಳ : ಗಾಂಧೀನಾಥರಂಗಜಿ ದಿಗಂಬರ ಜೈನ ಬೋರ್ಡಿಂಗ್ ಸ್ಕೂಲ್

ವ್ಯವಹರಿಸುವ ವಿಳಾಸ :


ಸೋದರಿ ಮಲ್ಲಮ್ಮ C/o. ಶರಣ ಶಿವಶಂಕರ ಕಾಡಾದಿ
ಅಡ್ವೊಕೇಟ, 305/7, ಪಶ್ಚಿಮ ಮಂಗಳವಾರ ಪೇಟೆ, ಚೆಟ್ಟಿಗಲ್ಲಿ
ಸೊಲ್ಲಾಪುರ-2, ಮಹಾರಾಷ್ಟ್ರ ರಾಜ್ಯ

(ವಿ. ಸೂ. : ಪತ್ರವ್ಯವಹಾರ ಮಾಡುವವರು ಇಂಗ್ಲೀಷಿನಲ್ಲಿ ವಿಳಾಸ ಬರೆಯಿರಿ.)

Digitalized by e-Sahithya Documentation Forum
Sponsored by Sarayu Foundation Trust

BASAVA KIRANA— Kalyana Kirana Special Issue

Feb. 1992 KRNB-312/BGW-29



Digitalized by e-Sahithya Documentation Forum
Sponsored by Sarayu Foundation Trust